ಸಂವಾದ

ಆಗಸ್ಟ್ ೨೦೦೪ ರೂ. ೨೦/-

ಬಿಜೆಪಿ ಸೋತಿದೆ;
ಆದರೆ ಸತ್ತಿಲ್ಲ!

ಹಿಂದೂಕರಣ ಅಥವಾ
ಬ್ರಾಹ್ಮಣೀಕರಣ

ಮರೆಯಾದ ಕಲ್ಯಾಣ ರಾಜ್ಯ



ನಾಟಕವೆಂಬ
ಸಾಹಿತ್ಯಕ ದಂಗೆ

ಬಸವಣ್ಣನೂ
ಅಸ್ಪೃಶ್ಯರ ಉದ್ಧಾರವೂ

ಸಂವಾದ

ಮಾಸ ಪತ್ರಿಕೆ

ಸಂಪುಟ ೨ ಸಂಚಿಕೆ ೧೦
ಆಗಸ್ಟ್ ೨೦೦೪

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ|| ನಟರಾಜ್ ಹುಳಿಯಾರ್
ಪ್ರೊ|| ರಹಮತ್ ತರೀಕೆರೆ
ಕೆ. ಪುಟ್ಟಸ್ವಾಮಿ
ಡಿ. ಡೊಮಿನಿಕ್
ಬಿ.ಯು. ಸುಮ
ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ : ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿರಸ್ತೆ
ವಿಶ್ವನೀಡಂ ಅಂಚೆ
ಬೆಂಗಳೂರು - ೫೬೦ ೦೯೧
✆ ೨೩೨೮೭೯೪೩ / ೯೪೪೮೦ ೪೮೩೦೬

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANANAGAR, MAGADI ROAD
VISHWANEEDAM POST
BANGALORE - 560 091
✆ 080-23287943, 94480 48306

EDITOR :
INDUDHARA HONNAPURA

ಒಳಪುಟಗಳಲ್ಲಿ...

❑ ಪತ್ರಗಳು ೩
❑ ಮೇರಾ ಭಾರತ್ ಮಹಾನ್ ೪
❑ ಅಂತರಂಗ ೫
❑ ಚಳವಳಿಗೆ ಆಧ್ಯಾತ್ಮ ಅಗತ್ಯ ೬
○ ಬಂದಗದ್ದೆ ರಾಧಾಕೃಷ್ಣ
❑ ಮಾಂಸಾಹಾರ ನಿಷೇಧ ದೂರ್ತತನ ೭
○ ಸಿ. ಹರೀಶ್ ಕುಮಾರ್ ಗಂಗನಬೀಡು
❑ ಋಷಿ ಮೂಲ ಕೇಳಬಾರದು; ಏಕೆ ? ೮
○ ಬಿ.ವಿ. ವೀರಭದ್ರಪ್ಪ
❑ ಬಿಜೆಪಿ ಸೋತಿದೆ; ಆದರೆ ಸತ್ತಿಲ್ಲ! ೧೦
○ ಕೆ.ಎನ್. ಪಣಿಕ್ಕರ್



❑ ನಾಟಕವೆಂಬ ಸಾಹಿತ್ಯಕ ದಂಗೆ ೧೬
○ ರಾಮಲಿಂಗಪ್ಪ ಟಿ. ಬೇಗೂರು
❑ ದಲಿತರು ಮತ್ತು ವರ್ತಮಾನದ ತುರ್ತುಗಳು ೨೦
○ ರವಿ
❑ ಹಿಂದೂಕರಣ ಅಥವಾ ಬ್ರಾಹ್ಮಣೀಕರಣ ೨೨
○ ಡಾ|| ಕೆ. ಜಮನದಾಸ್
❑ ಡೆವಲಪ್‌ಮೆಂಟ್ ಆ್ಯಸ್ ಫ್ರೀಡಂ, ಅಂತರಂಗದ ಸ್ವಾತಂತ್ರ್ಯ ೨೪
○ ಅರವಿಂದ ಚೊಕ್ಕಾಡಿ
❑ ಬಸವಣ್ಣನೂ ಅಸ್ಪೃಶ್ಯರ ಉದ್ಧಾರವೂ ೨೬
○ ರೆವೆರೆಂಡ್ ಚೆನ್ನಪ್ಪ ಉತ್ತಂಗಿ
❑ 'ಗಣರಾಜ್ಯ' ಒಪ್ಪದ ಮುಖ್ಯವಾಹಿನಿ ೩೦
○ ಚಂದ್ರಭಾನ್ ಪ್ರಸಾದ್
❑ ನಮ್ಮೊಳಗೊಬ್ಬ ಗಾಂಧಿ ಇರುವನೇ ? ೩೫
○ ಡಾ|| ಕಾ.ವೆಂ. ಶ್ರೀನಿವಾಸಮೂರ್ತಿ
❑ ಮರೆಯಾದ ಕಲ್ಯಾಣ ರಾಜ್ಯ ೩೬
○ ಅನು : ಡಿ. ಡೊಮಿನಿಕ್
❑ ಝುನ್ ಝುಲಕ್ ೪೦
○ ಕೆ.ವಿ. ಸುಬ್ಬಣ್ಣ
❑ ಹೊಸ ಪುಸ್ತಕ ೪೧
❑ ವಿವೇಕಾನಂದರ ವಿಚಾರಗಳು ೪೨
○ ಜ. ಹೊ. ನಾರಾಯಣಸ್ವಾಮಿ



ಕವನಗಳು : ❑ ಅಸ್ಪೃಶ್ಯ - ೧೫ ❑ ಎರಡು ಗಜಲ್‌ಗಳು - ೧೫
❑ ಕಾಲ ಬದಲಾಗಿದೆ... ನಾವೂ ಬದಲಾಗಿದ್ದೇವೆ - ೨೯

ಮುಖಪುಟ ಕಲೆ: ಜಾನ್ ದೇವರಾಜ್ ವಿನ್ಯಾಸ: ರಾಥೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಾಗಾರ

ಟಿಪ್ಪು ನಾಡಿನ ಉತ್ತಮ ದೊರೆ

ಮಾನ್ಯರೆ,

ನಾ. ದಿವಾಕರ ಅವರು 'ಟಿಪ್ಪುವಿನ ಸುತ್ತ..' ಎಂಬ ಲೇಖನ ಅತ್ಯಂತ ಸಮಂಜಸವಾಗಿದೆ. ಏಕೆಂದರೆ ಕರ್ನಾಟಕದ ಹುಲಿಯೆಂದು ಕರೆಯುವ ಟಿಪ್ಪುವಿಗೆ ಬಿಜೆಪಿ ಹಾಗೂ ಸಂಘ ಪರಿವಾರದವರು ಈತನೊಬ್ಬ ದೇಶದ್ರೋಹಿ, ಹಿಂದೂ ವಿರೋಧಿ ಕಟುಕ ದೊರೆ, ಮತಾಂತರದ ಹರಿಕಾರ ಎನ್ನುವುದರಲ್ಲಿ ಎಳ್ಳಷ್ಟು ಹುರುಳಿಲ್ಲ.

ಈತನೊಬ್ಬ ನಿಷ್ಠಾವಂತ ದೇಶಪ್ರೇಮಿ. ಏಕೆಂದರೆ ಬ್ರಿಟಿಷರನ್ನು ಹೊರಹಾಕಲು ನಾಲ್ಕು ಯುದ್ಧ ಮಾಡಿ ಅದರಲ್ಲಿ ಮೂರನೆಯ ಯುದ್ಧದ ನಂತರ ತನ್ನ ಸಾಮ್ರಾಜ್ಯ ರಕ್ಷಣೆಗಾಗಿ ತನ್ನ ಮಕ್ಕಳನ್ನು ಮಾರಾಟ ಮಾಡುತ್ತಾನೆ ಹಾಗೂ ಈತನು ಹಿಂದೂ ವಿರೋಧಿಯಾಗಿದ್ದರೆ ಮೇಲು ಕೋಟೆಯಲ್ಲಿರುವ ಚೆಲುವ ನಾರಾಯಣ ಸ್ವಾಮಿ ಹಾಗೂ ಶ್ರೀರಂಗಪಟ್ಟಣದಲ್ಲಿರುವ ಶ್ರೀರಂಗನಾಥನ - ದೇವಾಲಯದ ರಕ್ಷಣೆ ಮಾಡುತ್ತಿರಲಿಲ್ಲ.

ಇಲ್ಲಿ ಕೋಮುವಾದಿಗಳು ಹಾಗೂ ಸಂಘಪರಿವಾರದವರು ಕರ್ನಾಟಕದಲ್ಲಿ ತಮ್ಮ ಬೇಳೆ ಬೇಯಿಸಲು ಈತನನ್ನು ದೇಶದ್ರೋಹಿ ಯೆಂದು ಹೇಳುತ್ತಿದ್ದಾರೆ. ಟಿಪ್ಪು ಒಬ್ಬ ನಿಜ ವಾದ ಒಳ್ಳೆಯ ರಾಜಕಾರಣಿ. ಕರ್ನಾಟಕ ಕ್ಕಾಗಿ ತನ್ನತನು ಮನ ಧನ ಅರ್ಪಣೆ ಮಾಡಿದ ಕರ್ನಾಟಕದ ಶ್ರೇಷ್ಠ ದೊರೆಗಳ ಸಾಲಿನಲ್ಲಿ ಒಬ್ಬನೆಂದು ಹೇಳಬಹುದು.

ಗಾಂಧೀಜಿ ಮೊಳಕೇರೆ,
ಗುಲಬರ್ಗಾ

ಮಾನ್ಯ ಇಂದೂಧರ ಅವರಿಗೆ ವಂದನೆಗಳು,

'ಟಿಪ್ಪು ಸುಲ್ತಾನ ದೇಶದ್ರೋಹಿ ಅಲ್ಲ' ನನ್ನ ಅಚ್ಚುಮೆಚ್ಚಿನ 'ಸಂವಾದ'ದಲ್ಲಿನ 'ಟಿಪ್ಪುವಿನ ಸುತ್ತ..' ಲೇಖನ ಮೆಚ್ಚುಗೆಯಾಯಿತು.

ತಾವು ಹೇಳಿದ ಹಾಗೆ ಇತಿಹಾಸದಲ್ಲಿ ಹಿಂದೂ ರಾಜರುಗಳು ತಮ್ಮ ಅಧಿಕಾರಕ್ಕಾಗಿ ಮುಸ್ಲಿಂ ಹಾಗೂ ಬ್ರಿಟಿಷರ ಜೊತೆಗೂಡಿ ನಮ್ಮ ಭಾರತದ ರಾಜರುಗಳ ಮೇಲೆ ದಬ್ಬಾಳಿಕೆ ಹಾಗೂ ಯುದ್ಧಗಳನ್ನು ಮಾಡಿದ್ದರೂ ಅವರು ದೇಶದ್ರೋಹಿಗಳಲ್ಲ ಅಲ್ಲ ಅಲ್ಲವೇ, ಹಾಗೆ ಇವರು ಕೂಡ ದೇಶದ್ರೋಹಿ ಅಲ್ಲ 'ಟಿಪ್ಪುಸುಲ್ತಾನ' ಕೂಡ ತನ್ನ ಅಧಿಕಾರ ಸಲುವಾಗಿ ಯುದ್ಧಗಳನ್ನು ಮಾಡಿದ.

ಈ. ವಸಂತಕುಮಾರ ದೇವಸುಗುರಕರ್,
ಚಿಂಚೋಳಿ

ಚಂದಾ ವಿವರ
ಬಿಡಿ ಪ್ರತಿ ರೂ. ೨೦/-
೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ
ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ. ೧೦೦/- ರೂ. ೩೦೦/- ರೂ. ೫೦೦/-
ನೌಕರರು ಮತ್ತು ವೃತ್ತಿಪರರಿಗೆ
ರೂ. ೨೦೦/- ರೂ. ೫೦೦/- ರೂ. ೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ. ೨೫೦/- ರೂ. ೬೦೦/- ರೂ. ೧೦೦೦/-
ವಿಶೇಷ ಹಿತೈಷಿ ಚಂದಾದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-
ಅಜೀವ ಚಂದಾ ರೂ. ೫,೦೦೦/-
ಪೋಷಕ ಚಂದಾ ರೂ. ೧೦,೦೦೦/-
ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ. /ಡಿ.ಡಿ. ಮಾತ್ರ ಕಳುಹಿಸಬೇಕು.

ಚಿಂತನಗೆ ಹೊಸ ಆಯಾಮ ನೀಡುವ ಸಂವಾದ

ಮಾನ್ಯ ಸಂಪಾದಕರಿಗೆ ವಂದನೆಗಳು,

ಸಂವಾದ ಪತ್ರಿಕೆ ತುಂಬಾ Relevent ಆದ ಚರ್ಚೆ ವಾಗ್ವಾದಗಳೊಡನೆ ನಮ್ಮ ಚಿಂತನ ಧಾಟಿಗೆ ಹೊಸತೊಂದು ಆಯಾಮ ನೀಡ ಹೊರಟಿದೆ. ಶಿವಮೂರ್ತಿ ಶರಣರ ಜನಪರ ಕಾಳಜಿಗಳೊಂದಿಗೆ ಈ ನಾಡಿನ ಎಲ್ಲ ದಲಿತ ಶೂದ್ರರಿದ್ದೇ ಇರುತ್ತಾರೆ.

ಅರುಂಧತಿ ರಾಯ್ ತೆರೆದಿಟ್ಟಿರುವ ಬಂಡವಾಳ ಶಾಹಿ ತಂತ್ರಗಾರಿಕೆ, ತೃತೀಯ ಜಗತ್ತಿನ ರಾಷ್ಟ್ರಗಳ ದೈನೇತಿ ಸ್ಥಿತಿ ಅರ್ಥ ಪೂರ್ಣವಾಗಿವೆ. ಹಾಗೆಯೇ ಸಂಪಾದಕೀಯ ಕೂಡಾ. ಎಲ್ಲವನ್ನೂ ಒಂದೇ ಉಸಿರಿಗೆ ಓದಿ ಮತ್ತೊಮ್ಮೆ ಮೆಲುಕು ಹಾಕುತ್ತಿರುವೆ.

ಧನ್ಯವಾದಗಳು,

ಮುಟ್ಟುಗಪ್ಪೆ ಪರಶುರಾಂ, ಹಾಸನ

ಗ್ರಂಥಾಲಯದಲ್ಲಿ ಸಂವಾದ

ಮಾನ್ಯರೆ,

ನಮಸ್ಕಾರ. ಪತ್ರ ಮುಖೇನ ನಾನು ನಿಮ್ಮ ಮುಂದಿಟ್ಟ ಕೋರಿಕೆಯನ್ನು ಮನ್ನಿಸಿ, ನನ್ನ ಗ್ರಂಥಾಲಯದ ಓದುಗರ ಉಪಯೋಗಕ್ಕಾಗಿ ಜುಲೈ ತಿಂಗಳಿಂದ ಸಂವಾದ ಮಾಸ ಪತ್ರಿಕೆಯನ್ನು ಕಳಿಸಲು ಆರಂಭಿಸಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿರುವ ನಮ್ಮ ಗ್ರಂಥಾಲಯವನ್ನು ಬಳಸುವ ಯುವ ಜನರ ಚಿಂತನೆ, ಯೋಚನೆಗಳಿಗೆ ಸಂವಾದ ಪತ್ರಿಕೆ ಹೊಸ ಮಜಲನ್ನು ತೋರಿಸಬಲ್ಲುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ನಮ್ಮ ಆಸುಪಾಸಿನ ಓದುವ ಮನಸ್ಸುಗಳಿಗೆ ಸಂವಾದದ ಗಟ್ಟಿ ವಿಚಾರಗಳು, ಸಮಾಜ ಮುಖೀ ನಿಲುವುಗಳು ಒಂದು ಅನನ್ಯವಾದ ಜೀವನಪರ ದೃಷ್ಟಿಯನ್ನು ಪರಿಚಯಿಸುತ್ತವೆ ಎಂಬುದು ನಿಸ್ಸಂಶಯ. ಪತ್ರಿಕೆ ಓದುಗರಿಗೆ ತುಂಬಾ ಇಷ್ಟವಾಗಿದೆ; ಅದರ ವಿಚಾರಗಳ ಕುರಿತು ಪರಸ್ಪರ ಚರ್ಚೆ ನಡೆಯುತ್ತಿದೆ. ನನ್ನ ವಿನಂತಿಯನ್ನು ಗೌರವಿಸಿ ತಕ್ಷಣ ಕಾರ್ಯತತ್ಪರರಾಗಿ ಸಂವಾದ ಪತ್ರಿಕೆಯ ಕೊಡುಗೆಯನ್ನು ನೀಡಿದ ನಿಮ್ಮ ಸಹಕಾರ, ಸಹೃದಯತೆಯನ್ನು ಸದಾ ಸ್ಮರಿಸುವೆ.

ಅಕ್ಷರ ಸಂಸ್ಕೃತಿಯನ್ನೂ, ಓದುವ ಪ್ರೀತಿಯನ್ನೂ ಬೆಳೆಸಲು ಆರಂಭಿಸಿದ ನನ್ನ ಪ್ರಯತ್ನಕ್ಕೆ ಬೆನ್ನೆಲುಬಾಗಿ ನಿಂತ ನಿಮ್ಮ ಪ್ರಕಾಶನದ ಋಣವನ್ನು ಎಂದೂ ಮರೆಯಲಾರೆ. ನನ್ನ ಗ್ರಂಥಾಲಯದ ಜೊತೆಗೆ ನಿಮ್ಮ ಪತ್ರಿಕೆಯನ್ನೂ ಬೆಳೆಸಿಕೊಂಡು ಊರ ಯುವ ಜನರು ಆರೋಗ್ಯಕರ ಮನಸ್ಸನ್ನು ಬೆಳೆಸಿಕೊಂಡರೆ ನಮ್ಮ ಪ್ರಯತ್ನಕ್ಕೆ ಇನ್ನಷ್ಟು ಅರ್ಥ ತುಂಬಿಕೊಳ್ಳುತ್ತದೆ.

ನಿಮ್ಮ ಉಪಕಾರಕ್ಕೆ ಅನಂತ ವಂದನೆಗಳು. ವಿಶ್ವಾಸ ಪೂರ್ವಕ ಪ್ರೀತಿ ಇರಲಿ,

ಸಿ. ಎಚ್. ಕೃಷ್ಣಶಾಸ್ತ್ರಿ ಮೂಡಂಬೈಲು

ಹೊಸ ಸಂಗತಿಗಳ ಬೆಳಕಿಂಡಿ

ಆತ್ಮೀಯ ಇಂದೂಧರ ಅವರೆ,
ವಂದನೆಗಳು.

'ಸಂವಾದ' ಪತ್ರಿಕೆ ಪ್ರತಿ ತಿಂಗಳೂ ನನಗೆ ತಪ್ಪದೆ ತಲುಪುತ್ತಿದೆ. ಧನ್ಯವಾದಗಳು.

ಪತ್ರಿಕೆಯ ಸಂಚಿಕೆಗಳು ಸಂಗ್ರಹಯೋಗ್ಯವಾಗಿವೆ. ಪ್ರಸ್ತುತ ಸಂದರ್ಭದ ಅನೇಕ ವಿಷಯ ಗಳಿಗೆ 'ಸಂವಾದ' ಒಂದು ಮುಖ್ಯ ಮಾಧ್ಯಮವಾಗಿದೆ. ಅನೇಕ ಹೊಸ ಸಂಗತಿಗಳ ಬೆಳಕಿಂಡಿಯೂ ಅಹುದು.

ನಿಮ್ಮ ಶ್ರಮ, ಕಳಕಳಿ, ಆಸಕ್ತಿ 'ಸಂವಾದ'ದ ಮೂಲಕ ಸಾರ್ಥಕವಾಗಲಿ. ಎಲ್ಲರೂ ಪತ್ರಿಕೆಯಿಂದ ಹೆಚ್ಚಿನ ಉಪಯೋಗ ಪಡೆಯಲಿ ಎಂದು ಹೃತ್ಪೂರ್ವಕ ಹಾರೈಸುವೆ.

ವಿಶ್ವಾಸದೊಡನೆ,

ಕಮಲಾ ಹಂಪನಾ, ಬೆಂಗಳೂರು

ಭಾರತ ಪ್ರಕಾಶಿಸಲು ಯುವ ಪೀಳಿಗೆ ಎಚ್ಚೆತ್ತುಕೊಳ್ಳಲಿ

ಸನ್ಮಾನ್ಯ ಸಂಪಾದಕರೇ,

ನಮ್ಮ ಸಂವಾದ ಪತ್ರಿಕೆಯು ಚೆನ್ನಾಗಿ ಪ್ರಕಟವಾಗುತ್ತಿದೆ. ನಾನು ನಿಮ್ಮ ಮಾಸ ಪತ್ರಿಕೆಯನ್ನು ಪ್ರತಿ ತಿಂಗಳೂ ತಪ್ಪದೆ ಓದುತ್ತೇನೆ.

ನಾ. ದಿವಾಕರರವರು ಬರೆದ 'ಎನ್‌ಡಿಎ ನೆರಳಿನಲ್ಲಿ ನಲುಗಿದ ಭಾರತ' ತುಂಬಾ ಅರ್ಥವತ್ತಾಗಿದೆ. ಇದರೊಂದಿಗೆ ಕೆ. ಷರೀಫರ 'ಭಾರತ ಪ್ರಕಾಶಿಸುತ್ತಿದೆ' ಎಂಬ ಕವನವು ಇದಕ್ಕೆ ಪುಷ್ಠಿ ನೀಡಿ ಹೆಚ್ಚು ಅರ್ಥಪೂರ್ಣ ನೀಡುತ್ತದೆ.

ಇಲ್ಲಿ ಬರಿಯ ಮಾತಿನಲ್ಲಿ ಮಾತ್ರ ಭಾರತ ಪ್ರಕಾಶಿಸುತ್ತಿದೆ. ಭಾರತ ಪ್ರಕಾಶಿಸಬೇಕಾದರೆ ಇಂದಿನ ಯುವ ಪೀಳಿಗೆಯು ಎಚ್ಚೆತ್ತು ಕೊಳ್ಳಬೇಕೆಂಬುದು ಇದರಿಂದ ತಿಳಿದು ಬರುವುದು.

ಮುಖ್ಯವಾಗಿ ಜಾತಿ ಪದ್ಧತಿ, ಬಡತನವನ್ನು ಹೋಗಲಾಡಿಸಬೇಕು. ಡಾ|| ಶೈಲಜ ಹಿರೀಮಠರವರು ಮಹಿಳಾ ಸ್ತ್ರೀ ಕಥನ - ವಿಭಿನ್ನ ಸ್ತ್ರೀವಾದಗಳು, ದಲಿತ ಮಹಿಳೆಯ ಶೋಷಣೆಯನ್ನು ಕನ್ನಡಿ ಹಿಡಿದ ಹಾಗೆ ಎತ್ತಿ ತೋರಿಸಿದ್ದಾರೆ.

ಕೆ.ವಿ. ಸುಬ್ಬಣ್ಣನವರ ಝನ್ ಅತ್ಯುತ್ತಮ ವಾಗಿ ಮೂಡಿ ಬರುತ್ತಿದೆ. ಇನ್ನು ಹೆಚ್ಚು ಹೆಚ್ಚು ವಿಚಾರಗಳನ್ನು ಸಂವಾದ ಪತ್ರಿಕೆಯು ಪ್ರಕಟಿಸಿ 'ಸಂವಾದ ಪ್ರಕಾಶಿಸಲಿ' ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ,

ವಸಂತ ಚೈತ್ರ
ಬೆಂಗಳೂರು

ವೀರಾಪುರದಲ್ಲಿ ದಲಿತರಿಗೆ ಬಹಿಷ್ಕಾರ

ಕೊಪ್ಪಳ, ಜೂ. ೧೪- ಯಲಬುರ್ಗಾ ತಾಲೂಕಿನ ವೀರಾಪುರ ಗ್ರಾಮದಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಕಳೆದ ದಿನಾಂಕ ೨೫ ರಂದು ಗ್ರಾಮದಲ್ಲಿ ನಡೆದ ದುರ್ಗಾದೇವಿ ಜಾತ್ರೆ ಸಂದರ್ಭದಲ್ಲಿ ಸವರ್ಣೀಯರು ಮತ್ತು ದಲಿತರ ಮಧ್ಯೆ ಉಂಟಾದ ಘರ್ಷಣೆಯೇ ದಲಿತರಿಗೆ ಸಾಮಾಜಿಕ ಬಹಿಷ್ಕಾರಕ್ಕೆ ಕಾರಣವೆಂದು ಹೇಳಲಾಗುತ್ತಿದೆ.

ಈ ಗ್ರಾಮದಲ್ಲಿ ಸುಮಾರು ೭೦ ರಿಂದ ೮೦ ಕುಟುಂಬಗಳಿರುವ ದಲಿತರಿಗೆ ಹಿಟ್ಟಿನ ಗಿರಣಿ, ಹೋಟೆಲ್, ಕಿರಾಣಿ ಅಂಗಡಿ ಸೇರಿದಂತೆ ಗ್ರಾಮದೊಳಗೆ ಪ್ರವೇಶಿಸಲು ದಲಿತರಿಗೆ ನಿಷೇಧ ಹೇರಲಾಗಿದೆ ಎಂದು ಹೇಳಲಾಗುತ್ತಿದೆ. ಗ್ರಾಮಕ್ಕೆ ಬರುವ ಖಾಸಗಿ ವೈದ್ಯರೂ ದಲಿತರ ಆರೋಗ್ಯ ವಿಚಾರಿಸುವಂತಿಲ್ಲ, ಅಲ್ಲಿ ತಿರುಗಾಡುವ ಆಟೋ ಮತ್ತಿನ್ನಿತರ ಖಾಸಗಿ ವಾಹನಗಳಲ್ಲಿಯೂ ದಲಿತರ ಸಂಚಾರಕ್ಕೆ ನಿಷೇಧ ಹೇರಲಾಗಿದೆ ಎಂದು ಹೇಳಲಾಗುತ್ತಿದೆ.

ಇತ್ತೀಚೆಗೆ ಸುರಿದ ಮಳೆಯಿಂದಾಗಿ ಗ್ರಾಮದಲ್ಲಿ ಕೃಷಿ ಚಟುವಟಿಕೆ ನಡೆದಿದ್ದರೂ ದಲಿತರನ್ನು ಯಾರೂ ಕೂಲಿಗೆ ಕರೆಯುತ್ತಿಲ್ಲ. ಹೊಲಗಳಿಲ್ಲದ ದಲಿತರು ಕೂಲಿಯ ಮೇಲೆಯೇ ಆಧಾರವಾಗಿದ್ದು ಸವರ್ಣೀಯರ ಸಾಮಾಜಿಕ ಬಹಿಷ್ಕಾರದಿಂದಾಗಿ ಕಳೆದ ೨೦ ದಿನಗಳಿಂದ ತೊಂದರೆಗೀಡಾಗಿದ್ದಾರೆ.

ವಿಷಯ ಅರಿತು ಸಹಾಯಕ ಆಯುಕ್ತರು ಮತ್ತು ತಹಶೀಲ್ದಾರರು ಗ್ರಾಮಕ್ಕೆ ಭೇಟಿ ನೀಡಿ ಮನವೊಲಿಸಲು ಪ್ರಯತ್ನಿಸಿದ್ದರೂ ಪ್ರಯೋಜನವಾಗದ ಪರಿಣಾಮ ಸಹಾಯಕ ಆಯುಕ್ತರೇ ಅಲ್ಲಿಯ ದಲಿತರಿಗೆ ನಾಲ್ಕು ಚೀಲ ಅಕ್ಕಿಯನ್ನು ಸರಕಾರದಿಂದ ನೀಡಿದ್ದಾರೆ. ಈ ಅಕ್ಕಿಯನ್ನು ದಲಿತರು ತಲಾ ಕೆ.ಜಿ.ಯಂತೆ ಹಂಚಿಕೊಂಡು ಬದುಕುತ್ತಿದ್ದಾರೆ. ಕಳೆದ ಒಂದು ವಾರದ ಹಿಂದೆ ನೀಡಲಾದ ಅಕ್ಕಿಯೂ ಮುಗಿಯಲು ಬಂದಿದ್ದು ಮುಂದೇನು ಎಂಬ ಪ್ರಶ್ನೆ ದಲಿತರನ್ನು ಕಾಡಲಾರಂಭಿಸಿದೆ.

ಘಟನೆಯ ಹಿನ್ನೆಲೆ : ಯಲಬುರ್ಗಾ ತಾಲೂಕಿನ ವೀರಾಪುರ ಗ್ರಾಮದಲ್ಲಿ ಕಳೆದ ದಿ. ೨೫ ರಂದು ಗಾಳಿ ದುರ್ಗಾದೇವಿ ಜಾತ್ರೆ ನಡೆದಿತ್ತು. ಇದೇ ಸಂದರ್ಭದಲ್ಲಿ ಕ್ಷುಲ್ಲಕ ಕಾರಣಗಳಿಗಾಗಿ ದಲಿತರು ಮತ್ತು ಸವರ್ಣೀಯರ ಮಧ್ಯೆ ಘರ್ಷಣೆ ಉಂಟಾಗಿತ್ತು. ಈ ಘರ್ಷಣೆಯಲ್ಲಿ ಸವರ್ಣೀಯರು ದಲಿತರಿಗೆ ಖಾರದ ಪುಡಿ ಎರಚಿ ಬಡಿಗೆಗಳಿಂದ ಬಡಿದಿದ್ದರಿಂದ ಅನೇಕರಿಗೆ ಗಾಯಗಳಾಗಿದ್ದು ಇದರಲ್ಲಿ ಕೆಲವರನ್ನು ಹುಬ್ಬಳ್ಳಿಯ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈ ಘಟನೆಯ ದಿನದಿಂದಲೇ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ಎಂದು ಹೇಳಲಾಗುತ್ತಿದೆ.. ಕಳೆದ ವರ್ಷ ಹೊಟೆಲ್‌ನಲ್ಲಿ ದಲಿತರಿಗೆ ಚಹಾ ನೀಡುತ್ತಿಲ್ಲ ಎಂಬ ಕಾರಣಕ್ಕಾಗಿ ಉಂಟಾದ ಮಾತಿನ ಚಕಮಕಿ ಹಿನ್ನಲೆಯಲ್ಲಿ ಆಗಲೂ ಸಾಮಾಜಿಕ ಬಹಿಷ್ಕಾರ ಹಾಕಲಾಗಿತ್ತು. ಈಗ ಬಹಿಷ್ಕಾರ ಹಾಕಿರುವುದು ಮೂರನೇ ಬಾರಿಯೆಂದು ಹೇಳಲಾಗುತ್ತಿದೆ.

ಈ ಗ್ರಾಮದಲ್ಲಿ ಮೇಲಿಂದ ಮೇಲೆ ದಲಿತರು ಮತ್ತು ಸವರ್ಣೀಯರ ಮಧ್ಯೆ ಘರ್ಷಣೆ ಉಂಟಾಗುತ್ತಿದ್ದರೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಲಾಗುತ್ತಿದೆ. ತಹಶೀಲ್ದಾರರು ಮತ್ತು ಸಹಾಯಕ ಆಯುಕ್ತರು ಗ್ರಾಮಕ್ಕೆ ಭೇಟಿ ನೀಡಿ ಉಭಯ ಬಣಗಳ ಮುಖಂಡರನ್ನು ಕರೆಸಿ ಮನವೊಲಿಸಿದ್ದರೂ, ಅಧಿಕಾರಿಗಳು ವಾಪಸ್ ಬಂದ ನಂತರ ಮತ್ತೆ ಬಹಿಷ್ಕಾರ ಮುಂದುವರಿಯುತ್ತಿದೆ ಎಂದು ಹೇಳಲಾಗುತ್ತಿದೆ.

ದಲಿತರಿಗೆ ಬಹಿಷ್ಕಾರ ಹಾಕಲಾಗಿರುವ ಗ್ರಾಮ ಜಿಲ್ಲಾ ಪಂಚಾಯ್ತಿ ಸದಸ್ಯ ಶರಣಗೌಡ ಮಾಲೀಪಾಟೀಲ್ ಅವರ ಸ್ವಂತ ಊರು.

(ಸಂಯುಕ್ತ ಕರ್ನಾಟಕ)



ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆ

ಬಲಿಯಾ, ಜೂ. ೨೮- ದಲಿತ ಮಹಿಳೆಯೋರ್ವಳು ಅನೈತಿಕ ಸಂಬಂಧ ಹೊಂದಿರುವಳೆಂಬ ಕಾರಣಕ್ಕೆ ಸಿರೋಹದಿ ಎಂಬಲ್ಲಿನ ಗ್ರಾಮಪಂಚಾಯತ್ ಆ ಮಹಿಳೆಯ ತಲೆಬೋಳಿಸಿ, ಆಕೆ ಗ್ರಾಮದಲ್ಲಿ ಬೆತ್ತಲೆ ಮೆರವಣಿಗೆ ಹೋಗುವಂತೆ ಮಾಡಿದೆ. ಆಕೆಯ ಪತಿ ನೀಡಿದ ದೂರಿನ ಅನ್ವಯ ಗ್ರಾಮಪಂಚಾಯತ್ ಭಾನುವಾರ ಈ ಶಿಕ್ಷೆ ನೀಡಿತೆಂದು ಪೊಲೀಸರು ಹೇಳಿದ್ದಾರೆ.

ಈ ಮಹಿಳೆ ತನ್ನ ಪ್ರಿಯತಮನ ಜತೆ ವಾಸಿಸಲೆಂದು ತನ್ನ ಮನೆಯನ್ನು ತೊರೆದಿದ್ದಳು. ಪೊಲೀಸರು ಗ್ರಾಮ ಪಂಚಾಯತ್ ಸದಸ್ಯರ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡು ಈ ಪೈಕಿ ೮ ಮಂದಿಯನ್ನು ಬಂಧಿಸಿದ್ದಾರೆ.

(ಉದಯವಾಣಿ)

ರಾಜ್ಯ ಮಟ್ಟದ ಸಾರ್ವಜನಿಕ ಫಿರ್ಯಾದು ಸಮಾವೇಶ : ದಲಿತರ ಮೇಲಿನ ದೌರ್ಜನ್ಯಕ್ಕೆ ಅಡೆತಡೆ ಇಲ್ಲ...

ಬೆಂಗಳೂರು, ಜೂ. ೨೬- ಪ್ರಕರಣ ಒಂದು- ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಬಯ್ಯಾಪುರ ಗ್ರಾಮದಲ್ಲಿನ ನಾಗಪ್ಪ ಹಾಗೂ ಆತನ ಪತ್ನಿ ಲಕ್ಷ್ಮವ್ವ ಅವರದು ಕೂಲಿ ಮಾಡಿ ಜೀವನ ಸಾಗಿಸುವ ದಲಿತ ಕುಟುಂಬ. ಊರಿನಲ್ಲಿ ಇವರದು ಏಕೈಕ ದಲಿತ ಕುಟುಂಬ. ಈಗ್ಗೆ ನಾಲ್ಕು ತಿಂಗಳ ಹಿಂದೆ ಕ್ಷುಲ್ಲಕ ಕಾರಣಕ್ಕಾಗಿ ನಾಗಪ್ಪನ ಮೇಲೆ ಮಾರಣಾಂತಿಕ ಹಲ್ಲೆ ನಡೆಯಿತು. ಲಕ್ಷ್ಮವ್ವಳ ಮೇಲೆ ಸಾಮೂಹಿಕ ಅತ್ಯಾಚಾರವನ್ನೂ ಆರೋಪಿಗಳು ಎಸಗಿದರು. ಈ ಬಗ್ಗೆ ಸವಣೂರು ಠಾಣೆಗೆ ದೂರು ನೀಡಿದ್ದರೂ ಇದುವರೆಗೆ ಕ್ರಮ ಕೈಗೊಂಡಿಲ್ಲ.

ಪ್ರಕರಣ ಎರಡು- ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಅಂತರವಳ್ಳಿ ಗ್ರಾಮದ ಹೊಂಬಾಳಯ್ಯ ಹಾಗೂ ಆತನ ಪತ್ನಿ ನಾಗಮ್ಮ ಅವರದೂ ಇಂಥದೇ ಕಥೆ. ಮೇಲ್ವರ್ಗದವರು ಆಕೆಯ ಮಾನಭಂಗ ಮಾಡಿ ಹಲ್ಲೆ ನಡೆಸಿದ್ದರು. ಹೊಂಬಾಳಯ್ಯನ ಮೇಲೂ ಹಲ್ಲೆ ಮಾಡಿದ್ದರು. ಈ ಸಂಬಂಧ ಹಲಗೂರು ಪೊಲೀಸರಿಗೆ ದೂರು ನೀಡಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ದಲಿತರು ಗ್ರಾಮ ಪಂಚಾಯಿತಿಯಲ್ಲಿ ಸ್ಪರ್ಧಿಸುವ ಸಂದರ್ಭ, ಗ್ರಾಮದ ಕೆರೆಯಲ್ಲಿ ನೀರು ತುಂಬುವ ಸಂದರ್ಭ, ದಲಿತರು ಭೂಮಿಯ ಹಕ್ಕನ್ನು ಪಡೆಯುವ ಸಂಬಂಧ ಹಲ್ಲೆ ಅತ್ಯಾಚಾರಕ್ಕೊಳಗಾದವರು.. ಹೀಗೆ ಹತ್ತಾರು ಕಣ್ಣೀರ ಕಥೆಗಳನ್ನು ಹಲ್ಲೆಗೊಳಗಾದವರೇ ಪ್ರತ್ಯಕ್ಷವಾಗಿ ನಿವೇದಿಸಿಕೊಂಡರು.

ಸಂದರ್ಭ - ಸಿಕ್ರೆಮ್ ಸಂಸ್ಥೆಯು 'ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ಚಿತ್ರಹಿಂಸೆಗೊಳಗಾದವರ ಬೆಂಬಲ ದಿನ'ದ ಅಂಗವಾಗಿ ಶನಿವಾರ ಏರ್ಪಡಿಸಿದ್ದ 'ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ರಾಜ್ಯಮಟ್ಟದ ಸಾರ್ವಜನಿಕ ಫಿರ್ಯಾದು ಸಮಾವೇಶ'ದಲ್ಲಿ ೩೦ಕ್ಕೂ ಹೆಚ್ಚು ಮಂದಿ ನೊಂದ ದಲಿತರು ನ್ಯಾಯ ಬೇಡಿದರು. ನ್ಯಾಯ ಮೂರ್ತಿ ಎ.ಜೆ. ಸದಾಶಿವ ನೇತೃತ್ವದ ನ್ಯಾಯಮಂಡಳಿಯ ಸದಸ್ಯರಾದ ಪ್ರೊ। ಮುಜರಫ್ ಅಸಾದಿ, ಪ್ರೊ। ಜೀವನ್ ಕುಮಾರ್, ನ್ಯಾಯವಾದಿಗಳಾದ ಮನೋಹರ ಹೊಸ್ಯ ಹಾಗೂ ದೇವಿಕಾ ಜೈನ್ ಅವರು ಇವರ ನೋವುಗಳನ್ನು ಆಲಿಸಿ ದೂರುಗಳನ್ನು ಸ್ವೀಕರಿಸಿದರು.

ದಲಿತರ ಮೇಲೆ ನಡೆದಿರುವ ದೌರ್ಜನ್ಯಕ್ಕೆ ಯಾವುದೇ ಕ್ರಮ ಕೈಗೊಳ್ಳದ ವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿದ ನಂತರ ಈ ಸಮಿತಿಯು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ವರದಿಯೊಂದನ್ನು ಸಿದ್ಧ ಪಡಿಸಿ ಅದನ್ನು ರಾಷ್ಟ್ರೀಯ ಮಾನವ ಹಕ್ಕು ಆಯೋಗ, ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಒಪ್ಪಿಸಲಿದೆ.

(ಕನ್ನಡ ಪ್ರಭ)

ಸಂಪಾದಕೀಯ



ಅಂತರಂಗ



'ಪಾಲುದಾರಿಕೆ' ಎಂಬ ಸಹಜ ನ್ಯಾಯ

ಕಾಂಗ್ರೆಸ್ ನೇತೃತ್ವದ ಸಂಯುಕ್ತ ಪ್ರಗತಿಪರ ಮೈತ್ರಿಕೂಟ ಸರ್ಕಾರ ತನ್ನ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೊಳಿಸಲು ಬದ್ಧವಾಗಿರುವುದಾಗಿ ಘೋಷಿಸಿದೆ. ಈ ಘೋಷಣೆ ಕೇಳಿಯೇ ಕೆಲವರಿಗೆ ಕಸಿವಿಸಿ ಆರಂಭವಾಗಿದೆ. ನಾರಾಯಣ ಮೂರ್ತಿಯಂಥ ಇನ್ಫೋಸಿಸ್ ನಾಯಕರಿಂದ ಹಿಡಿದು ಕಿರಾಣಿ ಅಂಗಡಿ ನಡೆಸುವ ಶೆಟ್ಟರವರೆಗೆ ಎಲ್ಲರಿಗೂ ದೇಶದ 'ಪ್ರತಿಭೆ'ಗಳ ಬಗ್ಗೆ ಆತಂಕ ಶುರುವಾಗಿದೆ.

ಈ ದೇಶದ ನಡೆಯೇ ವಿಚಿತ್ರವಾಗಿದೆ. ತನ್ನ ಪ್ರತಿಯೊಂದು ನಡೆ-ನುಡಿಯಲ್ಲೂ ಆಷಾಢಭೂತಿ ಗುಣಗಳನ್ನೇ ಮೈಗೂಡಿಸಿಕೊಂಡಿರುವ ಸಮಾಜ ನಮ್ಮದು. ಯಾವುದೇ 'ಪ್ರತಿಭಾ ಪರೀಕ್ಷೆ'ಯಲ್ಲಿ ಆಯ್ಕೆಯಾಗದಿದ್ದರೂ ಶತಮಾನಗಳ ಕಾಲ ನೂರಕ್ಕೆ ನೂರು ಮೀಸಲಾತಿಯನ್ನು ಅನುಭವಿಸಿದ ಜನಾಂಗಗಳು ಈಗ ತಮ್ಮ ಪಾಲನ್ನು ಕೇಳಹೊರಟಿರುವ ಇತರ ಜನಾಂಗಗಳ ಮೇಲೆ ಮಾಡುತ್ತಿರುವ ಆಪಾದನೆಗಳನ್ನು ಕೇಳಿದರೆ ನಗು ಬರುತ್ತದೆ.

ಯಾವುದೇ ದೇಶ ಅಥವಾ ಸಮಾಜ ಅಭಿವೃದ್ಧಿ ಹೊಂದಬೇಕಾದರೆ ಆ ದೇಶದ ಅಥವಾ ಸಮಾಜದ ಎಲ್ಲರೂ ಎಲ್ಲ ಕ್ಷೇತ್ರಗಳಲ್ಲೂ ತೊಡಗಿಕೊಳ್ಳಲು ಸಮಾನ ಅವಕಾಶ ಇರಬೇಕು. ಅಂಥ ಅವಕಾಶ ಇಲ್ಲದಿದ್ದಾಗ ಆಳುವ ಸರ್ಕಾರಗಳು ಅಂಥ ಅವಕಾಶವನ್ನು ಒದಗಿಸಿಕೊಡಬೇಕು. ಆದರೆ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳು ಈ ಕುರಿತು ಡಂಬಾಚಾರದ ಮಾತುಗಳನ್ನು ಆಡುತ್ತಿವೆಯೇ ಹೊರತು ಆತ್ಮಸಾಕ್ಷಿಯಿಂದ ಕೆಲಸ ಮಾಡುತ್ತಿಲ್ಲ.

ಮೀಸಲಾತಿ ಯಾರೂ ಯಾರಿಗೂ ಏನನ್ನು ಬಿಟ್ಟುಕೊಡುವಂಥದಲ್ಲ. ಅದೊಂದು ಸಮಾನ ಹಂಚಿಕೆ ಸಿದ್ಧಾಂತ, ಸ್ಪರ್ಧೆಯಲ್ಲ. ಎಲ್ಲವೂ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ತಂದೆಯ ಆಸ್ತಿಯನ್ನು ಮಕ್ಕಳೆಲ್ಲ ಸಮನಾಗಿ ಹಂಚಿಕೊಳ್ಳುವಷ್ಟು ಸರಳ ಸಿದ್ಧಾಂತ ಅದು. ಆದರೆ ಅಸಮಾನತೆಯೇ ಮೂಲ ಸಿದ್ಧಾಂತವಾದ ಭಾರತೀಯ ಸಮಾಜ ಈ ಸಮಾನ ಹಂಚಿಕೆಯನ್ನು ಸದಾ ವಿರೋಧಿಸುತ್ತಲೇ ಬಂದಿದೆ.

ಇನ್ಫೋಸಿಸ್ ನಾರಾಯಣ ಮೂರ್ತಿ ಅವರಂಥವರನ್ನೇ ನೋಡಿ. ಇವರಿಗೆ ಮೈಕ್ರೋಸಾಫ್ಟ್‌ನ ಬಿಲ್‌ಗೇಟ್ಸ್ ಆದರ್ಶ. ಇವರ ಪ್ರತಿಯೊಂದು ಹೆಜ್ಜೆಯೂ ಅಮೆರಿಕಾದ ಅನುಕರಣೆ. ವ್ಯಾಪಾರ ವಹಿವಾಟು ಹಾಗೂ ಲಾಭ ಪಡೆಯುವುದರಲ್ಲಷ್ಟೇ ಅಮೆರಿಕಾವನ್ನು ಅನುಕರಿಸುವ ಇವರು, ಅಮೆರಿಕಾ ಅಲ್ಲಿನ ಮೂಲ ನಿವಾಸಿಗಳಿಗೆ, ಕಪ್ಪು ಜನರಿಗೆ ನೀಡುತ್ತಿರುವ ಸಾಮಾಜಿಕ ಭದ್ರತೆ (Affirmative Action) ಹಾಗೂ ಪಾಲುದಾರಿಕೆಯ (Diversity) ನೀತಿಯನ್ನೇಕೆ ಅನುಕರಿಸುತ್ತಿಲ್ಲ.

ಅಮೆರಿಕಾ ತನ್ನ ಬಂಡವಾಳಶಾಹಿನೀತಿ ಹಾಗೂ ಸಾಮ್ರಾಜ್ಯಶಾಹಿ ನೀತಿಯಿಂದ ಜಾಗತಿಕ ಮಟ್ಟದಲ್ಲಿ ಖಳನಾಯಕನಾಗಿದ್ದರೂ, ಅಲ್ಲಿನ ಮೂಲ ನಿವಾಸಿಗಳು ಹಾಗೂ ಕರಿಯರಿಗೆ ಎಲ್ಲ ಕ್ಷೇತ್ರಗಳಲ್ಲಿ ನೀಡುತ್ತಿರುವ ಪ್ರಾತಿನಿಧ್ಯ ಆಶ್ಚರ್ಯ ಮೂಡಿಸುತ್ತದೆ. ಸರ್ಕಾರದ ಪ್ರತಿಯೊಂದು ಟೆಂಡರ್ ಮತ್ತು ಸರಬರಾಜಿನಲ್ಲಿ ಅಲ್ಲಿನ ಮೂಲ ನಿವಾಸಿಗಳು ಮತ್ತು ಕರಿಯರಿಗೆ ಪಾಲು ಸಲ್ಲುತ್ತದೆ. ಖಾಸಗಿ ಕ್ಷೇತ್ರದ ಪ್ರತಿಯೊಂದು ಚಟುವಟಿಕೆಯಲ್ಲಿ ಅವರಿಗೆ ಪಾಲುದಾರಿಕೆ ಇದೆ. ಹಾಲಿವುಡ್ ಚಿತ್ರ ಜಗತ್ತಿನ ಪ್ರತಿ ಹಂತದಲ್ಲೂ ಈ ನೀತಿಯನ್ನು ಅನುಸರಿಸಲಾಗುತ್ತಿದೆ. ಚಿತ್ರಕಥೆ ಬರೆಯುವವರಿಂದ ಹಿಡಿದು ತಂತ್ರಜ್ಞರವರೆಗೆ, ಅಲ್ಲಿನ ಪತ್ರಿಕಾ ಕಛೇರಿಗಳಲ್ಲಿ, ಹೋಟೆಲ್‌ಗಳಲ್ಲಿ ಇದೇ ನೀತಿ ಇದೆ. ಇಡೀ ಸಮಾಜವೇ ಇದನ್ನು ನೈತಿಕ ಹೊಣೆಗಾರಿಕೆ ಎಂದುಕೊಂಡು ಸಾಧಿಸುತ್ತಿದೆ. ಅಲ್ಲಿನ ಸರ್ಕಾರವಾಗಲಿ ಖಾಸಗಿ ಕಂಪೆನಿಗಳಾಗಲಿ ಕೊಳ್ಳುವ ಪ್ರತಿಯೊಂದು ವಸ್ತುವಿನಲ್ಲೂ ಅಲ್ಲಿನ ಮೂಲ ನಿವಾಸಿಗಳು ಮತ್ತು ಕರಿಯರ ಪಾಲು ಇರುತ್ತದೆ. ಪ್ರತಿಯೊಂದಕ್ಕೂ ಅಮೆರಿಕಾದತ್ತ ಮುಖಮಾಡುವ ಭಾರತೀಯರಿಗೆ ಇದೇಕೆ ಕಾಣಿಸುತ್ತಿಲ್ಲ.

ಸರ್ಕಾರದ ಗುತ್ತಿಗೆ ಹಾಗೂ ಸರಬರಾಜಿನಲ್ಲಿ ಪಾಲುದಾರಿಕೆ ಹಾಗೂ ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರುವುದಾಗಿ ಘೋಷಿಸಿದ್ದ ಕಾಂಗ್ರೆಸ್, ತನ್ನ ನೇತೃತ್ವದ ಸರ್ಕಾರ ಬಂದ ಕೂಡಲೇ ಗುತ್ತಿಗೆ - ಸರಬರಾಜಿನ ಪಾಲುದಾರಿಕೆ ಕೈಬಿಟ್ಟು ಕೇವಲ ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಮೀಸಲಾತಿ ತರುವುದಾಗಿ ಹೇಳುತ್ತಿದೆ. ಗುತ್ತಿಗೆ - ಸರಬರಾಜಿನಲ್ಲಿ ಪಾಲುದಾರಿಕೆ ನೀಡುವುದು ಸರ್ಕಾರದ ಕೈಯಲ್ಲಿದೆ. ಪ್ರಧಾನಮಂತ್ರಿ ಕಾರ್ಯಾಲಯ ಹೊರಡಿಸಬಹುದಾದ ಸಣ್ಣ ಸುತ್ತೋಲೆ ಈ ಕೆಲಸವನ್ನು ಮಾಡಬಹುದು. ತನ್ನ ಕೈಯಲ್ಲಾಗುವ ಕೆಲಸವನ್ನು ಕೈಬಿಟ್ಟು ಕಾಂಗ್ರೆಸ್ ತನ್ನ ಕೈ ಮೀರಿದ ಖಾಸಗಿ ಕ್ಷೇತ್ರದ ಉದ್ಯೋಗ ಮೀಸಲಾತಿ ವಿಚಾರಕ್ಕೆ ಕೈ ಹಾಕಿದೆ!

ಇಷ್ಟಕ್ಕೂ ನೇರ ಉದ್ಯೋಗಗಳ ಪ್ರಮಾಣವಾದರೂ ಎಷ್ಟು? ನೇರ ಉದ್ಯೋಗ ಹೊರತಾದ ಇತರೆ ಡೀಲರ್‌ಷಿಪ್‌ಗಳು, ಗುತ್ತಿಗೆಗಳು, ಸರಬರಾಜು ಇವುಗಳು ಒದಗಿಸುವ ಪರೋಕ್ಷ ಉದ್ಯೋಗಗಳ ಪಾಲು ಎಷ್ಟು? ಶೇ ೧.೫ ರಿಂದ ೨ ರಷ್ಟಿರುವ ನೇರ ಉದ್ಯೋಗಗಳಿಗಿಂತ ಶೇ ೯೮ ರಷ್ಟಿರುವ ಪರೋಕ್ಷ ಉದ್ಯೋಗಗಳು ಉತ್ತಮವಲ್ಲವೆ? ಈ ಪರೋಕ್ಷ ಉದ್ಯೋಗಗಳೆಲ್ಲ ಪೂರ್ಣವಾಗಿ ಕೆಲವೇ ಜನರ ಹಿಡಿತದಲ್ಲಿವೆ. ದೇಶದ ಸಂಪತ್ತಿನ ಸಿಂಹಪಾಲು ಇವರದಾಗುತ್ತಿದೆ.

ಯಾರೋ ಉತ್ಪಾದಿಸಿದ ವಸ್ತುವನ್ನು ಸರಬರಾಜು ಮಾಡಲು ಯಾವ ಪ್ರತಿಭೆ ಬೇಕು? ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳನ್ನು ನಡೆಸಲು ಬೇಕಾದ ಕಾಗದ ಪೆನ್ನುಗಳನ್ನು ಸರಬರಾಜು ಮಾಡಲು ಯಾವ ಅರ್ಹತೆ ಬೇಕು? ಕುರ್ಚಿ-ಮೇಜುಗಳು, ಫ್ಯಾನುಗಳು, ಕಂಪ್ಯೂಟರ್‌ಗಳನ್ನು ಒದಗಿಸಲು ಯಾವ ಡಾಕ್ಟರೇಟ್ ಬೇಕು? ಸಾವಿರಾರು ಕೋಟಿ ವಹಿವಾಟಿನ ನಿರ್ಮಾಣ ಕಾಮಗಾರಿಗೆ ಬೇಕಾದ ಸಿಮೆಂಟ್, ಕಬ್ಬಿಣ, ಇಟ್ಟಿಗೆ, ಮರಳನ್ನು ಒದಗಿಸಲು ಯಾವ ತಂತ್ರಜ್ಞಾನ ಬೇಕು? ಇಂಥ ಸರಬರಾಜಿನಲ್ಲಿ ಪಾಲುದಾರಿಕೆ ನೀಡುವ ಮೂಲಕ ಎಷ್ಟು ಕೋಟಿ ಜನ ಅಲಕ್ಷಿತರಿಗೆ ಉದ್ಯೋಗ ಒದಗಿಸಬಹುದು? ಯಾವುದೇ ಹೆಚ್ಚುವರಿ ಖರ್ಚಿಲ್ಲದೆ, ಯೋಜನೆಗಳಿಲ್ಲದೆ, ತೆರಿಗೆಗಳಿಲ್ಲದೆ ಮಾಡಬಹುದಾದ ಕೆಲಸ ಇದು. ಇಷ್ಟು ಕನಿಷ್ಠ ಪ್ರಾಮಾಣಿಕತೆ ಸರ್ಕಾರಕ್ಕೇಕಿಲ್ಲ?

ಅಮೆರಿಕಾದ ಮೂಲ ನಿವಾಸಿಗಳು ಹಾಗೂ ಕರಿಯರ ಪಾಲುದಾರಿಕೆಯಿಂದಾಗಿ ಮೈಕ್ರೋಸಾಫ್ಟ್ ಕಂಪೆನಿ ಜಗತ್ತಿನ ಅತ್ಯಂತ ದೊಡ್ಡ ಮಾಹಿತಿ ತಂತ್ರಜ್ಞಾನ ಸಂಸ್ಥೆಯಾಗಿ ಬೆಳೆಯಬೇಕಾದರೆ ಭಾರತದ ಅಲಕ್ಷಿತರ ಪಾಲುದಾರಿಕೆಯಿಂದ ಇನ್ಫೋಸಿಸ್ ಯಾಕೆ ಬೆಳೆಯಲಾರದು? ಮೂಲ ನಿವಾಸಿಗಳು ಹಾಗೂ ಕರಿಯರ ಪಾಲುದಾರಿಕೆಯಿಂದ ಅಮೆರಿಕಾ ಜಗತ್ತಿನ ಅತ್ಯಂತ ಪ್ರಬಲ ರಾಷ್ಟ್ರವಾಗಿ ಬೆಳೆದು ನಿಂತಿರುವಾಗ ಭಾರತೀಯ ಅಲಕ್ಷಿತ ಜನಸಮುದಾಯದ ಪಾಲುದಾರಿಕೆಯಿಂದಾಗಿ ಭಾರತವೂ ಬಲಿಷ್ಠ ರಾಷ್ಟ್ರವಾಗಬಹುದಲ್ಲವೆ?

ಅಲಕ್ಷಿತ ವರ್ಗಗಳಿಗೆ ನೀಡುವ ಪ್ರತಿ ಅವಕಾಶ ಕೂಡ ದೇಶದ ಅಂತಃಶಕ್ತಿಯನ್ನು ಹೆಚ್ಚಿಸುತ್ತದೆ. ಸಮಾನ ಅವಕಾಶ ಸಮಾನ ಪಾಲುದಾರಿಕೆ ಮಾತ್ರ ಭಾರತವನ್ನು ತನ್ನೆಲ್ಲ ಅನಿಷ್ಟ- ದಾರಿದ್ರ್ಯಗಳಿಂದ ಮುಕ್ತಗೊಳಿಸಬಲ್ಲುದಾಗಿದೆ. ಸರ್ಕಾರ ನಡೆಸುವವರಿಗಾಗಲಿ ಖಾಸಗಿ ದಿಗ್ಗಜರುಗಳಿಗಾಗಲಿ ಇಂಥ ಇಚ್ಛಾಶಕ್ತಿ ಮೂಡದಿದ್ದರೆ ದೇಶಕ್ಕೆ ಮುಕ್ತಿಯೇ ಇಲ್ಲವಾಗುತ್ತದೆ.

○ ಇಂದೂಧರ ಹೊನ್ನಾಪುರ

ಪ್ರತಿಕ್ರಿಯೆ

ದೇಶದ ಪ್ರಗತಿಯಾಗಬೇಕು. ನನಗೆ ಸುಖವಾಗಬೇಕು ಎಂದು ಬಯಸಿ ಚಳವಳಿ ಮಾಡುವುದಾದರೆ ಆ ಚಳವಳಿಗೆ ಅರ್ಥವಿದೆಯೇ ? ಗಣಿಗಾರಿಕೆಯ ಚಳವಳಿಗೆ ಸೇರುವವನು ತನ್ನ ಚಿನ್ನದ ಅವಶ್ಯಕತೆಗಳನ್ನು (ಕೆಲವರಂತೂ ತಮ್ಮ ಚಿನ್ನದ ದಾಹವನ್ನು) ವಿಮರ್ಶಿಸಿಕೊಳ್ಳಬೇಕು. ಅಣೆಕಟ್ಟು ಬೇಡವೆಂದು ಚಳವಳಿ ಮಾಡುವವನು ತನ್ನ ವಿದ್ಯುತ್ ಬಳಕೆಯನ್ನು ವಿಮರ್ಶಿಸಿಕೊಳ್ಳಬೇಕು. ಒಟ್ಟಾರೆ ನನ್ನ ಜೀವನ ಕ್ರಮ ಪರಿಸರಕ್ಕೆ ಹೆಚ್ಚು ಹಾನಿಯಾಗದ ಹಾಗೆ ಇದೆಯಾ ? ಇಲ್ಲದಿದ್ದರೆ ರೂಢಿಸುವುದು ಹೇಗೆ ಎಂಬ ಚಿಂತನೆಯಿಂದ ಪರಿಸರ ಉಳಿಸಿ ಎಂಬ ಚಳವಳಿ ರೂಪುಗೊಳ್ಳಬೇಕು. ಹೀಗೆ ಚಿಂತಿಸಿ ಬದುಕುವುದೇ ಒಂದು ಚಳವಳಿಯಲ್ಲವೇ ?

○ ಬಂದಗದ್ದೆ ರಾಧಾಕೃಷ್ಣ

ಚಳವಳಿಗೆ ಆಧ್ಯಾತ್ಮ ಅಗತ್ಯ

ಸಂವಾದ ಜುಲೈ ೨೦೦೪ ರ ಸಂಚಿಕೆಯಲ್ಲಿ ಪದ್ಮಾಲಯ ನಾಗರಾಜ್ 'ಚಳವಳಿಗೆ ಆಧ್ಯಾತ್ಮ ಅಗತ್ಯವೇ ?' - ಎಂಬ ಲೇಖನದಲ್ಲಿ ಲೇಖನದ ಹೆಸರೇ ಹೇಳುವಂತೆ ಮಹತ್ವದ ಪ್ರಶ್ನೆ ಎತ್ತಿದ್ದಾರೆ. ಇತ್ತೀಚೆಗೆ ಸಾಗರದಲ್ಲಿ ಗಣಿಗಾರಿಕೆ ವಿರೋಧಿ ಚಳವಳಿಗಳು, ಪರಿಸರ ಉಳಿಸಿ ಚಳವಳಿಗಳು, ಪ್ಲಾಸ್ಟಿಕ್ ವಿರೋಧದ ನಿಲುವು ತಾಳುವುದು ಮುಂತಾಗಿ ನಡೆದಾಗ ನನ್ನಲ್ಲಿ ಪ್ರಶ್ನೆಗಳು ಏಳುತ್ತವೆ. ನನಗೆ ದಿನದಲ್ಲಿ ೨೪ ಗಂಟೆಗಳೂ ವಿದ್ಯುತ್ ಸೌಕರ್ಯಗಳಿರಬೇಕು. ಓಡಾಡಲು ಬಸ್ಸು ಕಾರುಗಳಿರಬೇಕು. ಚಿನ್ನದ ಬಳೆ, ಸರ, ಉಂಗುರ, ಬ್ರಾಸ್‌ಲೆಟ್‌ಗಳಿರಬೇಕು – ಹೀಗೆ ಎಲ್ಲಾ ಆಧುನಿಕ ಸುಖಗಳೂ ಬೇಕು. ಆದರೆ ವಿದ್ಯುತ್ತಿಗಾಗಿ ಅಣೆಕಟ್ಟು ಕಟ್ಟಕೂಡದು. ಕಬ್ಬಿಣವೋ, ಮ್ಯಾಂಗನೀಸೋ, ಚಿನ್ನವೋ – ಹೀಗೆ ಅದಿರಿಗಾಗಿ ಗುಡ್ಡ ನೆಲ ಅಗೆಯಕೂಡದು. ದೇಶದ ಪ್ರಗತಿಯಾಗಬೇಕು. ನನಗೆ ಸುಖವಾಗಬೇಕು ಎಂದು ಬಯಸಿ ಚಳವಳಿ ಮಾಡುವುದಾದರೆ ಆ ಚಳವಳಿಗೆ ಅರ್ಥವಿದೆಯೇ ?

ಗಣಿಗಾರಿಕೆಯ ಚಳವಳಿಗೆ ಸೇರುವವನು ತನ್ನ ಚಿನ್ನದ ಅವಶ್ಯಕತೆಗಳನ್ನು (ಕೆಲವರಂತೂ ತಮ್ಮ ಚಿನ್ನದ ದಾಹವನ್ನು) ವಿಮರ್ಶಿಸಿಕೊಳ್ಳಬೇಕು. ಅಣೆಕಟ್ಟು ಬೇಡವೆಂದು ಚಳವಳಿ ಮಾಡುವವನು ತನ್ನ ವಿದ್ಯುತ್ ಬಳಕೆಯನ್ನು ವಿಮರ್ಶಿಸಿಕೊಳ್ಳಬೇಕು. ಒಟ್ಟಾರೆ ನನ್ನ ಜೀವನ ಕ್ರಮ ಪರಿಸರಕ್ಕೆ ಹೆಚ್ಚು ಹಾನಿಯಾಗದ ಹಾಗೆ ಇದೆಯಾ ? ಇಲ್ಲದಿದ್ದರೆ ರೂಢಿಸುವುದು ಹೇಗೆ ಎಂಬ ಚಿಂತನೆಯಿಂದ ಪರಿಸರ ಉಳಿಸಿ ಎಂಬ ಚಳವಳಿ ರೂಪಗೊಳ್ಳಬೇಕು. ಹೀಗೆ ಚಿಂತಿಸಿ ಬದುಕುವುದೇ ಒಂದು ಚಳವಳಿಯಲ್ಲವೇ ? ಹೀಗಾದಾಗ ಅಂಥ ಚಳವಳಿಗೆ ಶಕ್ತಿ ಬರುತ್ತದಲ್ಲವೇ ?

ಗಾಂಧೀಜಿಯವರು ನಡೆಸಿದ ಚಳವಳಿ ಶಕ್ತಿಯುತವಾದದ್ದರ ಹಿಂದೆ ಇಂತಹ ಚಿಂತನೆಗಳಿವೆ. ಸೂಟು ಬೂಟು ಹಾಕಿದ ಮನುಷ್ಯ, ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಮಾಂಸ ತಿಂದು ಶಕ್ತಿವಂತ ನಾಗುತ್ತೇನೆ ಎಂದು ಚಿಂತಿಸಿದ ಮನುಷ್ಯ ಹತ್ತಿಯ ತುಂಡುಪಂಚೆ, ಹೆಗಲವಸ್ತ್ರ ತೊಟ್ಟು ಕಡಲೆಕಾಯಿ, ಆಡಿನ ಹಾಲು ಸೇವಿಸಿ ನಡುನಡುವೆ ಉಪವಾಸ ಮಾಡುತ್ತ ಸತ್ಯಾಗ್ರಹ ಚಳವಳಿಗಳನ್ನು ಶಕ್ತಿಯುತಗೊಳಿಸಿದ್ದರ ಹಿಂದೆ ಅವರ ಆಧ್ಯಾತ್ಮ ಶಕ್ತಿಯಿಲ್ಲವೇ ?

ಅಂದು ಗಾಂಧಿಯ ವ್ಯಕ್ತಿತ್ವ ಪ್ರಖರವಾಗಿ ಬೆಳೆಯುತ್ತಿದ್ದಾಗಲೇ ಬ್ರಿಟಿಷರಿಂದ ನಾವು ಸ್ವತಂತ್ರರಾಗುವ ಮೊದಲು ಎಲ್ಲಾ ಜಾತಿ ಜನಾಂಗಗಳ ನಡುವೆ ಸಮಾನತೆ ಬರಬೇಕೆಂದು ಅಂಬೇಡ್ಕರ್ ವಾದಿಸುತ್ತಿದ್ದರು. ಅಂಬೇಡ್ಕರರು ಬೌದ್ಧಧರ್ಮ ಸ್ವೀಕರಿಸಿದ ಕ್ರಮವೇ ಅವರು ಧಾರ್ಮಿಕರಾಗಿದ್ದರು ಎಂಬುದನ್ನು ಹೇಳುತ್ತಿಲ್ಲವೇ? 'ವೈದಿಕ ಧರ್ಮ ಪೊಳ್ಳು ಪವಾಡಗಳನ್ನು ಅಲೌಕಿಕತೆ ಎಂದು ನಂಬಿಸುವ ಮಟ್ಟಕ್ಕೆ ಇಳಿದಿತ್ತು, ಕಣ್ಕಟ್ಟುಗಳನ್ನು ಕಾಣ್ಕೆ ಎಂದು ಹೇಳುತ್ತಿತ್ತು. ಪೊಳ್ಳು ಪೂಜಾರಿಗಳು, ಮೋಸಗಾರ ಮಾಂತ್ರಿಕರನ್ನು ಬೌದ್ಧಧರ್ಮ ಸುಲಭವಾಗಿ ತನ್ನ ಜೀವನ ನಿಷ್ಠ ಸತ್ವದ, ತರ್ಕದ ಆಧಾರದಿಂದ ಬಯಲಿಗೆ ಎಳೆಯಿತು. ಬುದ್ಧ ಪವಾಡ ನಡೆಸಿದರೂ, ಅಂತಿಮವಾಗಿ ತನ್ನ ಪವಾಡ ವಿರೋಧಿ ಧಾರ್ಮಿಕತೆಯ ನೆಲೆಗಳನ್ನು ವಿವರವಾಗಿ ಬಿಚ್ಚಿಡುತ್ತಾನೆ.'

'ಅಂಬೇಡ್ಕರರಿಗೆ ಬೌದ್ಧಧರ್ಮದಲ್ಲಿ ವಿಶೇಷ ಆಕರ್ಷಕ ಅಂಶಗಳೆಂದರೆ ಇವೇ. ಮಾಟ, ಮಂತ್ರ, ಪವಾಡಗಳಿಲ್ಲದೆ ಮೂರ್ತ ಮಾನವೀಯತೆಯನ್ನು ಆಧರಿಸಿದ ಧರ್ಮದ ಕಲ್ಪನೆ ನಿಜಕ್ಕೂ ಹೃದಯಸ್ಪರ್ಶಿಯಾಗಿ ಕಂಡಿರಬೇಕು.' -ಎಂದು ಡಿ.ಆರ್.ನಾಗರಾಜ್ ಅವರು ಅಂಬೇಡ್ಕರ್ ಮತ್ತು ಬೌದ್ಧ ಧರ್ಮ ಎಂಬ ಲೇಖನದಲ್ಲಿ ಬರೆಯುವರು. (ಸಂಸ್ಕೃತಿ ಕಥನ, ಪುಟ ೧೮೮)

ಧರ್ಮದಲ್ಲಿರುವ ಮೌಢ್ಯವನ್ನು ನಿರಾಕರಿಸಿ ಮಸುಕಾಗಿರುವ ಬಂಗಾರವನ್ನು ವಿಚಾರಗಳಿಂದ ತಿಕ್ಕಿ ಬೆಳಗಿಸಿಕೊಳ್ಳಬೇಕೆಂದು ಕುವೆಂಪು ತಮ್ಮ ಕೃತಿಗಳಿಂದ ಹೇಳುತ್ತಿಲ್ಲವೇ ? ಚಳವಳಿಗೆ ಧುಮುಕುವ ಅನೇಕರು ಆರಂಭಶೂರತ್ವವನ್ನು ವೀರಾವೇಶಗಳನ್ನೂ ಹೊಂದಿರುತ್ತಾರೆ. ಆಧುನಿಕ ಚಿಂತಕನ ಹೊಸ ಮಾತನ್ನು ಹೇಳುತ್ತಿರುತ್ತಾರೆ. ಎಂ.ಎ. ಓದುವ ದಲಿತ ವಿದ್ಯಾರ್ಥಿಯೊಬ್ಬ ಶಂಕರಾಚಾರ್ಯರ ಬಗೆಗಿರುವ ಕಥೆಗಳನ್ನೂ ಅವರ ವೈದಿಕ ಧರ್ಮವನ್ನೂ ವಿರೋಧಿಸಿದ. ಆತನ ವಿಚಾರ ಶಕ್ತಿಯನ್ನು ಮೆಚ್ಚುತ್ತೇನೆ. ನಂತರ ಆತ ಕುವೆಂಪು ಅವರ ವೈಚಾರಿಕತೆಯನ್ನು ಹೊಗಳಲಾರಂಭಿಸಿದ. ಶಂಕರರ ಬಗೆಗಿರುವ ಕಥೆಗಳು ನಂಬಲು ಅರ್ಹವೇ ? ಗೊತ್ತಿಲ್ಲ. ಆದರೆ ಅವರು ಹೇಳಿದ ಅದ್ವೈತ ತತ್ವ ಮಹತ್ವದ್ದಲ್ಲವೇ ? ಆಚಾರ ಹೇಳುವವನು ಅನಾಚಾರವನ್ನೇ ಮಾಡಬಹುದು. ಅದು ಆತನ ನೈತಿಕತೆಯ ವಿಷಯ. ಆದರೆ ಅವನು ಹೇಳುವ ಆಚಾರ ಎಲ್ಲರೂ ಪಾಲಿಸುವಂತಹುದೇ ಆಗಿರುತ್ತದಲ್ಲವೇ ? ಈ ಕಾರಣದಿಂದಲೇ ಇದನ್ನು ಆಚಾರ ಅನ್ನುತ್ತಾರಲ್ಲವೇ ? ಇಂದು ಭಾರತದ ಬಹುತೇಕ ಚಿಂತಕರು ಶಂಕರರ ತತ್ವವನ್ನು ಆಧರಿಸಿಯೇ ತಮ್ಮ ವಿಚಾರಗಳನ್ನು ಮುಂದಿಡುತ್ತಿರುವುದೇಕೆ ? ಇಷ್ಟೇ ಅಲ್ಲದೆ ಆ ವಿದ್ಯಾರ್ಥಿಗೆ ಕೇಳಿದೆ. ನೀವು ಮೆಚ್ಚುವ ಕವಿ, ಲೇಖಕ, ವಿಚಾರವಂತ ಕುವೆಂಪು ಅವರ ಗುರುಗಳು ರಾಮಕೃಷ್ಣ ಪರಮಹಂಸರು ಮತ್ತು ವಿವೇಕಾನಂದರು. ಇವರಿಬ್ಬರೂ ಅದ್ವೈತ ಮಾರ್ಗಿಗಳು. ಕುವೆಂಪು ಅವರ ಸಾಹಿತ್ಯವೂ, ಅದ್ವೈತವನ್ನೇ ಹೇಳುತ್ತಿದೆ ಅಂದಾಗ 'ನಾನು ಈ ರೀತಿ ಯೋಚಿಸಿಯೇ ಇಲ್ಲ' ಎಂದ ಆ ವಿದ್ಯಾರ್ಥಿ.

ಸಮತಾವಾದವನ್ನು ಬಹುವಾಗಿ ನೆಚ್ಚಿಕೊಂಡ ಕೆಲವು ಸ್ನೇಹಿತರು ನಕ್ಸಲೈಟರನ್ನು ಬೆಂಬಲಿಸುತ್ತಾರೆ. ಸಾಗರಕ್ಕೆ ಬಂದಿದ್ದ ಆಂಧ್ರದ ಕವಿ ವರವರರಾವ್ ಕೂಡಾ ಮಾತಾಡುತ್ತ ಅಲ್ಲಿನ ಕೆಲವು ಚಿಂತಕರು ನಕ್ಸಲೈಟರನ್ನು ಬೆಂಬಲಿಸಲು ಕಾರಣಗಳಿವೆ, ಬಂಡವಾಳ ಶಾಹಿಗಳು ದಲಿತರ ಜೀವಹಾನಿ ಮಾಡತೊಡಗಿದಾಗ ಇವರಿಗೆ ಬೇರೆ ದಾರಿ ಕಾಣಲಿಲ್ಲ ಅಂದರು. ಹಿಂಸೆ ಹಿಂಸೆಯಿಂದಲೇ ಕೊನೆಗೊಳ್ಳುತ್ತದೇನೋ ? ಗಾಂಧೀಜಿಯವರ ಅಹಿಂಸಾ ಮಾರ್ಗದ ಬಗೆಗೆ ನನಗೂ ಪ್ರಶ್ನೆಗಳಿವೆ. ಹೀಗೆಂದು ಹಿಂಸಾವಾದಿಯಾಗಲು ಇಷ್ಟವಿಲ್ಲ. ಆದರೆ ಒಬ್ಬನು ಹೊಡೆಯಲು ಬಂದಾಗ ಅವನು ಹೊಡೆಯಲಿ. ನಾನು ಸುಮ್ಮನಿರುತ್ತೇನೆ ಎನ್ನಲಾದೀತೇ ? ಹೊಡೆಯಲು ಬಂದವನನ್ನು ಎದುರಿಸಬೇಕು. ಎದುರಿಸುವಾಗ ಅವನಿಗೆ ತಿರುಗಿ ಹೊಡೆಯಬೇಕಾದ ಪರಿಸ್ಥಿತಿಯೂ ಬರಬಹುದು. ನಾನು ಉಳಿದುಕೊಳ್ಳುವ ಸಲುವಾಗಿ. ಹಿಂಸೆಯನ್ನು ಅರ್ಥೈಸುವುದು ಸುಲಭವಲ್ಲ. ಹೀಗಾಗಿ ನಕ್ಸಲೈಟರನ್ನೂ ಹಗುರವಾಗಿ ಕಾಣಬಾರದು. ವಿಮರ್ಶಿಸಬೇಕಲ್ಲವೇ ? ದೈಹಿಕ ಹಿಂಸೆಯೇ ? ಮಾನಸಿಕ ಹಿಂಸೆಯೇ ? ತಲೆತಲಾಂತರಗಳ ಹಿಂಸೆಯೇ ಮುಂತಾಗಿ ವಿಮರ್ಶಿಸುವ ಅಗತ್ಯವಿದೆ.

'ದೇಹ ಮತ್ತು ಆತ್ಮ ಬೇರೆ ಬೇರೆಯಾದವು. ದೇಹ ನಶ್ವರ. ಆತ್ಮ ಅಮರ. ಸಾವು ಬಂದರೆ ಶರೀರ ಸಾಯುತ್ತದೆ. ಆತ್ಮ ಸಾಯುವುದಿಲ್ಲ, ಅದನ್ನು ಗಾಳಿ ಒಣಗಿಸಲಾರದು. ಬೆಂಕಿ ಸುಡಲಾರದು. ಶಸ್ತ್ರ ಕತ್ತರಿಸಲಾರದು. ಆದ್ದರಿಂದ ಮನುಷ್ಯನನ್ನು ಕೊಂದಾಗ ಅವನ ಆತ್ಮ ಸತ್ತಿತೆಂದು ತಿಳಿಯುವುದು ತಪ್ಪು. ದೇಹ ಮಾತ್ರ ಸಾಯುತ್ತದೆ. ವ್ಯಕ್ತಿ ಹಳೆಯ ಬಟ್ಟೆಗಳನ್ನು ಬಿಸಾಡುವಂತೆ ಆತ್ಮ ದೇಹವನ್ನು ತ್ಯಜಿಸುತ್ತದೆ. ಆತ್ಮ ಎಂದೂ ಕೊಲೆಯಾಗದೇ ಇರುವುದರಿಂದ ವ್ಯಕ್ತಿಯನ್ನು ಕೊಲ್ಲುವುದು ತಪ್ಪಲ್ಲ. ಆದ್ದರಿಂದ ಯುದ್ಧ ಮತ್ತು ಕೊಲೆ ಮಾಡಲು ಪಶ್ಚಾತ್ತಾಪ ಪಡಬೇಕಿಲ್ಲ' ವಿಚಿತ್ರ ಆತ್ಮದ ಕಲ್ಪನೆಯನ್ನು ಭಗವದ್ಗೀತೆ ಸಮರ್ಥಿಸುವುದನ್ನು ಅಂಬೇಡ್ಕರ್ ನೈನಂ ಛಿಂದಂತಿ ಶಸ್ತ್ರಾಣಿ.... ಶ್ಲೋಕವನ್ನು ಅರ್ಥೈಸುವುದರ ಮೂಲಕ ಪ್ರಶ್ನಿಸುತ್ತಾರೆ.

ಹಿಂದೂವಿನ ವಜ್ರ ಶರೀರದಲ್ಲಿನ ಪಂಚಪ್ರಾಣಗಳನ್ನು ಬೇಧಿಸದೇ ಭಾರತದ ಮಟ್ಟಕ್ಕೆ ಯಾವ ಚಳವಳಿಗಳೂ ಕ್ರಾಂತಿಕಾರಿಗಳಾಗಿ ಪರಿಣಮಿಸ

ಲಾರವು ಎಂಬ ನಿರ್ಧಾರವನ್ನು ಅಂಬೇಡ್ಕರ್ ಸಂಸ್ಕೃತ ಅಭ್ಯಾಸ ಮಾಡಿದ ಅತ್ಯಾವಶ್ಯಕತೆಯಲ್ಲಿ ಕಾಣಬಹುದು ಎಂದು ಪದ್ಮಾಲಯ ನಾಗರಾಜ್ ಗ್ರಹಿಸುವುದು ತುಂಬಾ ಸೂಕ್ತವಾದದ್ದು. ನಾವು ವಿರೊಧಿಸಬೇಕಾದ್ದನ್ನು ಆಳ ಅಧ್ಯಯನ ಮಾಡಿಯೇ ವಿರೋಧಿಸಬೇಕಾಗುತ್ತದೆ. ಅರಿಷಡ್ವರ್ಗಗಳನ್ನು ಗೆಲ್ಲಬೇಕಾದ್ದು ಚಿತ್ತಶುದ್ಧಿಗೂ, ಜೀವನದ ಉನ್ನತಿಗೂ ಬಹಳ ಮುಖ್ಯವಾದದ್ದು ಎಂದು ಹೇಳುವ ಭಗವದ್ಗೀತೆ ಯುದ್ಧಮಾಡು ಎದುರಿಗಿರುವ ದಾಯಾದಿಗಳನ್ನೂ ಗುರುಗಳನ್ನೂ ಎಂದು ಏಕೆ ಹೇಳುತ್ತಿದೆ? ಅರ್ಥವಾಗುವುದಿಲ್ಲ.

'ಅಂಬೇಡ್ಕರರ 'ನ್ಯಾಯ ಮತ್ತು ತರ್ಕ'ಗಳ ಮುಂದೆ ವೇದ, ಶಾಸ್ತ್ರ ಪುರಾಣ, ಭಗವದ್ಗೀತೆ ಶೃತಿ ಮತ್ತು ಸ್ಮೃತಿಗಳ ಸಾರ ಸರ್ವಸ್ವವಾದ ದೈವ ಮತ್ತು ಆತ್ಮ ಅಪರಾಧಿ ಸ್ಥಾನದಲ್ಲಿ ಕೈಕಟ್ಟಿ ನಿಂತುಕೊಂಡಂತೆ ಭಾಸವಾಗುತ್ತದೆ' -ಎಂದು ಪದ್ಮಾಲಯ ನಾಗರಾಜರು ಹೇಳುವುದು, ಮಾನವೀಯ ಧರ್ಮದತ್ತ ನಮ್ಮ ಮುಖವಿರಬೇಕೆಂಬ ಹಿನ್ನೆಲೆಯಿಂದ ಎಂದು ನಂಬುತ್ತೇನೆ.

> **ನಾವು ಮಾಡುವ ಯಾವುದೇ ಚಳವಳಿ ಇರಬಹುದು, ಅದರ ಹಿಂದೆ ಬಸವಣ್ಣನ ಉಳ್ಳವರು ಶಿವಾಲಯ ಮಾಡುವರು, ನಾನೇನ ಮಾಡಲಯ್ಯ ಮತ್ತು ಕಲಬೇಡ ಕೊಲಬೇಡ ವಚನಗಳ ಅರಿವು ಇರಬೇಕಾಗುತ್ತದೆ. ಇದೇ ಆಧ್ಯಾತ್ಮ. ಇದೇ ಮಾನವೀಯ ಕ್ರಾಂತಿ !**

'ನಾನು' ಮತ್ತು ದೇಹ ಬೇರೆಯಲ್ಲ. ಒಂದೇ ಅಂದುಕೊಳ್ಳುತ್ತ ಅದ್ವೈತದೊಳಗೆ ಪ್ರವೇಶ ಮಾಡುತ್ತ ಹೋದಂತೆ ನಾನು ಮತ್ತು ನೀನು ಬೇರೆಯಲ್ಲ ಒಂದೇ ಅನಿಸಬೇಕು. ಇದೇ ಭಾವ ಬೆಳೆಯುತ್ತ ಬೆಳೆಯುತ್ತ ಈ ವಿಶ್ವದಲ್ಲಿಯೇ ನಾನು ಒಂದಾಗಬೇಕು ಎಂಬ ಸ್ಥಿತಿಗೆ ಅದ್ವೈತ ನಮ್ಮನ್ನು ತಲುಪಿಸಬೇಕು.

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ
ಎಲ್ಲರೊಳಗೊಂದಾಗು ಮಂಕುತಿಮ್ಮ - ಎಂದು ಡಿವಿಜಿ ಹೇಳುವ 'ಎಲ್ಲರೊಳಗೊಂದಾಗು' ಎನ್ನುವುದು, ಕುವೆಂಪು ಅವರ ವಿಶ್ವಮಾನವ ಕಲ್ಪನೆ ಎಲ್ಲವೂ ಒಂದೇ ಅಲ್ಲವೇ ?

ಉಳ್ಳವರು ಶಿವಾಲಯವ ಮಾಡುವರು । ನಾನೇನು ಮಾಡಲಯ್ಯ ಬಡವನು । ಎನ್ನ ಕಾಲೇ ಕಂಬ । ದೇಹವೇ ದೇಗುಲವಯ್ಯ । ಶಿರವೇ ಹೊನ್ನ ಕಳಸ ಎಂದು ಬಸವಣ್ಣ ದೇವರೇ ನಾನು ಎನ್ನುವುದು, ಶಂಕರರು ಅಹಂ ಬ್ರಹ್ಮಾಸ್ಮಿ ಎನ್ನುವುದು ಒಂದೇ ಅಲ್ಲವೇ ?

ಯುದ್ಧ ಮಾಡು ಅನ್ನುವುದಕ್ಕಿಂತ ದೇಹವಿಜ್ಞಾನ ಅರಿಯುವ ಆಧ್ಯಾತ್ಮ ಚಿಂತನೆ ಬಹಳ ಮುಖ್ಯವಾದದ್ದು. ನಾವು ಮಾಡುವ ಯಾವುದೇ ಚಳವಳಿ ಇರಬಹುದು, ಅದರ ಹಿಂದೆ ಬಸವಣ್ಣನ ಉಳ್ಳವರು ಶಿವಾಲಯ ಮಾಡುವರು, ನಾನೇನ ಮಾಡಲಯ್ಯ ಮತ್ತು ಕಲಬೇಡ ಕೊಲಬೇಡ ವಚನಗಳ ಅರಿವು ಇರಬೇಕಾಗುತ್ತದೆ. ಇದೇ ಆಧ್ಯಾತ್ಮ. ಇದೇ ಮಾನವೀಯ ಕ್ರಾಂತಿ ! 'ಕ್ರಾಂತಿಯು ತತ್ವಜ್ಞಾನದ ಜನನಿ. ಅಥವಾ ತತ್ವಜ್ಞಾನದ ಪ್ರಕಾಶ ಹರಡುವ ಜ್ಯೋತಿ' -ಎಂಬ ಅಂಬೇಡ್ಕರರ ಮಾತಿಗೆ ಇದೇ ಹಿನ್ನೆಲೆಯಿರಬೇಕಲ್ಲವೇ ? ಶ್ರೀ ಪದ್ಮಾಲಯ ನಾಗರಾಜರು ಅಭಿನಂದನಾರ್ಹರು. □

ಮಾಂಸಾಹಾರ ನಿಷೇಧ ದೂರ್ತತನ

ಶ್ರೇಷ್ಠತೆ, ಪಾವಿತ್ರ್ಯದ ಹೆಸರಿನಲ್ಲಿ ಆಹಾರಾಭ್ಯಾಸದ ಮೇಲೆ ಅವೈಚಾರಿಕ ಒತ್ತಡಗಳನ್ನು, ನಿಷೇಧಗಳನ್ನು ಹೇರಲು ಹೊರಡುವುದು ಅತ್ಯಂತ ದೂರ್ತತನ ಎನಿಸಿಕೊಳ್ಳುತ್ತದೆ. ಜನಸಮುದಾಯದ ಆಹಾರಾಭ್ಯಾಸಗಳನ್ನು ನಿರ್ದೇಶಿಸುವ ಹಠಮಾರಿ ಧೋರಣೆಗಳಿಂದ ಸಮಾಜದಲ್ಲಿ ಸಂಘರ್ಷ ಹೆಚ್ಚುತ್ತದೆ ಎಂಬುದನ್ನು ಯಾರೂ ಮರೆಯಬಾರದು.

ಬಸವ ಪ್ರೇಮಿಗಳು ಕ್ಷುಲ್ಲಕ ಮಾಂಸಾಹಾರ ಸೇವನೆ ಬಗ್ಗೆ ತಲೆಕೆಡಿಸಿಕೊಳ್ಳದೆ, ಪ್ರಸ್ತುತ ಬಸವ ಧರ್ಮ ಮಾನವನ ಹಿತಚಿಂತನೆ ಕಾಯುವುದರಿಂದ ಏಕೆ ಹಿಂದೆ ಸರಿದಿದೆ, ಹಾಗೂ ಬಸವ ಧರ್ಮದೊಳಗಿನ ಉದಾತ್ತ ಧ್ಯೇಯಗಳನ್ನು ಅನುಷ್ಠಾನಗೊಳಿಸುವಲ್ಲಿ ತಾವೇಕೆ ಸಂಕುಚಿತವಾಗಿ ವರ್ತಿಸುತ್ತಿದ್ದೇವೆ ಎಂಬುದರ ಬಗ್ಗೆ ಚಿಂತಿಸಬೇಕಾಗಿತ್ತು. ಆದರೆ ಬಸವಣ್ಣನ ತರುವಾಯ ಬಸವಧರ್ಮದ ಸಾತ್ವಿಕ, ನೈತಿಕ, ವೈಚಾರಿಕ ಮೌಲ್ಯಗಳನ್ನೇ ನಾಶಗೊಳಿಸಿ ಸಕಾರಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡಿರುವ ಜನರಿಂದ ಇದು ಸಾಧ್ಯವಾಗುವ ಮಾತೆ? ಇವರ ಅಹಿಂಸೆಯ ವಾದದಲ್ಲಿ ಜಾತಿ ಶ್ರೇಷ್ಠತೆಯನ್ನು ಬಿಂಬಿಸುವ, ಉಳಿಸಿಕೊಳ್ಳುವ ಹುನ್ನಾರವಿದೆಯೇ ವಿನಃ ಅದರಲ್ಲಿ ಪ್ರಾಮಾಣಿಕತೆಯಾಗಲೀ, ಮಾನವೀಯ ಅಂಶಗಳಾಗಲೀ ಇಲ್ಲ.

ಹನ್ನೆರಡನೇ ಶತಮಾನದ ಶರಣರು ಹಿಂದೂ ಧರ್ಮದ ಜಾತಿವ್ಯವಸ್ಥೆಗೆ ಭಾರೀ ಪೆಟ್ಟನ್ನು ನೀಡಿ ಪರ್ಯಾಯ ಸಮಾಜವನ್ನು ಕಟ್ಟುತ್ತಿದ್ದಂತೆ ದುರ್ಬಲ ವರ್ಗಗಳೆಲ್ಲ ಹೊಸ ಶಕ್ತಿಯೊಂದು ಪ್ರವಹಿಸಿ ಇಂದಿನ ಶರಣ ಸಮುದಾಯಕ್ಕೆ ನಾಂದಿಯಾಯಿತು. ಸಾವಿರಾರು ವರ್ಷಗಳ ಅಮಾನವೀಯ ಜಾತಿ ಪದ್ಧತಿಯಲ್ಲಿನ ತಾರತಮ್ಯಗಳನ್ನು ವಿರೋಧಿಸಿ ಸರ್ವರಿಗೂ ಸಮಾನಬಾಳ್ವೆಯನ್ನು ಅತ್ಯಂತ ಕ್ರಾಂತಿಕಾರಿಯಾಗಿ ಪ್ರತಿಪಾದಿಸಿದ್ದ ಬಸವಣ್ಣನ ವಿಚಾರಗಳು ಕೆಳವರ್ಗಗಳಿಗೆ ಸಹಜವಾಗೇ ಅತ್ಯಂತ ಪ್ರಮುಖವಾಗಿದ್ದವು. ಈ ವರ್ಗಗಳು ಬಸವಣ್ಣ ಪ್ರಾರಂಭಿಸಿದ್ದ ಶರಣ ಚಳವಳಿಯಲ್ಲಿ ಅತ್ಯಂತ ಯಶಸ್ವಿಯಾಗಿ ತೊಡಗಿಕೊಂಡು ವೈದಿಕಶಾಹಿಗೆ ಸವಾಲುಗಳನ್ನು ವೊಡ್ಡುತ್ತಾ ಜಾತ್ಯತೀತ ಸಮಾಜಕ್ಕೆ ಬುನಾದಿಯನ್ನು ಹಾಕತೊಡಗಿದ್ದವು. ವಿಪರ್ಯಾಸವೆಂದರೆ ಬಸವಣ್ಣನ ನಂತರ ಈ ವರ್ಗಗಳೇ ಜಾತಿ ಶ್ರೇಷ್ಠತೆಯ ಅಹಂ ಅನ್ನು ತಲೆಗಂಟಿಸಿಕೊಂಡು ಬಸವ ಸಮಾಜದ ಆಶಯಗಳಿಗೆ, ವಿಚಾರಗಳಿಗೆ ಗೋರಿ ಕಟ್ಟಿ ನವ ಪುರೋಹಿತಶಾಹಿಗಳಾದವು. ತಮ್ಮ ಜಾತಿ ಶ್ರೇಷ್ಠತೆಯನ್ನು ಬಲಪಡಿಸಿಕೊಳ್ಳಲು ಸನಾತನ ವೈದಿಕ ವಿಚಾರಗಳನ್ನು, ವಿಧಿ-ವಿಧಾನಗಳನ್ನು ತಮ್ಮ ಮಠಗಳಲ್ಲಿ ಬಸವಧರ್ಮಕ್ಕೆ ಪ್ರಾತಿನಿಧಿಕವನ್ನಾಗಿಸುತ್ತಾ ಬಂದವು.

ಇಂದು ಅಹಿಂಸೆಯ ಬಗ್ಗೆ ಒಕ್ಕೊರಲಿನ ಧ್ವನಿ ಎಂಬಂತೆ ಮಾತನಾಡುತ್ತಿರುವ ಜನ ಅತ್ಯಂತ ಹೇಯವಾದ ಅಸ್ಪೃಶ್ಯತೆಯನ್ನು ಆಚರಿಸುತ್ತಾ ದುರ್ಬಲವರ್ಗದವರ ಮೇಲೆ ದೌರ್ಜನ್ಯ ಎಸಗುತ್ತಾರೆ. ಇವು ಮಾತ್ರ ಇವರಿಗೆ ಹಿಂಸೆ ಎನ್ನಿಸುವುದಿಲ್ಲ ಯಾಕೆ ? ಪ್ರಾಣಿ ಪಕ್ಷಿಗಳ ಬಗ್ಗೆ ಇವರಿಗಿರುವ ದಯೆ ಕರುಣೆ ಅನುಕಂಪ ಮನುಷ್ಯರ ಮೇಲೆ ಏಕೆ ಬಾರದು? ಅಹಿಂಸೆಯ ವಾದಗಳನ್ನು ಮಂಡಿಸುವಾಗಲು ಕೂಡ ಪಕ್ಷಪಾತದ ದೂರ್ತತನಗಳು ಇವರಲ್ಲಿ ಎದ್ದು ಕಾಣುತ್ತವೆ. ಪ್ರಾಣಿ ಪಕ್ಷಿಗಳ ಬಲಿಯ ಬಗ್ಗೆ ಮಿಡಿವ ಇವರ ಹೃದಯ, ಮನುಷ್ಯನನ್ನು ಅಮಾನವೀಯವಾಗಿ ಶೋಷಿಸುವ, ಹಿಂಸಿಸುವ ಅಸ್ಪೃಶ್ಯತೆಯ ಬಗ್ಗೆ ಸದಾ ತುಡಿಯುತ್ತಿರುತ್ತದೆ.

ಅಂತರಂಗ ಶುದ್ಧಿ ಮಾಡಿಕೊಳ್ಳದೆ ಅಂತಃಕರಣದ ಬಗ್ಗೆ ಮಾತನಾಡುವವರ ಕ್ಷುದ್ರತನಗಳಿಗೆ ಕೊನೆ ಮೊದಲೆಲ್ಲಿ? ಸಮಾಧಾನಕರ ಸಂಗತಿಯೆಂದರೆ ಜಾತಿ ಶ್ರೇಷ್ಠತೆಯ ನಿರರ್ಥಕತೆ, ವಂಚನೆಯನ್ನು ಅರಿತು ಅದರ ಪಾಪಪ್ರಜ್ಞೆಯನ್ನು ಅನುಭವಿಸುತ್ತಿರುವ ಜನ ಈ ಸಮುದಾಯದಲ್ಲೇ ಇದ್ದು ಸಮೂಹನಿಷ್ಠರಾಗಿ ಬದುಕುವುದರಲ್ಲಿ ನಂಬಿಕೆ ಇರಿಸಿಕೊಂಡಿದ್ದಾರೆ ಎಂಬುದು.

ಹನ್ನೆರಡನೇ ಶತಮಾನದಲ್ಲಿ ಶರಣರಾಗಲು ಇರಬೇಕಾಗಿದ್ದ ಅರ್ಹತೆ ಸಸ್ಯಾಹಾರವೇನೂ ಅಲ್ಲ. ಸಸ್ಯಾಹಾರ ಶರಣರಾಗಲು ಕಡ್ಡಾಯ ಮಾನದಂಡವಾಗಿರಲಿಲ್ಲ. ಬದಲಾಗಿ ವರ್ಣಸಂಕರದ ಮೂಲಕ ಜಾತಿವಿನಾಶ ಮಾಡುವ ಕಾರ್ಯಕ್ಕೆ ಶರಣರು ಬದ್ಧರಾಗಿ ಇರಬೇಕಾಗಿದ್ದನ್ನು ಬಸವ ನೇತೃತ್ವದ ಚಳವಳಿ ಕಡ್ಡಾಯಗೊಳಿಸಿತ್ತು. ವಾಸ್ತವವಾಗಿ ಬಸವಣ್ಣನ ಅಂದಿನ ಹೋರಾಟ ಸಸ್ಯಾಹಾರಿಗಳ ಜಾತಿ ಶ್ರೇಷ್ಠತೆಯ ವಿರುದ್ಧವೇ ಆಗಿತ್ತು. ಸಸ್ಯಾಹಾರ ಹಾಗೂ ಅಹಿಂಸಾವಾದಿಗಳ ಮುಸುಕಿನಲ್ಲಿ ನಡೆಯುತ್ತಿದ್ದ ಶೋಷಣೆ, ವಂಚನೆ, ಡಾಂಭಿಕತೆಗಳ ವಿರುದ್ಧ ಬಸವಣ್ಣ ಶರಣರೊಟ್ಟಿಗೆ ಕೂಡಿ ದೊಡ್ಡ ಹೋರಾಟವನ್ನೇ ಮಾಡಿದ್ದ. ದುರಂತವೆಂದರೆ ಬಸವಾನುಯಾಯಿಗಳ ನವ ಬ್ರಾಹ್ಮಣ್ಯದ ನಡವಳಿಕೆಯಿಂದಾಗಿ ಈಗಲೂ ಕೂಡ ಅದೇ ಹೋರಾಟವನ್ನು ಅವರ ವಿರುದ್ಧವೇ ಮಾಡಬೇಕಾಗಿರುವುದು.

ಇವರು ವೈದಿಕ ಹುನ್ನಾರದ ಹಿಂದುತ್ವದ ವೈಭವೀಕರಣಕ್ಕೆ ಮುಂದಾಳತ್ವ ವಹಿಸುತ್ತಿರುವುದನ್ನು ಗಮನಿಸಿದರೆ ಮುಂದಿನ ದಿನಗಳಲ್ಲಿ ಬಸವಣ್ಣ ಇವರಿಗೆ ಅಪಥ್ಯವಾಗುತ್ತಾನೆ ಎಂದೆನಿಸುತ್ತದೆ. ಇಂದು ಬಸವ ಧರ್ಮದ ಕೆಲ ಜಾತಿವಾದಿಗಳಿಗೆ ತಮ್ಮ ಪೂರ್ವಾಶ್ರಮವನ್ನು ನೆನಪಿಸುವ ಬಸವಣ್ಣನ ನೆನಪೇ ಅವಮಾನದ ವಿಷಯವಾಗುತ್ತಿರುವುದು ಸುಳ್ಳೇನಲ್ಲ. ಇದನ್ನು ನೀಗಿಕೊಳ್ಳಲೆಂದೇ ಇವರು ವೈದಿಕ ರಾಮನನ್ನು ಒಪ್ಪಿಕೊಂಡಿದ್ದಾರೆ. ರಾಮನನ್ನು ತಮ್ಮ ಆದರ್ಶ ವ್ಯಕ್ತಿಯನ್ನಾಗಿಸಿಕೊಳ್ಳುವ ಮೂಲಕ ವೈದಿಕ ಧರ್ಮಕ್ಕೆ ಮರು ಮತಾಂತರಗೊಳ್ಳುತ್ತಿದ್ದಾರೆ. ಇಂಥ ಕೃತಘ್ನರ ಸುಳಿವರಿತೇ ಮುರುಘ ರಾಜೇಂದ್ರ ಸ್ವಾಮಿಗಳು ಬಸವ ಧರ್ಮದ ಹಿಂದಿನ ನೈತಿಕತೆ, ಸಾತ್ವಿಕತೆ ಹಾಗೂ ಸಮೂಹ ನಿಷ್ಠ ತತ್ವಗಳಿಗೆ ಮರು ಜೀವ ಕೊಡಲು ಬಸವಣ್ಣನನ್ನು ಮತ್ತೆ ದಲಿತ-ಹಿಂದುಳಿದ ಕೇರಿಗಳಿಗೆ ತರಲು ಹೋರಾಟ ನಡೆಸುತ್ತಿರುವುದು.

ದುರ್ಬಲವರ್ಗದ ಬದುಕನ್ನು ಸಹನೀಯಗೊಳಿಸಿ ಆ ಮೂಲಕ ಜಡತೆಯನ್ನಾವರಿಸಿಕೊಂಡ ಸಮಾಜಕ್ಕೆ ಚೈತನ್ಯ ತರುವುದರಲ್ಲಿಯೇ ಬಸವಧರ್ಮದ ಜೀವಾಳ ಇರುವುದು. ಬಸವಧರ್ಮಕ್ಕೆ ಪ್ರಾತಿನಿಧಿಕವೆನಿಸುವುದು ಸಮಾಜದಲ್ಲಿ ಅನಾದರ, ಅಸಮಾನಕ್ಕೆ ಒಳಗಾದ ದುರ್ಬಲ ಜಾತಿಗಳೇ ವಿನಃ, ಡಾಂಭಿಕತೆಯನ್ನು ಮೆರೆವ ಜಾತಿ ಶ್ರೇಷ್ಠತೆಯಲ್ಲ. ಬಸವಣ್ಣ ಅಂದು ಇದ್ದದ್ದು ಶೋಷಿತರ ಜೊತೆಗೆ ಅಂದ ಮೇಲೆ ಇಂದೂ ಕೂಡ ಇರಬೇಕಾಗಿರುವುದು ಅವರ ಜೊತೆಗೇ ಅಲ್ಲವೆ? ಬಸವಧರ್ಮದ ಮೇಲೆ ಪಟ್ಟಭದ್ರರ ಯಜಮಾನಿಕೆಯನ್ನು ತಪ್ಪಿಸಲು ಹೊರಟಿರುವ ಮುರುಘ ರಾಜೇಂದ್ರರ ಕೈ ಬಲಪಡಿಸಬೇಕಾದ ಹೊಣೆಗಾರಿಕೆಯಿಂದ ದುರ್ಬಲ ವರ್ಗಗಳು ಖಂಡಿತಾ ನುಣುಚಿಕೊಳ್ಳಬಾರದು.

○ ಸಿ. ಹರೀಶ್ ಕುಮಾರ್ ಗಂಗನಬೀಡು

ಒಳನೋಟ

ಭಾರತೀಯ ಸಂಸ್ಕೃತಿಯ ಬೇರುಗಳು ನಮ್ಮ ಋಷಿ ಮುನಿಗಳ ಜೀವನದಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ, ನಮ್ಮ ಧಾರ್ಮಿಕ ಜೀವನದ ಪಾವಿತ್ರ್ಯ ಮತ್ತು ಪರಿಶುದ್ಧತೆಗಳು ಮ್ಲೇಚ್ಛರ ಆಗಮನದಿಂದ ಕುಲಗೆಟ್ಟು ಕಲಬೆರಿಕೆಯಾಗಿವೆ, ಪಾಶ್ಚಾತ್ಯ ಸಂಸ್ಕೃತಿಯ ಮಾಲಿನ್ಯವನ್ನು ನಮ್ಮ ಪವಿತ್ರ ಗಂಗೆಯಲ್ಲಿ ತೊಳೆದು ಮತ್ತೊಮ್ಮೆ ನಾವು ಪ್ರಾಚೀನ ಸಂಸ್ಕೃತಿಯ ವಂಶವಾಹಿನಿಗಳಾಗಿ ಪ್ರಕಾಶಿಸಬೇಕಾಗಿದೆ ಎಂದು ನಮ್ಮ ಸಂಸ್ಕೃತಿಯ ಪುನರುತ್ಥಾನಕಾರರು ಮೇಲಿಂದ ಮೇಲೆ ಹೇಳುತ್ತಲೇ ಇದ್ದಾರೆ. ಆದರೆ ನಾವೇನಾದರು ಆ ಬಗ್ಗೆ ನೇರ ಪ್ರಶ್ನೆಗಳನ್ನು ಕೇಳಿದರೆ ಋಷಿಗಳ ಮೂಲವನ್ನು ಕುರಿತು ಪ್ರಶ್ನೆ ಕೇಳಬಾರದು ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ನಮ್ಮ ಋಷಿಮುನಿಗಳ ಪೂರ್ವೋತ್ತರಗಳತ್ತ ಒಂದು ಇಣುಕು ನೋಟ ಇಲ್ಲಿದೆ.

ಬಿ. ವಿ. ವೀರಭದ್ರಪ್ಪ

ಋಷಿ ಮೂಲ ಕೇಳಬಾರದು: ಏಕೆ?

ಭರದ್ವಾಜ : ಬ್ರಹ್ಮನ ಮಾನಸ ಪುತ್ರನಾದ ಅಂಗೀರಸನಿಗೆ ಉತಥ್ಯ ಮತ್ತು ಬೃಹಸ್ಪತಿ ಎಂಬ ಇಬ್ಬರು ಮಕ್ಕಳಿದ್ದರು. ಉತಥ್ಯನ ಹೆಂಡತಿ ಮಮತ. ಆಕೆ ತುಂಬು ಗರ್ಭಿಣಿಯಾಗಿದ್ದಾಗ ಒಮ್ಮೆ ಪತಿ ಎಲ್ಲೋ ದೂರ ಹೋಗಿದ್ದ ಆಗ ಮೈದುನನಾದ ಬೃಹಸ್ಪತಿ ಅವಳ ಮೇಲೆ ಬಲಾತ್ಕಾರ ಮಾಡಲು ಹೋದ, ಅವಳು ವಿನಯದಿಂದ 'ಹೆರಿಗೆಯಾಗುವವರೆಗೂ ತಡೆ, ನಿನ್ನ ಕೋರಿಕೆಯನ್ನು ನೆರವೇರಿಸುವೆನು' ಎಂದಳು. ಅವಳ ಭರವಸೆಯನ್ನು ಕೇಳಿದ ಮೇಲೂ ದೇವತೆಗಳ ಗುರುವಾದ ಬೃಹಸ್ಪತಿ ತನ್ನ ಕಾಮ ಕೇಳಿಯನ್ನು ನಿಲ್ಲಿಸದಾದ. ಗರ್ಭದೊಳಗಿದ್ದ ಶಿಶು ಕಿರಿಚಿಕೊಂಡಿತು. 'ಚಿಕ್ಕಪ್ಪ ಈ ಕಾಮೋದ್ರೇಕ ಅನುಚಿತವಾದುದು, ನಿನ್ನ ವೀರ್ಯವನ್ನು ತಡೆ ಹಿಡಿ' ಎಂದು ಗೋಳಿಟ್ಟಿತು. ಆದರೂ ಬೃಹಸ್ಪತಿ ಅವನ ಪ್ರಾರ್ಥನೆಯನ್ನು ಮನ್ನಿಸಲಿಲ್ಲ, ತನ್ನ ಕಾಮಕೇಳಿಯನ್ನು ಮುಂದುವರಿಸಲಾಗಿ ಮಮತೆಯ ಗರ್ಭದೊಳಗಿನ ಶಿಶು ಹೊರಗೆ ಧಾವಿಸಿತು. ತನ್ನ ಸಂಭೋಗಕ್ಕೆ ಅಡ್ಡಿಯುಂಟುಮಾಡಿದ ತನ್ನ ಅಣ್ಣನ ವೀರ್ಯದಿಂದ ಜನಿಸಿದ ಮಗುವಿಗೆ 'ನೀನು ಹುಟ್ಟು ಕುರುಡನಾಗು' ಎಂದು ಬೃಹಸ್ಪತಿ ಶಾಪವಿತ್ತ. ಆದ್ದರಿಂದ ಆ ಮಗು ದೀರ್ಘ ತಮಸ್ ಎಂಬ ಹೆಸರಿನಿಂದ ಮುಂದೆ ಅಂಧ ಮುನಿಯಾದ.



ಇತ್ತ ಬೃಹಸ್ಪತಿಯ ವೀರ್ಯದಿಂದ ಮಮತೆಯ ಗರ್ಭದಲ್ಲಿ ಮತ್ತೊಂದು ಶಿಶು ಬೆಳೆಯಲಾರಂಭಿಸಿತು. ಅದು ಎಲ್ಲಿ ತನ್ನ ಪತಿಗೆ ತಿಳಿದು ಪ್ರಮಾದವಾಗುವುದೊ ಎಂದು ಮಮತ ಭ್ರೂಣ ಹತ್ಯೆಗೆ ಯತ್ನಿಸಿದಳು. ಆದರೆ ಬೃಹಸ್ಪತಿ ಮಮತಳ ಮನವೊಲಿಸಿ ಆ ಶಿಶು ಸಜೀವವಾಗಿಯೇ ಹೊರಬರುವಂತೆ ಮಾಡುವಲ್ಲಿ ಯಶಸ್ವಿಯಾದ. ಕೂಡಲೆ ಆ ಶಿಶುವನ್ನು ವಾಯು ದೇವತೆಗಳು ಎತ್ತಿಕೊಂಡು ಹೋಗಿ ಕಾಪಾಡಿದರು. ಅದೇ ಸಮಯದಲ್ಲಿ ಪೂರು ವಂಶದ ದುಷ್ಯಂತನ ಮಗನಾದ ಭರತನಿಗೆ ಮೂವರು ಹೆಂಡಿರಿದ್ದರೂ ಒಬ್ಬನೂ ಮಗನಿರಲಿಲ್ಲ. ಇದನ್ನು ತಿಳಿದ ವಾಯುದೇವತೆಗಳು ತಮ್ಮ ರಕ್ಷಣೆಯಲ್ಲಿದ್ದ ಬೃಹಸ್ಪತಿಯಿಂದ ಮಮತಳಿಗೆ ಹುಟ್ಟಿದ ಅನಾಥ ಮಗುವನ್ನು ಭರತನಿಗೆ ದತ್ತು ನೀಡಿದರು. ಅವನೇ ಮುಂದೆ ಭರದ್ವಾಜ ಎಂಬ ಹೆಸರಿನಿಂದ ಸಪ್ತರ್ಷಿಗಳಲ್ಲಿ ಒಬ್ಬನಾಗಿ, ಗೋತ್ರ ಪ್ರವರ್ತಕನಾಗಿ ಪ್ರಖ್ಯಾತನಾದ. (ಶ್ರೀಮದ್ಭಾಗವತ, ೯, ೨೦, ೩೦-೩೯).

ಅಲ್ಲದೆ ಅವನು ವೇದಾಧ್ಯಯನ ನಿರತನಾಗಿ ಋಗ್ವೇದದ ಆರನೇ ಮಂಡಲದ ಅನೇಕ ಸೂಕ್ತಗಳ ಕರ್ತೃವಾಗಿದ್ದಾನೆ. ಅವುಗಳಲ್ಲಿ ಅಗ್ನಿ, ಇಂದ್ರಾದಿ ದೇವತೆಗಳನ್ನು ಸ್ತುತಿಸಿ ಧನ, ಅನ್ನ, ಸುಖ, ಸಂಪತ್ತು, ಶತ್ರುಗಳ ನಾಶ ಇತ್ಯಾದಿಗಳಿಗಾಗಿ ಪ್ರಾರ್ಥನೆ ಸಲ್ಲಿಸಲಾಗಿದೆ.

ಭರದ್ವಾಜ ಶಬ್ದದ ನಿರ್ವಚನವನ್ನು ಹೀಗೆ ಮಾಡಲಾಗಿದೆ: ದ್ವಿಜ ಎಂದರೆ ಇಬ್ಬರಿಂದ ಹುಟ್ಟಿದವ, ಭರ ಎಂದರೆ ಪೋಷಿಸಲ್ಪಟ್ಟವ, ಹೀಗೆ ಇಬ್ಬರಿಂದ ಹುಟ್ಟಿ ಪೋಷಿಸಲ್ಪಟ್ಟ ಆ ಮಗುವಿನ ಹೆಸರು ಭರದ್ವಾಜ.

ದ್ರೋಣಾಚಾರ್ಯ : ಒಂದು ದಿನ ಭರದ್ವಾಜನು ಗಂಗಾ ನದಿಯ ದಡದಲ್ಲಿ ಧ್ಯಾನ ಮಾಡುತ್ತಿದ್ದಾಗ ಘೃತಚಿ ಎಂಬ ಒಬ್ಬ ಅಪ್ಸರೆ ಗಂಗೆಯಲ್ಲಿ ಮಿಂದು ಅರೆ ನಗ್ನಳಾಗಿ ಹೊರಬರುತ್ತಿದ್ದಳು. ಅದನ್ನು ಕಂಡ ಭರದ್ವಾಜನ ವೀರ್ಯ ಸ್ಖಲನವಾಯಿತು. ಅದು ವ್ಯರ್ಥವಾಗುವುದು ಬೇಡ ಎಂದು ಬಗೆದ ಭರದ್ವಾಜ ಆ ವೀರ್ಯವನ್ನು ಒಂದು ದೊನ್ನೆಯಲ್ಲಿ ಸಂಗ್ರಹಿಸಿ ಕಾಪಾಡಿದ. ಕೆಲದಿನಗಳಲ್ಲಿ ಅದರಿಂದ ಒಂದು ಗಂಡು ಶಿಶು ಜನಿಸಿತು. ದೊನ್ನೆ (ದ್ರೋಣ) ಯಿಂದ ಹೊರಬಂದ ಕಾರಣ ಅವನಿಗೆ ದ್ರೋಣ ಎಂಬ ಹೆಸರು ಬಂತು. ಅವನೇ ಮುಂದೆ ದ್ರೋಣಾಚಾರ್ಯನಾಗಿ ಅರ್ಜುನನಿಗೆ ಧನುರ್ವಿದ್ಯೆಯನ್ನು ಕಲಿಸಿದ ಮತ್ತು ತಾನು ವಿದ್ಯೆ ನೀಡಲು ತಿರಸ್ಕರಿಸಿದ ಏಕಲವ್ಯನಿಂದ ಗುರುದಕ್ಷಿಣೆಯಾಗಿ ಹೆಬ್ಬೆರಳನ್ನು ಕಿತ್ತುಕೊಂಡ. (ಭಾರತ, ಆದಿಪರ್ವ, ೧೪೨).

ಕೃಪಾಚಾರ್ಯ ಮತ್ತು ಕೃಪಿ : ಗೌತಮ ವಂಶದ ಶರದ್ವಂತನೆಂಬ ಮುನಿ ತಪೋನಿರತನಾಗಿದ್ದಾಗ ಇಂದ್ರ ಅವನ ತಪಸ್ಸನ್ನು ಭಗ್ನಗೊಳಿಸುವ ಸಲುವಾಗಿ ಜಾಲವತಿ ಎಂಬ ಅಪ್ಸರೆಯನ್ನು ಕಳಿಸಿದ. ಶರದ್ವಂತ ಅವಳನ್ನು ಕಂಡು ಮೋಹಪರವಶನಾದ. ಅವನ ವೀರ್ಯ ಚಿಮ್ಮಿ ಅಲ್ಲಿಯೆ ಬಿದ್ದಿದ್ದ ಒಂದು ಬಾಣದ ಮೇಲೆ ಚೆಲ್ಲಿತು. ಅದರ ರಭಸಕ್ಕೆ ಬಾಣ ಎರಡು ತುಂಡಾಗಿ ಮುರಿದು ಹೋಯಿತು. ಬಾಣದ ಒಂದು ತುಂಡಿನಿಂದ ಗಂಡು ಶಿಶು ಇನ್ನೊಂದರಿಂದ ಹೆಣ್ಣು ಶಿಶು ಜನಿಸಿದುವು. ಆ ವೇಳೆಗೆ ಸರಿ ಯಾಗಿ ಭೀಷ್ಮನ ತಂದೆಯಾದ ಶಂತನು ರಾಜ ಬೇಟೆಗೆಂದು ಬಂದಿದ್ದ ವನು ಆ ಎರಡು ಶಿಶುಗಳನ್ನು ಕಂಡು ಕೃಪಾಭರಿತನಾಗಿ ಎತ್ತಿಕೊಂಡು ಹೋಗಿ ಕಾಪಾಡಿದನು. ಗಂಡು ಮಗುವಿಗೆ ಕೃಪ ಎಂದು ಮತ್ತು ಹೆಣ್ಣು ಮಗುವಿಗೆ ಕೃಪಿ ಎಂದು ನಾಮಕರಣ ಮಾಡಲಾಯಿತು. (ಭಾರತ, ಆದಿಪರ್ವ, ೧೪೦).

ಕೆಲಕಾಲಾನಂತರ ಶರದ್ವಂತನು ಶಂತನು ರಾಜನ ಬಳಿಗೆ ಬಂದು ಅವರಿಬ್ಬರೂ ತನ್ನ ಮಕ್ಕಳೆಂದು ಹೇಳಿ ಕೃಪನಿಗೆ ಉಪನಯನಾದಿ ಸಂಸ್ಕಾರಗಳನ್ನು ನೆರವೇರಿಸಿ ಧನುರ್ವಿದ್ಯಾ ರಹಸ್ಯಗಳನ್ನು ಬೋಧಿಸಿದ.

ಕಶ್ಯಪ : ಇವನು ಬ್ರಹ್ಮನ ಮಗನಾದ ಮರೀಚಿಯ ಮಗ ಮತ್ತು ಗೋತ್ರ ಪ್ರವರ್ತಕನಾದ ಸಪ್ತ ಮಹರ್ಷಿಗಳಲ್ಲಿ ಅಗ್ರಮಾನ್ಯನಾದವನು. ಇವನಿಗೆ ಹದಿನೇಳು ಹೆಂಡತಿಯರಿದ್ದರು. ಅವರಲ್ಲಿ ದಿತಿ ಎಂಬುವಳಿಂದ ದೈತ್ಯರು, ಅದಿತಿಯಿಂದ ದೇವತೆಗಳು, ದನುವಿನಿಂದ ದಾನವರು, ದನಾಯುವಿನಿಂದ ಸಿದ್ಧರು, ಪ್ರಾಧಾ ಎಂಬುವಳಿಂದ ಗಂಧರ್ವರು, ಮುನಿ ಎಂಬುವಳಿಂದ ಅಪ್ಸರೆಯರು, ಸುರಸಾ ಎಂಬುವಳಿಂದ ಯಕ್ಷರು ಅಲ್ಲದೆ ಕಾಲಾ ಎಂಬುವವಳಿಂದ ಕಾಲಕೇಯ ರಾಕ್ಷಸರು ಮತ್ತು ಪುಲೋಮ ಎಂಬುವಳಿಂದ ಪೌಲೋಮರೆಂಬ ರಾಕ್ಷಸರನ್ನೂ ಪಡೆದನು. ಉಳಿದ

ಹೆಂಡತಿಯರಿಂದ ಕುದುರೆ, ಕತ್ತೆ, ಹಸು, ಕರಡಿ, ಗರುಡ, ಗಿಡ, ಮರ, ಹುಲ್ಲುಕಡ್ಡಿ ಜಾತಿಗಳ ಮಕ್ಕಳನ್ನೂ ಪಡೆದನು. ಈ ಹೆಸರುಗಳು ಮಾನವರ ಭಿನ್ನ ಕುಲ (totem) ಗಳನ್ನು ಸೂಚಿಸುತ್ತವೆ ಎಂದು ತಿಳಿಯಬೇಕು.

ಅಂದರೆ ದೇವ, ದಾನವ, ದೈತ್ಯ ಇತ್ಯಾದಿ ಎಲ್ಲರೂ ಕಶ್ಯಪನ ಮಕ್ಕಳು ಮತ್ತು ಒಡಹುಟ್ಟಿದವರಾಗಿದ್ದಾರೆ. ಇದರಿಂದ ದೇವತೆಗಳು ಮತ್ತು ರಾಕ್ಷಸರು ಬೇರೆ ಬೇರೆ ಲೋಕಗಳಿಗೆ ಸೇರಿದವರಲ್ಲ; ಭೂಲೋಕಕ್ಕೇ ಸೇರಿದ ದಾಯಾದಿಗಳು ಎಂಬುದು ಸ್ಪಷ್ಟವಾಗುತ್ತದೆ. (ಮತ್ಸ್ಯ ಪುರಾಣ, ೧೪೪).

ಊರ್ವಶಿ : ಋಷಿ ಮುನಿಗಳಿಗೂ ಮತ್ತು ಅಪ್ಸರೆಯರಿಗೂ ನಿಕಟ ಸಂಬಂಧವಿರುವುದರಿಂದ ಇನ್ನು ಅಪ್ಸರೆಯರತ್ತ ನಮ್ಮ ಗಮನವನ್ನು ಹರಿಸೋಣ.

ಒಮ್ಮೆ ನವನಾರಾಯಣರು ಬದರಿಕಾಶ್ರಮದಲ್ಲಿ ತಪೋನಿರತರಾಗಿದ್ದರು. ಕೆಲವು ದೇವ ವಿಲಾಸಿನಿಯರು ಅವರ ತಪಸ್ಸನ್ನು ಕೆಡಿಸಲು ಅಲ್ಲಿಗೆ ಬಂದರು. ಆಗ ನಾರಾಯಣನು ತನ್ನ ತೊಡೆಯನ್ನು ಕೆರೆಯಲು ಅಲ್ಲಿಂದ ಲೋಕೋತ್ತರ ಸೌಂದರ್ಯವತಿಯಾದ ಒಬ್ಬ ತರುಣಿ ಜನಿಸಿದಳು. ತೊಡೆ (ಊರು ಪ್ರದೇಶ) ಯಿಂದ ಉದಿಸಿದವಳಾದ್ದರಿಂದ ಅವಳನ್ನು ಊರ್ವಶಿ ಎಂದು ಕರೆಯಲಾಯಿತು. (ದೇವೀಭಾಗವತ, ೪, ೬).

ಮಿತ್ರಾವರುಣಗಳೆಂಬ ದೇವತೆಗಳು ವೇದ ಪುರಾಣಗಳಲ್ಲಿ ಪ್ರಸಿದ್ಧರು. ಅವರೇನು ಅವಳಿ ದೇವತೆಗಳೋ ಅಥವಾ ಎರಡು ತಲೆ ಒಂದೇ ದೇಹವುಳ್ಳ ಸಿಯಾಮೀಸ್ (siamese) ಗಳೋ ಸ್ಪಷ್ಟವಾಗಿ ತಿಳಿ ಯದು. ಅವರು ಒಂದು ಯಜ್ಞದಲ್ಲಿ ಭಾಗವಹಿಸಿದ್ದರು. ದೇವತೆಗಳ ಯಜ್ಞಗಳು ಸುಂದರಾಂಗಿಯರಿಲ್ಲದೆ ಕಳೆಗಟ್ಟುವುದಿಲ್ಲ. ಅಲ್ಲಿ ಅವರು ಸುರಸುಂದರಿಯಾದ ಊರ್ವಶಿಯನ್ನು ಕಂಡು ಕಾಮೋದ್ರೇಕಗೊಂಡರು. ಕೂಡಲೆ ಅವರ ಲಿಂಗದಿಂದ ವೀರ್ಯ ಚಿಮ್ಮತೊಡಗಿತು. ಆ ವೀರ್ಯವನ್ನು ಊರ್ವಶಿ ಒಂದು ಪಾತ್ರೆಯಲ್ಲಿ ಸಂಗ್ರಹಿಸಿ ಜೋಪಾನ ಪಡಿಸಿದಳು. ಸ್ವಲ್ಪ ಕಾಲದಲ್ಲೇ ಆ ಪಾತ್ರೆಯಿಂದ ಎರಡು ಗಂಡು ಶಿಶುಗಳು ಎದ್ದು ಬಂದುವು. ಅವರೇ ಅಗಸ್ತ್ಯ ಮತ್ತು ವಸಿಷ್ಠರೆಂಬ ಮಹರ್ಷಿಗಳು. (ರಾಮಾಯಣ, ಉತ್ತರ, ೫೬, ೫೭).

ಅಗಸ್ತ್ಯನನ್ನು ಈ ಕಾರಣಕ್ಕಾಗಿಯೇ ಮೈತ್ರಾವರುಣ ಎಂದೂ ಕುಂಭ ಸಂಭವ, ಘಟೋದ್ಭವ ಎಂದೂ ಕರೆಯುವ ರೂಢಿ ಇದೆ. ಅವನು ಬೆಳೆಯುತ್ತಿದ್ದ ವಿಂಧ್ಯ ಪರ್ವತವನ್ನು ತಡೆದುದರಿಂದ ಅವನಿಗೆ 'ಅ-ಗಸ್ತ್ಯ' ನೆಂಬ ಹೆಸರು ಬಂದಿತು. ಅವನು ವಿಂಧ್ಯ ಪರ್ವತವನ್ನು ದಾಟಿ ದಕ್ಷಿಣಕ್ಕೆ ಕಾಲಿಟ್ಟ ಆರ್ಯರಲ್ಲಿ ಮೊದಲಿಗನಿರಬೇಕು. ಅವನು ಸಮುದ್ರದ ನೀರನ್ನೆಲ್ಲ ಒಂದು ಬೊಗಸೆಯಲ್ಲಿ ಎತ್ತಿಕೊಂಡು ಕುಡಿದ ಎಂಬ ಕಾರಣಕ್ಕಾಗಿ ಪೀತಾಬ್ಧಿ ಎಂದೂ ಪ್ರಸಿದ್ಧನಾಗಿದ್ದಾನೆ. ಇನ್ನು ವಸಿಷ್ಠನ ಕಥೆ ತುಂಬಾ ವಿಸ್ತಾರವಾಗಿರುವುದರಿಂದ ಇಲ್ಲಿ ಪ್ರಸ್ತಾಪಿಸುವುದು ಬೇಡ.

ತಿಲೋತ್ತಮೆ : ಅಪ್ಸರೆಯರಲ್ಲಿ ಪ್ರಮುಖಳಾದ ತಿಲೋತ್ತಮೆಯು ಸಪ್ತರ್ಷಿಗಳಲ್ಲಿ ಮೊದಲಿಗನಾದ ಕಶ್ಯಪ ಮತ್ತು ಪ್ರಾಧಾಳ ಪುತ್ರಿ. ಒಮ್ಮೆ ಸುಂದ ಮತ್ತು ಉಪಸುಂದ ಎಂಬ ಇಬ್ಬರು ಅಸುರರು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿ,

ನಮ್ಮ ಋಷಿ ಮುನಿಗಳು, ದೇವತೆಗಳು ಮತ್ತು ಅಪ್ಸರೆಯರನ್ನು ಕುರಿತು ರಾಮಾಯಣ, ಮಹಾಭಾರತ ಭಾಗವತ ಇತ್ಯಾದಿ ಪುರಾಣಗಳಲ್ಲಿ ಅಸಂಖ್ಯ ಕಥೆ, ಉಪಕಥೆಗಳಿವೆ. ಅವುಗಳಲ್ಲಿ ಅವರ ಉಗ್ರ ತಪಸ್ಸು, ಧ್ಯಾನಗಳ ನಡುವೆಯೇ ಮುಕ್ತ ಲೈಂಗಿಕತೆ ಅವರ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸಂಸ್ಕೃತಿಯ ಪುನರುತ್ಥಾನಕಾರರು, ಋಷಿಮುನಿಗಳು ತಮ್ಮ ವಿರೋಧಿಗಳನ್ನು ಬಗ್ಗು ಬಡಿಯಲು ಬಳಸುತ್ತಿದ್ದ ಕಪಟ ತಂತ್ರ ಕುತಂತ್ರಗಳನ್ನೇ ತಪೋಸಿದ್ಧಿಗಳೆಂದು ವೈಭವೀಕರಿಸಿ, ಅವರ ಚಪಲ ಚಾಂಚಲ್ಯಗಳನ್ನು ಮುಚ್ಚಿಹಾಕುತ್ತಿದ್ದಾರೆ. ಕುಂಭ, ದೊನ್ನೆ, ಬಾಣದ ತುದಿಯಿಂದ ಜನಿಸಿದ ಅಯೋನಿಜರ ಅದ್ಭುತ ಕಥೆಗಳು ಭೂಲೋಕದಲ್ಲಿ ಎಂದಾದರೂ, ಎಲ್ಲಾದರೂ ಸಂಭವಿಸಿರಲು ಸಾಧ್ಯವೇ ? ಅಥವಾ ಇದೆಲ್ಲಾ ಆದಿ ಮಾನವರ ಪ್ರಾಣಿ ಸಹಜ ವರ್ತನೆಗಳಿಗೆ ಸಲ್ಲದ ಪಾವಿತ್ರ್ಯದ ಗುಡಿಗೋಪುರಗಳನ್ನು ಕಟ್ಟಿದ ಪುರಾಣಕಾರರ ಕುಶಲ ಕಲಾ ಚಾತುರ್ಯವೆ?

ಅವರಿಬ್ಬರಿಗೂ ತಮ್ಮಿಂದಲ್ಲದೆ, ಮತ್ತಾರಿಂದಲೂ ಸಾವು ಬಾರದಂತೆ ವರವನ್ನು ಬೇಡಿದರು. ಬ್ರಹ್ಮನು ತಥಾಸ್ತು ಎಂದು ಅದೃಶ್ಯನಾದ. ವರದ ಸೊಕ್ಕಿನಿಂದ ಕೊಬ್ಬಿದ ಅಸುರರು ದೇವತೆಗಳನ್ನು ನಾನಾ ರೀತಿ ಪೀಡಿಸತೊಡಗಿದರು. ದೇವತೆಗಳು ಬ್ರಹ್ಮನಲ್ಲಿ ಮೊರೆ ಇಟ್ಟರು. ಅವರಿಬ್ಬರು ಪರಸ್ಪರ ಕಾದಾಡಿ ನಾಶವಾಗುವಂತೆ ಮಾಡಲು ಬ್ರಹ್ಮನು ವಿಶ್ವಕರ್ಮನ ಮೂಲಕ ತಿಲೋತ್ತಮೆಯನ್ನು ಸೃಷ್ಟಿಸಿದನು.

ವಿಶ್ವದ ಸಮಸ್ತ ಚರಾಚರ ವಸ್ತುಗಳಿಂದ ಅತ್ಯಂತ ಸುಂದರವಾದ ಭಾಗಗಳನ್ನು ಸಂಗ್ರಹಿಸಿ ಅವುಗಳನ್ನು ಎರಕಹೊಯ್ದು ತಿಲೋತ್ತಮೆಯನ್ನು ಸೃಜಿಸಿದನು. ಅನಂತರ ಅವಳು ಕಶ್ಯಪನ ಮಡದಿಯಾದ ಪ್ರಾಧಾಳ ಗರ್ಭದಿಂದ ಜನಿಸುವಂತೆ ಮಾಡಲಾಯಿತು. ಮಿಕ್ಕ ಅಪ್ಸರೆಯರೆಲ್ಲರಿಗಿಂತಲೂ ಇವಳು ಒಂದು ಎಳ್ಳಷ್ಟಾದರೂ ಹೆಚ್ಚು ಸೌಂದರ್ಯವತಿಯಾಗಿದ್ದುದರಿಂದ ಇವಳಿಗೆ ತಿಲೋತ್ತಮೆ ಎಂದು ಹೆಸರಾಯಿತು. ಸುಂದೋಪಸುಂದರು ತಮ್ಮ ಕರಾಳ ಶಕ್ತಿಯಿಂದ ಲೋಕವನ್ನು ಅಲ್ಲೋಲ ಕಲ್ಲೋಲ ಮಾಡುತ್ತಿರಲು ಬ್ರಹ್ಮನು ಅವರಲ್ಲಿ ಪರಸ್ಪರ ಕಲಹವುಂಟಾಗುವಂತೆ ಮಾಡಲು ತಿಲೋತ್ತಮೆಯನ್ನು ನೇಮಿಸಿದನು. (ಭಾರತ, ಆದಿಪರ್ವ ೨೩೧).

ತಿಲೋತ್ತಮೆ ಅವರೆದುರು ಓರೆಗಣ್ಣಿನ ನೋಟ ಬೀರುತ್ತಾ ಸುಳಿದಾಡಲು ತೊಡಗಿದಳು. ಇಬ್ಬರೂ ಅವಳ ಬಳಿಸಾಗಿ ತನ್ನನ್ನು ಮದುವೆಯಾಗು ಎಂದು ಅಂಗಲಾಚಿದರು. ತಿಲೋತ್ತಮೆ 'ನಿಮ್ಮಿಬ್ಬರಲ್ಲಿ ಯಾವನು ಶೂರನೋ ಅವನನ್ನು ನಾನು ಮದುವೆಯಾಗುತ್ತೇನೆ' ಎಂದಳು. ಆಗ ಅವರಿಬ್ಬರೂ ಪರಸ್ಪರ ಹೋರಾಡಿ ಮಡಿದರು. ಅವಳು ತನಗೆ ನಿಯೋಜಿತವಾದ ಕೆಲಸವನ್ನು ಸಾಂಗವಾಗಿ ನೆರವೇರಿಸಿದ ನಂತರ ದೇವಲೋಕಕ್ಕೆ ತೆರಳಿದಳು. ಅಲ್ಲಿ ಬ್ರಹ್ಮನು ದಕ್ಷಿಣಕ್ಕೆ ಮುಖಮಾಡಿ ಮತ್ತು ಶಿವನು ಉತ್ತರಕ್ಕೆ ಮುಖಮಾಡಿ ನಿಂತಿದ್ದರು. ಅವರ ಮಧ್ಯ ತಿಲೋತ್ತಮೆ ಇದ್ದಳು, ದೇವತೆಗಳು ಅವರನ್ನು ಸುತ್ತುವರೆದಿದ್ದರು. ತಿಲೋತ್ತಮೆಯು ದೇವತೆಗಳಿಗೆ ಪ್ರದಕ್ಷಿಣೆ ಹಾಕಿ ನಮಸ್ಕರಿಸಿದಳು. ಶಿವನು ಅವಳ ಸೌಂದರ್ಯಕ್ಕೆ ಮಾರು ಹೋಗಿ ಅವಳನ್ನು ಸದಾ ನೋಡುತ್ತಿರಲು ಬಯಸಿದ. ಅದಕ್ಕಾಗಿ ಅವನ ತಲೆಯಿಂದ ನಾಲ್ಕೂ ದಿಕ್ಕಿಗೆ ನಾಲ್ಕು ಮುಖಗಳು ಮೂಡಿಬಂದುವು. ಇಂದ್ರನೂ ಅವಳ ಸೌಂದರ್ಯಕ್ಕೆ ಪರವಶನಾದ, ಅವನ ಎರಡು ಕಣ್ಣು ಅವಳ ಸೌಂದರ್ಯವನ್ನು ಸವಿಯಲು ಸಾಲದಾಯಿತು. ಕೂಡಲೆ ಅವನ ಮುಖದಲ್ಲಿ ಸಹಸ್ರ ಕಣ್ಣುಗಳು ತೆರೆದುಕೊಂಡುವು. (ಭಾರತ, ಆದಿಪರ್ವ ೨೧೫).

ನಮ್ಮ ಋಷಿ ಮುನಿಗಳು, ದೇವತೆಗಳು ಮತ್ತು ಅಪ್ಸರೆಯರನ್ನು ಕುರಿತು ರಾಮಾಯಣ, ಮಹಾಭಾರತ ಭಾಗವತ ಇತ್ಯಾದಿ ಪುರಾಣಗಳಲ್ಲಿ ಅಸಂಖ್ಯ ಕಥೆ, ಉಪಕಥೆಗಳಿವೆ. ಅವುಗಳಲ್ಲಿ ಅವರ ಉಗ್ರ ತಪಸ್ಸು, ಧ್ಯಾನಗಳ ನಡುವೆಯೇ ಮುಕ್ತ ಲೈಂಗಿಕತೆ ಅವರ ಜೀವನದ ಒಂದು ಅವಿಭಾಜ್ಯ ಅಂಗವಾಗಿತ್ತು ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸಂಸ್ಕೃತಿಯ ಪುನರುತ್ಥಾನಕಾರರು, ಋಷಿಮುನಿಗಳು ತಮ್ಮ ವಿರೋಧಿಗಳನ್ನು ಬಗ್ಗು ಬಡಿಯಲು ಬಳಸುತ್ತಿದ್ದ ಕಪಟ ತಂತ್ರ ಕುತಂತ್ರಗಳನ್ನೇ ತಪೋಸಿದ್ಧಿಗಳೆಂದು ವೈಭವೀಕರಿಸಿ, ಅವರ ಚಪಲ ಚಾಂಚಲ್ಯಗಳನ್ನು ಮುಚ್ಚಿ ಹಾಕುತ್ತಿದ್ದಾರೆ. ಕುಂಭ, ದೊನ್ನೆ, ಬಾಣದ ತುದಿಯಿಂದ ಜನಿಸಿದ ಅಯೋನಿಜರ ಅದ್ಭುತ ಕಥೆಗಳು ಭೂಲೋಕದಲ್ಲಿ ಎಂದಾದರೂ, ಎಲ್ಲಾದರೂ ಸಂಭವಿಸಿರಲು ಸಾಧ್ಯವೇ ? ಅಥವಾ ಇದೆಲ್ಲಾ ಆದಿ ಮಾನವರ ಪ್ರಾಣಿ ಸಹಜ ವರ್ತನೆಗಳಿಗೆ ಸಲ್ಲದ ಪಾವಿತ್ರ್ಯದ ಗುಡಿಗೋಪುರಗಳನ್ನು ಕಟ್ಟಿದ ಪುರಾಣಕಾರರ ಕುಶಲ ಕಲಾ ಚಾತುರ್ಯವೆ?

ದಿತಿ, ಅದಿತಿ ಇತ್ಯಾದಿಗಳು ಒಬ್ಬನೇ ತಂದೆಯಾದ ದಕ್ಷಬ್ರಹ್ಮನ ಮಕ್ಕಳು ಮತ್ತು ಒಬ್ಬನೇ ಪತಿಯಾದ ಕಶ್ಯಪನ ಮಡದಿಯಾದುದರಿಂದ ಅವರ ಮಕ್ಕಳಾದ ದೇವ, ದಾನವ, ಯಕ್ಷ, ಗಂಧರ್ವ, ಕಿನ್ನರ, ಕಿಂಪುರುಷರು ಒಡಹುಟ್ಟಿದವರಾಗುವುದಿಲ್ಲವೆ ? ಅವರಲ್ಲಿ ಕೆಲವರಿಗೆ ಕೋರೆಹಲ್ಲು, ಕರಾಳ ರೂಪ ಮತ್ತೆ ಕೆಲವರಿಗೆ ರೆಕ್ಕೆ ಪುಕ್ಕಗಳು ಇರಲು ಹೇಗೆ ಸಾಧ್ಯ ? ಕೊನೆಯಲ್ಲಿ 'ಋಷಿ ಮೂಲ ಕೇಳಬಾರದು' ಎಂಬ ನಾಣ್ನುಡಿಯ ಅಂತರಾರ್ಥವೇನಿರಬಹುದು? ಅದು ನಮ್ಮ ಸಂಸ್ಕೃತಿಯ ವೈಭವವನ್ನು ತಮ್ಮ ತಲೆಯ ಮೇಲೆ ಹೊತ್ತು ಮೆರೆಯುವವರ ಪಾಪ ಪ್ರಜ್ಞೆಯ (guilty conscience) ದ್ಯೋತಕವಾಗಿರಬಹುದೆ ?

ನಾವು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ವಸ್ತುನಿಷ್ಠವಾಗಿ ಗ್ರಹಿಸಬೇಕಾದರೆ ನಮ್ಮ ಪುರಾಣಗಳಲ್ಲಿರುವ ಐತಿಹಾಸಿಕ ಸತ್ಯಗಳನ್ನು ಹೆಕ್ಕಿ ತೆಗೆಯಬೇಕಾಗಿದೆ. ಅಯೋನಿಜರ (?) ಮತ್ತು ಮಾನಸ ಪುತ್ರ (?)ರ ಸಾಧನೆ ಸಿದ್ಧಿಗಳನ್ನು ಐತಿಹಾಸಿಕವಾಗಿ ಪುನರ್ ರಚಿಸಬೇಕಾಗಿದೆ. □

ಬಿಜೆಪಿ ಸೋತಿದೆ; ಆದರೆ ಸತ್ತಿಲ್ಲ!

ವಿಶ್ಲೇಷಣೆ

ಚುನಾವಣೆಯ ಎಲ್ಲಾ ಲೆಕ್ಕಾಚಾರ ಮತ್ತು ಸಮೀಕ್ಷೆಗಳನ್ನು ತಲೆಕೆಳಗು ಮಾಡಿ, ಭಾರತೀಯ ರಾಜಕಾರಣದಲ್ಲಿ ಜಾತ್ಯಾತೀತ ಮೌಲ್ಯಗಳನ್ನು ಪುನರುಜ್ಜೀವನಗೊಳಿಸುವ ಮತ್ತೊಂದು ಅವಕಾಶವನ್ನು ಜನತೆ ನಮ್ಮ ರಾಜಕಾರಣಿಗಳಿಗೆ ನೀಡಿದ್ದಾರೆ. ಕೋಮುವಾದಿ ಶಕ್ತಿಗಳನ್ನು ಹಿಂದಿನ ಸಾಲಿಗೆ ತಳ್ಳಲಾಗಿದೆಯೆ ಹೊರತು, ಕೋಮುವಾದಿ ಐಡಿಯಾಲಜಿಯನ್ನು ಬೇರು ಸಮೇತ ಕಿತ್ತು ಹಾಕಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಬಾರಿ, ಜಾತ್ಯಾತೀತ ಶಕ್ತಿಗಳಿಗೆ ಕೋಮುವಾದವನ್ನು ಹೊಸಕಿ ಹಾಕುವ ಅಂತಿಮ ಸುವರ್ಣಾವಕಾಶ ದೊರಕಿದೆ. ಚರಿತ್ರೆ ಯಾವಾಗಲೂ ಮತ್ತೆ ಪುನಾರಾವರ್ತನೆ ಆಗುವುದಿಲ್ಲ. ಈ ರೀತಿಯ ಮತ್ತೊಂದು ಅವಕಾಶ ಒದಗಿಬರುವ ಸಾಧ್ಯತೆ ಇರುವುದೂ ಇಲ್ಲ.

○ ಕೆ.ಎನ್. ಪಣಿಕ್ಕರ್

ಅನು : ಸುಮಾ ಬಿ.ಯು.

ಚುನಾವಣೆಯಲ್ಲಿ ಎನ್‌ಡಿಎ ಸೋತಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸೋಲಿಗೆ, ಹಿಂದುತ್ವದ ನೀತಿಯನ್ನು ಸಂಪೂರ್ಣವಾಗಿ ಜಾರಿಗೊಳಿಸದಿರುವುದೇ ಮುಖ್ಯ ಕಾರಣವಾಗಿ ಹೋಯಿತು ಎಂದು ಆರ್‌ಎಸ್‌ಎಸ್‌ನ ವಕ್ತಾರರು ಅಭಿಪ್ರಾಯಪಟ್ಟಿದ್ದಾರೆ. ಈ ಅಭಿಪ್ರಾಯ ಸರಿಯೆಂದು ವಿಎಚ್‌ಪಿ ಯ ಅಂತರರಾಷ್ಟ್ರೀಯ ಅಧ್ಯಕ್ಷರೂ ದನಿಗೂಡಿಸಿದ್ದಾರೆ. ಇಷ್ಟೇ ಅಲ್ಲದೆ, ಬಿಜೆಪಿಯ ಈಗಿನ ನಾಯಕತ್ವ, ರಾಮಜನ್ಮಭೂಮಿ ಚಳವಳಿಯನ್ನು ಪರಿಧೀಕರಿಸುವ ಮೂಲಕ, ಹಿಂದೂಗಳ ಹಿತಾಸಕ್ತಿಯನ್ನು ಕಡೆಗಣಿಸುವುದರಿಂದ, ಅವರನ್ನು ಅಧಿಕಾರದಿಂದ ಕೆಳಗಿಳಿಸಿರುವುದೇ ಸರಿಯಾದ ಶಾಸ್ತಿ ಎಂದೂ ಹೇಳಿದ್ದಾರೆ. 'ಹಿಂದುತ್ವದ ಚಹರೆ'ಗೆ ಒಂದು ಹೊಸತನವನ್ನು ನೀಡಲು, ಅದರ ನಾಯಕತ್ವದಲ್ಲಿ ಬದಲಾವಣೆಯನ್ನು ತರಬೇಕೆಂದು ಆರ್‌ಎಸ್‌ಎಸ್ ಮತ್ತು ಬಿಜೆಪಿ ಅತ್ಯಂತ ಗಂಭೀರವಾಗಿ ಆಲೋಚಿಸುತ್ತಿದೆ. ಆ ನಾಯಕತ್ವದ ಸ್ವರೂಪಕ್ಕೆ ಅವರೇ ಒಂದು ಮಾದರಿಯನ್ನೂ ಕಂಡುಕೊಂಡಿದ್ದಾರೆ. ಹಿಂದೂ ಹಿತಾಸಕ್ತಿಯ ಅನ್ವೇಷಣೆಯಲ್ಲಿ ಏನೇ ಅಡ್ಡಿ ಆತಂಕ ಬಂದರೂ, ತಲೆಬಾಗದ, ದೃಢವಾಗಿ ನಿಲ್ಲಬಲ್ಲ ಮಧ್ಯಪ್ರದೇಶದ ಮುಖ್ಯಮಂತ್ರಿ ಉಮಾಭಾರತಿಯ ವಿವೇಚನಾಶಕ್ತಿಯಂಥ ನಾಯಕತ್ವ ಅದಾಗಿರಬೇಕೆನ್ನುವುದು ಇವರ ಅಪೇಕ್ಷೆಯಾಗಿದೆ.

ಅಟಲ್ ಬಿಹಾರಿ ವಾಜಪೇಯಿ ಅವರು ಅತ್ಯಂತ ಜಾಣತನದಿಂದ ರೂಪಿಸಿದ ರಾಜನೀತಿಯಾಗಲಿ, ಅಥವ ಎಲ್.ಕೆ. ಅಡ್ವಾಣಿಯ ನಿರ್ದೇಶಕ ಸೂತ್ರಗಳಾಗಲಿ, ತಮ್ಮ ಉದ್ದೇಶಿತ ಗುರಿಗಳತ್ತ ತಮ್ಮನ್ನು ಕೊಂಡೊಯ್ಯಲಾರವು ಎಂಬುದನ್ನು ಮನಗಂಡಿರುವ ಸಂಘ ಪರಿವಾರದ ನಿಯಂತ್ರಕ ಶಕ್ತಿಗಳು, ಒಂದು ಹೊಸ ಕರಡನ್ನು ರೂಪಿಸಲಾರಂಭಿಸಿವೆ. ಅದರ ಸ್ವರೂಪದ ಬಗ್ಗೆ ಈಗಾಗಲೇ ಅನೇಕ ಹೇಳಿಕೆಗಳು ಕೂಡ ಹೊರಬಿದ್ದಿವೆ. ಆದರೆ ಅದು ಅಸ್ಪಷ್ಟವಾಗಿರುವುದರಿಂದ, ಕೆಲವು ಕಡೆ ಖಾಲಿಬಿಟ್ಟಿರುವ ಜಾಗವನ್ನು ತುಂಬಬೇಕಾಗಿದೆ. ಅದರ ಸಾಮಾಜಿಕ ತಳಹದಿ ಮತ್ತು ರಾಜಕೀಯ ಪ್ರಭಾವವನ್ನು ವಿಸ್ತರಿಸುವುದಕ್ಕೆ, ಮುಂಬರುವ ಐದು ವರ್ಷಗಳಿಗೆ ಸಂಘ ಪರಿವಾರದ ಅಜೆಂಡಾ, ಹಿಂದೂ ಹಿತಾಸಕ್ತಿಗಳ ಪುನರ್‌ವ್ಯಾಖ್ಯಾನ ಮತ್ತು ಹೊಸ ಸ್ಪಷ್ಟೀಕರಣದತ್ತ ಕೇಂದ್ರೀಕೃತವಾಗಬಹುದು.

ಕಳೆದ ಐದು ವರ್ಷಗಳಲ್ಲಿ ಬಿಜೆಪಿಗೆ ಅತ್ಯಂತ ಸ್ಪಷ್ಟವಾದ ಕೋಮುವಾದಿ ಚಹರೆ ಇದ್ದರೂ, ಹಿಂದುತ್ವದ ನೀತಿಯನ್ನು ಅದು ನಿರ್ವಹಿಸಿದ ಬಗೆ ಆರ್‌ಎಸ್‌ಎಸ್ ಮತ್ತು ವಿಎಚ್‌ಪಿಗೆ ತೀವ್ರವಾದ ಅಸಮಾಧಾನವಿದೆ. ಹಿಂದುತ್ವದ ನೀತಿಯನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿತ್ತು; ರಾಷ್ಟ್ರದ ಕೆಲವು ಪ್ರಮುಖ ಸಂಸ್ಥೆಗಳನ್ನು ಗಣನೀಯವಾಗಿ ಕೇಸರೀಕರಣಗೊಳಿಸಿತ್ತು, ಅಲ್ಲದೆ, ಕೋಮುವಾದಿ ಸಂಕಥನದ ಪ್ರಚಾರಕ್ಕೆ ಒಂದು ತಲೆಮಾರನ್ನೇ ಹತಾರುವನ್ನಾಗಿ ಬಳಸಿಕೊಂಡಿತ್ತು ಎನ್ನುವುದೆಲ್ಲಾ ನಿಜವಾದರೂ, ಇದಿಷ್ಟರಿಂದಲೇ ಆರ್‌ಎಸ್‌ಎಸ್, ವಿಎಚ್‌ಪಿಗೆ ಸಮಾಧಾನವಾಗಿಲ್ಲ. ಬಿಜೆಪಿಯ ಪ್ರಯತ್ನದ ಈ ಪ್ರಭಾವ, ಈಗಾಗಲೇ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಹಾಗೂ ಒಟ್ಟೂ ಸಂಸ್ಕೃತಿಯಲ್ಲೇ ಉಂಟಾಗಿರುವ ಪಲ್ಲಟಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಇದರೊಂದಿಗೆ, ಜಾತ್ಯಾತೀತ ಮೌಲ್ಯ ಮತ್ತು ಆಚರಣೆಗಳು ಕುಸಿದಿರುವುದಲ್ಲದೆ, ಸಾರ್ವಜನಿಕ ಸಂಸ್ಥೆಗಳ ಜಾತ್ಯಾತೀತ ಮನೋಭಾವ ಕೂಡ ಕುರೂಪಗೊಂಡಿದೆ. ಆದರೆ, ಹಿಂದುತ್ವದ ಉಗ್ರ ಪ್ರತಿಪಾದಕರಿಗೆ ಇದಾವುದರಿಂದಲೂ ಸಮಾಧಾನವಾಗಿಲ್ಲ. ವಾಸ್ತವವಾಗಿ ಇವರ ಅಸಮಾಧಾನಕ್ಕೆ ಮುಖ್ಯ ಕಾರಣವೆಂದರೆ, ಚುನಾವಣೆಯಲ್ಲಿನ ಸೋಲಿನಿಂದ ಉಂಟಾದ ಹತಾಶೆಯೇ ಹೊರತು ಬೇರೇನೂ ಅಲ್ಲ. ಒಂದು ಪಕ್ಷ ಬಿಜೆಪಿ ಗೆದ್ದಿದ್ದರೆ, ಸಂಘ ಪರಿವಾರ, ತಮ್ಮ ಅನುಯಾಯಿಗಳಲ್ಲಿ ಕೆರಳಿಸಿದ್ದ ಧಾರ್ಮಿಕ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಈ ರಾಜಕೀಯ ಅವಕಾಶಗಳನ್ನು ಬಳಸಿಕೊಳ್ಳುತ್ತಿತ್ತು. ಇದು ಸಾಧ್ಯವಾಗದಿರುವುದರಿಂದ, ಅವರ ಹತಾಶೆ ತೀವ್ರತೆ ಎಷ್ಟು ಎಂಬುದು ಅರ್ಥವಾಗುವಂಥದ್ದು. ಅಲ್ಲದೆ, ಹಿಂದೂ ಹಿತಾಸಕ್ತಿಯ ರಕ್ಷಕರೆಂದು ಅವರ ಬಗ್ಗೆ ಜನಸಾಮಾನ್ಯರಿಗಿದ್ದ ವಿಶ್ವಾಸಾರ್ಹತೆಗೂ ಈಗ ಧಕ್ಕೆ ಒದಗಿದೆ. ಅದಕ್ಕಾಗಿ, ಕಳೆದ ಐದು ವರ್ಷಗಳಿಂದ ಬೆಂಬಲ ನೀಡಿದ ಈಗಿನ ನಾಯಕತ್ವದಿಂದ ದೂರ ಸರಿಯುವ ಅವಸರದ ಪ್ರಯತ್ನಗಳನ್ನು ಸಂಘ ಪರಿವಾರ ಮಾಡುತ್ತಿದೆ.

ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು, ಯಾವುದೇ ಚುನಾವಣೆಯ ಅಂಗೀಕೃತ ಧ್ಯೇಯವಾಗಿದೆ. ಆದರೆ, 'ಪ್ರಜಾಪ್ರಭುತ್ವ' ಎಂಬ ವ್ಯವಸ್ಥೆಯಲ್ಲಿ ಇದೊಂದೇ ಮುಖ್ಯ ಉದ್ದೇಶವಲ್ಲ. ರಾಜಕೀಯ ಶಿಕ್ಷಣದ ದೃಷ್ಟಿಯಿಂದ ನೋಡುವುದಾದರೆ,- ಯಾವುದೋ ಒಂದು ವಿಧಾನದ ಮೂಲಕ, ಯಾರನ್ನು ಆಯ್ಕೆ ಮಾಡಬೇಕೆಂದು, ಮತದಾರರು ನಿರ್ಣಯಕ್ಕೆ ಬರುತ್ತಾರೋ – ಈ ಇದೇ ಪ್ರಕ್ರಿಯೆಯೇ ಅತ್ಯಂತ ಪ್ರಮುಖವಾದುದು. ಒಂದು ಆದರ್ಶದ ದೃಷ್ಟಿಯಿಂದ ವಿವರಿಸಿಕೊಳ್ಳುವುದಾದರೆ,

ಪ್ರಜಾಪ್ರಭುತ್ವದ ಮೌಲ್ಯ ಮತ್ತು ಸಂಸ್ಕೃತಿಯಲ್ಲಿರುವ ಬದ್ಧತೆಯನ್ನು ಪ್ರಜೆಗಳಲ್ಲಿ ಮತ್ತಷ್ಟು ಗಟ್ಟಿಗೊಳಿಸುವುದೇ ಪ್ರತಿಯೊಂದು ಚುನಾವಣೆಯ ಉದ್ದೇಶವಾಗಬೇಕು. ಆದ್ದರಿಂದಲೇ, ಚುನಾವಣೆಯ ಪ್ರಚಾರಗಳೆಂದರೆ, ಭವಿಷ್ಯತ್ತಿನ ಸಮಾಜವನ್ನು, ರಾಜಕಾರಣವನ್ನು ಹೊಸದಾಗಿ ವ್ಯಾಖ್ಯಾನಿಸುವ, ರೂಪಿಸುವ, ವಿವಿಧ ನೀತಿ ಮತ್ತು ತತ್ವಗಳ ಯುದ್ಧಭೂಮಿಯಾಗಿ ಬಿಡುತ್ತದೆ. ಮತದಾರನಿಗೆ ಚುನಾವಣೆಯ ನಿರ್ಣಯಗಳನ್ನು ಕೈಗೊಳ್ಳುವುದಕ್ಕೆ ಇಂಥ ಚರ್ಚೆಗಳು ಬಹುಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರಚಾರವನ್ನು ಕೈಗೊಂಡಾಗ ಮಾತ್ರ, ಆಯಾ ಪಕ್ಷದ ಪ್ರಜಾಭಿಪ್ರಾಯವಾದಿ ಸಾಮರ್ಥ್ಯ ಏನೆಂಬುದು ಜನರ ಗ್ರಹಿಕೆಗೆ ದಕ್ಕುತ್ತದೆ.

೨೦೦೪ರ ಚುನಾವಣೆ, ಮಹತ್ವಪೂರ್ಣವಾದ ಈ ರಾಜಕೀಯ ಪ್ರಕ್ರಿಯೆಗಳಿಗೆ ಏನಾದರೂ ಕಾಣಿಕೆಯನ್ನು ಸಲ್ಲಿಸಿದೆಯೇ ? ಜನಸಮುದಾಯವನ್ನು ತಲ್ಲಣಗೊಳಿಸಿದ ಹಲವು ರಾಜಕೀಯ ನೀತಿ ಮತ್ತು ಶಾಸನಗಳಲ್ಲಿ ಎರಡು ಮಾತ್ರ ನಿರ್ಣಾಯಕವಾಗಿ ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿದ್ದವು. ಒಂದು- ರಾಷ್ಟ್ರ ಮತ್ತು ಸಮಾಜದ ಕೋಮುವಾದೀಕರಣ- ಇದು ಎನ್‌ಡಿಎ ಸರ್ಕಾರದ ಆಳ್ವಿಕೆಯು ಉತ್ತೇಜಿಸಿದ, ಸಮ್ಮತಿಸಿದ ಪ್ರಕ್ರಿಯೆಯಾಗಿತ್ತು. ಇದರ ಪರಿಣಾಮವಾಗಿ, ಸಮಾಜದಲ್ಲುಂಟಾದ ಕೋಮುವಾದ ಮತ್ತು ಜಾತ್ಯಾತೀತತೆ ಎಂಬ ವಿಭಜನೆ. ಇದು ಎರಡು ವಿಭಿನ್ನ (ಸರಿಯಾಗಿ ಹೇಳುವುದಾದರೆ ವಿರೋಧ) ವ್ಯವಸ್ಥೆಯ ರಾಜಕೀಯ ಮತ್ತು ಸಾಮಾಜಿಕ ಮೌಲ್ಯಗಳನ್ನು ಪ್ರತಿಬಿಂಬಿಸಲಾರಂಭಿಸಿತು. ಎರಡನೆಯದಾಗಿ, ಎನ್‌ಡಿಎ ಆಳ್ವಿಕೆಯ ಅವಧಿಯಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಹಿಂದೆಂದೂ ಕಾಣದಂತೆ, ಬಹುರಾಷ್ಟ್ರೀಯ ಬಂಡವಾಳಕ್ಕೆ ಶರಣಾಯಿತು. ಈ ಎರಡು ವಿಷಯಗಳಿಗೆ ಸಂಬಂಧಿಸಿದಂತೆ, ತಾನು ತಳೆದ ನಿಲುವುಗಳನ್ನು ಪ್ರತಿಪಾದಿಸಿಕೊಳ್ಳುವುದು ಸಾಧ್ಯವಿಲ್ಲವೆಂದರಿತ ಬಿಜೆಪಿ, ಇವುಗಳಿಗೆ ತೇಪೆ ಹಾಕಲಾರಂಭಿಸಿತು. ಆದ್ದರಿಂದ, ಬಿಜೆಪಿಯ ಚುನಾವಣಾ ಪ್ರಚಾರವನ್ನು ಯಾವ ರೀತಿಯಲ್ಲಿ ವಿನ್ಯಾಸಗೊಳಿಸಲಾಯಿತೆಂದರೆ, ನಿರ್ಣಾಯಕವಾದ ಈ ಅಂಶಗಳನ್ನು ಬದಿಗೆ ತಳ್ಳಿ, ಅವಾಸ್ತವಿಕವಾದ ಮತ್ತು ಇತರರಲ್ಲಿ ಹುಳುಕು ಹುಡುಕುವ ವಿಷಯಗಳತ್ತ ಕೇಂದ್ರೀಕರಿಸಲಾಯಿತು. ಇದನ್ನು ಸಾಧಿಸುವುದಕ್ಕೆ 'ಭಾರತ ಪ್ರಕಾಶಿಸುತ್ತಿದೆ' (India is Shining) ಮತ್ತು 'ಹಿತಾನುಭವ' (Feel good Factor) ಎಂಬಂಥ ಘೋಷಣೆಗಳು ಆವಿಷ್ಕಾರಗೊಂಡವು. ಇದು ಜನರ ಮನಸ್ಸಿನಲ್ಲಿ ಸ್ವದೇಶಾಭಿಮಾನವನ್ನು ಉದ್ದೀಪಿಸುವುದರೊಂದಿಗೆ, ಸಾಮಾನ್ಯ ಹಿತದಲ್ಲಿ ಮೈಮರೆಸಿ, ತಮ್ಮ ವೈಯಕ್ತಿಕ ಸಂಕಷ್ಟಗಳನ್ನು ಮರೆಸಲು ಸಹಾಯಕವಾಗುತ್ತದೆ ಎಂದು ಬಿಜೆಪಿ

ಎನ್‌ಡಿಎ ಆಳ್ವಿಕೆಯ ಅವಧಿಯಲ್ಲಿ, ಭಾರತದ ಆರ್ಥಿಕ ವ್ಯವಸ್ಥೆ ಹಿಂದೆಂದೂ ಕಾಣದಂತೆ, ಬಹುರಾಷ್ಟ್ರೀಯ ಬಂಡವಾಳಕ್ಕೆ ಶರಣಾಯಿತು. ಇದನ್ನು ಮರೆಮಾಚಲು ಬಿಜೆಪಿಯ ಚುನಾವಣಾ ಪ್ರಚಾರವನ್ನು ಯಾವ ರೀತಿಯಲ್ಲಿ ವಿನ್ಯಾಸಗೊಳಿಸಲಾಯಿತೆಂದರೆ, ನಿರ್ಣಾಯಕವಾದ ಅಂಶಗಳನ್ನು ಬದಿಗೆ ತಳ್ಳಿ, ಅವಾಸ್ತವಿಕವಾದ ಮತ್ತು ಇತರರಲ್ಲಿ ಹುಳುಕು ಹುಡುಕುವ ವಿಷಯಗಳತ್ತ ಕೇಂದ್ರೀಕರಿಸಲಾಯಿತು. ಇದನ್ನು ಸಾಧಿಸುವುದಕ್ಕೆ 'ಭಾರತ ಪ್ರಕಾಶಿಸುತ್ತಿದೆ' (India is Shining) ಮತ್ತು 'ಹಿತಾನುಭವ' (Feel good Factor) ಎಂಬಂಥ ಘೋಷಣೆಗಳು ಆವಿಷ್ಕಾರಗೊಂಡವು.



ಆಶಿಸಿತು. ಆದರೆ ಜನಸಾಮಾನ್ಯನ ಬದುಕು ಎಲ್ಲಿಯೂ ಪ್ರಕಾಶಿಸುತ್ತಿರಲಿಲ್ಲ, ಅಥವಾ ಇವರ ಆಳ್ವಿಕೆಯಲ್ಲಿ ಯಾರಿಗೂ ಹಿತಾನುಭವವಂತೂ ಆಗಿರಲಿಲ್ಲ.

ಯುರೋಪ್‌ನ ಫ್ಯಾಸಿಸ್ಟ್‌ಗಳಂತೆ, ಈ ರೀತಿಯ ಪ್ರಚಾರದಿಂದ ಜನರನ್ನು ಮೋಸಗೊಳಿಸಬಹುದೆಂದು ಬಿಜೆಪಿ ನಂಬಿತು. ಅದೂ ಅವರಿಂದಲೇ ಸಂಗ್ರಹಿಸಿದ ಹಣದಿಂದ ಈ ಕೆಲಸವನ್ನು ಸಾಧಿಸಬಹುದು ಎಂದುಕೊಂಡಿತು. ಆದರೆ, ಅದು ಬೇರೆ ಕಥೆಯೇ ಆಗುವುದಿತ್ತು. ವಾಸ್ತವಿಕತೆ ಮತ್ತು ಬಿಜೆಪಿ ಹಾಕಿಕೊಂಡಿದ್ದ ಹಂಚಿಕೆಯ ನಡುವಿನ ಈ ಅಂತರ ಅದೆಷ್ಟು ಅಗಾಧವಾಗಿತ್ತೆಂದರೆ, ಸ್ವತಃ ಬಿಜೆಪಿಗೆ ತಮ್ಮ ಹಂಚಿಕೆ ವ್ಯರ್ಥವಾಗಬಹುದೆಂಬ ಭಯ ಇತ್ತು. ಆಗ, ತಮ್ಮ ಚುನಾವಣಾ ಪ್ರಚಾರವನ್ನು ಸೋನಿಯಾ ಗಾಂಧಿಯ 'ಪಾಶ್ಚಾತ್ಯ ಮೂಲ'ವನ್ನು ವಿರೋಧಿಸುವುದರತ್ತ ಕೇಂದ್ರೀಕರಿಸಿತು. ಇದರ ಮೂಲಕ, ಜನರಲ್ಲಿನ ಸ್ವದೇಶಾಭಿಮಾನದ ತೀಕ್ಷ್ಣತೆಯನ್ನು ಉದ್ದೀಪಿಸಬಹುದೆಂದು ಭಾವಿಸಿತು.

ಭಾರತದಲ್ಲಿ ಇದುವರೆಗೂ ಯಾವ ಚುನಾವಣಾ ಪ್ರಚಾರವೂ ಸಾರ್ವಜನಿಕ ನೈತಿಕತೆ ಮತ್ತು ಸಭ್ಯತೆಯ ದೃಷ್ಟಿಯಿಂದ ಇಂಥ ಕೀಳುಮಟ್ಟಕ್ಕೆ ಇಳಿದಿರಲಿಲ್ಲ. ಪ್ರಚಾರದ ಪ್ರಕ್ರಿಯೆಯಲ್ಲಿ ತಮ್ಮ ಅದೃಷ್ಟದ ಸಾಧ್ಯತೆಗಳು ಕ್ಷೀಣಿಸುತ್ತಿದೆ ಎಂದಾಗಲಂತೂ ಸಂಸತ್ತಿನ ಎಲ್ಲಾ ಘನತೆಯನ್ನು ಅದು ಗಾಳಿಗೆ ತೂರಲಾರಂಭಿಸಿತು. ನೆಹರು ಒಮ್ಮೆ ಹೇಳಿದ್ದರು - ಫ್ಯಾಸಿಸಂ ಎನ್ನುವುದು ಅತ್ಯಂತ ಅಪಕ್ವ ಮತ್ತು ಅಸಭ್ಯ ಮನೋಭಾವವನ್ನು ಪ್ರದರ್ಶಿಸುತ್ತದೆ ಎಂದು. ಈ ಒಂದು ಮಾನದಂಡದಿಂದ ಹೇಳುವುದಾದರೆ, ಹಿಂದೂ ಕೋಮುವಾದ ಮತ್ತು ಫ್ಯಾಸಿಸಂನ ನಡುವೆ ಏಕತ್ರ ಕ್ರಮವೊಂದು ರೂಪುಗೊಳ್ಳುತ್ತಿರುವುದನ್ನು ಕಾಣಬಹುದು. ಈ ಬಾರಿಯ ಚುನಾವಣೆಯ ಸಂದರ್ಭದಲ್ಲಿ ಹಿಂದೂ ಕೋಮುವಾದದ ಲಕ್ಷಣಗಳು ಅದೆಷ್ಟು ಸಾರ್ವಜನಿಕವಾಗಿ ಪ್ರಕಟವಾದವೆಂದರೆ, ವಾಸ್ತವವಾಗಿ ಹಿಂದೆಂದೂ ಈ ರೀತಿ ಆಗಿರಲಿಲ್ಲ. 'ಪಾಶ್ಚಾತ್ಯ ಮೂಲ'ದ ವಿಷಯವನ್ನು ಬಿಜೆಪಿ ನಿರ್ವಹಿಸಿದ ರೀತಿಯನ್ನು ನೋಡಿದರೆ, ಕನಿಷ್ಠ ಘನತೆ ಮತ್ತು ಸಭ್ಯತೆಯನ್ನು ಉಳಿಸಿಕೊಳ್ಳುವುದೂ ಅದಕ್ಕೆ ಸಾಧ್ಯವಾಗಲಿಲ್ಲ ಎನ್ನುವುದು ಅರಿವಿಗೆ ಬರುತ್ತದೆ. ಅದಕ್ಕಿಂತ ಮುಖ್ಯವಾಗಿ, ತಮ್ಮ ಉಳಿವಿಗಾಗಿ ಏನೋ ಒಂದನ್ನು ಮಾಡಬೇಕೆಂಬ ಆತಂಕವನ್ನು ಕೂಡ ಇದು ವ್ಯಕ್ತಪಡಿಸುತ್ತಿತ್ತು.

ಬಿಜೆಪಿಯ ಮೋದಿಗಳು, ತೊಗಾಡಿಯಾಗಳು, ಸುಷ್ಮಾ ಸ್ವರಾಜ್‌ಗಳು ಅಥವಾ ವಿನಯ್ ಕತಿಯಾರ್‌ಗಳಂಥ ಯಾರಾದರೂ ಆಗಬಹುದು - ಅವರ ಭಾಷೆ ಮತ್ತು ವರ್ತನೆಯನ್ನು ನೀತಿಗೆಟ್ಟಿದ್ದು ಎಂದು ಒಂದು ಪಕ್ಕ ತಳ್ಳಿಹಾಕಬಹುದು. ಆದರೆ, ಪ್ರಾಚೀನ ನಾಗರೀಕತೆಯನ್ನುಳ್ಳ ವಿಶ್ವದ ಹಲವು ರಾಷ್ಟ್ರಗಳಲ್ಲಿ ಒಂದನ್ನು ಕೆಲವು ವರ್ಷಗಳ ಕಾಲ ಆಳಿದ ಒಂದು ರಾಷ್ಟ್ರೀಯ ಪಕ್ಷದ ವರ್ತನೆ ಇದು ಎಂಬುದನ್ನು ನೆನೆಸಿಕೊಂಡಾಗ, ಇದು ಅಕ್ಷಮ್ಯವಾಗಿಬಿಡುತ್ತದೆ. ಒಂದು ದೊಡ್ಡ ವಿರೋಧಾಭಾಸ ಏನೆಂದರೆ, ಇದೇ ಬಿಜೆಪಿ ಇದೇ ನಾಗರಿಕತೆಯ ಬಗ್ಗೆ ವಿಶೇಷವಾದ ಹೆಮ್ಮೆಯನ್ನು ಹೊಂದಿರುವುದರೊಂದಿಗೆ, ಅದರ ಅಧಿಕೃತ ವಾರಸುದಾರರು ತಾವೇ ಎಂದು ಭಾವಿಸಿದೆ. ಅತ್ಯುತ್ತಮ ರಾಜನೀತಿಜ್ಞ ಎಂದು ಹಾಡಿ ಹೊಗಳಲ್ಪಟ್ಟ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕೂಡ ಈ ವಿಷಯದ ಬಗ್ಗೆ ಮೌನವಾಗಿರುವುದನ್ನೇ ಆಯ್ಕೆ



'ಸಂವಾದ' ದೊರೆಯುವ ಸ್ಥಳ

ನವಕರ್ನಾಟಕ ಪ್ರಕಾಶನ ಪುಸ್ತಕ ಮಳಿಗೆ
❖ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧, ☎ : ೨೨೨೦೩೫೮೦
❖ ಗಾಂಧಿನಗರ, ಬೆಂಗಳೂರು-೫೬೦ ೦೦೯, ☎ : ೨೨೨೫೧೩೮೨ ❖ ಸ್ಟೇಷನ್ ರಸ್ತೆ, ಗುಲ್ಬರ್ಗ-೨, ☎ : ೪೨೪೩೦೨
❖ ಕೆ.ಎಸ್.ರಾವ್ ರಸ್ತೆ, ಮಂಗಳೂರು-೧, ☎ : ೨೪೪೧೦೧೬ ❖ ರಾಮಸ್ವಾಮಿ ವೃತ್ತ, ಮೈಸೂರು-೨೪, ☎ : ೨೪೨೪೯೯೪
ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್, ಶೇಷಾದ್ರಿಪುರಂ ಅಂಚೆ ಕಛೇರಿ ಎದುರು, ಬೆಂಗಳೂರು - ೫೬೦ ೦೨೦
ಕೆಎಸ್‌ಆರ್‌ಟಿಸಿ ಬುಕ್ ಸ್ಟಾಲ್, ಪ್ಲಾಟ್ ಫಾರ್ಮ್ ನಂ. ೧, ಸ್ಟಾಲ್ ನಂ. ೭, ಕೆಂಪೇಗೌಡ ಬಸ್ ನಿಲ್ದಾಣ, ಬೆಂಗಳೂರು



ಮಾಡಿಕೊಂಡರು. ತನ್ನ ಪಕ್ಷದ ಈ ವ್ಯಕ್ತಿಗಳ ಸಂಸ್ಕಾರಹೀನ ವರ್ತನೆಯ ಬಗ್ಗೆ ಮಾತನಾಡುವುದಕ್ಕೆ ವಾಜಪೇಯಿಗೆ ಏನೂ ಉಳಿದಿರಲಿಲ್ಲ. ಆದರೆ ಸ್ವತಃ ವಾಜಪೇಯಿ ಕೂಡ ತಮ್ಮ ವಿರೋಧಿಗಳನ್ನು ಮುಖೇಡಿಗಳನ್ನಾಗಿಸುವುದಕ್ಕೆ ದ್ವಂದ್ವಾರ್ಥದ ಮಾತುಗಳ ಮೊರೆ ಹೋಗಲಿಲ್ಲವೇ? ಹೌದು, ಇದಕ್ಕಾಗಿ ಅವರು ಬಹಳ ಪ್ರಸಿದ್ಧರು ಕೂಡ.

ಈ ಅಸಭ್ಯ ಮತ್ತು ಸಂಸ್ಕಾರಹೀನ ಪ್ರಚಾರ ಕೇವಲ ಆಕಸ್ಮಿಕ ಅಥವಾ ಯಾವುದೇ ರೀತಿಯ ವ್ಯಕ್ತಿಗತ ಭ್ರಮೆಯ ಪರಿಣಾಮವಾಗಿರಲಿಲ್ಲ. ಅದು ಒಂದು ಉದ್ದೇಶಪೂರ್ವಕವಾದ ಯೋಜನೆಯ ಫಲಿತವಾಗಿತ್ತು. ಇಲ್ಲವಾದರೆ, ಯಾವುದೇ ಸಂಸ್ಕಾರವಂತ ವ್ಯಕ್ತಿಯ ಸಂವೇದನೆಗಳನ್ನು ಕಲಕುವಂಥ ಹಿಂದಿ ಹಾಡುಗಳು, ಬಿಜೆಪಿ ಪ್ರಚಾರದಲ್ಲಿ ಇಷ್ಟೊಂದು ಪ್ರಾಮುಖ್ಯತೆಯನ್ನು ಪಡೆಯುತ್ತಿರಲಿಲ್ಲ. ಹಿಂದಿ ಚಲನಚಿತ್ರರಂಗದ ಪ್ರಖ್ಯಾತ ಗೀತರಚನಕಾರನಿಂದ ರಚಿಸಲ್ಪಟ್ಟ ಈ ಹಾಡುಗಳ ಭಾಷೆ ಅಶ್ಲೀಲವಾಗಿರುವುದಷ್ಟೇ ಅಲ್ಲ, ಅಲ್ಲಿನ ನುಡಿಗಟ್ಟು ಮತ್ತು ವ್ಯಂಗ್ಯ ಕೂಡ ಅಸಹ್ಯ ಹುಟ್ಟಿಸುವಷ್ಟು ಅಸಭ್ಯವಾಗಿದೆ. ಭಾರತದ ಜನಸಾಮಾನ್ಯ ನಾಗರಿಕ ವರ್ತನೆಗಳಿಗೆ ಅತ್ಯುನ್ನತ ಮೌಲ್ಯವನ್ನು ನೀಡುತ್ತಾನೆ, ಹಾಗೆಯೇ ಅಸಭ್ಯವಾದುದನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ. ಅದು ಹೆಣ್ಣು ಮಕ್ಕಳನ್ನು ಗುರಿಯಾಗಿಸಿಕೊಂಡಿದ್ದರೆ, ಆತ ಕ್ಷಮಿಸುವುದೂ ಇಲ್ಲ. ಹೆಣ್ಣು ಮಕ್ಕಳನ್ನು ಗೌರವಿಸಬೇಕು ಮತ್ತು ಮರ್ಯಾದೆಯಿಂದ ಕಾಣಬೇಕು ಎನ್ನುವುದು ಭಾರತೀಯ ಸಂಪ್ರದಾಯದಲ್ಲಿ ವ್ಯಾಪಕವಾಗಿ ಒಪ್ಪಿತವಾಗಿರುವ ಸಂಗತಿ. ಈ ನಾಗರಿಕತೆಯ ಹಿರಿಮೆ ಇರುವುದೇ ಅದು ಹೆಣ್ಣಿಗೆ ಕೊಟ್ಟಿರುವ ಅತ್ಯುನ್ನತ ಸ್ಥಾನದಿಂದಾಗಿ. ಇದೇ ಸಂಗತಿಯನ್ನು ಇಲ್ಲಿನ ಎಲ್ಲಾ ಧರ್ಮದ ಸುಧಾರಕರು ಎತ್ತಿ ಹಿಡಿದಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯ ನಾಯಕರು ಅನಾಗರಿಕ ವರ್ತನೆಯನ್ನು ಕಂಡು ಹೇಸಿದ ಜನಸಾಮಾನ್ಯ ಈ ಪಕ್ಷವನ್ನು ತಿರಸ್ಕರಿಸಿದನೇ?

ಯಾವುದೇ ರೀತಿಯ ಸಾಮಾನ್ಯೀಕರಣದಿಂದ ಭಾರತವನ್ನು ವ್ಯಾಖ್ಯಾನಿಸುವುದಕ್ಕೆ ಸಾಧ್ಯವಿಲ್ಲ ಎಂದು ಖ್ಯಾತ ಅರ್ಥಶಾಸ್ತ್ರಜ್ಞ ಜಾನ್ ಗೇಲ್‌ಬ್ರಿಯಸ್ ಹೇಳಿದ್ದಾರೆ. ಈ ಹೇಳಿಕೆ ೨೦೦೪ರ ಚುನಾವಣೆಯ ಫಲಿತಾಂಶಕ್ಕಂತು ಅಕ್ಷರಶಃ ಒಪ್ಪುತ್ತದೆ. ದೇಶದ ವಿವಿಧ ಭಾಗದಲ್ಲಿ ಜನರು ಮತ ಚಲಾಯಿಸಿದ ರೀತಿಗೆ ಯಾವುದೇ ಒಂದು ಕಾರಣವನ್ನು ನೀಡಲಾಗುವುದಿಲ್ಲ. ಆದರೂ ಬಿಜೆಪಿಯ ವಿರುದ್ಧ ವ್ಯಾಪಕವಾದ ವಿರೋಧಿ ಮನೋಭಾವ ಇತ್ತು ಎಂಬುದಂತೂ ನಿಜ. ಆದರೆ, ಅದು ೧೯೭೭ರಲ್ಲಿ ಉಂಟಾದ ಹೆದ್ದೆರೆಯನ್ನು ಗಾಢವಾಗಿ ಸ್ಥಾಪಿತವಾಗಲಿಲ್ಲ. ಏಕೆಂದರೆ, ಮಾಧ್ಯಮಗಳು ಚುನಾವಣೆಗೆ ಮುನ್ನ ಸೃಷ್ಟಿಸಿದ ಬಿಜೆಪಿ ಪರವಾದ ಅಲೆಯಿಂದಾಗಿ, ಬಿಜೆಪಿ ವಿರೋಧಿ ಮನೋಭಾವದ ತೀವ್ರತೆಯನ್ನು ಮತದಾರ ಅರ್ಥಮಾಡಿಕೊಳ್ಳಲಿಲ್ಲ. ಬಹಳಷ್ಟು ಚುನಾವಣಾ ವಿಶ್ಲೇಷಣೆಗಳಲ್ಲಿ ಬಿಜೆಪಿ ಮೊದಲನೇ ಸ್ಥಾನದಲ್ಲಿತ್ತು. ೨೦೦೪ರ ಚುನಾವಣೆಗೆ ಸೆಫಾಲಜಿಸ್ಟ್‌ಗಳು ನೀಡಿದ ಮುಖ್ಯ ಕಾಣಿಕೆ ಎಂದರೆ, ಬಿಜೆಪಿ ಬಗ್ಗೆ ಒಂದು ಸಂರಚನೆಯನ್ನು ರೂಪಿಸಿದ್ದು.

ಜಾತ್ಯಾತೀತ ಗುಂಪುಗಳಿಗೆ ಇನ್ನೂ ಹೆಚ್ಚಿನ ಸಂಘಟನಾ ಸಾಮರ್ಥ್ಯವಿದ್ದಿದ್ದರೆ, ಮಾಧ್ಯಮಗಳು ವಹಿಸಿದ್ದ 'ಇತ್ಯಾತ್ಮಕ' ಪಾತ್ರವನ್ನೂ ಮೀರಿ ಚುನಾವಣೆಯ ಫಲಿತಾಂಶದಲ್ಲಿ ಗಣನೀಯವಾದ, ಗುಣಾತ್ಮಕ ವ್ಯತ್ಯಾಸವನ್ನು ತರುವುದು ಸಾಧ್ಯವಾಗುತ್ತಿತ್ತು. ಹಾಗೂ ಬಿಜೆಪಿ ಮುಕ್ಕಾಲು ಪಾಲು ನಿರ್ನಾಮವಾಗುತ್ತಿತ್ತು. ತಮಗೆ ಬೆಂಬಲ ನೀಡುತ್ತಿದ್ದ ಮೂಲ ಸ್ಥಾನಗಳನ್ನು ಮಾತ್ರ ಉಳಿಸಿಕೊಳ್ಳಬಹುದಿತ್ತೇನೊ...? ಸರ್ಕಾರದ ಯಾವುದೋ ಒಂದು ನೀತಿ ಅಥವಾ ಪುರೋಹಿತಶಾಹಿ ವಿರೋಧಿ ಮನೋಭಾವದಿಂದ ಮಾತ್ರ ಬಿಜೆಪಿ ವಿರೋಧಿ ಮನಃಸ್ಥಿತಿ ಮೂಡಲಿಲ್ಲ. ಈ ವಿಷಯದಲ್ಲಿ ಬಹುರಾಷ್ಟ್ರೀಯ ಬಂಡವಾಳದ ಹಿತಾಸಕ್ತಿಗನುಗುಣವಾಗಿ ರೂಪುಗೊಳ್ಳುತ್ತಿದ್ದ ಸರ್ಕಾರದ ಆಡಳಿತಾತ್ಮಕ ನಿಲುವುಗಳು ನಿಸ್ಸಂದೇಹವಾಗಿ ನಿರ್ಣಾಯಕವಾದ ಅಂಶವಾಗಿತ್ತು. ಇದರೊಂದಿಗೆ, ಬಿಜೆಪಿ ವಿರುದ್ಧ ಮತ ಚಲಾಯಿಸುವುದಕ್ಕೆ ಜನರನ್ನು ಪ್ರೇರೇಪಿಸಿದ ಇನ್ನೂ ಹಲವು ಅಂಶಗಳೆಂದರೆ, ಅದರ ಆಡಳಿತಾತ್ಮಕ ಗುಣಲಕ್ಷಣಗಳು-ಕೋಮುವಾದ, ಅಧಿಕಾರದ ದರ್ಪ ಮತ್ತು ಜನವಿರೋಧಿ ನಿಲುವುಗಳು. ಜನಾಭಿಪ್ರಾಯದ ತೀರ್ಪು ಕೇವಲ ಸರ್ಕಾರದ ಅಥವಾ ಪಕ್ಷದ ವಿರುದ್ಧವಾಗಿರಲಿಲ್ಲ; ಬದಲಿಗೆ, ಸಾರಾಸಗಟಾಗಿ ಸಂಘಪರಿವಾರದ ನಿರಾಕರಣ ಕೂಡ ಆಗಿತ್ತು.

ಬಿಜೆಪಿ ನೇತೃತ್ವದ ಸರ್ಕಾರವನ್ನು ಸಂಘ ಪರಿವಾರ ಒಂದು ಹತಾರುವನ್ನಾಗಿಯೇ ಬಳಸಿಕೊಂಡಿತು. ರಾಜಕೀಯ ಅಧಿಕಾರದ ಪ್ರಾಮುಖ್ಯತೆ, ಆದರಿಂದ ವಿಸ್ತರಣೆಗೊಳ್ಳುವ ಸಾಧ್ಯತೆಗಳ (ಸಮ್ಮಿಶ್ರ ಸರ್ಕಾರವಾದರೂ ಪರವಾಗಿಲ್ಲ), ಬಗ್ಗೆ ಸಂಘ ಪರಿವಾರಕ್ಕೆ ಚೆನ್ನಾಗಿ ಗೊತ್ತಿತ್ತು. ತಾನು ಸರ್ಕಾರದಲ್ಲಿ ಪಾಲುಗೊಂಡರೆ, ಹಿಂದೂ ರಾಷ್ಟ್ರದ ರಚನೆಗೆ ಅಗತ್ಯವಾದ

ಜಾತ್ಯಾತೀತ ಗುಂಪುಗಳಿಗೆ ಇನ್ನೂ ಹೆಚ್ಚಿನ ಸಂಘಟನಾ ಸಾಮರ್ಥ್ಯವಿದ್ದಿದ್ದರೆ, ಮಾಧ್ಯಮಗಳು ವಹಿಸಿದ್ದ 'ಇತ್ಯಾತ್ಮಕ' ಪಾತ್ರವನ್ನೂ ಮೀರಿ ಚುನಾವಣೆಯ ಫಲಿತಾಂಶದಲ್ಲಿ ಗಣನೀಯವಾದ, ಗುಣಾತ್ಮಕ ವ್ಯತ್ಯಾಸವನ್ನು ತರುವುದು ಸಾಧ್ಯವಾಗುತ್ತಿತ್ತು. ಹಾಗೂ ಬಿಜೆಪಿ ಮುಕ್ಕಾಲು ಪಾಲು ನಿರ್ನಾಮವಾಗುತ್ತಿತ್ತು. ತಮಗೆ ಬೆಂಬಲ ನೀಡುತ್ತಿದ್ದ ಮೂಲ ಸ್ಥಾನಗಳನ್ನು ಮಾತ್ರ ಉಳಿಸಿಕೊಳ್ಳಬಹುದಿತ್ತೇನೊ...?

ಸಾಮಾಜಿಕ, ಸಾಂಸ್ಕೃತಿಕ ಹಾಗೂ ತಾತ್ವಿಕವಾದ ರಚನೆಗಳನ್ನು ರೂಪಿಸುವುದಕ್ಕೆ ಸಂಘ ಪರಿವಾರದ ಬೆಂಬಲವನ್ನು ಪಡೆಯುವುದು ಬಿಜೆಪಿಯ ಮುಖ್ಯ ಉದ್ದೇಶಗಳಲ್ಲೊಂದಾಗಿತ್ತು. ಆದ್ದರಿಂದ ಬಿಜೆಪಿಯಿಂದ ನಿರೀಕ್ಷಿಸಬಹುದಾಗಿದ್ದೇನೆಂದರೆ, ಸರ್ಕಾರದ ಅಧಿಕಾರವನ್ನು ಅದು ಎರಡು ಕಾರಣಕ್ಕಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆ ಇತ್ತು. ಮೊದಲನೆಯದಾಗಿ, ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಸಾಧ್ಯವಾದರೆ ಕಾಶಿ ಮತ್ತು ಮಥುರಾದ ದೇವಸ್ಥಾನಗಳನ್ನು 'ವಿಮೋಚನೆಗೊಳಿಸುವುದು'. ಎರಡನೆಯದಾಗಿ, ನಾಗರಿಕ ಸಮಾಜದಲ್ಲಿ ಸಂಘ ಪರಿವಾರವನ್ನು ವಿಸ್ತರಿಸುವುದಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಮಾಡುವುದು. ಇದರೊಂದಿಗೆ, ರಾಷ್ಟ್ರದ ಸಂಸ್ಥೆಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವುದು.

ಮೊದಲನೆಯ ವಿಷಯಕ್ಕೆ ಸಂಬಂಧಿಸಿದಂತೆ, ಬಿಜೆಪಿಗೆ ಸಾಕಷ್ಟು ಬದ್ಧತೆ ಇದ್ದರೂ ಸಮ್ಮಿಶ್ರ ಸರ್ಕಾರದ ಮಿತಿಗಳಿಂದಾಗಿ, ತಾನು ಅಂದುಕೊಂಡದ್ದನ್ನು ಸಾಧಿಸಲಾಗಲಿಲ್ಲ. ಸಮ್ಮಿಶ್ರ ಸರ್ಕಾರದ ಉಳಿವಿಗಾಗಿಯಾದರೂ ತೋರಿಕೆಯ ಸಂಯಮವನ್ನು ಪ್ರದರ್ಶಿಸಬೇಕಿತ್ತು. ಈ ಕಾರಣಕ್ಕಾಗಿ ಬಿಜೆಪಿ ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆ ಇಡುವುದನ್ನು ಆಯ್ಕೆ ಮಾಡಿಕೊಂಡಿತು. ಒಂದು ಕಡೆ ಮಂದಿರ ನಿರ್ಮಾಣವನ್ನು ಬೆಂಬಲಿಸುತ್ತಲೇ, ಇನ್ನೊಂದು ಕಡೆ ಸಮ್ಮಿಶ್ರ ಸರ್ಕಾರದ ತನ್ನ ಮಿತ್ರರಿಗೆ, ತಾವು ಅವರಿಗೆ ಕೊಟ್ಟ ಮಾತಿಗೆ ತಪ್ಪಿ ನಡೆಯುವುದಿಲ್ಲ ಎಂದೂ ಭರವಸೆಯನ್ನು ನೀಡುತ್ತಿತ್ತು. ಮಂದಿರ ನಿರ್ಮಾಣಕ್ಕೆಂದು ನಡೆದ ಹಲವಾರು ಚಳವಳಿಯಲ್ಲಿ ಸರ್ಕಾರ ನೇರವಾಗಿ ಭಾಗವಹಿಸಲಿಲ್ಲವಾದರೂ ಈ ವಿಷಯದ ಮೇಲೆ ಒತ್ತಡ ತರುವ ಸಂಘ ಪರಿವಾರದ ಪ್ರಯತ್ನಗಳನ್ನು ಮಾತ್ರ ಬೆಂಬಲಿಸುತ್ತಲೇ ಇತ್ತು. ನಮ್ಮ ಮಾಜಿ ಪ್ರಧಾನಿ ಈ ದ್ವಿಪಾತ್ರವನ್ನು ಅತ್ಯಂತ ಕರಾರುವಕ್ಕಾಗಿ ನಿರ್ವಹಿಸಿದರು. ಅಯೋಧ್ಯೆಗೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿದ್ದ ಈ ದ್ವಂದ್ವ ಸ್ವರೂಪವನ್ನು ಕಲಕುವ ಯತ್ನ ನಡೆದಾಗಲ್ಲೆಲ್ಲಾ ವಾಜಪೇಯಿಗೆ ತೀವ್ರವಾದ ಆತಂಕವಾಗುತ್ತಿತ್ತು. ಆದರೆ, ತಕ್ಷಣವೇ ಇಂಥ ಕ್ರಿಯೆಗಳು ಹಿಂದೂಗಳ ನ್ಯಾಯ ಸಮ್ಮತ ಆಕಾಂಕ್ಷೆಯಿಂದ ಪ್ರೇರೇಪಿತವಾದವು ಎಂಬ ಭಾವನೆ ಬರುವ ಹಾಗೆ ವರ್ತಿಸುತ್ತಾ, ಯಾವುದನ್ನು ವಿರೋಧಿಸುವಂತೆ ತೋರುತ್ತಿದ್ದರೂ, ಅದರ ಪರವಾಗಿ ನಿಲ್ಲುತ್ತಿದ್ದರು.

ವಾಸ್ತವವಾಗಿ, ಸಂಘ ಪರಿವಾರದ ಅತ್ಯಂತ ಉಗ್ರವಾದಿ ಕೂಡ ಬಿಜೆಪಿ ನೇತೃತ್ವದ ಸರ್ಕಾರ, ಹಿಂದುತ್ವದ ನೀತಿಯನ್ನು ಸಂಪೂರ್ಣವಾಗಿ ಜಾರಿಗೆ ತರುತ್ತದೆ ಎಂದು ಭಾವಿಸಿರಲಿಲ್ಲ. ಅದಕ್ಕೆ ಮಂದಿರವನ್ನು ನಿರ್ಮಿಸುವುದು ಬಹಳ ಮುಖ್ಯವಾದ ಮತ್ತು ಜರೂರಾದ ಉದ್ದೇಶವಾಗಿತ್ತು. ನಿಜ ಹೇಳಬೇಕೆಂದರೆ, ವಿಎಚ್‌ಪಿ ಕೂಡ ಇದಕ್ಕಾಗಿ ಒತ್ತಾಯಿಸುತ್ತಿತ್ತು. ಆರ್‌ಎಸ್‌ಎಸ್‌ಗೆ ಮಾತ್ರ ಮಂದಿರ ನಿರ್ಮಾಣಕ್ಕಿಂತ ದೀರ್ಘಾವಧಿಯ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವುದರ ಬಗ್ಗೆ ಹೆಚ್ಚು ಕಾಳಜಿ ಇತ್ತು.

ಸಂಘ ಪರಿವಾರದ ದೀರ್ಘಾವಧಿಯ ಹಿತಾಸಕ್ತಿಯ ವಿಷಯಕ್ಕೆ ಬಂದರೆ, ಅವುಗಳನ್ನು ಸ್ವಲ್ಪವಾದರೂ ಬಿಜೆಪಿ ಸರ್ಕಾರ ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸಿದೆ. ಜಾತ್ಯಾತೀತ ಭಾವನೆ ಮತ್ತು ಆಚರಣೆಗಳನ್ನು ಅಲ್ಲಾಡಿಸುವಂಥ ಐಡಿಯಾಲಜಿಗಳನ್ನು ರಾಷ್ಟ್ರದ ಸಂಸ್ಥೆಗಳಲ್ಲಿ ಹರಡುವಂತೆ ಮಾಡುವಲ್ಲಿ ಅದು ಸಫಲವಾಗಿದೆ. ಮಾನವ ಸಂಪನ್ಮೂಲ

ಇಲಾಖೆಯ ಮಂತ್ರಿಮಂಡಲ; ಆರ್‌ಎಸ್‌ಎಸ್‌ನ ಕಟ್ಟಾಳು, ಮುರಳಿ ಮನೋಹರ ಜೋಶಿಯ ಪಾರುಪತ್ಯದಲ್ಲಿ ನಿರಂತರವಾಗಿ ಈ ಐಡಿಯಾಲಜಿಯನ್ನು ಒಡಂಬಡಿಸುತ್ತಿತ್ತು. ಆರ್‌ಎಸ್‌ಎಸ್‌ನ ಪೋಷಣೆಯಿಂದ ಲಭ್ಯವಾದ ಅಧಿಕಾರವನ್ನು ಉಪಯೋಗಿಸಿಕೊಂಡು, ತನ್ನ ಯೋಜನೆಗಳಿಗೆ ಕೆಲವು ವಿಭಾಗಗಳ ಪ್ರಾಜ್ಞರ ಸಹಯೋಗವನ್ನು ಸಾಧ್ಯವಾಗಿಸಿಕೊಳ್ಳುವುದರಲ್ಲಿ ಯಶಸ್ವಿಯಾಗಿದೆ. ಹಲವು 'ಸ್ವತಂತ್ರ' ವ್ಯಕ್ತಿತ್ವದ ಬುದ್ಧಿಜೀವಿಗಳು ಮತ್ತು ಸಾಂಸ್ಕೃತಿಕ ನಾಯಕರು, ಜೋಶಿಯ ಖಾಸ ವಲಯದವರಾಗಿರುವುದಕ್ಕೆ ಕಾತರಿಸುತ್ತಿದ್ದರು.

ಅಧಿಕಾರದ ಸ್ಥಾನಗಳಲ್ಲಿ ತಮ್ಮನ್ನು ಸ್ಥಾನೀಕರಿಸಿಕೊಳ್ಳುವುದರ ಮೂಲಕ, ಜೋಶಿಯ ಸೈನಿಕ ಪಡೆ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಂಶೋಧನಾ ಸಂಸ್ಥೆಗಳನ್ನು ವಿವಸ್ತ್ರಗೊಳಿಸಿ, ನಂತರ ಅವುಗಳಿಗೆ ಕೋಮುವಾದಿ ಉಡುಪನ್ನು ತೊಡಿಸಿ, ಹೊಸ ರೂಪವನ್ನು ನೀಡಿದ್ದಾರೆ. ಈ ವ್ಯವಹಾರದಲ್ಲಿ ಯುಜಿಸಿ, ಎನ್‌ಸಿಇಆರ್‌ಟಿ, ಐಸಿಎಚ್‌ಆರ್, ಐಸಿಎಸ್‌ಎಸ್‌ಆರ್ ನಂಥ ಹಲವು ಸಂಸ್ಥೆಗಳು 'ಜೋಶಿಯಿಸಂ'ನ ಅವೈಚಾರಿಕತೆಯನ್ನು ಮೈಗೂಡಿಸಿಕೊಂಡು, ಅದನ್ನು ವಿಸ್ತರಿಸುವ ಮತ್ತು ಒಂದು ತಲೆಮಾರನ್ನು ಅಂಧಕಾರದತ್ತ ಕೊಂಡೊಯ್ಯುವ ಅಧಿಕಾರದ ಕೇಂದ್ರಗಳಾಗಿಬಿಟ್ಟವು. ಐಐಎಂ ನಂಥ ಪ್ರತಿಷ್ಠಿತ ಸಂಸ್ಥೆ ಇಂಥ ವಿಪತ್ತಿಗೆ ಒಳಗಾಗದಂತೆ ತಡೆಯಲು, ಕೆಲವು ವ್ಯಕ್ತಿಗಳು ಹಠ ತೊಟ್ಟುನಿಂತ ಕಾರಣ ಅದು ಬಡವಾಯಿತು. ರಾಷ್ಟ್ರದ ಕೆಲವು ಮುಖ್ಯ ಸಂಸ್ಥೆಗಳಾದ ಪೊಲೀಸ್ ಇಲಾಖೆ ಮತ್ತು ಕೇಂದ್ರಾಡಳಿತ ಇಲಾಖೆಗಳೂ ಜೋಶಿಯಿಸಂನ ಪ್ರಭಾವದಿಂದ ತಪ್ಪಿಸಿಕೊಳ್ಳಲಾಗಲಿಲ್ಲ.

ಬಿಜೆಪಿ ಸರ್ಕಾರ ಸೋತಿದೆ ಎಂದ ಮಾತ್ರಕ್ಕೆ ಕೋಮುವಾದಿ ಪ್ರಭಾವ ತನ್ನ ಪಾಡಿಗೆ ತಾನೇ ಅಂತ್ಯವಾಗಿ ಬಿಡುತ್ತದೆ ಎಂದೇನಲ್ಲ. ಅದು ಆಡಳಿತ ವರ್ಗ ಮತ್ತು ಸಾಂಸ್ಥಿಕ ಆಚರಣೆಗಳಲ್ಲಿ ಮುಂದುವರೆಯುವುದರಲ್ಲಿ ಸಂದೇಹವೇ ಇಲ್ಲ. ರಾಷ್ಟ್ರದ ಸಾರ್ವಜನಿಕ ಬದುಕಿನಲ್ಲಿ ಕೋಮುವಾದವನ್ನು ಬೇರು ಸಮೇತ ಕಿತ್ತುಹಾಕಬೇಕೆಂದರೆ, ಸಾಂಸ್ಥಿಕ ವ್ಯವಸ್ಥೆಯಲ್ಲಿರುವ ಐಡಿಯಾಲಜಿಕಲ್ ಆದ ರಚನೆಗಳನ್ನು ಆದಷ್ಟು ಬೇಗ ಅನಾವರಣಗೊಳಿಸಬೇಕು. ಉದಾಹರಣೆಗೆ ಶಿಕ್ಷಣ ಕ್ಷೇತ್ರದಲ್ಲಿ ಇಡೀ ಪಠ್ಯಕ್ರಮಕ್ಕೆ ಕೋಮುವಾದ ಸ್ವರೂಪ ದೊರಕಿಬಿಟ್ಟಿದೆ. ಅದರಲ್ಲೂ ಬುಡಕಟ್ಟು ಪ್ರದೇಶದಲ್ಲಿ ಈ ಪ್ರಕ್ರಿಯೆಗೆ ಚಾಲನೆಯನ್ನು ನೀಡಲು ದೇವಿ ಜ್ಞಾನಶಾಖೆಗಳ ಸಾಧನೆಗಳನ್ನು ವೈಭವೀಕರಿಸುವುದರೊಂದಿಗೆ, ಚರಿತ್ರೆಯನ್ನೇ ಪುನರ್ ವ್ಯಾಖ್ಯಾನಕ್ಕೆ ಒಳಪಡಿಸಲಾಗಿದೆ. ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳ ಅಭಿವೃದ್ಧಿಗೆಂದು ಇರಿಸಲಾಗಿದ್ದ ನಿಧಿಯನ್ನು 'ಹಿಂದೂ ವಿಜ್ಞಾನಿಗಳಿಗೆ' ವಿಶೇಷ ಮಾನ್ಯತೆ ಒದಗಿಸಲು, ಪುನರ್ ಶೋಧಿಸಲು ಬಳಸಿಕೊಳ್ಳಲಾಗಿದೆ. ಈ ಕ್ಷೇತ್ರದಲ್ಲಿ ಬಿಜೆಪಿ ಸರ್ಕಾರದ ಸಾಧನೆ ನಿಜಕ್ಕೂ ಅತ್ಯುಚ್ಛ ಮಟ್ಟಕ್ಕೆ ಏರಿರುವುದರಿಂದ, ಅವಿರತ ಪ್ರಯತ್ನದಿಂದ ಮಾತ್ರವೇ ರಾಷ್ಟ್ರದ ಶೈಕ್ಷಣಿಕ ಸಂಸ್ಥೆಗಳಿಗೆ ಅದು ಮಾಡಿರುವ ಹಾನಿಯನ್ನು ಸರಿಪಡಿಸಲು ಸಾಧ್ಯ. ಈ ಕೆಲಸ ಅತ್ಯಂತ ಜರೂರಾಗಿ ಪ್ರಥಮ ಆದ್ಯತೆಯನ್ನು ಬೇಡುತ್ತದೆ ಎಂಬುದನ್ನು ಇನ್ನೊಮ್ಮೆ ಹೇಳಬೇಕಾಗಿಲ್ಲ.

ಈಗ, ಬಿಜೆಪಿಯ ಚರಿತ್ರೆಯಲ್ಲಿ ಹಿಂದೂ ಕೋಮುವಾದ ಹೊಸ ಅಧ್ಯಾಯದ ಹೊಸ್ತಿಲಲ್ಲಿ ನಿಂತಿದೆ. ತನ್ನ ಐಡಿಯಾಲಜಿಯನ್ನು 'ಪರಿಪೂರ್ಣವಾದ ಮಾನವೀಯತೆ' ಎಂದು ಪ್ರತಿಪಾದಿಸುತ್ತಾ ೧೯೭೭ರಿಂದ ಸಮ್ಮಿಶ್ರ ಸರ್ಕಾರಗಳಲ್ಲಿ ಭಾಗವಹಿಸುವುದರ ಮೂಲಕ, ತನ್ನ ರಾಜಕೀಯ ಅಧಿಕಾರವನ್ನು ನಿಧಾನವಾಗಿ ವಿಸ್ತರಿಸುವುದಕ್ಕೆ ಅಪೇಕ್ಷಿಸಿತು. ಈ ನೀತಿಯಿಂದ, ಅದಕ್ಕೆ ಅಪಾರವಾದ ಲಾಭವಾಗಿದೆ ಎನ್ನುವುದೂ ನಿಜ. ಏಕೆಂದರೆ, ಚುನಾವಣೆಯ ಫಲಿತಾಂಶದಲ್ಲಿ ನಿಧಾನವಾಗಿ ಏಕಪ್ರಕಾರವಾಗಿ ಅದು ಅಭಿವೃದ್ಧಿಯನ್ನು ಸಾಧಿಸಿದೆ. ಅದು ಎಷ್ಟರಮಟ್ಟಿಗೆ ಎಂದರೆ, ೧೯೯೯ರ ಹೊತ್ತಿಗೆ ಬಿಜೆಪಿಗೆ ತನ್ನದೇ ಸರ್ಕಾರವನ್ನು ರೂಪಿಸಲು ಸಾಧ್ಯವಾಯಿತು. ಸಮ್ಮಿಶ್ರ ಸರ್ಕಾರದ ಸಹಾಯದಿಂದ ಆಡಳಿತ ವಿಧಾನದಲ್ಲಿ ಅದು ನಡೆಸಿದ ಹೊಸ ಪ್ರಯೋಗಗಳ ಮುಖ್ಯ ಉದ್ದೇಶ ಏನೆಂದರೆ, ಸಂಸತ್ತಿನಲ್ಲಿ ತನ್ನದೇ ಪಕ್ಷವನ್ನು ಸ್ಥಾಪಿಸುವುದಕ್ಕೆ ಬಹುಮತವನ್ನು ಪಡೆಯುವುದು ಮತ್ತು ಅದಕ್ಕಾಗಿ ಸಾಮಾಜಿಕ ಬೆಂಬಲವನ್ನು ವಿಸ್ತರಿಸಿಕೊಳ್ಳುವುದು. ಪ್ರಚಾರದ ಅವಧಿಯಲ್ಲಿ ೩೦೦ ಕ್ಷೇತ್ರಗಳಲ್ಲಿ ಗೆಲುವನ್ನು ಸಾಧಿಸುವುದೇ ತಮ್ಮ ಮುಖ್ಯ ಉದ್ದೇಶ ಎಂದು ಬಿಜೆಪಿ ಅಧ್ಯಕ್ಷರು ಪದೇ ಪದೇ ಹೇಳುತ್ತಿದ್ದರು. ಏಕೆಂದರೆ, ಯಾವುದೇ ವಿರೋಧವಿಲ್ಲದೆ, ಹಿಂದುತ್ವ ನೀತಿಯನ್ನು ರಾಷ್ಟ್ರದಲ್ಲಿ ಅಳವಡಿಸುವುದಕ್ಕೆ ಸಮ್ಮಿಶ್ರ ಸರ್ಕಾರದ ಹಿಡಿತದಿಂದ ಅದು ಬಿಡಿಸಿಕೊಳ್ಳಬೇಕಾಗಿತ್ತು. ತಮ್ಮ ಸರ್ಕಾರಕ್ಕೆ ಸಂಪೂರ್ಣ ಬಹುಮತ ದೊರೆತ ನಂತರವೇ ಕೆಲವು ವಿವಾದಾಸ್ಪದ ವಿಷಯಗಳನ್ನು ಕೈಗೆತ್ತಿಕೊಳ್ಳುವುದಾಗಿ ಬಿಜೆಪಿ ನಾಯಕರು ಅದೆಷ್ಟು ಬಾರಿ ಹೇಳಿಲ್ಲ?

ಕಳೆದ ೧೦ ವರ್ಷಗಳ ಬಿಜೆಪಿಯ ಮೇಲ್ಮುಖ ಚಲನೆಯ ಅವಧಿಯನ್ನು ಸಂಘ ಪರಿವಾರ ತನ್ನ ನಂಬಿಕೆಗಳನ್ನು ರಾಷ್ಟ್ರದಲ್ಲಿ ವಿಸ್ತರಿಸುವುದಕ್ಕೆ ಬಳಸಿಕೊಂಡಿದೆ. ಅದಕ್ಕಾಗಿ ಅದು ಹಲವಾರು ತಂತ್ರಗಳನ್ನೂ ರೂಪಿಸಿತು. ಧಾರ್ಮಿಕ ಭಾವನೆಗಳನ್ನು ಉದ್ದೀಪಿಸುವ ಮೂಲಕ ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವ ತಂತ್ರ ಸಂಘ ಪರಿವಾರಕ್ಕೆ ಗರಿಷ್ಠ ಲಾಭವನ್ನು ನೀಡಿದೆ. ರಾಮಜನ್ಮಭೂಮಿಯ ವಿಷಯವನ್ನು ಕೈಗೆತ್ತಿಕೊಳ್ಳುವುದರ ಮೂಲಕ, ಈ ಪ್ರಯತ್ನ ಹೆಚ್ಚು ಕಡಿಮೆ ಎಲ್ಲಾ ಪ್ರದೇಶವನ್ನೂ ವ್ಯಾಪಿಸಿದೆ. ಬಾಬಾಬುಡನ್‌ಗಿರಿ (ಕರ್ನಾಟಕ) ಮತ್ತು ಭೋಜಶಾಲ (ಮಧ್ಯಪ್ರದೇಶ) ತೀವ್ರವಾದ ಧಾರ್ಮಿಕ ವಿವಾದಕ್ಕೆ ಒಳಗಾದವು.

ಆದರೆ, ಈ ಬಾರಿಯ ಚುನಾವಣೆ ಬಿಜೆಪಿಯನ್ನು ಹಿಂದಿನ ಸಾಲಿಗೆ ತಳ್ಳಿದೆ. ಸಮ್ಮಿಶ್ರ ಸರ್ಕಾರದ ನೀತಿಗಳು ಗೆಲುವಿನ ಸಾಧ್ಯತೆಯನ್ನು ವಿಸ್ತರಿಸುತ್ತಿವೆ ಎಂದು ಭಾವಿಸುವಂತೆ ಮಾಡಿದರೂ, ಅದರ ಮಿತಿಗಳು ಬೆಳಕಿಗೆ ಬಂದದ್ದೇ ಚುನಾವಣೆಯ ಫಲಿತಾಂಶದ ನಂತರ. ಸಮ್ಮಿಶ್ರ ಸರ್ಕಾರದ ತನ್ನ ಬಂಧುಗಳ ಕ್ರಿಯಾಶೀಲ ಬೆಂಬಲವಿಲ್ಲದಿದ್ದರೆ, ಕಳೆದ ಐದು ವರ್ಷಗಳಲ್ಲಿ ಬಿಜೆಪಿಗೆ ಇಷ್ಟರ ಮಟ್ಟಿಗೆ ತಲೆ ಎತ್ತಿ ನಿಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆದರೂ ಈ ಬಂಧುಗಳನ್ನು ಸಂಪೂರ್ಣವಾಗಿ ನಂಬುವುದಕ್ಕೆ ಸಾಧ್ಯವಿರಲಿಲ್ಲ. ಎಂ. ಕರುಣಾನಿಧಿ ಮತ್ತು ರಾಮ್‌ವಿಲಾಸ್ ಪಾಸ್ವಾನ್ ಪಕ್ಷವನ್ನು ಬದಲಾಯಿಸಿದರು. ಚಂದ್ರಬಾಬು ನಾಯ್ಡು ಮತ್ತು ಜಯಲಲಿತಾ ಅಷ್ಟೇನೂ ಜನಪ್ರಿಯರಲ್ಲ ಎಂಬುದನ್ನು ಸಾಬೀತುಪಡಿಸಿದರು. ಸಮ್ಮಿಶ್ರ ಸರ್ಕಾರದ ಆಂತರಿಕ ವೈರುಧ್ಯವನ್ನು ನಿರ್ವಹಿಸುವ ಚಾಣಾಕ್ಷ ರಾಜನೀತಿಜ್ಞ ಎಂದು ಹೆಸರಾದ ಪ್ರಧಾನ ಮಂತ್ರಿಯ ಸಾಮರ್ಥ್ಯವೂ ನಿಧಾನಕ್ಕೆ ಕುಗ್ಗಲಾರಂಭಿಸಿತು. ಆದ್ದರಿಂದ ಚುನಾವಣಾ ಪೂರ್ವದ 'ಕ್ಷೇಮ ಭಾವ' ಅಂತಿಮವಾಗಿ ಒಂದು ದುಃಸ್ವಪ್ನವಾಯಿತು. ೧೯೯೯ರಲ್ಲಿ ಬಿಜೆಪಿಯ ಯಶಸ್ಸು ಅವರ ಸಹಯೋಗಿಗಳು ನೀಡಿದ ಸಹಕಾರದ ಫಲಿತವಾದರೆ, ಈಗಿನ ಚುನಾವಣೆಯಲ್ಲಿ ಬಿಜೆಪಿಯ ಸೋಲು, ಈ ಸಹಯೋಗಿಗಳು ನೀಡಿದ ಬೆಂಬಲದ ದುರ್ಬಲತೆಯನ್ನು ಸೂಚಿಸುತ್ತದೆ.

ಕಳೆದ ೧೦ ವರ್ಷಗಳ ಬಿಜೆಪಿಯ ಮೇಲ್ಮುಖ ಚಲನೆಯ ಅವಧಿಯನ್ನು ಸಂಘ ಪರಿವಾರ ತನ್ನ ನಂಬಿಕೆಗಳನ್ನು ರಾಷ್ಟ್ರದಲ್ಲಿ ವಿಸ್ತರಿಸುವುದಕ್ಕೆ ಬಳಸಿಕೊಂಡಿದೆ. ಅದಕ್ಕಾಗಿ ಅದು ಹಲವಾರು ತಂತ್ರಗಳನ್ನೂ ರೂಪಿಸಿತು. ಧಾರ್ಮಿಕ ಭಾವನೆಗಳನ್ನು ಉದ್ದೀಪಿಸುವ ಮೂಲಕ ತಮ್ಮ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವ ತಂತ್ರ ಸಂಘ ಪರಿವಾರಕ್ಕೆ ಗರಿಷ್ಠ ಲಾಭವನ್ನು ನೀಡಿದೆ. ರಾಮಜನ್ಮಭೂಮಿಯ ವಿಷಯವನ್ನು ಕೈಗೆತ್ತಿಕೊಳ್ಳುವುದರ ಮೂಲಕ, ಈ ಪ್ರಯತ್ನ ಹೆಚ್ಚು ಕಡಿಮೆ ಎಲ್ಲಾ ಪ್ರದೇಶವನ್ನೂ ವ್ಯಾಪಿಸಿದೆ. ಬಾಬಾಬುಡನ್‌ಗಿರಿ (ಕರ್ನಾಟಕ) ಮತ್ತು ಭೋಜಶಾಲ (ಮಧ್ಯಪ್ರದೇಶ) ತೀವ್ರವಾದ ಧಾರ್ಮಿಕ ವಿವಾದಕ್ಕೆ ಒಳಗಾದವು. ಇನ್ನೊಂದು ದೃಷ್ಟಿಯಿಂದ ವ್ಯಾಖ್ಯಾನಿಸುವುದಾದರೆ, ಸಂಘ ಪರಿವಾರ ಈ ಪ್ರದೇಶಗಳನ್ನು ತಾನು ಪ್ರತಿಪಾದಿಸುತ್ತಿದ್ದ ನೀತಿಯನ್ನು ಸ್ಥಾಪಿಸುವುದಕ್ಕೆ ಪ್ರಯೋಗಶಾಲೆಗಳನ್ನಾಗಿ ಮಾರ್ಪಡಿಸಿಕೊಂಡಿತು. ಸಂಘ ಪರಿವಾರ ಧಾರ್ಮಿಕ ಉದ್ದೇಶವನ್ನುಳ್ಳ ಚಳವಳಿಗಳು ಜೀವಂತವಾಗಿರುವಂತೆ ನೋಡಿಕೊಳ್ಳುತ್ತಿತ್ತು. ಇಂಥ ಪ್ರಯತ್ನಗಳು, ಸಮಾಜದಲ್ಲಿ ಒಂದು ವಿಚ್ಛಿದ್ರ ಮನೋಭಾವವನ್ನು ಉಂಟು ಮಾಡಿದರೂ, ಗರಿಷ್ಠವಾದ ಸಫಲತೆಯನ್ನು ಪಡೆದವು ಎಂದೇ ಹೇಳಬೇಕು. ಏಕೆಂದರೆ, ಈ ಎಲ್ಲಾ ವಿಷಯಗಳು

ಅನುಭವದ ಗಣಿಯಿಂದ

ಹಸಿವು - ಅಸ್ಪೃಶ್ಯತೆ ಮತ್ತು ಅವಮಾನ ಮನುಷ್ಯನ ಅಂತಃಶಕ್ತಿಯನ್ನು ಉಡುಗಿಸಿ ಅವನನ್ನು ನಿಸ್ತೇಜನನ್ನಾಗಿಸುವ ಸಾಮಾಜಿಕ ದುರಂತಗಳು. ಇಪ್ಪತ್ತೊಂದನೆ ಶತಮಾನದ ವೈಜ್ಞಾನಿಕ ಯುಗದಲ್ಲಿ ಕೂಡ ಭಾರತೀಯ ಸಮಾಜ ಇವುಗಳಿಂದ ಹೊರಬರಲು ಸಾಧ್ಯವಾಗಿಲ್ಲ. ಬಡತನ ಮತ್ತು ಸಾಮಾಜಿಕ ಅಸಮಾನತೆಗಳ ಕಾರಣದಿಂದಲೇ ಭಾರತದಲ್ಲಿ ಪ್ರತಿಭೆಗಳನ್ನು ಗುರುತಿಸಲೂ ಸಾಧ್ಯವಾಗುತ್ತಿಲ್ಲ.

ಹಸಿವು ದಾರುಣವಾದುದಾದರೆ, ಅಸ್ಪೃಶ್ಯತೆ ಅಮಾನವೀಯವಾದುದು. ಅಸ್ಪೃಶ್ಯರಲ್ಲದ ಕೆಲವು ಕೆಳಜಾತಿಗಳ ಅಪಮಾನ ಕೂಡ ಕಡಿಮೆಯಾದದ್ದೇನಲ್ಲ.

ನಮ್ಮ ನಡುವಿನ ಹಲವಾರು ಅಸಮಾನ್ಯ ಪ್ರತಿಭೆಗಳು, ಸಾಹಿತಿ-ಕಲಾವಿದರು- ಮೊದಲ ತಲೆಮಾರಿನ ಶಿಕ್ಷಿತರು ಇಂಥ ಅಸಮಾನತೆಗಳನ್ನು ಉಂಡು ಬೆಳೆದವರೇ ಆಗಿದ್ದಾರೆ. ಇಂಥ ನೋವುಗಳ ಅನುಭವ ಕಥಾನಕಗಳನ್ನು 'ಸಂವಾದ' ವಿಶೇಷಾಂಕಕ್ಕಾಗಿ ಆಹ್ವಾನಿಸುತ್ತದೆ. ದಯಮಾಡಿ ಒಂದು ಸಾವಿರ ಪದಗಳಿಗೆ ಮೀರದಂತೆ ನಿಮ್ಮ ಅನುಭವಗಳನ್ನು ನಮಗೆ ಬರೆದು ಕಳುಹಿಸಿ. ಭಾಷೆ-ಶೈಲಿಯ ಬಗೆಗೆ ತಲೆಕೆಡಿಸಿಕೊಳ್ಳಬೇಡಿ. ನಿಮಗೆ ಅನಿಸಿದ ಹಾಗೆ ನಿಮ್ಮದೇ ಭಾಷೆ-ಶೈಲಿ ಇರಲಿ.

ನಿಮ್ಮ ಬರಹ ನಮಗೆ ತಲುಪಬೇಕಾದ ದಿನಾಂಕ ಆಗಸ್ಟ್ ೩೧, ೨೦೦೪

ವಿಳಾಸ: ಸಂಪಾದಕರು, 'ಸಂವಾದ' ಮಾಸ ಪತ್ರಿಕೆ, ೬೩, ಸ್ಫೂರ್ತಿಧಾಮ, ಅಂಜನಾನಗರ, ವಿಶ್ವನೀಡಂ ಅಂಚೆ, ಮಾಗಡಿ ರಸ್ತೆ ಬೆಂಗಳೂರು - ೫೬೦ ೦೯೧

ಧಾರ್ಮಿಕ ಹಿತಾಸಕ್ತಿಗೆ ಸಂಬಂಧಪಟ್ಟವು ಎಂದು ಹಣೆಪಟ್ಟಿ ಹಚ್ಚಿಕೊಂಡು ಕಾರ್ಯರೂಪಕ್ಕೆ ಬಂದವು.

ವಿಎಚ್‌ಪಿ ಈ ಚಳವಳಿಯ ಮುಂಚೂಣಿಯಲ್ಲಿದ್ದರೂ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಸ್ಥೆಗಳ ವ್ಯಾಪಕ ಜಾಲವನ್ನು ಹರಡುವ ಮೂಲಕ, ಶಾಶ್ವತವಾದ ಹಿಂದೂ ಪ್ರಭಾವವನ್ನು ರಚಿಸುವ ಕಾರ್ಯದಲ್ಲಿ ಆರ್‌ಎಸ್‌ಎಸ್ ನಿರತವಾಗಿತ್ತು. ಕಳೆದ ಐದು ವರ್ಷಗಳಲ್ಲಿ ಬಿಜೆಪಿಯ ಅಧಿಕಾರದಿಂದಾಗಿ ಈ ಸಂಘಗಳಿಗೆ ಸಾಕಷ್ಟು ಲಾಭ ಆಗಿದೆ. ಆರ್‌ಎಸ್‌ಎಸ್‌ನ ಪ್ರಮುಖ ನಾಯಕರಾದ ಮುರಳಿ ಮನೋಹರ್ ಜೋಶಿ ತಮ್ಮ ಅಧಿಕಾರವನ್ನು ವಿಎಚ್‌ಪಿ ಮತ್ತು ಸಂಘ ಪರಿವಾರವನ್ನು ಪೋಷಿಸುವುದಕ್ಕೆ ಬಳಸಿಕೊಂಡರು. ಇದರ ಪರಿಣಾಮದಿಂದ ಹಿಂದುತ್ವದ ಪುನರುತ್ಥಾನ ಮಾತ್ರ ಆಗಲಿಲ್ಲ; ವಿಷಾದಕರವಾಗಿ, ಪರಿಧೀಕರಣಕ್ಕೆ ಒಳಗಾಗಿದ್ದ ಸಮುದಾಯಗಳೂ ಕೋಮುವಾದೀಕರಣಕ್ಕೆ ಒಳಪಟ್ಟಿವೆ. ಕೆಲವು ಸಾಮಾಜಿಕ ಸಮೂಹಗಳು, ವಿಶೇಷವಾಗಿ ದಲಿತ ಮತ್ತು ಆದಿವಾಸಿ ಗುಂಪುಗಳು ಸಂಪೂರ್ಣವಾಗಿ ಹಿಂದುತ್ವದ ಛತ್ರಿಯ ಅಡಿಯಲ್ಲಿ ನಿಂತಿಲ್ಲ ಎನ್ನುವುದನ್ನು ಬಿಟ್ಟರೆ, ಉಳಿದೆಲ್ಲಾ ಕಡೆ ಇದರ ಪ್ರಭಾವ ಗಣನೀಯವಾಗಿ ಸಫಲವಾಗಿದೆ. ಆರ್‌ಎಸ್‌ಎಸ್ ಗುಂಪುಗಳ ಮೇಲ್ವಿಚಾರಣೆಯಲ್ಲಿ, ಬುಡಕಟ್ಟು ಪ್ರದೇಶಗಳಲ್ಲಿ ಸ್ಥಾಪಿತವಾಗಿರುವ ಏಕಾಲ್ ವಿದ್ಯಾಲಯಗಳು, ದಲಿತ ಮತ್ತು ಆದಿವಾಸಿ ಆರಾಧನ ವಿಧಾನಗಳ ಸಂಸ್ಕೃತೀಕರಣ - ಎಲ್ಲವೂ ದಲಿತ ಮತ್ತು ಬುಡಕಟ್ಟು ಜನಾಂಗಗಳಿಗೆ ಹಿಂದೂ ಐಡೆಂಟಿಟಿಯ ಮುದ್ರೆ ಒತ್ತಿ ಅವರನ್ನೂ ಕೋಮುವಾದದ ತೆಕ್ಕೆಯೊಳಗೆ ಸೆಳೆದುಕೊಳ್ಳುವ ಮೊದಲ ಹೆಜ್ಜೆಗಳಾಗಿದ್ದವು.

ಬಿಜೆಪಿಯ ಆಡಳಿತ ವಿಧಾನ, ಬಂಡವಾಳಶಾಹಿ ಅಭಿವೃದ್ಧಿ ನೀತಿಯನ್ನು ಪ್ರತಿಪಾದಿಸುವ ಮೂಲಕ, ಒಂದು ಆಧುನಿಕ ಚಹರೆಯನ್ನು ಪ್ರೊಜೆಕ್ಟ್ ಮಾಡಿತು. ಸಂಘ ಪರಿವಾರದ ಹಲವು ಸನಾತನವಾದಿಗಳ ವಿರೋಧ ಮತ್ತು ಆಕ್ಷೇಪಣೆಯ ನಡುವೆಯೂ ಸರ್ಕಾರ, ಮಧ್ಯಮ ವರ್ಗದ ಬೆಂಬಲವನ್ನು ತನ್ನದಾಗಿಸಿಕೊಳ್ಳುವ ಉದಾರೀಕರಣ ಮತ್ತು ಜಾಗತೀಕರಣದ ನೀತಿಯನ್ನು ಅನುಸರಿಸಿತು. ಈ ಪ್ರಕ್ರಿಯೆಯಲ್ಲಿ ಶಕ್ತ ರಾಷ್ಟ್ರದ ಹಿತಾಸಕ್ತಿಗೆ ಭಾರತದ ಆರ್ಥಿಕತೆಯನ್ನು ಅಧೀನವಾಗಿಸಿದ್ದಲ್ಲದೆ, ಇದು ಭಾರತದ ಭವಿಷ್ಯಕ್ಕೆ ಅತ್ಯುತ್ತಮ ಮಾದರಿ ಎಂದು ಹೊಗಳಲಾಯಿತು. ಈ ಆರ್ಥಿಕ ನೀತಿಯ ಆಧಾರದಿಂದಲೇ, ಮಧ್ಯಪ್ರದೇಶ ಮತ್ತು ರಾಜಸ್ಥಾನದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು ಸಾಧ್ಯವಾಗಿದ್ದು. 'ಭಾರತ ಪ್ರಕಾಶಿಸುತ್ತಿದೆ' ಮತ್ತು 'ಹಿತಾನುಭವ'ಗಳು ಈ ದೃಷ್ಟಿಯಿಂದಲೇ ಪ್ರಚಾರಗೊಂಡವು.

ಚುನಾವಣಾ ಸೋಲಿನ ನಂತರವೂ, ಸಂಘಪರಿವಾರ ತನ್ನ ಯಾವುದೇ ತಂತ್ರಗಳನ್ನು ತ್ಯಜಿಸುವುದಿಲ್ಲ. ಏಕೆಂದರೆ, ಈಗಾಗಲೇ ಅಸ್ತಿತ್ವದಲ್ಲಿರುವ ಅದರ ಸಾಮಾಜಿಕ ತಳಹದಿಯ ವಿವಿಧ ವಿಭಾಗಗಳ ಅಂತರಂಗಕ್ಕೆ ಅದು ತಲುಪಿದೆ. ಆದರೆ, ಈ ಸಾಮಾಜಿಕ ತಳಹದಿ, ತನ್ನಷ್ಟಕ್ಕೆ ತಾನೇ ಬಹುಮತದ ಭರವಸೆಯನ್ನು ನೀಡುವಷ್ಟು ವ್ಯಾಪಕವಾಗಿಲ್ಲ. ಇದುವರೆಗೆ ಬಿಜೆಪಿ ಪಡೆದ ಜನಪ್ರಿಯ ಮತ ಶೇಕಡ ೨೦ ರಷ್ಟು ಮಾತ್ರ. ರಾಜಕೀಯ ಶಕ್ತಿಗಳಿಗೆ ಈಗಿರುವ ಆಕೃತಿಯನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ, ಈ ಸಂಖ್ಯೆಯಲ್ಲಿ ಗಮನಾರ್ಹವಾದ ಹೆಚ್ಚಳವಾಗುವ ಲಕ್ಷಣಗಳು ಕಡಿಮೆ. ಈ ಬಹುಮತವನ್ನು ಸಾಧಿಸುವುದಕ್ಕೆ ಕೊನೆ ಪಕ್ಷ ಶೇಕಡ ೧೦ ರಷ್ಟು ಹೆಚ್ಚಳಕ್ಕಾದರೂ ಪ್ರಯತ್ನಿಸಬೇಕು. ತನ್ನ ಸಾಮಾಜಿಕ ತಳಹದಿಯನ್ನು ವಿಸ್ತರಿಸಬೇಕೆಂದರೆ, ಮುಂಬರುವ ವರ್ಷಗಳಲ್ಲಿ ತನ್ನ ತಂತ್ರಗಳನ್ನು ಪುನರ್ರಚಿಸಲೇಬೇಕಾದ ಒತ್ತಡ ಸಂಘ ಪರಿವಾರದ ಮೇಲಿದೆ. ಆಗ ಮಾತ್ರ ಯಾವುದೇ ಅಡ್ಡಿ ಆತಂಕವಿಲ್ಲದೆ, ಹಿಂದುತ್ವ ನೀತಿಯನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗುವಂಥ ಬಹುಮತವನ್ನು ಪಡೆಯುವ ಕನಸನ್ನು ಅದು ಕಾಣಬಹುದು. ಈ ಉದ್ದೇಶದ ಈಡೇರಿಕೆಗಾಗಿ ತಂತ್ರಗಳ ಪುನರ್‌ಶೋಧ, ಹಿಂದು ಕೋಮುವಾದಿ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದನ್ನು ತೆರೆಯಬಹುದು.

ಫ್ಯಾಸಿಸ್ಟ್ ಕ್ರಮವೊಂದನ್ನು ಸ್ಥಾಪಿಸುವ ಪ್ರಜ್ಞಾಪೂರ್ವಕ ತಯಾರಿ, ಈ ಹೊಸ ರಂಗಸಜ್ಜಿಕೆಯ ಮುಖ್ಯ ಲಕ್ಷಣವಾಗಬಹುದು. ೧೯೩೩ರಲ್ಲಿ ನಡೆದಂತೆ, ಅವಧಿಗೆ ಮುನ್ನವೇ ತಮ್ಮ ಕಾರ್ಯಕ್ಷೇತ್ರದಿಂದ ಕಾಲ್ತೆಗೆಯಬೇಕಾಗಬಹುದೆಂದು ಸಂಘ ಪರಿವಾರ ಯೋಚಿಸಿರಲಿಲ್ಲ. ಅದು ಚರಿತ್ರೆಯ ಅವಘಡಗಳಲ್ಲಿ ಒಂದಾಗಿತ್ತು. ಅಲ್ಪಾವಧಿಯಲ್ಲಿ ಗರಿಷ್ಠ ಲಾಭವನ್ನು ನಿರೀಕ್ಷಿಸಿ ನಾಗಾಲೋಟದಿಂದ ಸವಾರಿ ಮಾಡುತ್ತಿದ್ದವರು, ಇದ್ದಕ್ಕಿದ್ದಂತೆ ನಿಲುಗಡೆಗೆ ಬರಬೇಕಾಯಿತು. ತಮ್ಮ ಸಾಮಾಜಿಕ ಮತ್ತು ಐಡಿಯಾಲಜಿಕಲ್ ಆದ ಆಕೃತಿಗಳು ಸಮಾಜದಲ್ಲಿ ಗಟ್ಟಿಯಾಗಿ ನೆಲೆಯೂರಿದ ನಂತರ, ಅಧಿಕಾರದ ಸೂತ್ರಗಳನ್ನು ಹಿಡಿಯುವುದು ಸಂಘ ಪರಿವಾರದ ಗುರಿಯಾಗಿತ್ತು. ಏಕೆಂದರೆ, ಇಂಥ ಸಾಮಾಜಿಕ ಸ್ಥಿತಿಯಲ್ಲಿ ಮಾತ್ರ, ಹಿಂದೂ ಕೋಮುವಾದಕ್ಕೆ ಫ್ಯಾಸಿಸಂನ ನೆಲೆ ದೊರಕಲು ಸಾಧ್ಯ.

ಈ ಹಿನ್ನೆಲೆಯಲ್ಲಿ, ಕೆಲವು ರಚನಾತ್ಮಕ ಕಾರ್ಯಕ್ರಮಗಳಾದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಬೌದ್ಧಿಕ ಮಧ್ಯಸ್ಥಿಕೆಯಿಂದ 'ನಾಗರಿಕ' ಸಮಾಜಕ್ಕೆ 'ಹಿಂದಿರುಗುವ' ಕಾರ್ಯಕ್ರಮಗಳಿಗೆ ಇನ್ನು ಮುಂದೆ ಆರ್‌ಎಸ್‌ಎಸ್ ಆದ್ಯತೆಯನ್ನು ನೀಡುತ್ತದೆ. ಇಲ್ಲಿಯತನಕ ವಸಾಹತೀಕರಣಕ್ಕೆ ಒಳಗಾಗದಿರುವ ದಲಿತ ಮತ್ತು ಆದಿವಾಸಿ ಸಮುದಾಯಗಳನ್ನು 'ಹಿಂದುತ್ವದ ಸಾಮಾಜಿಕ ಪುನರ್ರಚನೆ'ಗೆ ಒಳಪಡಿಸುವುದು ಮುಖ್ಯ ಗುರಿ ಆಗಬಹುದು. ಹೊಸ ಕ್ಷೇತ್ರಗಳಲ್ಲಿ ಹಿಂದುತ್ವವನ್ನು ವಿಸ್ತರಿಸುವ ಆರ್‌ಎಸ್‌ಎಸ್‌ನ ಹೆಬ್ಬಯಕೆಯಿಂದ ಹಿಂಸೆ ಹೆಚ್ಚಾಗುವ ಸಾಧ್ಯತೆಗಳನ್ನು ತಳ್ಳಿಹಾಕಲಾಗುವುದಿಲ್ಲ. ಅದರಲ್ಲೂ ವಿಶೇಷವಾಗಿ, ಆದಿವಾಸಿ ಸಮುದಾಯಗಳಲ್ಲಿ ಸಾಮಾಜಿಕ ಕಾರ್ಯವನ್ನು ಮಾಡುತ್ತಿರುವ ಕ್ರಿಶ್ಚಿಯನ್ ಮಿಷನರಿಗಳತ್ತ ಇವರ ದೃಷ್ಟಿ ತಿರುಗುವ ಎಲ್ಲಾ ಸಾಧ್ಯತೆಗಳೂ ಇವೆ.

ಎಲ್ಲಾ ಚುನಾವಣೆಯ ಲೆಕ್ಕಾಚಾರ ಮತ್ತು ಸಮೀಕ್ಷೆಗಳನ್ನು ತಲೆಕೆಳಗು ಮಾಡಿ, ಭಾರತೀಯ ರಾಜಕಾರಣದಲ್ಲಿ ಜಾತ್ಯಾತೀತ ಮೌಲ್ಯಗಳನ್ನು ಪುನರುಜ್ಜೀವಿಸುವ ಮತ್ತೊಂದು ಅವಕಾಶವನ್ನು ಜನತೆ ನಮ್ಮ ರಾಜಕಾರಣಿಗಳಿಗೆ ನೀಡಿದ್ದಾರೆ. ಇದು ಕೆಲವು ಸಾಮಾಜಿಕ ಕಾರ್ಯಕರ್ತರು, ಬುದ್ಧಿಜೀವಿಗಳು, ವ್ಯಕ್ತಿಗಳು, ಸ್ವಯಂ ಸೇವಕ ಸಂಘಗಳು ಹಾಗೂ ಕೆಲವು ರಾಜಕೀಯ ಪಕ್ಷಗಳು ಸಕ್ರಿಯವಾಗಿ ಕೋಮುವಾದದ ವಿರುದ್ಧ ಸಾರಿದ ಸಮರದಿಂದ, ಜಾತ್ಯಾತೀತತೆಯನ್ನು ಮತ್ತೆ ಎತ್ತಿ ಹಿಡಿಯಲು ಸಾಧ್ಯವಾಗಿದೆ. ಪರಿಣಾಮವಾಗಿ, ಕೋಮುವಾದಿ ಶಕ್ತಿಗಳನ್ನು ಹಿಂದಿನ ಸಾಲಿಗೆ ತಳ್ಳಲಾಗಿದೆಯೆ ಹೊರತು, ಕೋಮುವಾದಿ ಐಡಿಯಾಲಜಿಯನ್ನು ಬೇರು ಸಮೇತ ಕಿತ್ತು ಹಾಕಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಬಾರಿ, ಜಾತ್ಯಾತೀತ ಶಕ್ತಿಗಳಿಗೆ ಕೋಮುವಾದವನ್ನು ಹೊಸಕಿ ಹಾಕುವ ಅಂತಿಮವಾದ ಸುವರ್ಣಾವಕಾಶ ದೊರಕಿದೆ. ಆದರೆ, ಐಡಿಯಾಲಜಿಕಲ್ ಆದ ಆಕೃತಿಗಳನ್ನು ಅನಾವರಣಗೊಳಿಸಿ, ಸಾಮಾಜಿಕ ಮುಂಚಲನೆಗೆ ಲಗಾಮು ಹಾಕಿ ನಂತರ ಅದರ ರಾಜಕೀಯ ಪ್ರಭಾವವನ್ನು ಪರಿಧಿಗೆ ಸೇರಿಸಲೇಬೇಕು. ಚರಿತ್ರೆ ಯಾವಾಗಲೂ ಮತ್ತೆ ಪುನಾರಾವರ್ತನೆ ಆಗುವುದಿಲ್ಲ. ಈ ರೀತಿಯ ಮತ್ತೊಂದು ಅವಕಾಶ ಒದಗಿಬರುವ ಸಾಧ್ಯತೆ ಇರುವುದೂ ಇಲ್ಲ. (ಸೌಜನ್ಯ: 'ಫ್ರಂಟ್ ಲೈನ್') □

ಅಸ್ಪೃಶ್ಯ



ಅಸ್ಪೃಶ್ಯರು ಶಬ್ದ ನಿಷಿದ್ಧ
ಆದರೂ ಅದು ಸರ್ವತ್ರ ಪ್ರ-ಸಿದ್ಧ!
ತಿಂಗಳಿಗೆ ಮೂರು ದಿನ
ಮನೆಯೊಳಗೆ ಹೆಂಗಸರೆಲ್ಲಾ ಅಸ್ಪೃಶ್ಯ!
ಕ್ಷೌರಮಾಡಿಸಿಕೊಂಡು ಬಂದರೆ-
ಗಂಡಸರೆಲ್ಲಾ ಅಸ್ಪೃಶ್ಯ!
ಮುದುಕರು ಸತ್ತರೆ, ಮಕ್ಕಳು ಹುಟ್ಟಿದರೆ-
ಮನೆಯೆಲ್ಲಾ ಅಸ್ಪೃಶ್ಯ!
ಬೆಂಕಿ ಎಂದೆಂದಿಗೂ ಸಹಜವಾಗಿಯೇ ಅಸ್ಪೃಶ್ಯ!
ಹಿಡಿ ಹಿಡಿಯಲಾಗದಾಗಿ ಆಕಾಶವೂ ಅಸ್ಪೃಶ್ಯ!
ಉಂಡರೆ ನೆಲ ಅಸ್ಪೃಶ್ಯ!
ಮುಟ್ಟಿದರೆ ನೀರೂ ಅಸ್ಪೃಶ್ಯ!
ಭೂಮಿಯ ನೆರಳು ಬಿದ್ದರೆ-
ಚಂದ್ರ ಅಸ್ಪೃಶ್ಯ!
ಆ ಚಂದ್ರನ ನೆರಳು ಬಿದ್ದರೆ ಸೂರ್ಯನೂ ಅಸ್ಪೃಶ್ಯ!
ಅಸ್ಪೃಶ್ಯದಲ್ಲೇ ಹುಟ್ಟಿ, ಅಸ್ಪೃಶ್ಯದಲ್ಲೇ ಬೆಳೆದು
ಅಸ್ಪೃಶ್ಯದಲ್ಲೇ ಸಾಯುವ
ಈ ಅಸ್ಪೃಶ್ಯ ಭೂತ ಭಯದವರಿಗೆಲ್ಲ



ಮೊದಲು ಆ ಭೂತ ಬಿಡಿಸಿ
ಸಹಜವಾಗಿ ಉಸಿರಾಡುವ ಮನುಷ್ಯರನ್ನಾಗಿ ಮಾಡುವ
ಮಂತ್ರವಾದಿಯು
ಕೈಯಲ್ಲಿ ಬೇವಿನ ಬೆತ್ತ ಹಿಡಿದು
ಯಾವಾಗ ಬರುವನೋ?
ಈ ಚುನಾವಣೆಯಲ್ಲೇ ಪ್ರಜಾಪ್ರತಿನಿಧಿಯಾಗಿ ಬರುವನೋ
ಅಥವಾ
ಆ ದಿಗಂತದ ಕೆಂಡದ ಕೊಂಡದಿಂದ ಜಿಗಿದು
ನಿರಂಕುಶ ಸೇನಾನಿ ವೀರಭದ್ರನಾಗಿ ಬರುವನೋ
ಕಾಯುತ್ತಿರುವೆನು ಬೂದಿಯೊಳಗಿನ ನಿಗಿನಿಗಿ ಕೆಂಡವಾಗಿ !!

○ ಡಾ|| ಎಲ್. ಬಸವರಾಜು

ಎರಡು ಗಜಲ್‌ಗಳು



೧

ಆಶೆಗಳು ಬತ್ತಿವೆ, ನಿರಾಶೆಗಳು ತಲೆ ಎತ್ತಿವೆ ಹೇಳೆಂದರೆ ಗಜಲ್ ಹೇಗೆ ಹೇಳಲಿ ?
ಮನಗಳು ಮುರಿದಿವೆ, ಜ್ವಾತಿಗಳೆದ್ದಿವೆ, ಹೇಳೆಂದರೆ ಗಜಲ್ ಹೇಗೆ ಹೇಳಲಿ ?

ಹೊಯ್ದಾಡುವ ಅಲೆಗಳ ಮಧ್ಯೆ ಪ್ರೇಮ ನೌಕೆಯದು ಮುಳುಗುತ್ತಿದೆ
ಉಸಿರುಗಟ್ಟಿಸುವಲೆಗಳು ಮೇಲೆದ್ದಿವೆ, ಹೇಳೆಂದರೆ ಗಜಲ್ ಹೇಗೆ ಹೇಳಲಿ ?

ವಿರಹರಾಗ ರೋಗವಾದಂತೆ, ಅನುರಾಗದ ರಾಗ ಮೂಕಗೊಂಡಿದೆ
ಅನುರಾಗವಿಲ್ಲವೆಂದ ಮೇಲೆ, ರಾಗದಲಿ ಹೇಳೆಂದರೆ ಗಜಲ್ ಹೇಗೆ ಹೇಳಲಿ ?

ಗಡಿಗಳೆದ್ದಿವೆ, ಮನದ ತುಂಬಾ ತಡೆಗೋಡೆಗಳೆದ್ದಿವೆ
ಮಾನವತೆ ಮಾತು ಕೇಳುವ ಕಿವಿಗಳಿಲ್ಲ, ಹೇಳೆಂದರೆ ಗಜಲ್ ಹೇಗೆ ಹೇಳಲಿ ?

ದನಿ ಎತ್ತಿದರೆ ದನಿ ಕೊಯ್ಯುವ ಧಣಿಗಳೆಲ್ಲೆಡೆ ತುಂಬಿರಲು
ಎತ್ತರದ ದನಿಯಲಿ ಹಾಡಿ ಹೇಳೆಂದರೆ ಗಜಲ್ ಹೇಗೆ ಹೇಳಲಿ ?

೨

ಇದೆ ಬಿಗಿಬಂದೋಬಸ್ತು, ಸುವಿಚಾರಗಳ ಸುತ್ತ ಮುತ್ತ
ಬಿಗಿದುಕೊಂಡಿವೆ ಬೇಲಿ , ಸು ಆಚಾರಗಳ ಸುತ್ತ ಮುತ್ತ

ಕತ್ತಲೆ ಬೆಳಕಿನಾವಗಳು ಒಳಗೆ ಹೊರಗೆ ನಡೆದಿವೆ
ನಲಿದಿವೆ ಕಪ್ಪು ಬಿಳುಪಿನ ನಕಲಿ ಆಕಾರಗಳು ಸುತ್ತ ಮುತ್ತ

ನಡೆದಿವೆ ಧರ್ಮದ ಹೆಸರಿನಲಿ ನಡೆಯಬಾರದ ಕೃತ್ಯಗಳು
ತ್ರಿಶೂಲ ಸಂಸ್ಕೃತಿ ಕುಣಿಯುತ್ತಿದೆ ಪ್ರೀತಿ ಮಮಕಾರಗಳ ಸುತ್ತ ಮುತ್ತ

ಭಯದ ದಮನದ ಹೆಸರಿನಲಿ ಭಯೋತ್ಪಾದನೆ ನಡೆದಿದೆ
ಕ್ಷಿಪಣಿ ಅಣು ಸಮರಗಳು ಶಾಂತಿ ಆಗರಗಳ ಸುತ್ತ ಮುತ್ತ

ಭೂಮಿ ಹಂಚಲ್ಪಟ್ಟಿದೆ, ನಮ್ಮ ಆಕಾಶ ಸೀಳಲ್ಪಟ್ಟಿದೆ
ಗಡಿಗಳು, ನೂರಾರು ಗೆರೆಗಳು, ವಿಶ್ವವಿಚಾರಗಳ ಸುತ್ತ ಮುತ್ತ

○ ಜಂಬಣ್ಣ ಅಮರಚಿಂತ

ನಾಟಕವೆಂಬ ಸಾಹಿತ್ಯಕ ದಂಗೆ

ಚಿಂತನೆ

ನಮ್ಮ ವಿಮರ್ಶಾ ಶಾಸ್ತ್ರದಲ್ಲಿ 'ನಮ್ಮ ಸಾಹಿತಿಗಳು ಸಕ್ರಿಯ ಸ್ವಾತಂತ್ರ್ಯ ಹೋರಾಟ, ಸಂಘಟನೆಗಳಲ್ಲಿ ಭಾಗವಹಿಸಲಿಲ್ಲ' ಎಂಬ ಆರೋಪವಿದೆ. ಇದರ ಜೊತೆಗೆ 'ನಮ್ಮ ಚರಿತ್ರೆಯ ಸಂಕ್ರಮಣ ಕಾಲ ವೊಂದರಲ್ಲಿ ಸೃಷ್ಟಿಯಾದ ಸಾಹಿತ್ಯ ಅಂದಿನ ಸಮಕಾಲೀನ ರಾಜಕೀಯ, ಸಾಮಾಜಿಕ ವಾಸ್ತವಗಳಿಗೆ ಸ್ಪಂದಿಸಲಿಲ್ಲ' ಎಂಬ ಆರೋಪವೂ ಇದೆ. ಈ ಮಾತುಗಳನ್ನು ಕುವೆಂಪುಗೆ ಅನ್ವಯಿಸಲಾಗುವುದಿಲ್ಲ. ಹಾಗೆ ಮಾಡಿದರೆ ಹೋರಾಟದ ಬಹುಮುಖಗಳನ್ನು ನಾವು ನಿರಾಕರಿಸಿದಂತೆಯೇ ಸರಿ. ಈ ದೃಷ್ಟಿಯಿಂದ ಕುವೆಂಪು ಒಬ್ಬ ಸಾಂಸ್ಕೃತಿಕ ನಾಯಕ.

○ ರಾಮಲಿಂಗಪ್ಪ ಟಿ. ಬೇಗೂರು

೧

(ಚಂದ್ರಹಾಸ ಮತ್ತು ಕಾನೀನ ನಾಟಕಗಳೆರಡನ್ನು ಹೊರತು ಪಡಿಸಿದರೆ) ಕುವೆಂಪು ನಾಟಕಗಳನ್ನು ಬರೆಯಲು ತೊಡಗಿದ ಕಾಲವು (೧೯೨೫-೧೯೪೭) ಪ್ರಜಾಪ್ರಭುತ್ವೀಯತೆಗೆ ಭಾರತವು ಹೊರಳಿ ಕೊಳ್ಳುತ್ತಿದ್ದ ಸ್ಥಿತ್ಯಂತರದ ಕಾಲ. ಈ ಸಂದರ್ಭದಲ್ಲಿ ಭಾರತದಾದ್ಯಂತ ಗಾಂಧಿವಾದಿ ಮತ್ತು ಅಂಬೇಡ್ಕರ್‌ವಾದಿ ಹೋರಾಟಗಳೆರಡೂ ಆಕಾರ ಪಡೆಯುತ್ತಿದ್ದವು. ಜಾತ್ಯಾತೀತ, ಕೋಮುವಾದಿ, ನಾಯಕ ರಾಜಕಾರಣ ಗಳು ಸ್ಥಳೀಯ, ರಾಷ್ಟ್ರೀಯ ಪ್ರಜ್ಞೆಯೊಟ್ಟಿಗೆ ಕೈಜೋಡಿಸುತ್ತಿದ್ದವು. ಎನ್‌ಲೈಟನ್‌ಮೆಂಟ್ ಪ್ರಾಜೆಕ್ಟಿನ ಬಹುತೆರನ ಪ್ರಭಾವಗಳು ಅದಾಗಲೇ ತಲೆದೋರಿದ್ದವು. ಒಟ್ಟಾರೆ ಭಾರತದಾದ್ಯಂತ ಪರಕೀಯ ಮತ್ತು ದೇಶೀಯ ಎರಡೂ ನೆಲೆಯಲ್ಲಿ ನಾವು ಮತ್ತು ಅನ್ಯರು ಎಂಬ ದ್ವಿಮಾನ ವಿರೋಧಿ ಪ್ರಜ್ಞೆಯೊಂದು ಸ್ಪಷ್ಟವಾಗಿ ರೂಪಗೊಂಡಿದ್ದ ಕಾಲವದು. ಈ ಸ್ಥಿತ್ಯಂತರದ ಕಾಲದ ತಲ್ಲಣ ಮತ್ತು ಆಕಾಂಕ್ಷೆಗಳೇ ಕುವೆಂಪು ನಾಟಕಗಳಲ್ಲಿ ಸಾಕ್ಷರವಾಗಿ ಸಂಭವಿಸಿವೆ.

ಯಾವುದೇ ಸಮಾಜವು ಕ್ರಾಂತಿಕಾರಕ ಬದಲಾವಣೆಗಳನ್ನು ಹೊಂದುವಾಗ ಅಲ್ಲಿ ಸಶಕ್ತ ಬರಹಗಾರರ ಕೊಡುಗೆ ಸಾಕಷ್ಟು ಇದ್ದೇ ಇರುತ್ತದೆ. ಹಾಗೇ ಸ್ಥಿತ್ಯಂತರ ಕಾಲೀನ ಸಮಾಜಗಳು ಸಶಕ್ತ ಬರಹಗಾರ ರನ್ನು ರೂಪಿಸುತ್ತವೆ ಕೂಡ. ಫ್ರಾನ್ಸಿನ ಮಹಾಕ್ರಾಂತಿ ಇದಕ್ಕೆ ಸಾಕ್ಷಿ. ಈ ದೃಷ್ಟಿಯಿಂದ ಕುವೆಂಪು ತಮ್ಮ ಬರಹದ ಮೂಲಕ ಸಮಾಜದ ಕ್ರಾಂತಿಕಾರಕ ಪಲ್ಲಟಗಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಮತ್ತು ತಾವು ಸ್ವತಃ ಸ್ಥಿತ್ಯಂತರ ಸಮಾಜದ ಒಂದು ಉತ್ಪನ್ನವೂ ಆಗಿದ್ದಾರೆ. ಯಾವುದೇ ಅನ್ಯದ ವಿರುದ್ಧ ಸಂಘಟಿತ ಹೋರಾಟವೊಂದು ರೂಪಗೊಳ್ಳುವಾಗ ಸಮಾನತೆಯ ಪ್ರಶ್ನೆಗಳು ಎದ್ದೇ ಏಳುತ್ತವೆ. ಅಸಮಾನತೆ ಮತ್ತು ಸ್ವಾತಂತ್ರ್ಯಗಳು ಎಂದಿಗೂ ಒಟ್ಟಿಗೇ ಹೋಗಲಾರವು. ಭಾರತೀಯ ಸ್ವಾತಂತ್ರ್ಯ ಹೋರಾಟವೆಂದರೆ ಅದು ಬರೀ ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟವಲ್ಲ, ಅದು ಸಾಮಾಜಿಕ, ಧಾರ್ಮಿಕ, ಆ ಮೂಲಕ ಆರ್ಥಿಕ ಸಮಾನತೆಗಳಿಗಾಗಿ ನಡೆದ ಹೋರಾಟ ಕೂಡ. ಇದು ಸ್ಥಳೀಯವಾಗಿ ಜಾತಿ ತಾರತಮ್ಯದ ವಿರುದ್ಧ ನಡೆದ ಹೋರಾಟವೂ ಆಗಿದೆ. ಇಂಥ ಬಹುಮುಖೀ ಸ್ವಾತಂತ್ರ್ಯ ಹೋರಾಟದ ಕನ್ನಡ ಪ್ರತಿನಿಧಿ ಕರಣವೇ ಕುವೆಂಪು ನಾಟಕಗಳಲ್ಲಿ ಮೈತಾಳಿದೆ. ಪಾರಂಪರಿಕವಾದ ಭಾಷಿಕ, ಸಾಹಿತ್ಯಕ ರಾಜಕಾರಣದ ಛಿದ್ರೀಕರಣವನ್ನು ಪುರಾಣಗಳ ಮರು ಪ್ರತಿನಿಧೀಕರಣದ ಮೂಲಕ ಕುವೆಂಪು ಇಲ್ಲಿ ಮಾಡಿದ್ದಾರೆ. ಏಕಕಾಲಕ್ಕೆ ಸಮುದಾಯದ ಸಮಷ್ಟಿ ದನಿಯಾಗಿ ರೂಪಗೊಳ್ಳುವ ಮತ್ತು ಸಮುದಾಯದ ಅಂತಸ್ಥ ಪ್ರಜ್ಞೆಯನ್ನು ತಿದ್ದುವ ಕ್ರಿಯೆ ಇದು.

ನಮ್ಮ ವಿಮರ್ಶಾ ಶಾಸ್ತ್ರದಲ್ಲಿ 'ನಮ್ಮ ಸಾಹಿತಿಗಳು ಸಕ್ರಿಯ ಸ್ವಾತಂತ್ರ್ಯ ಹೋರಾಟ, ಸಂಘಟನೆಗಳಲ್ಲಿ ಭಾಗವಹಿಸಲಿಲ್ಲ' ಎಂಬ ಆರೋಪವಿದೆ. ಇದರ ಜೊತೆಗೆ 'ನಮ್ಮ ಚರಿತ್ರೆಯ ಸಂಕ್ರಮಣ ಕಾಲ ವೊಂದರಲ್ಲಿ ಸೃಷ್ಟಿಯಾದ ಸಾಹಿತ್ಯ ಅಂದಿನ ಸಮಕಾಲೀನ ರಾಜಕೀಯ, ಸಾಮಾಜಿಕ ವಾಸ್ತವಗಳಿಗೆ ಸ್ಪಂದಿಸಲಿಲ್ಲ' ಎಂಬ ಆರೋಪವೂ ಇದೆ. ಈ ಮಾತುಗಳನ್ನು ಕುವೆಂಪುಗೆ ಅನ್ವಯಿಸಲಾಗುವುದಿಲ್ಲ. ಹಾಗೆ ಮಾಡಿದರೆ ಹೋರಾಟದ ಬಹುಮುಖಗಳನ್ನು ನಾವು ನಿರಾಕರಿಸಿದಂತೆಯೇ ಸರಿ.

ಸಾಹಿತ್ಯ ಎಂಬುದು ಒಂದು ಭಾಷಿಕ ಘಟನೆ-ಸಂಭವ. ಕುವೆಂಪು ನಾಟಕಗಳು ಜಲಗಾರ, ಶಂಬೂಕ, ಏಕಲವ್ಯ, ಕರ್ಣ, ಭಾರತಾಂಬೆ, ಸಾವಿತ್ರಿ, ಬುದ್ಧ ಮೊದಲಾದ ಅನೇಕ ಪ್ರತಿಮೆಗಳ ಮೂಲಕ ಬಹುವಿಧ ಸ್ವಾತಂತ್ರ್ಯಗಳ ಆಕಾಂಕ್ಷೆಯನ್ನು ಸಾಕ್ಷರವಾಗಿ ಸಾಕಾರಗೊಳಿಸಿದ ಸಾಹಿತ್ಯ ಘಟನೆಗಳೇ ಆಗಿದೆ. ಈಗಾಗಲೇ ಸೃಷ್ಟಿಗೊಂಡ ಪುರಾಣಪ್ರತಿಮೆಗಳನ್ನು ಭಂಜಿಸುವ ಮೂಲಕ ಮತ್ತು ತಾವೇ ಹೊಸ ಪ್ರತಿಮೆಗಳನ್ನು ವರ್ತಮಾನ (ಕೃ) ದಿಂದ ಸೃಷ್ಟಿಸುವ ಮೂಲಕ ಕುವೆಂಪು ಸಕ್ರಿಯ ಹೋರಾಟಗಾರರೇ ಆಗಿಹೋಗಿದ್ದಾರೆ. ಕುವೆಂಪು ಅವರದ್ದು ಒಂದು ರೀತಿಯ ಸಾಹಿತ್ಯಕ ದಂಗೆ. ರಾಜಕೀಯ ಅಧಿಕಾರದ ಹಸ್ತಾಂತರವಾಗಿ ಸಕ್ರಿಯ ಹೋರಾಟ ದಲ್ಲಿ ತೊಡಗಿದರೆ ಮಾತ್ರ ಅದು ಹೋರಾಟ ಮಿಕ್ಕದ್ದು ಹೋರಾಟವಲ್ಲ ಎಂಬ ನಂಬಿಕೆಯನ್ನು ಛಿದ್ರಿಸುವ ಸಾಂಸ್ಕೃತಿಕ ದಂಗೆ. ಈ ದೃಷ್ಟಿಯಿಂದ ಕುವೆಂಪು ಒಬ್ಬ ಸಾಂಸ್ಕೃತಿಕ ನಾಯಕ.

೨.

ಸ್ವಾತಂತ್ರ್ಯ ಪೂರ್ವಯುಗದಲ್ಲಿ ರೆನೆಸಾನ್ಸ್ ಪ್ರಭಾವಳಿಗೆ ಭಾರತವೂ ಹೊರತಾಗಲಿಲ್ಲವಾಗಿ ಇಲ್ಲಿಯೂ ಅದರ ಚಾಚುವಿಕೆಗಳು (Extensions) ಕಾಣಿಸಿಕೊಂಡವು. ಮುದ್ರಣ ಮಾಧ್ಯಮ, ಕೈಗಾರಿಕೀ ಕರಣ, ಇಂಗ್ಲಿಷ್ ಶಿಕ್ಷಣಗಳ ಪ್ರಭಾವಗಳ ಕೆಲ ಉಪಯುಕ್ತ ಅಡ್ಡ ಪರಿಣಾ ಮಗಳಿಗೆ ಮುದ್ರಣ ಮಾಧ್ಯಮ, ಕೈಗಾರಿಕೀಕರಣ, ಇಂಗ್ಲಿಷ್ ಶಿಕ್ಷಣಗಳ ಪ್ರಭಾವಗಳು ಕೆಲ ಉಪಯುಕ್ತ ಅಡ್ಡ ಪರಿಣಾಮಗಳಿಗೆ ಕೂಡ ಕಾರಣ ವಾದವು. ಇದರ ಫಲಿತವೆಂಬಂತೆ ಭಾರತವು ಬ್ರಿಟಿಷ್ ವಸಾಹತುಶಾಹಿಗೆ ಎದುರಾಗುವ ಸಂದರ್ಭದಲ್ಲಿ ಮೂರು ತೆರನ ಬೆಳವಣಿಗೆಗಳಾದವು. ೧. ಭಾರತೀಯ ಪರಂಪರೆಯಲ್ಲಿ ಎಲ್ಲವೂ ಇತ್ತೆಂಬ ವೈಭವೀಕರಣ ೨. ಭಾರತೀಯ ಪರಂಪರೆಯು ಗೊಡ್ಡು ಸಂಪ್ರದಾಯದ್ದೆಂಬ ತಿರಸ್ಕಾರ ೩. ಇಲ್ಲಿ ಶಕ್ತಿ-ದೋಷಗಳೆರಡೂ ಉಂಟೆಂಬ ಪರಿಷ್ಕರಣವಾದ. ಕುವೆಂಪು ಮೊದಲ ಎರಡು ಅತಿಗಳಿಗೂ ಹೋಗದ ಪರಿಷ್ಕರಣವಾದಿ (ಡಿಆರ್ ಈಗಾಗಲೇ ಇದನ್ನು ಹೇಳಿದ್ದಾರೆ). ಇದರ ಪರಿಷ್ಕರಣವಾದಿ ನಿಲುವನ್ನು ಇವರ ನಾಟಕಗಳಲ್ಲಿ ನಿಚ್ಚಳವಾಗಿ ಕಾಣಬಹುದು. ಹೀಗಾಗಿ ಕುವೆಂಪು ಒಂದು ತೆರನ ಪರಂಪರೆಯನ್ನು ಶೋಧಿಸುವ (ಸೋಸುವ) ಪ್ರತಿಭೆ.

ಪರಂಪರೆಯ ಕುರಿತ ರತಿ ಮತ್ತು ವಿವೇಕಗಳೆರಡೂ ಯಾವತ್ತೂ ಒಟ್ಟಿಗೇ ಹೋಗಲಾರ್ಥವು. ಆದರೆ ಕುವೆಂಪು ಅವರಲ್ಲಿ ಪರಂಪರೆಯ ರೋಗಗಳನ್ನು ನಿವಾರಿಸುವ ಚಿಕಿತ್ಸಕ ವಿವೇಕ ಮತ್ತು ಅದರ ಶಕ್ತಿಗಳನ್ನು ವರ್ತಮಾನೀಕರಿಸುವ ಪೋಷಕ ಪ್ರಜ್ಞೆಗಳೆರಡೂ ಇವೆ. ಇದು ಬರೀ 'ಸ್ವ' ಪರಂಪರೆಯ ಪ್ರಜ್ಞೆಯಷ್ಟೇ ಅಲ್ಲ, ಪಾಶ್ಚಾತ್ಯ ಪ್ರಣೀತ ವಿಚಾರವಾದ, ಉದಾರ ಮಾನವತಾವಾದ, ಮಾರ್ಕ್ಸ್‌ವಾದ, (ಸಮಾಜವಾದ) ವಿಜ್ಞಾನವಾದಗಳೆಲ್ಲದರಿಂದ ಪ್ರಭಾವಿತವಾದ ಮತ್ತು ಅರವಿಂದ, ಪರಮಹಂಸ, ವಿವೇಕಾನಂದ, ಶಾರದಾದೇವಿ ಮೊದಲಾದ ಭಾರತೀಯ ಸಂತ ವ್ಯಕ್ತಿತ್ವಗಳಿಂದ ದತ್ತವಾದ ವೈಶ್ವಿಕ ಚಿಕಿತ್ಸಕ ವಿವೇಕ ಮತ್ತು ಪೋಷಕ ಪ್ರಜ್ಞೆ ಕೂಡ ನಾಟಕಗಳಲ್ಲಿ ಇವರು ನಂಬುವ ವಿಧಿವಾದ, ಕರ್ಮಸಿದ್ಧಾಂತ, ಪುನರ್ಜನ್ಮಸಿದ್ಧಾಂತ, ಆತ್ಮವಾದ, ಲೀಲಾ ನಾಟಕವಾದಗಳನ್ನು ಕುರಿತಂತೆ ನಮ್ಮದೇ ತಕರಾರುಗಳು ಏನೇ ಇರಲಿ, ಪರಂಪರೆಯನ್ನು ಸದಾ ಸೋಸುತ್ತಲೇ ಇರಬೇಕೆಂಬ ಇವರ ಕೈಮಾರ್ಗ ಮಾತ್ರ ಅನುಕರಣೀಯ.

೩.

ಇವತ್ತಂತೂ 'ನಾಗರಿಕತೆಯ ನಾಗಿನಿಯು ಪ್ರಗತಿ ನಾಮಕ ಫಣೆಯ ಮೇಲೆತ್ತಿ ಚುಂಬಿಸಿಯೆ ಕೊಲ್ಲಲೆಳಸುತಿದೆ. ಹಿಂದಿನ ಬುತ್ತಿ ಸಮೆಯುತಿದೆ' (ಬಲಿದಾನ ೧೯೯೬, ಪು. ೧೨). ವಿಚಾರವಾದ ವಿಜ್ಞಾನವಾದಗಳ ಫಲವೆಂಬಂತೆ ಆಧುನಿಕ ನಾಗರಿಕತೆಯಲ್ಲಿ ಇಂದು ಭಾರತೀಯ ಅನುಭಾವ, ಆಧ್ಯಾತ್ಮಿಕತೆಗಳು ತಮ್ಮ ಚಲಾವಣೆಯನ್ನು ಕಳೆದುಕೊಂಡಿವೆ. ಆಧುನಿಕ ನಾಗರಿಕತೆಯ ಹಲವು ವಿಕೃತಿಗಳಲ್ಲಿ ಆಧ್ಯಾತ್ಮಿಕತೆಯ ಅಪ್ರಸ್ತುತತೆಯೂ ಒಂದು. (ಉದ್ಧಾರದ - ಪ್ರಗತಿಯ ಹೆಸರಲ್ಲಿ ಇಲ್ಲಿ ಏನೆಲ್ಲ ನಡೆದಿದೆ - ನಡೆಯುತ್ತಿದೆ) ಇಂಥಾ ಅಪ್ರಸ್ತುತತೆಗೆ ಮದ್ದನ್ನು ಕುವೆಂಪು ತಮ್ಮ ನಾಟಕಗಳಲ್ಲಿ ಕಟ್ಟಿಕೊಡುತ್ತಾರೆ. ಇದರ ನನ್ನ ಗೋಪಾಲ, ಸ್ಮಶಾನ ಕುರುಕ್ಷೇತ್ರ, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ, ಕಾನೀನ, ಯಮನ ಸೋಲು ಮೊದಲಾದ ನಾಟಕಗಳಲ್ಲಿ ಆಧ್ಯಾತ್ಮಿಕತೆಯ ಭಿನ್ನ ಬಾಳ್ವೆಗಳು ಅಭಿನಯಗೊಂಡಿವೆ. (ಉದಾಹರಣೆಗೆ ನೋಡಿ; 'ನಿನ್ನಿಂದ ಕತ್ತಿನಧ್ಯಾತ್ಮಮಂ, ಪಡೆವುದೆಲ್ಲ ಕೊಡುವುದಕ್ಕಲ್ತೆ ?' (ಬೆರಳ್‌ಗೆ ಕೊರಳ್. ೧೯೯೪, ಪು. ೩೯) ಎಂಬ ಏಕಲವ್ಯನ ಮಾತು ಜೊತೆಗೆ 'ಅಖಿಲರ್ಗಂ ಶ್ರೇಯಮಕ್ಕೆ, ಋತಂ ಗೆಲ್ಗೆ' (ಶೂದ್ರತಪಸ್ವಿ ೧೯೮೭. ಪು. ೩೯) ಎಂಬ ರಾಮನ ಮಾತು, ಇತ್ಯಾದಿ).

ನನ್ನ ಗೋಪಾಲ ನಾಟಕದಲ್ಲಂತೂ ಆರ್ಥಿಕ ಶ್ರೀಮಂತಿಕೆ ಮತ್ತು ಆತ್ಮ ಶ್ರೀಮಂತಿಕೆಗಳನ್ನು ಮುಖಾಮುಖಿ ಮಾಡಲಾಗಿದೆ. ಇಲ್ಲಿ ಲೌಕಿಕ ಶ್ರೀಮಂತಿಕೆಯ ಮದಕ್ಕೆ ಪ್ರತಿಯಾಗಿ ಆಧ್ಯಾತ್ಮಿಕ ಶ್ರೀಮಂತಿಕೆಯ ಅಗತ್ಯವನ್ನು ಮತ್ತು ಬಡತನವಿದ್ದೂ ಸರಳ, ಆತ್ಮಶುದ್ಧ ವಿಶ್ವಕುಟುಂಬಿ ಬದುಕನ್ನು ಬಾಳುವ ಅಗತ್ಯವನ್ನು ಕಟ್ಟಿಕೊಡಲಾಗಿದೆ.

೪.

ಆಧುನಿಕ ವಿಚಾರವಾದ ಮತ್ತು ವಿಜ್ಞಾನ ವಾದಗಳು ಇಂದು ಭಾರತೀಯ ಆಧ್ಯಾತ್ಮ - ಆಗಮಿಕ - ಅನುಭಾವಿ ಚಿಂತನೆಗಳನ್ನು ಅಪ್ರಸ್ತುತಗೊಳಿಸಿರುವುದಷ್ಟೇ ಅಲ್ಲ ಈ ಲೋಕದ ಪ್ರತಿಯೊಂದನ್ನೂ ಮಾನವ ಪ್ರಯತ್ನದಿಂದ ಗೆಲ್ಲಬಹುದೆಂಬ, ಮಾನವನ ಶಕ್ತಿಗೆ ಅತೀತವಾದದ್ದು ಇಲ್ಲಿ ಏನೂ ಇಲ್ಲವೆಂಬ ಹುಂಬ ನಂಬಿಕೆಯನ್ನು ಹುಟ್ಟಿಸಿವೆ. ಅಲ್ಲದೆ ಪ್ರಯೋಗ, ಪರೀಕ್ಷೆ, ಈಕ್ಷಣೆಗಳ ಮೂಲಕ ಮಾನವನ ಇಂದ್ರಿಯಾನುಭವಗಳಿಗೆ ದಕ್ಕದ ಏನೊಂದೂ ಇಲ್ಲಿ ಇಲ್ಲವೆಂಬ ಪ್ರಯೋಗವಾದಿ (Empirieist) ಭ್ರಮೆಯನ್ನು ಹುಟ್ಟಿಸಿವೆ. ಎಲ್ಲಕ್ಕೂ ಮಾನವ ಶಕ್ತಿಯನ್ನೇ ಕೇಂದ್ರವಾಗಿರಿಸಿಕೊಂಡ ಮಾನವ ಕೇಂದ್ರವಾದ ಇದು ಭಾರತೀಯ ಸಂದರ್ಭದಲ್ಲಿ ಈ ೧. ಮಾನವ ಕೇಂದ್ರವಾದಕ್ಕೆ ಪ್ರತಿಯಾಗಿ ಇನ್ನೆರಡು ವಾದಗಳಿದ್ದಿವೆ. ಅವೆಂದರೆ ೨. ಪರಿಸರ ಕೇಂದ್ರವಾದ ಮತ್ತು ೩. ದೈವ ಕೇಂದ್ರವಾದಗಳು.

ಕುವೆಂಪು ಎಂಪಿರಿಕಲ್ ಧೋರಣೆಯ ಮಾನವ ಕೇಂದ್ರವಾದದಲ್ಲಿ ನಂಬಿಕೆಯುಳ್ಳವರಲ್ಲ. ಇವರು ಕೆಲವೊಮ್ಮೆ ದೈವಕೇಂದ್ರವಾದದಲ್ಲೂ, ಕೆಲವೊಮ್ಮೆ ಪರಿಸರ ಕೇಂದ್ರವಾದದಲ್ಲೂ ಜೀಕುತ್ತಾರೆ. ಸ್ಮಶಾನ ಕುರುಕ್ಷೇತ್ರ ನಾಟಕದಲ್ಲಿ ದುರ್ಯೋಧನ ಕೃಷ್ಣನಿಗೆ 'ಸೂತ್ರಧಾರ ನಾನೆನ್ನ ಪಾತ್ರಮಂ ನೇರಮಾಗಭಿನಯಿಸಿ ತೋರ್ದೆನೇನೆ' (ಪುಟ.೨೭) ಎಂದು ಕೇಳುತ್ತಾನೆ. ಬೆರಳ್‌ಗೆ ಕೊರಳ್ ನಾಟಕದಲ್ಲಿ ದ್ರೋಣನು ಮುಳ್ಪುದನ್ ಮಾಳ್ದೆನ್ ! ತಾನ್ ಅಪ್ಪುದಕ್ಕೆ ! ಸರ್ವಜ್ಞಂ, ಸರ್ವಶಕ್ತಂ ಆ ದೈವಮಿರ್ಕುಂ !' (ಪು. ೩೪) ಎಂದು ತನ್ನ ಕೃತ್ಯದ ಬಗ್ಗೆ ತಾನೇ - ಅದು ತನ್ನ ಕಯ್ಯಲ್ಲಿಲ್ಲದ ಕೆಲಸವೆಂಬಂತೆ ಹೇಳಿಕೊಳ್ಳುತ್ತಾನೆ. ಏಕಲವ್ಯ ಕೂಡ ಯಾವುದೇ ಆಕ್ರೋಶ, ಪ್ರತಿಭಟನೆಗಳಿಲ್ಲದೆ 'ಗೆಲ್ಗೆ ದೈವೇಚ್ಛೆ ! ನಿಮ್ಮ ವಚನಂ ನಿಲ್ಗೆ! ಅರ್ಜುನನ ಪೆರ್‌ಬಯಕೆಯುಂ ಸಲ್ಗೆ!' (ಪು. ೪೨) ಎನ್ನುತ್ತಾನೆ. ಇಂಥ ಅನೇಕ ಕಡೆ ವ್ಯಕ್ತವಾಗುವಂತೆ ಕುವೆಂಪು ವ್ಯಕ್ತಿಗೆ ನಿಲುಕದ ದೈವಪಾತ್ರದ ಅಸ್ತಿತ್ವವನ್ನು ಕಾಣುತ್ತಾರೆ. ಹೀಗೆ ದೈವದ ವ್ಯಕ್ತೀಕರಣ ಪ್ರಕ್ರಿಯೆ ಇವರ ನಾಟಕಗಳಲ್ಲಿ ಸಂಚಾರಿಯಾಗಿದೆ.

ಪರಂಪರೆಯ ಕುರಿತ ರತಿ ಮತ್ತು ವಿವೇಕಗಳೆರಡೂ ಯಾವತ್ತೂ ಒಟ್ಟಿಗೇ ಹೋಗಲಾರವು. ಆದರೆ ಕುವೆಂಪು ಅವರಲ್ಲಿ ಪರಂಪರೆಯ ರೋಗಗಳನ್ನು ನಿವಾರಿಸುವ ಚಿಕಿತ್ಸಕ ವಿವೇಕ ಮತ್ತು ಅದರ ಶಕ್ತಿಗಳನ್ನು ವರ್ತಮಾನೀಕರಿಸುವ ಪೋಷಕ ಪ್ರಜ್ಞೆಗಳೆರಡೂ ಇವೆ. ಇದು ಬರೀ 'ಸ್ವ' ಪರಂಪರೆಯ ಪ್ರಜ್ಞೆಯಷ್ಟೇ ಅಲ್ಲ, ಪಾಶ್ಚಾತ್ಯ ಪ್ರಣೀತ ವಿಚಾರವಾದ, ಉದಾರ ಮಾನವತಾವಾದ, ಮಾರ್ಕ್ಸ್‌ವಾದ, (ಸಮಾಜವಾದ) ವಿಜ್ಞಾನವಾದಗಳೆಲ್ಲದರಿಂದ ಪ್ರಭಾವಿತವಾದ ಮತ್ತು ಅರವಿಂದ, ಪರಮಹಂಸ, ವಿವೇಕಾನಂದ, ಶಾರದಾದೇವಿ ಮೊದಲಾದ ಭಾರತೀಯ ಸಂತ ವ್ಯಕ್ತಿತ್ವಗಳಿಂದ ದತ್ತವಾದ ವೈಶ್ವಿಕ ಚಿಕಿತ್ಸಕ ವಿವೇಕ ಮತ್ತು ಪೋಷಕ ಪ್ರಜ್ಞೆ ಕೂಡ ನಾಟಕಗಳಲ್ಲಿ ಇವರು ನಂಬುವ ವಿಧಿವಾದ, ಕರ್ಮಸಿದ್ಧಾಂತ, ಪುನರ್ಜನ್ಮ ಸಿದ್ಧಾಂತ, ಆತ್ಮವಾದ, ಲೀಲಾ ನಾಟಕವಾದಗಳನ್ನು ಕುರಿತಂತೆ ನಮ್ಮದೇ ತಕರಾರುಗಳು ಏನೇ ಇರಲಿ, ಪರಂಪರೆಯನ್ನು ಸದಾ ಸೋಸುತ್ತಲೇ ಇರಬೇಕೆಂಬ ಇವರ ಕೈಮಾರ್ಗ ಮಾತ್ರ ಅನುಕರಣೀಯ

ಜಲಗಾರ ನಾಟಕದಲ್ಲಿ ಪಾರಂಪರಿಕ ಪೂಜೆ, ದೇಗುಲ, ದೈವ ಕಲ್ಪನೆಗಳನ್ನು ಕುವೆಂಪು ಛಿದ್ರಿಸುತ್ತಾರೆ. ಸಾಕ್ಷಾತ್ ಶಿವನೇ ಜಲಗಾರನೆದುರು - ಈ ಪುರೋಹಿತ, ಪೂಜಾರಿಗಳು ನನ್ನನ್ನು ಹೈಜಾಕು ಮಾಡಿದ್ದಾರೆ. ನನಗೆ ಮೊದಲು ಇರದೇ ಇದ್ದ ಗಂಗೆ, ಸರ್ಪ, ತೊಗಲು ಮೊದಲಾದವನ್ನು ತೊಡಿಸಿದ್ದಾರೆ. ಇವೆಲ್ಲವೂ ಪ್ರಕೃತಿಯ ಆಭರಣಗಳೇ ಎನ್ನುತ್ತಾನೆ. ಅವೆಲ್ಲವನ್ನೂ ಕಳಚಿ ಜಲಗಾರನಾಗಿ (ಜಗದ ಜಲಗಾರನಾಗಿ) ಆ ಜಲಗಾರದಲ್ಲಿ ಒಂದಾಗುತ್ತಾನೆ. ಕೃಷ್ಣ ರುದ್ರ, ಬನದ ಗೋಪಾಲ, ಜಗದ ಜಲಗಾರ ಪಾತ್ರಗಳು ಮಾತನಾಡುವಂತೆ ಇವರ ನಾಟಕದಲ್ಲಿ ಮೋಡವೂ ಮಾತಾಡುತ್ತದೆ. ಕಾಡೂ ಮಾತಾಡುತ್ತದೆ. (ನೋಡಿ: ಮೋಡಣ್ಣನ ತಮ್ಮ) ಹೀಗಾಗಿ ಇವರ ನಾಟಕಗಳಲ್ಲಿ ದೈವದ ಪ್ರಕೃತೀಕರಣವೂ ಸಂಚಾರಿಯಾಗಿದೆ. ಕುವೆಂಪು ಕಾವ್ಯವನ್ನು ಪ್ರವೇಶಿಸಿದರಂತೂ ಸೂರ್ಯೋದಯ, ತಂಗಾಳಿ, ಕಾಜಾಣ, ಹರಿವ ನೀರಿನ ಗಾನಗಳಲ್ಲೆಲ್ಲ ದೈವವನ್ನೇ ಕಾಣುವ ಅವರ ಪ್ರಕೃತಿ-ದೈವ ಸಮೀಕರಣವನ್ನು ಕಾಣಬಹುದು.

ನಾಟಕಗಳಲ್ಲಿ ಕುವೆಂಪು ವ್ಯಕ್ತಿ ಪಾತ್ರಗಳಲ್ಲಿ ದೈವವನ್ನು ಕಾಣುವಂತೆಯೇ, ಪ್ರಕೃತಿಯಲ್ಲೂ ದೈವವನ್ನು ಕಾಣುತ್ತಾರೆ. ಅಂದರೆ ಇವರ ನಾಟಕಗಳಲ್ಲಿ ೧. ದೈವದ ವ್ಯಕ್ತೀಕರಣ ಮತ್ತು ೨. ದೈವದ ಪ್ರಕೃತೀಕರಣಗಳೆರಡೂ ಇವೆ. ಇಲ್ಲಿ ಪ್ರಕೃತಿ ಕೇಂದ್ರವಾದ ಮತ್ತು ದೈವಕೇಂದ್ರವಾದಗಳಲ್ಲಿ ಕುವೆಂಪು ಹೆಚ್ಚು ದೈವಕೇಂದ್ರವಾದಕ್ಕೇ ವಾಲಿಕೊಳ್ಳುತ್ತಾರೆ. ಇವು ಯಾವೂ ದ್ವಿಮಾನ ವೈರುಧ್ಯಗಳಲ್ಲ (Binary oppositions ಅಲ್ಲ) ಭಿನ್ನ ಗ್ರಹಿಕೆಗಳು ಮಾನವ ನಂಬಿಕೆಯು ಹಲ ರೀತಿಯಲ್ಲಿ ವ್ಯಕ್ತಗೊಳ್ಳಬಹುದಾದ (Plurality of the reality) ವಾಸ್ತವದ ಬಹುತ್ವ ಇದು. ಹಾಗೆ ನೋಡಿದರೆ ದ್ವಿಮಾನ ವೈರುಧ್ಯವೆಂಬುದು ಒಂದು ಕೃತಕ ಕಲ್ಪನೆ ಅಷ್ಟೆ

೫.

ಭಾರತದಾದ್ಯಂತ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ರಾಷ್ಟ್ರೀಯತೆಯು ರೂಪುಗೊಳ್ಳುತ್ತಿದ್ದಂತೆಯೇ ಜಾತೀಯ ಧೃವೀಕರಣಗಳೂ ಕೂಡ ನಡೆಯುತ್ತಿದ್ದವು. ಸಣ್ಣ ಪುಟ್ಟ ಉಪಜಾತಿಯ ವ್ಯತ್ಯಾಸಗಳು ಕಣ್ಮರೆಯಾಗುತ್ತ ಒಳಪಂಗಡಗಳೆಲ್ಲ ಒಗ್ಗೂಡುತ್ತ ಒಕ್ಕಲಿಗ, ಲಿಂಗಾಯತ, ದಲಿತ, ಅಚ್ಯುತ ಹೀಗೆ ಪ್ರತ್ಯೇಕ ಪವರ್ ಬಾರ್ಗೆನಿಂಗ್ ಗುಂಪುಗಳಾಗಿ - ಮತಗಳಾಗಿ ರೂಪುಗೊಳ್ಳತೊಡಗಿದ್ದ ಕಾಲವದು.

ಹಾಗೇ ಆಗ ತಮಿಳ, ತೆಲುಗ, ಕನ್ನಡಿಗ, ಬಂಗಾಳಿ, ಹಿಂದಿ ಇತ್ಯಾದಿ ಭಾಷಿಕ ಐಡೆಂಟಿಟಿಗಳೂ ರೂಪುಗೊಳ್ಳುತ್ತಿದ್ದವು. ಜೊತೆಗೆ ಭಾರತೀಯ ರಾಜಕೀಯದಲ್ಲಿ ಹಿಂದೂ, ಸಿಖ್, ಮುಸ್ಲಿಂ, ದಲಿತ ಮುಂತಾದ ಕೋಮುವಾದ ಪಂಗಡಗಳೂ ತಮ್ಮ ಅಸ್ಮಿತೆಗಳನ್ನು (Identity) ರೂಪಿಸಿಕೊಳ್ಳುತ್ತಿದ್ದ ಕಾಲವದು. ಇಂಥಾ ಸಂದರ್ಭದಲ್ಲಿ ಕುವೆಂಪು ಏಕಕಾಲಕ್ಕೆ ಕನ್ನಡಿಗನೂ, ಭಾರತೀಯನೂ, ವಿಶ್ವಮಾನವನೂ, ಒಕ್ಕಲಿಗನೂ, ಹಿಂದುವೂ ಆಗಿದ್ದ ಒಬ್ಬ ವ್ಯಕ್ತಿ. ಹೀಗಾಗಿ ಬಹು ಅಸ್ಮಿತೆಗಳು ಏಕಕಾಲಕ್ಕೆ ಒಂದೇ ವ್ಯಕ್ತಿಯಲ್ಲಿ ಇದ್ದ ಸ್ಥಿತಿ ಅದು. ಇದು ಆ ಕಾಲದ ಸ್ಥಿತಿ ಮಾತ್ರವಲ್ಲ, ಇದು ಯಾವತ್ತಿನ ಸ್ಥಿತಿ ಕೂಡ. ಹೀಗಾಗಿ ಕುವೆಂಪು ನಾಟಕಗಳಲ್ಲಿ ೧. ಸ್ಥಳೀಯ ಕನ್ನಡತನ ೨. ಭಾರತೀಯತೆ-ರಾಷ್ಟ್ರೀಯ ಪ್ರಜ್ಞೆ ೩. ವಿಶ್ವಮಾನವ ಪ್ರಜ್ಞೆ ಈ ಮೂರೂ ಮುಪ್ಪುರಿಗೊಂಡು ಅಭಿವ್ಯಕ್ತವಾಗಿವೆ. ಇವೂ ಯಾವೂ ಪರಸ್ಪರ ವೈರುಧ್ಯಗಳಲ್ಲ. ಏಕಕಾಲಕ್ಕೆ ಇರಬಹು

ದಾದ, ಬಹುಪಾತ್ರ - ಬಹು ಅಸ್ಮಿತೆಗಳು (ಅಥವಾ ಇವು ಒಂದು ಇನ್ನೊಂದರ ವಿಸ್ತರಣೆಗಳು ಅಂತಲೂ ಅನ್ನಬಹುದು.)

ನೂರು ದೇವರನೆಲ್ಲ ನೂಕಾಚೆ ದೂರ ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ ಎಂದು ಹೇಳಿದ ಕುವೆಂಪುನೇ ಜೈ ಭಾರತ ಜನನಿಯ ತನುಜಾತೇ ಜಯಹೇ ಕರ್ನಾಟಕ ಮಾತೆ ಎಂದೂ ಹೇಳಿದ್ದಾರೆ. ಹರಿಶಿವ ಕಮಲಜರೆಲ್ಲ ಪರಮಾತ್ಮನ ರೂಪಗಳೇ (ನನ್ನ ಗೋಪಾಲ, ಪು. ೨೧) ಎಂದು ಹೇಳುತ್ತಲೇ ಓಂ ನಮೋ ಕಾಜಾಣಾಯ ಎಂತಲೂ ಹೇಳಿದ್ದಾರೆ. ವಿಜ್ಞಾನ ಪ್ರಜ್ಞೆ, ವಿಚಾರಕ್ರಾಂತಿಯ ಬಗ್ಗೆ ಮಾತಾಡುತ್ತ ಆಧ್ಯಾತ್ಮಿಕತೆಯ ಕುರಿತೂ ಮಾತಾಡಿದ್ದಾರೆ. ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು ಎನ್ನುತ್ತಲೇ ವಿಶ್ವಮಾನವತೆ, ಅನಿಕೇತನದ ಕುರಿತೂ ಹೇಳಿದ್ದಾರೆ. 'ಬಲಿ ಪರಂಪರೆಯಲ್ತೆ ಸ್ವಾತಂತ್ರ್ಯ ಜೀವನಂ!' (ಬಲಿದಾನ ಪು.೧೫) ಎನ್ನುತ್ತಲೇ 'ಗೆಲ್ ತಾಯೆ ಗೆಲ್, ಬಾಳ್ ತಾಯೆ ಬಾಳ್, ಆಳ್ ಜಗವನಾಳ್ (ಬಲಿದಾನ ಪು. ೨೦) ಎಂದೂ ಹೇಳುತ್ತಾರೆ.

ಇವು ಕೂಡ ಒಂದಕ್ಕೊಂದು ಪರಸ್ಪರ ವೈರುಧ್ಯಗಳಲ್ಲ. ಇಲ್ಲಿ ಯಾವುದಕ್ಕೆ ಯಾವುದೂ ದ್ವಿಮಾನ ವೈರುಧ್ಯವಲ್ಲ. ಮೇಲೆ ಈಗಾಗಲೇ ಹೇಳಿರುವಂತೆ ಈ ಎಲ್ಲವೂ ವಾಸ್ತವದ ಬಹುತ್ವ. 'ಪಲವು ಬಟ್ಟೆಗಳಲ್ತೆ ಭಗವದಿಚ್ಛೆಯ ಮನೆಗೆ ?' (ಬೆರಳ್‌ಗೆ ಕೊರಳ್, ಶ್ರೀಯವರಿಗೆ ಮೊದಲ ನುಡಿ)

೬.

ರೆನೆಸಾನ್ಸ್ ಮತ್ತು ವಸಾಹತುಗಾರರ ಆಗಮನದಿಂದ ಭಾರತದಲ್ಲಿ ವಿದ್ಯೆಯ ಏಕಸ್ವಾಮ್ಯ/ ಜ್ಞಾನದ ಗುತ್ತಿಗೆ ಛಿದ್ರವಾದದ್ದು ಈಗ ಇತಿಹಾಸ. ಕುವೆಂಪು ನಾಟಕಗಳು ಇಂಥ 'ಭಾರತೀಯ ಇತಿಹಾಸ'ದ ಸಾಕ್ಷಿ ಪ್ರಜ್ಞೆ ಆಗಿವೆ. ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ ಮತ್ತು ಕಾನೀನ ನಾಟಕಗಳಲ್ಲಿ ಏಕಲವ್ಯ, ಶಂಬೂಕ, ಕರ್ಣರಿಗೆ ಚರಿತ್ರೆಯಲ್ಲಿ ವಿದ್ಯೆ ಕಲಿಯಲು/ ಜ್ಞಾನ ಪಡೆಯಲು ತೊಡಕುಂಟು ಮಾಡಿದವರಿಗೆ ಚೆನ್ನಾಗಿ ಇಕ್ಕಲಾಗಿದೆ. ಈ ಹೊಡೆತವು ಜನಸಮುದಾಯದ ಬೇಡಿಕೆಯಾಗಿದ್ದು ಆಕಾಂಕ್ಷೆಯಾಗಿದ್ದು ಕುವೆಂಪು ಅದಕ್ಕೆ ನಿಮಿತ್ತವಾಗಿದ್ದಾರೆ. ಯಾವುದೇ ಸಮಾಜ ತಾನು ತನ್ನ ಕಾಲದ ಆಕಾಂಕ್ಷೆ, ಒತ್ತಡ, ಮುನ್ನೋಟಗಳನ್ನು ಹಾಗೂ ಅವುಗಳೊಳಗಿನ ವಾಸ್ತವ ತಲ್ಲಣಗಳನ್ನು ಸಾಹಿತ್ಯಕ ಹೊರಚಾಚುಗಳ ಮೂಲಕ ಹೇಗಾದರೂ ಪ್ರಕಟಪಡಿಸುತ್ತದೆ. ಕನ್ನಡ ಸಮಾಜವು ಹೀಗೆ ಪ್ರಕಟಗೊಳ್ಳಲು ಕುವೆಂಪು ಮಾಧ್ಯಮವಾಗಿದ್ದಾರೆ. (ಈಗ ಮಾಧ್ಯಮಗಳ ಕೈ ಬದಲಿಯಾಗಿದೆ.)

ಬ್ರಾಹ್ಮಣ ಮತ್ತು ಕ್ಷತ್ರಿಯ ಕುಲಗಳು ದೊಡ್ಡಸ್ತಿಕೆಯ ಕುಲಗಳು ಮತ್ತು ಅವು ಜನನದಿಂದಲೇ ಪ್ರಾಪ್ತವಾಗುವ ಅಂತಸ್ತುಗಳು ಎಂಬ ಮತ್ತು 'ಕುಲವು ಜನನದೊಳಿಲ್ಲ ಗುಣದೊಳಿಹುದು' (ಕಾನೀನ ೧೯೮೭ ಪು. ೨೨) ಎಂಬ ಎರಡೂ ತೆರನ ಕುಲಚರ್ಚೆ ನಮ್ಮ ಸಾಹಿತ್ಯ ಚರಿತ್ರೆಯುದ್ದಕ್ಕೂ ನಡೆಯುತ್ತಲೇ ಬಂದಿದೆ. ಕರ್ಣ, ಶಂಬೂಕ, ಏಕಲವ್ಯರಲ್ಲಿ ಕುವೆಂಪು ಈ ಕುಲ ಚರ್ಚೆಯನ್ನು ಮುಂದುವರಿಸಿದ್ದಾರೆ. ಇವರ ಕಾನೀನ ನಾಟಕದಲ್ಲಿ ಪರಶುರಾಮ ಕರ್ಣನನ್ನು ಬೆಸ್ತನಾಗಿಯೇ ತನ್ನ ಶಿಷ್ಯನನ್ನಾಗಿ ಸ್ವೀಕರಿಸುತ್ತಾನೆ. ಮತ್ತು ಶಾಪ ಕೊಡುವುದರ ಬದಲು ಹರಸುತ್ತಾನೆ. ಶೂದ್ರ ತಪಸ್ವಿಯಲ್ಲಿ ನಮಗೆಲ್ಲ ತಿಳಿದಿರುವಂತೆ ಬ್ರಾಹ್ಮಣನೇ ಶೂದ್ರ ತಪಸ್ವಿಯ ಕಾಲಿಗೆ ಬೀಳುತ್ತಾನೆ.

ಕುವೆಂಪು ಕಾನೀನ ನಾಟಕದಲ್ಲಿ 'ಕುಲವು ಜನನದೊಳಿಲ್ಲ ಗುಣದೊಳಿಹುದು' ಎಂದು ಹೇಳಿದರೂ ಕರ್ಣನನ್ನು ಸೂತನೆಂದು ತಿಳಿಯುವುದಿಲ್ಲ. ಅವನು ಕ್ಷತ್ರಿಯ ಪುತ್ರನೆಂದೇ ಹೇಳುತ್ತಾರೆ. ಮಹಾಭಾರತ ಕಥನದಲ್ಲಿ ಈ ಕರ್ಣನ ಜನನ ಪುರಾಣ ಎಷ್ಟು ಚೆನ್ನಾಗಿ ಹೆಣೆದುಕೊಂಡಿದೆಯೆಂದರೆ, ತಳಪಾಯದ ಕಲ್ಲಿನ ಹಾಗೆ ಕೂತುಬಿಟ್ಟಿದೆ. (ಅದನ್ನು ಅಲ್ಲಾಡಿಸಿದರೆ ಇಡೀ ಕಟ್ಟಡಕ್ಕೇ ಬಾಧೆಯಾಗುವ ಹಾಗೆ) ಸೂತಕುಲದಲ್ಲಿ ಹುಟ್ಟಿದವನು ಇಂಥಾ ಕ್ಷಾತ್ರ ವಿದ್ಯಾಪ್ರವೀಣ ಹೇಗೆ ಆಗಲು ಸಾಧ್ಯ ? ಎಂಬ ಪ್ರಶ್ನೆಯೇ ಬಹುಶಃ ಅವನ ಜನನದ ಮಿತ್ತನ್ನು ಕುಂತಿಯೊಂದಿಗೆ ಸೃಷ್ಟಿಸಿರಬಹುದು. ಕರ್ಣ ನಿಜವಾಗಿಯೂ ಸೂತಕುಲದಲ್ಲಿಯೇ ಯಾಕೆ ಹುಟ್ಟಿರಬಾರದು? ಕರ್ಣ ಪ್ರಸಂಗವಶಾತ್ ಸೂತನಾಗಿದ್ದಾನೆ, ಜನ್ಮತಃ ಅವನು ಕ್ಷತ್ರಿಯ ಪುತ್ರನೇ ಹೌದು ಎಂಬ ಕಥನ ತರ್ಕ ಕುಲ/ ಜಾತಿ ಮೂಲವನ್ನು ವ್ಯಕ್ತಿತ್ವದ ಶ್ರೇಷ್ಠತೆಗೆ ಮಾನದಂಡವನ್ನಾಗಿ ಖಚಿತವಾಗಿ ನಂಬುತ್ತದೆ ಎಂದೇ ಅರ್ಥ. ಇಂಥ ಅರ್ಥದ ಕಥನ ಸಾವಿರಾರು ವರ್ಷಗಳಿಂದ ಮೌಲ್ಯ ಪ್ರಸಾರ ಸಾಧನವಾಗಿ ಪ್ರಶ್ನಿತಗೊಳ್ಳದೇ ಬಳಕೆಯಾಗುತ್ತಿದೆ ಎಂದರೆ ಅಚ್ಚರಿಯಾಗುತ್ತದೆ. ಕುವೆಂಪು ನಾಟಕ ಪ್ರತಿಭೆ ಮೂಲಭೂತವಾಗಿ ಇಂಥದ್ದನ್ನು ಪ್ರಶ್ನಿಸುವ ಪ್ರತಿಭೆ. (ಕುವೆಂಪು ಕರ್ಣನ ಹುಟ್ಟಿನ ಸಂಬಂಧವನ್ನು ಯಾರೋ ವಿನೋ ಕಥನ ಸಂವಿಧಾನದಲ್ಲಿ ಪ್ರಶ್ನಿಸಿಲ್ಲ, ಬದಲಿಸಿಲ್ಲ. ಆದರೂ ಇವರು ಪ್ರತಿಪಾದಿಸುವ ಮೌಲ್ಯ ಕುಲ ಮೂಲ ಸಿದ್ಧಾಂತ ಪರವಲ್ಲ) ಇಲ್ಲಿ ಯಾವುದಾದರೂ ಕಥನ ಸಂವಿಧಾನವನ್ನು ಒಂದು ಸಮಾಜ ಯಾಕೆ ಒಪ್ಪಿಕೊಳ್ಳದೆ ಮತ್ತು ಯಾಕೆ ಪ್ರಶ್ನಿಸದೆ ಎಂಬುದು ಅದರ ಮೌಲ್ಯ ಪ್ರಜ್ಞೆಯ ಸೂಚಕವೇ ಆಗಿರುತ್ತದೆ.

ನೂರು ದೇವರನೆಲ್ಲ ನೂಕಾಚೆ ದೂರ ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ ಎಂದು ಹೇಳಿದ ಕುವೆಂಪುನೇ ಜೈ ಭಾರತ ಜನನಿಯ ತನುಜಾತೇ ಜಯಹೇ ಕರ್ನಾಟಕ ಮಾತೆ ಎಂದೂ ಹೇಳಿದ್ದಾರೆ. ಹರಿಶಿವ ಕಮಲಜರೆಲ್ಲ ಪರಮಾತ್ಮನ ರೂಪಗಳೇ ಎಂದು ಹೇಳುತ್ತಲೇ ಓಂ ನಮೋ ಕಾಜಾಣಾಯ ಎಂತಲೂ ಹೇಳಿದ್ದಾರೆ. ವಿಜ್ಞಾನ ಪ್ರಜ್ಞೆ, ವಿಚಾರಕ್ರಾಂತಿಯ ಬಗ್ಗೆ ಮಾತಾಡುತ್ತ ಆಧ್ಯಾತ್ಮಿಕತೆಯ ಕುರಿತೂ ಮಾತಾಡಿದ್ದಾರೆ. ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು ಎನ್ನುತ್ತಲೇ ವಿಶ್ವಮಾನವತೆ, ಅನಿಕೇತನದ ಕುರಿತೂ ಹೇಳಿದ್ದಾರೆ. ಇವು ಒಂದಕ್ಕೊಂದು ಪರಸ್ಪರ ವೈರುಧ್ಯಗಳಲ್ಲ. ಇಲ್ಲಿ ಯಾವುದಕ್ಕೆ ಯಾವುದೂ ದ್ವಿಮಾನ ವೈರುಧ್ಯವಲ್ಲ.
ಈ ಎಲ್ಲವೂ ವಾಸ್ತವದ ಬಹುತ್ವ

೭.

ಸಾಹಿತ್ಯ ಕಥನಗಳು ಸದಾ ಭಿನ್ನ ಭಿನ್ನ ಅವಸ್ಥೆಗಳಲ್ಲಿ ಸಾಮಾಜಿಕ ಮೌಲ್ಯ ಪ್ರಸಾರದ ಸಾಧನಗಳಾಗಿ ಬಳಕೆಯಾಗುತ್ತಿರುತ್ತವೆ ಎಂಬುದು ನಮಗೆಲ್ಲ ತಿಳಿದ ಸಂಗತಿಯೇ ಆಗಿದೆ. ಕೆಲವೊಮ್ಮೆ ಇವು ಮೌಲ್ಯಪರಿಷ್ಕಾರ/ಪಲ್ಲಟಕ್ಕೆ ದುಡಿದರೆ ಕೆಲವೊಮ್ಮೆ ಇವು ಯಥಾಸ್ಥಿತಿಯ ಸ್ಥಿರೀಕರಣಕ್ಕೆ ಬಳಕೆಯಾಗುತ್ತಿರುತ್ತದೆ. (ಇವತ್ತಿನ ಟಿವಿ, ಸಿನಿಮಾ, ಇಂಟರ್‌ನೆಟ್, ಮುದ್ರಣ ಮಾಧ್ಯಮಗಳು ಯಾಜಮಾನಿಕೆ ಪಡೆಯುವ ಕಾಲಕ್ಕು ಮುಂಚೆ ಸಾಹಿತ್ಯಕಥನಗಳೇ ಇವೆಲ್ಲದರ ಜವಾಬ್ದಾರಿಯನ್ನು ಭಿನ್ನ ಅವಸ್ಥೆಗಳಲ್ಲಿ ಹೊರುತ್ತಿದ್ದವು.) ಬಹಳ ಹಿಂದೆ ಏನೂ ಅಲ್ಲ, ನಾವೆಲ್ಲ ಮಕ್ಕಳಾಗಿದ್ದಾಗ ಅರವತ್ತರ ದಶಕದಲ್ಲಿ ಶನಿಮಹಾತ್ಮೆ, ಸತ್ಯವ್ರತ, ನಲ್ಲತಂಗಾ, ಕುರುಕ್ಷೇತ್ರ, ಸತ್ಯ ಹರಿಶ್ಚಂದ್ರ, ಸದಾರಮೆ, ಜಲಂಧರ ಚರಿತೆ, ಸಾವಿತ್ರಿ-ಸತ್ಯವಾನ ಇಂಥಾ ಹಲವಾರು ಕಥನಗಳು ಪೌರಾಣಿಕ ನಾಟಕ, ಹರಿಕಥೆ, ಅಜ್ಜೀಕತೆ, ಕೇಳಿಕೆ, ಸರಾಗತೆ, ಮೊದಲಾದ ಅವಸ್ಥೆಗಳಲ್ಲಿ ನಮ್ಮನ್ನು ಸದಾ ಕಾಡುತ್ತಿದ್ದವು. ಎಷ್ಟೋ ವೇಳೆ ಗಳಗಳ ಅತ್ತು ಅವುಗಳ ಬಗೆಗೆ ವಿವೇಚನೆಯಿಲ್ಲದೆ ಅವು ಹೇಳುವ ಮೌಲ್ಯಗಳ ಬಿತ್ತನೆ ನೆಲದಂತೆ ನಾವು ಆಡುತ್ತಿದ್ದೆವು. ಈಗಲೂ ಗುರುರಾಜುಲು ನಾಯ್ಡುರ ನಲ್ಲತಂಗ ಕ್ಯಾಸೆಟ್ಟನ್ನು ಯಾರಾದರೂ ಎಲ್ಲಾದರೂ ಕೇಳಿದರೆ ಹೌದು ಹೆಣ್ಣು ಏನೇ ಕಷ್ಟ ಬಂದರೂ ತವರಿಗೆ ಹೋಗಬಾರದು. ಗಂಡನ ಹತ್ತಿರಾನೇ ಇರಬೇಕು ಎಂದು ನಂಬುವಂತಾದರೆ ಅಚ್ಚರಿಯಲ್ಲ.

ಹೆಣ್ಣಿನ ಪಾತಿವ್ರತ್ಯಕ್ಕೆ ಯಮನನ್ನು ಗೆಲ್ಲುವ ಶಕ್ತಿಯಿದೆ ಎಂಬ ಮೌಲ್ಯವನ್ನು ಬಿತ್ತುವ, ಶೀಲವೆಂಬುದು ಹೆಣ್ಣಿಗೆ ಮಾತ್ರ ಅನ್ವಯಿಸುವ ನಿಯಮವೆನ್ನುವ ಕಥನವಾದ ಸಾವಿತ್ರಿ-ಸತ್ಯವಾನನ ಕತೆಯನ್ನೇ ಆಧರಿಸಿ ಕುವೆಂಪು ಯಮನ ಸೋಲು ನಾಟಕ ರಚಿಸಿದ್ದಾರೆ. ಇಲ್ಲಿ ಪಾತಿವ್ರತ್ಯ ತತ್ವವನ್ನು ಕುವೆಂಪು ಪ್ರೇಮತತ್ವವನ್ನಾಗಿ ಬದಲಿಸಿದ್ದಾರೆ. ಇದು ಯಮನ ಸೋಲು ಅಥವಾ ಪ್ರೇಮದ ವಿಜಯ.

ಈ ನಾಟಕದಲ್ಲಿ ಕುವೆಂಪು ಅಪ್ರಜ್ಞಾಪೂರ್ವಕವಾಗಿ ಲಿಂಗ ರಾಜಕಾರಣದ ಪ್ರಶ್ನೆಯೊಂದನ್ನು ಉತ್ತರಿಸಿದ್ದಾರೆ. ಸಾವಿತ್ರಿಯು ಸತ್ಯವಾನನನ್ನು ಅವನು ಅಲ್ಪಾಯುಷಿಯೆಂದು ಗೊತ್ತಾಗಿಯೂ ಮದುವೆಯಾಗಲು ಯಾಕೆ ನಿರ್ಧರಿಸುತ್ತಾಳೆಂದರೆ, ಅವರ ಸೌಂದರ್ಯಕ್ಕಾಗಿ ಅಷ್ಟೇ ಅಲ್ಲ, ಅವನ ಶೀಲಕ್ಕಾಗಿ. ಶೀಲ ಹೆಣ್ಣಿಗೆ ಮಾತ್ರ ಇರಬೇಕಾದ ಒಂದು ನಿಯಮವಲ್ಲ ಅದು ಗಂಡಿಗೂ ಅನ್ವಯಿಸುವ ನಿಯಮ ಎಂಬುದು ಈ ನಾಟಕದಲ್ಲಿ ಒಂದು ಸೆಳಕಾಗಿ ಹಾದುಹೋಗುತ್ತದೆ. (ನೋ. ಯಮನ ಸೋಲು ಪು. ೪)

ಯಮನ ಸೋಲು ನಾಟಕದಲ್ಲಿ ಪ್ರೇಮತತ್ವವನ್ನು ಪ್ರತಿಪಾದಿಸುವ ಮೂಲಕ ಕುವೆಂಪು ಜಗತ್ತಿನಲ್ಲಿ ಪ್ರೇಮವೆಂಬುದು ಸರ್ವಸ್ಥಾಯಿಯಾದರೆ ಸಾವನ್ನೂ ಪೋಸ್ಟ್‌ಪೋನು ಮಾಡಬಹುದೆಂಬ ನಿರ್ಧಾರಕ್ಕೆ ಬರುತ್ತಾರೆ. ಪ್ರೇಮವೆಂದರೆ ಗಂಡು ಹೆಣ್ಣಿನ ಪ್ರೇಮ ಮಾತ್ರವಲ್ಲ, ಯುದ್ಧ, ಹಿಂಸೆ, ಜಾತಿ

ಗರ್ವಾಂಧತೆ, ಶಾಸ್ತ್ರಸಂಮೂಢತೆಗಳಿಗೆ ಪರ್ಯಾಯವಾಗಿ ಕಟ್ಟಿ ಕೊಟ್ಟಿರುವ ಪ್ರೇಮತತ್ವವಿದು. ಆದರೆ ಮಹಾರಾತ್ರಿ ನಾಟಕಕ್ಕೆ ಬಂದರೆ ಇಲ್ಲಿ ಅದಕ್ಕಿಂತ ಭಿನ್ನವಾದ ಸಂಸಾರ ನಿರಸನ ತತ್ವ ಎದುರಾಗುತ್ತದೆ. ಬುದ್ಧನು ಸತೀ ಸುತರನ್ನು ತೊರೆಯುವ ಕ್ರಿಯೆಯು ಇಲ್ಲಿ ವೈಯಕ್ತಿಕ - ಕೌಟುಂಬಿಕ ಪ್ರೇಮವನ್ನು ಜಗತ್‌ಪ್ರೇಮವನ್ನಾಗಿ ಬೆಳೆಸುವ ಮಹಾ ಉದ್ದೇಶದ್ದಾಗಿದೆ.

೮.

ವಿದೇಶೀಯರು ರಾಜಕೀಯಾಧಿಕಾರದಿಂದ ತೊಲಗಿ ಅಲ್ಲಿ ಸ್ವದೇಶೀಯರು ಸ್ಥಾಪಿತವಾಗುವುದು ಮಾತ್ರ ಭಾರತೀಯ ಸ್ವಾತಂತ್ರ್ಯ ಹೋರಾಟದ ಉದ್ದೇಶವಾಗಿರಲಿಲ್ಲ. ಶೋಷಿಸುವ ವ್ಯಕ್ತಿ ಕರಿಯನಾದರೆ ಏನು ಬಿಳಿಯನಾದರೆ ಏನು? 'ಕತ್ತಿ ಪರದೇಸಿಯಾದರೆ ಮಾತ್ರ ನೋವೆ, ನಮ್ಮವರೆ ಹದಹಾಕಿ ತಿವಿದರದು ಹೂವೆ?' (ರೈತನ ದೃಷ್ಟಿ- ಸ. ಕಾವ್ಯ. ಸಂ. ೧, ಪು. ೩೪೯) ಎಂಬ ಪ್ರಶ್ನೆ ಕುವೆಂಪು ಅವರದ್ದು.

ಕುವೆಂಪುಗೆ ಸ್ವಾತಂತ್ರ್ಯವೆಂದರೆ ಶೋಷಣೆ, ಅಸಮಾನತೆ, ಅಶಾಂತಿ, ಅಸಂತೃಪ್ತಿ, ದುರ್ಬುದ್ಧಿಗಳು ತೊಲಗಿದ ಸರ್ವೋದಯ ಸ್ಥಿತಿ. ಕುವೆಂಪು ಸ್ವಾತಂತ್ರ್ಯ ಹೋರಾಟದ ಪರಿಕಲ್ಪನೆ ಹೀಗೆ ಸಾಮಾಜಿಕವಾದದ್ದು ಕೂಡ. ಇದು ಗಾಂಧಿಯ ಹೃದಯ ಪರಿವರ್ತನೆ, ಸರ್ವೋದಯ ತತ್ವಗಳಿಂದ ಪ್ರೇರಿತವಾದ ಪೂರ್ಣಸಿದ್ಧಿ ತತ್ವ ಮತ್ತು ಸಮಾನತೆಯನ್ನು ಸಾಧಿಸದ ಹೊರತು ಸ್ವಾತಂತ್ರ್ಯಕ್ಕೆ ಅರ್ಥವೇ ಇರುವುದಿಲ್ಲವೆಂಬ ಅಂಬೇಡ್ಕರರ ಪ್ರಜಾಪ್ರಭುತ್ವವಾದಿ ತತ್ವಗಳೆರಡೂ ನುಡಿಯಲ್ಪಟ್ಟಿರುವ (Twained) ಪರಿಕಲ್ಪನೆ.

ಬಲಿದಾನದಲ್ಲಿ ಇದನ್ನು ಕುವೆಂಪು ಬಹು ಚೆನ್ನಾಗಿ ನಾಟ್ಯೀಕರಿಸಿದ್ದಾರೆ. ಕಬ್ಬಿಣದ ಸಂಕೋಲೆಗಳಿಂದ ಬಂಧಿಸಲ್ಪಟ್ಟು ಸೆರೆಯಾಳಾದ ಭಾರತಾಂಬೆಯ ಚಿತ್ರವೊಂದನ್ನು ಇಲ್ಲಿ ತರಲಾಗಿದೆ. ಈಕೆಯ ಬಿಡುಗಡೆಗೆ ಸಾಂಕೇತಿಕವಾಗಿ ಭರತಸುತನೊಬ್ಬನೂ ಚಿತ್ರಿತನಾಗಿದ್ದಾನೆ. ಈಕೆಗೆ ತೊಡಿಸಿರುವ ಸಂಕೋಲೆಗಳು ಎರಡು ರೀತಿಯವು. ೧. ಬ್ರಿಟಿಷರ ಬಾಹ್ಯ ಸಂಕೋಲೆಗಳು ಮತ್ತು ೨. ಭಾರತೀಯ ಸೋದರರೇ ತೊಡಿಸಿರುವ ವಜ್ರೋಪಮವಾದ ಆಂತರಿಕ ಸಂಕೋಲೆಗಳು. ಹೀಗಾಗಿ ಇವಳ ಬಿಡುಗಡೆಯ ಹೋರಾಟವೂ ಇತ್ತೆರನಾದ್ದು. ೧. ವಿದೇಶೀಯರನ್ನು ಓಡಿಸುವುದು ಮತ್ತು ೨. ಪಾರಂಪಾರಿಕ ಪುರೋಹಿತಶಾಹಿ ಮತ್ತು ರಾಜಶಾಹಿಗಳಿಂದ ವಿಮುಕ್ತರಾಗುವುದು.

ವಿದೇಶೀಯರು ಈ ನೆಲದಲ್ಲಿ ಹರಿಸಿರುವ ರಕ್ತ ಒಂದು 'ಹಸುಗೊರಸು ನೀರಿ'ನಷ್ಟು - ಒಂದು ಗೋಪಾದದ ಹೆಜ್ಜೆಯಳತೆಯಷ್ಟು ಮಾತ್ರವಾದರೆ ನಮ್ಮ ಸೋದರರೇ ಮತವೈರದಿಂದ ಹರಿಸಿದ ರಕ್ತ ಸಾಗರೋಪಮವಾದದ್ದು. (ನೋಡಿ ಬಲಿದಾನ. ಪು. ೧೭) ದೇಶಮಾತೆಯ ಸಂಕಲೆಗಳ ಕೀಲಿಕೈ ಮುಳುಗಿರುವುದು ಈ ಸಾಗರೋಪಮ ರಕ್ತಪ್ರವಾಹದಲ್ಲೇ. ಭರತಸುತ ತನ್ನನ್ನು ಬಲಿದಾನ ನೀಡಬೇಕಾಗಿರುವುದು ಈ ಆಂತರಿಕ ಬಂಧನಗಳಿಂದ ಬಿಡಿಸಬಲ್ಲ ಕೀಲಿಕೈ ತರಲಿಕ್ಕಾಗಿಯೇ.

ಕುವೆಂಪುಗೆ ತಾತ್ವಿಕವಾಗಿ ಸ್ವಾತಂತ್ರ್ಯ ಹೋರಾಟ ಮುಗಿದು ಹೋದ ಕ್ರಿಯೆಯಲ್ಲ. 'ಬಲಿಪರಂಪರೆ ವೇಳ್ಕುಮೀ ಸ್ವಾತಂತ್ರ್ಯ ಸಾಧನೆಗೆ, ಪಡೆಯೆ ಬಲಿದಾನಂ, ಪಡೆದುದಂ ಪಿಡಿಯೆ ಬಲಿದಾನಂ, ಪಿಡಿದುದಂ ನಡೆಯೆ ಬಲಿದಾನಂ, ಬಲಿದಾನಕುಂಟೆ ಕೊನೆ? ಬಲಿ ಪರಂಪರೆಯಲ್ತೆ ಸ್ವಾತಂತ್ರ್ಯ ಜೀವನಂ!' (ಬಲಿದಾನ ಪು.೧೫) ಹೀಗೆ ಸ್ವಾತಂತ್ರ್ಯ ಜೀವನ ನಡೆಸುವುದೆಂದರೆ ಅದು ಇಂದಿಗೂ ಎಂದಿಗೂ ಮುಗಿಯದ ನಿತ್ಯ ನಿರಂತರ ಹೋರಾಟದ ಕ್ರಿಯೆ.

೯.

ಉದ್ದೇಶಿತ ತಾತ್ವಿಕ ಆಶಯಗಳಿಗೆ ಸಾಹಿತ್ಯಕ ಅಭಿವ್ಯಕ್ತಿಯನ್ನು ಪ್ರಜ್ಞಾಪೂರ್ವಕವಾಗಿ ಬಳಸುವ ಮೂಲಕ ಕುವೆಂಪು 'ಸಹಜ ಬದುಕಿನ ಚಿತ್ರಣದ ಮೂಲಕ ತಾತ್ವಿಕತೆಯೊಂದನ್ನು ಹುಟ್ಟಿಸುವ ಸಾಹಿತ್ಯ ಕೃತಿಯೇ ಶ್ರೇಷ್ಠವಾದದ್ದು' ಎಂಬ ನಮ್ಮ ವಿಮರ್ಶಾಶಾಸ್ತ್ರೀಯ ಮಾನದಂಡವನ್ನು ಛಿದ್ರಿಸಿದ್ದಾರೆ. ಅಥವಾ ಅಂಥ ವಿಪಕ್ಷವೊಂದನ್ನಂತೂ ನಿರ್ಮಿಸಿದ್ದಾರೆ. ನಮ್ಮ ಸಹಜ ಬದುಕೇ ಇನ್ನಾರದೋ ಹುನ್ನಾರದಿಂದ ನಿರ್ದೇಶಿತವಾಗುತ್ತಿದ್ದರೆ ಅಂಥಾ ಸಹಜ ಬದುಕನ್ನು ಯಾವ ಸಂಭ್ರಮದಿಂದ ಚಿತ್ರಿಸುವುದು? (ಇಂಥಾ ಚಿತ್ರಗಳು ಬೇಕೆನ್ನುವವರು ಬೇಕಾದರೆ ಅವರ ಕಾದಂಬರಿಗಳಿಗೆ ಹೋಗಲಿ) ಸಾಹಿತ್ಯ ಕಥನಗಳು ಯಾರದೋ ಹುನ್ನಾರದ ಸಾಧನ ಸಾಮಗ್ರಿಯಾಗಿ ಬಳಕೆಯಾಗುತ್ತಿದ್ದರೆ ಕುವೆಂಪು ರೀತಿಯ ಛಿದ್ರೀಕರಣವೇ ಸರಿಮಾರ್ಗವಲ್ಲವೇ? ಗತದ ತಪ್ಪುಗಳನ್ನು ತಿದ್ದಿಕೊಳ್ಳದೆ ವರ್ತಮಾನಕ್ಕೆ ಸಜ್ಜುಗೊಳ್ಳುವುದಾದರೂ ಹೇಗೆ?

ಕುವೆಂಪು ನಾಟಕಗಳು ಪ್ರತಿಮಾ ಮಾರ್ಗವನ್ನು ಹಿಡಿದಿದ್ದಾಗ್ಯೂ ವಿಮರ್ಶಕನೆಂಬ ಮಧ್ಯವರ್ತಿಯನ್ನು ಸಾಧ್ಯವಾದಷ್ಟು ದೂರವಿಡಲು ಯತ್ನಿಸುತ್ತವೆ. (ಆದರೆ ಇದು ಎಷ್ಟಕ್ಕೂ ಸಾಧ್ಯವಾಗದ ಮಾತು ಎಂಬುದು ಬೇರೆ ಬಿಡಿ) ಪುರಾಣ ಪ್ರತಿಮೆಗಳ ಆಯ್ಕೆಯ ಹಿಂದೆ ಬಹುಶಃ ಈ ವಿಮರ್ಶಕ ಮಧ್ಯವರ್ತಿಯನ್ನು ದೂರವಿಡುವ ಉದ್ದೇಶವೂ ಇರಬಹುದು.

ನಿತ್ಯ ಪರಿವರ್ತನೆ/ ಪರಿಷ್ಕರಣೆಯ ತತ್ವ ಇವರ ಬಹುಪಾಲು ನಾಟಕಗಳಲ್ಲಿ ಸ್ಥಾಯಿಯಾಗಿದೆ. ಇದರ ಎಲ್ಲ ನಾಟಕಗಳಲ್ಲೂ ಪರಿಷ್ಕರಣೆ, ಬಂಡಾಯ ಪ್ರಜ್ಞೆ, ಕಾಯಕ ಸಿದ್ಧಾಂತ, ಅಲಕ್ಷಿತ ಜನ ಸಮುದಾಯದ ಪರವಾದ ಅಪವರ್ಗೀಕರಣ ಪ್ರಜ್ಞೆಗಳು ನಿರಂತರವಾಗಿ ಪ್ರಕಟವಾಗಿವೆಯಾದರೂ ಪರಿವರ್ತನೆ ಇದರ ಪರಮ ಮೌಲ್ಯ. ಚರಿತ್ರೆಯ ಚಕ್ರೀಯ ಗತಿ - ನಿತ್ಯ ಗತಿಶೀಲತೆ ಇವರೆಲ್ಲ ನಾಟಕಗಳ ಅಂತಃ ಪ್ರಜ್ಞೆ.

ಕುವೆಂಪು ಇಂದು ನಾವು ಎತ್ತಬಹುದಾದ ಅನೇಕ ಪ್ರಶ್ನೆಗಳನ್ನು ಅಂದೇ ಎತ್ತಿದ್ದಾರೆ. ಅಲಕ್ಷಿತ ಜನಸಮುದಾಯದ ಸಮಷ್ಟಿ ಪ್ರಜ್ಞೆಯಾಗಿ ಬಾಳಿ, ಸಂತ/ಋಷಿ ವ್ಯಕ್ತಿತ್ವವಾಗಿ ಅರಳಿದ್ದಾರೆ. ನಮ್ಮ ಆಂತರಿಕ ವಸಾಹತುಶಾಹಿಗೆ ಸರಿಯಾದ ತಿರುಗೇಟು ನೀಡಿ ಬಗ್ಗುಬಡಿದಿದ್ದಾರೆ. (ಆದರೆ ಈ 'ಹಿಂದೂ' ಎಂಬ ರೂಢಿರಕ್ಕಸ ಇದೆಯಲ್ಲ ಇದೊಂಥರಾ ಅಗಸ್ತ್ಯಗರ್ಭ ಇದ್ದ ಹಾಗೆ ಜೀರ್ಣಿಸಿಕೊಂಡುಬಿಡುತ್ತದೆ.)

ಯಾವುದೇ ಸಾಹಿತ್ಯ ವ್ಯಕ್ತಿತ್ವವು ಅದು ಸೃಷ್ಟಿಯಾದ ಕಾಲ ಮತ್ತು ಅದು ಓದಿಗೆ ಗುರಿಯಾಗುವ ಕಾಲಗಳೆರಡರಲ್ಲೂ ಬಾಳಿಗೆ ಗುರಿಯಾಗಬೇಕು. ಹಾಗಾದಾಗಲೇ ಅದಕ್ಕೊಂದು ಸಾರ್ಥಕ್ಯ ಗೆಲುವು. ಆದರೆ ಇವರು ಸೋಸಿ ಕಟ್ಟಿಕೊಟ್ಟಿರುವ ಪರಂಪರೆಯ ವಿವೇಕ ಯಾರ ಪರಂಪರೆಯ ವಿವೇಕ ? ಅಥವಾ ಕುವೆಂಪು ಯಾವ ಪರಂಪರೆಯ ಪ್ರತಿಪಾದಕರು ? ಎಂಬುದು ಇಂದು ಇನ್ನೂ ಉತ್ತರಿಸಿಕೊಳ್ಳಬೇಕಾದ ಪ್ರಶ್ನೆಯಾಗಿದೆ. (ಆದರೆ ಒಂದಂತೂ ನಿಜ. ಕುವೆಂಪುರವರನ್ನು ಹೇಗೇ ಆಗಲಿ ಪ್ರಶ್ನೆ ಮಾಡಿದರೆ - ಒದೆ ತಿನ್ನಬೇಕಾಗುತ್ತದೆ ಎಂಬಂತಹ ಒಂದು ವರ್ಚಸ್ಸಂತೂ ನಿರ್ಮಾಣವಾಗಿದೆ. ಈ ವರ್ಚಸ್ಸು ಕೂಡ ಸುಮ್ಮ ಸುಮ್ಮನೆ ನಿರ್ಮಾಣವಾಗುವುದಿಲ್ಲ) □

ಸಂವಾದ



ಚಂದಾದಾರರಲ್ಲಿ ಮನವಿ

'ಸಂವಾದ' ಇನ್ನು ಮುಂದೆ ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ- ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

-ವ್ಯವಸ್ಥಾಪಕರು

ಅರಿವು

ರಾಜಕೀಯವಾಗಿ ಎಲ್ಲ ರಾಜಕೀಯ ಪಕ್ಷಗಳು ದಲಿತರನ್ನು ವೋಟ್ ಬ್ಯಾಂಕ್ ರಾಜಕಾರಣದ ದೃಷ್ಟಿಯಿಂದಲೇ ನೋಡುತ್ತವೆ. ಇಂತಹ ರಾಜಕೀಯ ಪಕ್ಷಗಳ ಮುಖೇನ ದಲಿತರ ಹಿತವನ್ನು ಕಾಯಬೇಕಾದರೆ ದಲಿತ ಸಂಘಟನೆ ಮೊದಲು ಬಲಗೊಳ್ಳಬೇಕು. ಸಂಘಟನೆಗಳಲ್ಲಿನ ವ್ಯಕ್ತಿಗಳು ಸಮರ್ಪಣಾ ಭಾವದಿಂದ ಹಾಗೂ ನಿಸ್ಪೃಹತೆಯಿಂದ ದಲಿತರ ಏಳಿಗೆಗೆ ದುಡಿಯ ಬೇಕು. ಎಡಪಂಥೀಯ ವಾಗಿರಲಿ ಅಥವಾ ಬಲಪಂಥೀಯವಾಗಿರಲಿ - ಅವಕಾಶವಾದಿ ರಾಜಕಾರಣವನ್ನು ಬಿಟ್ಟು ದಲಿತರ ಬಗೆಗಿನ ತನ್ನ ಸಂಕಲ್ಪವನ್ನು ತತ್ವಬದ್ಧತೆಯನ್ನು ಲೋಪ ವೆಸಗದೆ ನಿರ್ವಹಿಸಿದರೆ ದಲಿತರ ಹಿತವನ್ನು ನಿಶ್ಚಿತವಾಗಿ ರಕ್ಷಿಸಬಹುದು.

○ ರವಿ

ದಲಿತರು ಮತ್ತು ವರ್ತಮಾನದ ತುರ್ತುಗಳು

ಅಸಮಾನತೆ ಎಂಬುದು ಅದು ರಾಜಕೀಯವಾಗಿರಬಹುದು, ಧಾರ್ಮಿಕವಾಗಿರಬಹುದು, ಆರ್ಥಿಕವಾಗಿರಬಹುದು ಅಥವಾ ಸಾಮಾಜಿಕವಾಗಿರಬಹುದು - ಎಲ್ಲಿಯವರೆಗೆ ಸಮಾಜದಲ್ಲಿ ಅಸ್ತಿತ್ವದಲ್ಲಿರುವುದೊ ಅಲ್ಲಿಯವರೆಗೆ ಅಂಬೇಡ್ಕರ್ ಮತ್ತೆ ಮತ್ತೆ ಪ್ರಸ್ತುತರಾಗುತ್ತಾರೆ. ಇಲ್ಲಿ ಒಂದು ಅಂಶವನ್ನು ಮನದಟ್ಟು ಮಾಡಿಕೊಳ್ಳಬೇಕು. ಅಂಬೇಡ್ಕರರ ಚಿಂತನೆಗಳ ಮಹತ್ವವನ್ನು ಕೇವಲ ದಲಿತರಿಗೆ ಮಾತ್ರ ಅನ್ವಯಿಸಿ ನೋಡಲಾಗದು. ಸಮಾಜದಲ್ಲಿ ಅಸಮಾನತೆಯಿಂದ, ಸಾಮಾಜಿಕ ನ್ಯಾಯದಿಂದ ವಂಚಿಸಲ್ಪಟ್ಟಿರುವ ಯಾವುದೇ ವ್ಯಕ್ತಿ ಹಾಗೂ ಸಮುದಾಯಕ್ಕೆ ಅವು ಭರವಸೆಯನ್ನು ಕೊಡುತ್ತವೆ, ಹೊಸದಿಕ್ಕನ್ನು ಸೂಚಿಸುತ್ತವೆ. ಆದ್ದರಿಂದ ಅಂಬೇಡ್ಕರರ ಚಿಂತನೆಗಳಿಂದ ದಲಿತರಿಗೆ ಮಾತ್ರ ವಿಮೋಚನೆ ಎಂಬ ಮಾತನ್ನು ಒಪ್ಪಲಾಗದು. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸಾಮಾಜಿಕವಾದಂತಹ ಶೋಷಣೆ, ಅನ್ಯಾಯ, ಅಸಮಾನತೆಗಳಿಂದ ನರಳುತ್ತಿರುವವರು ದಲಿತರೇ ಆದುದರಿಂದ ಹಾಗೂ ಮುಖ್ಯವಾಗಿ ಅಂಬೇಡ್ಕರ್ ಚಿಂತನೆಗಳ ಸಂದರ್ಭದ ಚಾರಿತ್ರಿಕ ಒತ್ತಡವಿದ್ದದ್ದು ದಲಿತರ ಕುರಿತಾಗಿಯೇ ಇದ್ದುದರಿಂದ, ಸಮಷ್ಟಿಬದ್ಧವಾದ ಇತರ ಚಿಂತನೆಗಳೂ ಸೇರಿದಂತೆ, ಅಂಬೇಡ್ಕರರ ಚಿಂತನೆಗಳು ದಲಿತರ ವಿಮೋಚನೆಗೆ ಹೆಚ್ಚು ಕಾಳಜಿ ವಹಿಸುತ್ತವೆ.



ಅಂಬೇಡ್ಕರ್ ವಿಶ್ಲೇಷಿಸುವಂತೆ ಸಾಮಾಜಿಕವಾಗಿ ಜಾತಿವ್ಯವಸ್ಥೆಯ ರಚನೆಯ ವಿನ್ಯಾಸ ಹೇಗಿದೆಯೆಂದರೆ, ಪ್ರತಿಜಾತಿಯೂ ಶ್ರೇಣೀಕರಣದ ನಿರ್ದಿಷ್ಟ ಹಂತದಲ್ಲಿದ್ದು ಪ್ರತಿ ಜಾತಿಯೂ ಕೂಡ ತನ್ನಿಂದ ಕೆಳಗಿರುವ ಜಾತಿಯನ್ನು ಹೀನಾಯವಾಗಿ ನಡೆಸಿಕೊಳ್ಳುತ್ತದೆ ಹಾಗೂ ತನ್ನಿಂದ ಮೇಲಿನ ಜಾತಿಯನ್ನು ಓಲೈಸುತ್ತದೆ. ಜಾತಿವ್ಯವಸ್ಥೆಯ ಈ ಜಟಿಲತೆಯ ಕಾರಣದಿಂದಾಗಿ ಪ್ರತಿಜಾತಿಯೂ - ಅದು ಮೇಲ್ಜಾತಿಯಾಗಿರಲಿ, ಹಿಂದುಳಿದ ಜಾತಿಗಳಾಗಿರಲಿ, ಅಥವಾ ದಲಿತ ಜಾತಿಗಳಾಗಲಿ ತಮ್ಮಲ್ಲೇ ಸ್ತರೀಕರಣಗಳನ್ನೇರ್ಪಡಿಸಿಕೊಂಡು ತರತಮಗಳಲ್ಲಿ ತೊಡಗುತ್ತವೆ. ದಲಿತರಲ್ಲಿ ಎಡ-ಬಲಗಳೆಂಬ ವಿಭಾಗದ ಜೊತೆಗೆಯೇ, ಈ ಪ್ರತ್ಯೇಕ ವಿಭಾಗಗಳಲ್ಲೂ ಕೂಡ ನೂರಾರು ಉಪಜಾತಿಗಳಿರುವುದನ್ನು ಗಮನಿಸಬೇಕು. ಈ ಜಾತಿಗಳು ಕೂಡ ಮೇಲೆ ತಿಳಿಸಿದ ರಾಚನಿಕ ವಿನ್ಯಾಸವನ್ನು ಹೊಂದಿರುವಂಥವೇ. ಮುಖ್ಯವಾಗಿ ಈ ಪರಿಸ್ಥಿತಿ ದಲಿತರನ್ನು ಒಂದು ಸಮುದಾಯವಾಗಿ ಯೋಚಿಸಲು ಬಿಡುತ್ತಿಲ್ಲ. ಇದರ ಜೊತೆಗೆ ಒಳಮೀಸಲಾತಿ ಕುರಿತಂತಹ ರಾಜಕೀಯ, ಸಂಘಟನೆಯಲ್ಲಿನ ವಿಫಲತೆ, ಕೆಲವರೇ (ಮೇಲ್ವರ್ಗದ ದಲಿತರು) ಸವಲತ್ತುಗಳನ್ನು ಪಡೆಯಲು ಯಶಸ್ವಿಯಾಗಿದ್ದು ಇನ್ನಿತರರು ಯಥಾಸ್ಥಿತಿಯಲ್ಲೇ ಇರುವುದು ಮುಂತಾದ ಅಂಶಗಳು ದಲಿತರನ್ನು ಒಂದು ನೆಲೆಯಲ್ಲಿ ಯೋಚಿಸಲು ಬಿಡುತ್ತಿಲ್ಲ.

ರಾಜಕೀಯವಾಗಿ ಎಲ್ಲ ರಾಜಕೀಯ ಪಕ್ಷಗಳು ದಲಿತರನ್ನು ವೋಟ್ ಬ್ಯಾಂಕ್ ರಾಜಕಾರಣದ ದೃಷ್ಟಿಯಿಂದಲೇ ನೋಡುತ್ತವೆ. ಜಾತಿವಾದಿ ವ್ಯವಸ್ಥೆಯಿಂದಲೇ ರೂಪುಪಡೆದ ಈ ರಾಜಕೀಯ ಪಕ್ಷಗಳು ಪ್ರಚ್ಛನ್ನ ಜಾತಿವಾದಿಯೇ ಆಗಿರುತ್ತವೆ. ಆದರಿಂದಾಗಿ ಇಂತಹ ರಾಜಕೀಯ ಪಕ್ಷಗಳ ಮುಖೇನ ದಲಿತರ ಹಿತವನ್ನು ಕಾಯಬೇಕಾದರೆ ದಲಿತ ಸಂಘಟನೆ ಮೊದಲು ಬಲಗೊಳ್ಳಬೇಕು. ಸಂಘಟನೆಗಳಲ್ಲಿನ ವ್ಯಕ್ತಿಗಳು ಸಮರ್ಪಣಾ ಭಾವದಿಂದ ಹಾಗೂ ನಿಸ್ಪೃಹತೆಯಿಂದ ದಲಿತರ ಏಳಿಗೆಗೆ ದುಡಿಯಬೇಕು. ದಲಿತರ ಮತ್ತು ದಲಿತಪರವಾದ ಪಕ್ಷ ಎಂಬ ಹಣೆಪಟ್ಟಿ ಅಂಟಿಸಿಕೊಂಡಿರುವ ಬಿ.ಎಸ್.ಪಿ. ತನ್ನ ಸೈದ್ಧಾಂತಿಕ ಬದ್ಧತೆಯನ್ನು ಉಳಿಸಿಕೊಂಡರೆ ಮಾತ್ರವೇ ಅದು ದಲಿತರ ಹಿತಕಾಯಬಲ್ಲುದು. ಒಂದೊಮ್ಮೆ ಅದು ಇತರ ಪಕ್ಷಗಳೊಂದಿಗೆ ಅದು ಎಡಪಂಥೀಯವಾಗಿರಲಿ ಅಥವಾ ಬಲಪಂಥೀಯವಾಗಿರಲಿ - ಮೈತ್ರಿ ಮಾಡಿಕೊಂಡರೂ ಸಹ, ಅದು ಅವಕಾಶವಾದಿ ರಾಜಕಾರಣವನ್ನು ಬಿಟ್ಟು ದಲಿತರ ಬಗೆಗಿನ ತನ್ನ ಸಂಕಲ್ಪವನ್ನು ತತ್ವಬದ್ಧತೆಯನ್ನು ಲೋಪವೆಸಗದೆ ನಿರ್ವಹಿಸಿದರೆ ದಲಿತರ ಹಿತವನ್ನು ಅದು ನಿಶ್ಚಿತವಾಗಿ ರಕ್ಷಿಸಬಲ್ಲುದು. ಇನ್ನು ಧಾರ್ಮಿಕವಾಗಿ ದಲಿತರ ನಿಲುವು ಏನಾಗಿರಬೇಕು ಎಂಬುದು ಸಮಕಾಲೀನ ದಲಿತ ಸಾಂಸ್ಕೃತಿಕ ಜಗತ್ತಿನಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಮುಖ್ಯವಾದ ಪ್ರಶ್ನೆಯಾಗಿದೆ. ದಲಿತರ ಧಾರ್ಮಿಕ ಆಯ್ಕೆಯ ಪ್ರಶ್ನೆ ತೀರಾ ವೈಯಕ್ತಿಕವಾದುದು. ಅದನ್ನು ಬಹುಶಃ ವಸ್ತುನಿಷ್ಠವಾಗಿ ನೋಡಲು ಬಾರದು. ಆದರೆ ಪ್ರತಿಭಟನೆಯ ಹಿನ್ನೆಲೆಯಲ್ಲಿ ಈ ಪ್ರಶ್ನೆಗೆ ಅರ್ಥವಿದೆ. ಇದಕ್ಕೆ ಪರವಾಗಿ ಮತ್ತು ವಿರೋಧವಾಗಿ ಎರಡೂ ನೆಲೆಯಲ್ಲಿ ಉತ್ತರ ಕಂಡುಕೊಳ್ಳಲು ಸಾಧ್ಯವಿದೆ. ಅಂಬೇಡ್ಕರರ ದೃಷ್ಟಾಂತವನ್ನು ನಾವು ಎದುರಿಗಿಟ್ಟುಕೊಂಡೇ ಈ ಪ್ರಶ್ನೆಯ ಬಗೆಗೆ ಚರ್ಚಿಸಲು ಸಾಧ್ಯ.

ಬಿಡಿ ಜನಾಂಗವಾಗಿದ್ದ ದಲಿತರು ಒಂದು ಕಾಲದ ಬೌದ್ಧರೆಂದು ತಮ್ಮ ಆಳವಾದ ಸಂಶೋಧನೆಯ ಮುಖೇನ ಕಂಡುಕೊಂಡ ಅಂಬೇಡ್ಕರ್, ಬೌದ್ಧಧರ್ಮಕ್ಕೆ ಮತಾಂತರಗೊಳ್ಳುವ ಮೂಲಕ ತಮ್ಮ ಅಸ್ತಿತ್ವವನ್ನು ಕಂಡುಕೊಂಡರು. ಜೊತೆಗೆಯೇ ಹಿಂದೂ ಧರ್ಮದ ವಿರುದ್ಧ ತಮ್ಮ ಪ್ರತಿಭಟನೆಯನ್ನು ದಾಖಲಿಸಿದರು. ಇಲ್ಲಿ ನಾವು ಮುಖ್ಯವಾಗಿ ಅಂಬೇಡ್ಕರರ ಆಂತರಿಕ ಪ್ರಾಮಾಣಿಕತೆಯನ್ನು ತಾತ್ವಿಕ ಸ್ಪಷ್ಟತೆಯನ್ನು ಗಮನಿಸಬೇಕು. ಮತಾಂತರವೆಂಬ ಕ್ರಿಯೆ ಸರಳವಾದುದಾದರೂ, ಅದು ವ್ಯಕ್ತಿಯ ಅಂತರಂಗದಲ್ಲಿ ಉಂಟುಮಾಡುವ ತಳಮಳಗಳು ಸಂಕೀರ್ಣವಾದುದು. ಮತಾಂತರಗೊಂಡ ವ್ಯಕ್ತಿ ತನ್ನ ನಿಲುವಿನ ಬಗ್ಗೆ ಬಹಳ ಸ್ಪಷ್ಟವಾಗಿರಬೇಕು. ಇಲ್ಲದಿದ್ದರೆ ಹುಟ್ಟಿನಿಂದ ತಾನು ಪಡೆದ ಮತದ ನಡಾವಳಿಗಳಿಗೂ, ಬುದ್ಧಿವಿವೇಚನೆಯಿಂದ ತಾನು ಅಪ್ಪಿದ ಮತದ

ನಡಾವಳಿಗಳ ಅನುಸರಣೆಯ ವಿಷಯಗಳ ನಡುವೆ ತಿಕ್ಕಾಟವೇರ್ಪಟ್ಟುವ್ಯಕ್ತಿ ಮಾನಸಿಕ ಸ್ಥೂರ್ಘರ್ಷದಲ್ಲಿ ತೊಳಲುವ ಸಂಭವವಿದೆ.

ಆದರೆ ಬಹಳ ಸ್ಪಷ್ಟವಾಗಿ ದಲಿತರು ಹಿಂದೂ ಸಮಾಜದೊಳಗೆ ಗೌರವಯುತವಾದ ಅಸ್ತಿತ್ವ ಪಡೆಯಲು ಸದ್ಯದ ಪರಿಸ್ಥಿತಿಯಲ್ಲಂತೂ ಸಾಧ್ಯವಿಲ್ಲ. ಇದು ನಿಶ್ಚಿತವಾದದ್ದು. ಆದರೆ ಹಾಗೆಂದು ಮತಾಂತರವೇ ಪರಿಹಾರವೇ ? ಮತಾಂತರಗೊಂಡ ದಲಿತರು ಅಂದರೆ ನವಬೌದ್ಧರು, ದಲಿತ ಕ್ರೈಸ್ತರು, ದಲಿತ ಮುಸ್ಲಿಮರು ಮುಂತಾದವರು ಮತಾಂತರದ ನಂತರ ತಮ್ಮ ಸಮಸ್ಯೆಗಳಿಂದ ಪಾರಾಗಿರುವರೇ ? ಮತಾಂತರಿತ ದಲಿತರಿಗೂ - ಮೂಲ ಮತದವರಿಗೂ ಇರುವ ಸಂಬಂಧವೆಂಥದ್ದು ? ಮೊದಲಾದವುಗಳನ್ನು ಗಮನಿಸಬೇಕು. ದುರದೃಷ್ಟವಶಾತ್ ಮತಾಂತರಗೊಂಡ ದಲಿತರು ಕೂಡ ಬಹಳಷ್ಟು ಮಟ್ಟಿಗೆ ತಮ್ಮ ಸಮಸ್ಯೆಗಳಿಂದ ಹೊರಬಂದಿಲ್ಲ. ಮತ್ತೊಂದು ಅಂಶ, ಮತಾಂತರಗೊಂಡ ದಲಿತರು ಕಾನೂನಿನ ಚೌಕಟ್ಟಿನಡಿಯಲ್ಲಿ ಮೀಸಲಾತಿಗೆ ಅರ್ಹರಲ್ಲ. ಆದರೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ದಲಿತರಿಗೂ, ಮತಾಂತರಿತ ದಲಿತರಿಗೂ ಅಂತಹ ಭಿನ್ನತೆಯೇನಿಲ್ಲವಾದ್ದರಿಂದ ಮತಾಂತರಗೊಂಡ ದಲಿತರಿಗೂ ಕಾನೂನಿನಡಿಯಲ್ಲಿ ಮೀಸಲಾತಿ ಸೌಲಭ್ಯ ಸಿಗಬೇಕು. ಕೊನೆ ಪಕ್ಷ ಪ್ರತಿಭಟನೆಯ ಉದ್ದೇಶದಿಂದ ಮತಾಂತರಗೊಂಡ ದಲಿತರಿಗೆ ಇದರಿಂದ ವಂಚಿತವಾಗುವ ಸಾಮಾಜಿಕ ಸವಲತ್ತುಗಳು ತಪ್ಪುವುದಾದರೂ ನಿಲ್ಲುತ್ತದೆ.

ಇಲ್ಲೇ ಮೀಸಲಾತಿ ಸೌಲಭ್ಯದ ಬಗ್ಗೆ ವಿವೇಚಿಸಬಹುದು. ಇದು ಬಹುಮಟ್ಟಿಗೆ ವರ್ಗಕ್ಕೆ ಸಂಬಂಧಿಸಿದ ವಿಷಯವಾದರೂ, ಜಾತಿ ಮತ್ತು ವರ್ಗಗಳು ಬಿಡಿಸಲಾರದ ಸಂಕೀರ್ಣವಾಗಿರುವ ಭಾರತದಂತಹ ದೇಶದಲ್ಲಿ ಇದು ಬಹು ತೊಡಕಿನ ವಿಷಯವೆ. ಇಂದೂ ಬಹಳಷ್ಟು ದಲಿತರಿಗೆ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾದಂತಹ ಸೌಲಭ್ಯಗಳು ಸರಿಯಾಗಿ ಮತ್ತು ಸಮಾನವಾಗಿ ದೊರೆಯುತ್ತಿಲ್ಲ. ಸಹಜವಾಗಿಯೇ ಇದರಿಂದ ದಲಿತರು ಸ್ಪರ್ಧೆ ನೀಡುವಲ್ಲಿ ವಿಫಲರಾಗುವ ಸಾಧ್ಯತೆ ಬಹಳಷ್ಟಿರುತ್ತದೆ. ಇತ್ತೀಚಿನ ಬಹಳಷ್ಟು ದಲಿತ ಕುಟುಂಬಗಳಲ್ಲಿ ಕೂಡ ಕೆಲವೊಮ್ಮೆ ಈಗ ತಾನೇ ಮೊದಲ ತಲೆಮಾರಿನ ವಿದ್ಯಾವಂತರು ರೂಪುಗೊಳ್ಳುತ್ತಿರುವ ಪರಿಸ್ಥಿತಿಯಿದೆ. ಹೀಗಿರುವಾಗ ಮಾರ್ಗದರ್ಶನದ ಕೊರತೆ, ಹಣಕಾಸಿನ ಸಮಸ್ಯೆ, ಸಾಮಾಜಿಕವಾದ ಕೀಳರಿಮೆ ಮುಂತಾದ ತೊಂದರೆಗಳನ್ನು ಅವರು ಎದುರಿಸಬೇಕಾಗುತ್ತದೆ. ಈ ಹಂತದಲ್ಲಿ ಅವರಿಗೆ ಮೀಸಲಾತಿ ಸೌಲಭ್ಯದ ಅವಶ್ಯಕತೆ ಇದ್ದೇ ಇದೆ. ಹಾಗೆಂದು ಭವಿಷ್ಯದಲ್ಲಿ ದಲಿತರ ಪ್ರಗತಿಗೆ ಮೀಸಲಾತಿಯೊಂದೆ ಪರ್ಯಾಯವೇನಲ್ಲ. ಬದಲಾಗಿ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯವಾದಂತಹ ಸೌಲಭ್ಯಗಳು ಸಮಾನವಾಗಿ ದಲಿತರಿಗೆ ದೊರೆಯುವಂತಹ ಪರಿಸ್ಥಿತಿ ಒದಗಿದರೆ ಅವರು ಕೂಡ ಸಹಜವಾಗಿ ತಮ್ಮ ನೈಪುಣ್ಯತೆಯಿಂದ ಸ್ಪರ್ಧೆ ನೀಡುವಲ್ಲಿ ಮುಂಬರಿಯುತ್ತಾರೆ.

ಇಂದು ಜಾಗತೀಕರಣದ ಪ್ರಶ್ನೆ ನಮ್ಮೆದುರು ಥಾಳಾಗಿ ನಿಂತಿದೆ. ದಲಿತರು ಜಾಗತೀಕರಣಕ್ಕೆ ಹೇಗೆ ಮುಖಾಮುಖಿಯಾಗಬೇಕೆಂಬ ಪ್ರಶ್ನೆ ಇಂದು ಉದ್ಭವಿಸಿದೆ. ಜಾಗತೀಕರಣ ಮತ್ತು ದಲಿತ ಇವೆರಡರ ನಡುವಿನ ಸಂಬಂಧ ಬಹಳ ಜಟಿಲವಾದದ್ದು. ಜಾಗತೀಕರಣ ತನ್ನೆಲ್ಲಾ ಮುಕ್ತತೆ ಹಾಗೂ ಉದಾರತೆಯ ಬಾಗಿಲುಗಳನ್ನು ಒಮ್ಮೆಲೇ - ದಲಿತರನ್ನು ಒಳಗೊಂಡಂತೆ - ಎಲ್ಲರಿಗೂ ಸಮಾನವಾಗಿ ತೆರೆದಿಡುತ್ತದೆ

ದಲಿತರು ಜಾಗತೀಕರಣದ ಮುಕ್ತವಾದ ಮತ್ತು ಅನಂತವಾದ ಅವಕಾಶಗಳನ್ನು ಸ್ಪರ್ಧಾತ್ಮಕವಾಗಿ ಬಳಸಿಕೊಳ್ಳುತ್ತಲೇ ತಮ್ಮ ಬಿಡುಗಡೆಯ ಮಾರ್ಗವನ್ನು ಹುಡುಕಬೇಕಿದೆ. ಮನುಷ್ಯ ಸಂಬಂಧಗಳು, ಪ್ರಕೃತಿ, ಸಂಸ್ಕೃತಿ ಇವೆಲ್ಲವನ್ನೂ ಅದು ಲಾಭದ ದೃಷ್ಟಿಯಿಂದ ಮಾತ್ರ ಪರಿಗಣಿಸುತ್ತದೆ. ತಮ್ಮ ನೆಲ ಮತ್ತು ಸಂಸ್ಕೃತಿಯ ಎಲ್ಲಾ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ, ಬಹುಜನರ, ಬಹುಮುಖಿ ಸಂಸ್ಕೃತಿಗಳನ್ನು ನಾಶಗೊಳಿಸುವ ಜಾಗತೀಕರಣವನ್ನು ಸಾಂಸ್ಕೃತಿಕ ಪ್ರತಿರೋಧ ಅಥವಾ ಭಿನ್ನತೆಯಿಂದಲೇ ಎದುರಿಸಬೇಕು.

ಎಂಬ ವಾದವಿದೆ. ಒಂದು ನೆಲೆಯಲ್ಲಿ ಇದನ್ನು ಒಪ್ಪಬಹುದಾದರೂ ಸಹ ಇದರ ಮತ್ತೊಂದು ನೆಲೆಯನ್ನೂ ನಾವು ಲಕ್ಷಿಸಬೇಕು. ಜಾಗತೀಕರಣವು ಪ್ರಬಲವಾದ ಖಾಸಗೀಕರಣಕ್ಕೆ ಚಾಲನೆಯೊದಗಿಸುತ್ತದೆ. ಜಾತಿ ಹಾಗೂ ವರ್ಗಗಳು ಒಂದನ್ನೊಂದು ಬಿಡಿಸಲಾಗದಂತೆ ಸಂಕೀರ್ಣವಾಗಿ ಹೆಣೆಯಲ್ಪಟ್ಟಿರುವ ಇಂಡಿಯಾದಂತಹ ದೇಶದಲ್ಲಿ ಇದು ಬೀರುವ ಪರಿಣಾಮವನ್ನು ಪರಿಭಾವಿಸಬೇಕು.

ಒಂದೆಡೆ ಜಾಗತೀಕರಣದ ಲಾಭಗಳು ಜಾತಿ ಜರಡಿಯಲ್ಲಿ ಹಾದು ಬರುತ್ತವೆ. ಮತ್ತೊಂದೆಡೆ ಜಾಗತೀಕರಣದಿಂದ ಉಂಟಾಗುವ ಕೇಂದ್ರೀಕೃತ ಖಾಸಗೀಕರಣವು ಮತ್ತೊಮ್ಮೆ ಈಗಾಗಲೇ ಅಸ್ತಿತ್ವದಲ್ಲಿರುವ ಮೇಲ್ವರ್ಗೀಯ / ಮೇಲ್ಜಾತೀಯ ಪ್ರಾಬಲ್ಯದ ಆರ್ಥಿಕ ರಚನೆಯನ್ನೇ ಮತ್ತೂ ಸಾಂದ್ರವಾಗಿ ಮುಂದುವರಿಸುತ್ತದೆ. ಇದು ಪುನಃ ಜಾತಿ ರಾಜಕಾರಣದ ಮುಂದುವರಿಕೆಗೆ ಕಾರಣವಾಗುತ್ತದೆ. ಉತ್ಪಾದನಾ ಸಾಧನಗಳ ಒಡೆತನ ಕೇವಲ ಒಂದು ವರ್ಗಕ್ಕೆ ಸೀಮಿತವಾಗುವುದರಿಂದ ಮತ್ತು ಉತ್ಪಾದನೆಯ ಸಂಬಂಧಗಳು ಹೆಚ್ಚು ನಿರ್ದಿಷ್ಟವಾಗುವುದರಿಂದ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಲೆ ಹೋಗುತ್ತದೆ. ಇಂತಹ ಸಂದರ್ಭದಲ್ಲಿ ಸಾಮಾಜಿಕ ನ್ಯಾಯ ಮತ್ತು ಭದ್ರತೆಯಂತಹ ಪರಿಕಲ್ಪನೆಗಳಿಗೆ ಇದರಿಂದ ಕಿಮ್ಮತ್ತೂ ಬೆಲೆಯಿಲ್ಲದಂತಾಗುತ್ತದೆ.

ಆದರೆ ಈಗಾಗಲೇ ನಾವು ಜಾಗತೀಕರಣವನ್ನು ನಮ್ಮೊಳಗೆ ಬಿಟ್ಟುಕೊಂಡಿದ್ದೇವೆ. ಅದನ್ನು ಎದುರಿಸಲೇಬೇಕಿದೆ. ಆದ್ದರಿಂದ ದಲಿತರು ಜಾಗತೀಕರಣದ ಮುಕ್ತವಾದ ಮತ್ತು ಅನಂತವಾದ ಅವಕಾಶಗಳನ್ನು ಸ್ಪರ್ಧಾತ್ಮಕವಾಗಿ ಬಳಸಿಕೊಳ್ಳುತ್ತಲೇ ತಮ್ಮ ಬಿಡುಗಡೆಯ ಮಾರ್ಗವನ್ನು ಹುಡುಕಬೇಕಿದೆ. ಅಂಬೇಡ್ಕರ್ ಹೇಳಿರುವ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಇವುಗಳ ಮುಖೇನ ಜಾಗತೀಕರಣದೊಂದಿಗೆ ಮುಖಾಮುಖಿಯಾಗುತ್ತಲೇ ಅದರ ಲಾಭವನ್ನು ಪಡೆಯಬೇಕಿದೆ. ಜೊತೆಗೆಯೇ ಅದು ನಮ್ಮನ್ನು ಆಪೋಶನ ತೆಗೆದುಕೊಳ್ಳದಂತೆಯೂ ಎಚ್ಚರಿಕೆ ವಹಿಸಬೇಕಿದೆ. ಅದು ಜಗತ್ತನ್ನು ಕೇವಲ ಮಾರುಕಟ್ಟೆಯ ದೃಷ್ಟಿಯಿಂದ ಪ್ರತಿಕ್ರಿಯಿಸುತ್ತದೆ. ಅಂದರೆ ಅದು ಇಡೀ ಜಗತ್ತನ್ನು ಕೇವಲ ಆರ್ಥಿಕತೆಯ ದೃಷ್ಟಿಯಿಂದ ಮಾತ್ರ ಪರಿಭಾವಿಸುತ್ತದೆ. ಮನುಷ್ಯ ಸಂಬಂಧಗಳು, ಪ್ರಕೃತಿ, ಸಂಸ್ಕೃತಿ ಇವೆಲ್ಲವನ್ನೂ ಅದು ಲಾಭದ ದೃಷ್ಟಿಯಿಂದ ಮಾತ್ರ ಪರಿಗಣಿಸುತ್ತದೆ. ಈ ಕಾರಣದಿಂದ ಅದು ಯಾವತ್ತೂ ಪ್ರಪಂಚವನ್ನು ಮತ್ತು ಅದರ ಬಹು ಆಯಾಮವನ್ನು ನಿರಾಕರಿಸಿ ಕೇವಲ ಅದರ ಆರ್ಥಿಕ ಆಯಾಮವನ್ನು ಮಾತ್ರ ಪುರಸ್ಕರಿಸುತ್ತದೆ.

ಇದು ಜಗತ್ತಿನಲ್ಲಿ ಪ್ರಧಾನ (ಆರ್ಥಿಕ) ಮತ್ತು ಅಪ್ರಧಾನ (ಆರ್ಥಿಕವಲ್ಲದ)ವಾದ ಎರಡು ವಿಭಾಗಗಳನ್ನೇರ್ಪಡಿಸುತ್ತದೆ. ಈ ಆರ್ಥಿಕ ರಚನೆಯ ವಿಧಾನಗಳು ಸಮಾಜದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಮೊದಲಾದ ಆಯಾಮಗಳಿಗೂ ಅನ್ವಯಿಸುತ್ತದೆ ಮತ್ತು ಜಾಗತೀಕರಣವು ಯಾವತ್ತೂ ಪ್ರಧಾನ (ಆರ್ಥಿಕ) ಆಯಾಮದೊಂದಿಗೆ ತನ್ನನ್ನು ಸಮೀಕರಿಸಿಕೊಂಡಿರುತ್ತದೆ. ಈ ಹಿನ್ನೆಲೆಯಲ್ಲಿ ಅದು ಅಪ್ರಧಾನ (ಆರ್ಥಿಕೇತರ - ದಲಿತ, ಹಿಂದುಳಿದ)ರ ಏಳಿಗೆಯ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ನಿರಾಕರಿಸುತ್ತದೆ.

ಜಾಗತೀಕರಣವೆಂಬುದು ಇಬ್ಬಾಯ ಖಡ್ಗ. ಅದು ಪ್ರಧಾನವಾದ ಏಕಮುಖಿ ಸಂಸ್ಕೃತಿಯೊಂದನ್ನು ನಿರ್ಮಿಸುತ್ತಾ ಪರ್ಯಾಯವಾದ ಬಹುಮುಖಿ, ಪರಿಧಿ ಸಂಸ್ಕೃತಿಗಳನ್ನು ನಾಶಗೈಯ್ಯುವ ಲಕ್ಷಣವಿರುವಂಥದ್ದು. ಇಂತಹ ನವ ವಸಾಹತುಶಾಹಿಯನ್ನು ನಿರ್ಮಿಸುವ ಜಾಗತೀಕರಣದಿಂದ ದಲಿತರು ಉಳಿಯಬೇಕೆಂದರೆ ಅವರು ತಮ್ಮ ನೆಲ ಮತ್ತು ಸಂಸ್ಕೃತಿಯ ಎಲ್ಲಾ ಪ್ರಕ್ರಿಯೆಗಳನ್ನು ಏಕರೂಪಗೊಳಿಸುವ, ಬಹುಜನರ, ಬಹುಮುಖಿ ಸಂಸ್ಕೃತಿಗಳನ್ನು ನಾಶಗೊಳಿಸುವ ಜಾಗತೀಕರಣವನ್ನು ದಲಿತರು ತಮ್ಮ ಸಾಂಸ್ಕೃತಿಕ ಪ್ರತಿರೋಧ ಅಥವಾ ಭಿನ್ನತೆಯಿಂದಲೇ ಎದುರಿಸಬೇಕು. ಅಂದರೆ ಒಂದೆಡೆ ಜಾಗತೀಕರಣದ ಲಾಭಗಳನ್ನು ಪಡೆಯುತ್ತಲೇ, ಮತ್ತೊಂದೆಡೆ ಅದರ ಸುಳಿಯಲ್ಲಿ ಕಳೆದುಹೋಗದಂತಹ ಮಧ್ಯಮವರ್ಗವೊಂದರ ಸಾಧ್ಯತೆಯೆಡೆಗೆ ದಲಿತರು ಸಾಗಬೇಕಿದೆ. ಬಹುಶಃ ಭವಿಷ್ಯದ್ವರ್ತಮಾನದಲ್ಲಿ ಇಂತಹ ಪರಿಸ್ಥಿತಿಯೊಂದರಲ್ಲಿ ಮಾತ್ರ ದಲಿತರ ಬಿಡುಗಡೆ ಸಾಧ್ಯವಾಗಬಲ್ಲುದು. □

ದೃಷ್ಟಿಕೋನ

ಹಿಂದುತ್ವದ ಆಂತರಿಕ ಅಂಶವಾದ 'ಬ್ರಾಹ್ಮಣೀಕರಣ'ವನ್ನು ಗೌಪ್ಯವಾಗಿಟ್ಟಿರುವುದರಿಂದ ಈ ವಿಷಯದ ಬಗ್ಗೆ ನಡೆಯುತ್ತಿರುವ ಸಮಕಾಲೀನ ಚರ್ಚೆಗಳು ಹಿಂದುತ್ವ ಮತ್ತು ಇಸ್ಲಾಂ, ಹಿಂದುತ್ವ ಮತ್ತು ಬೌದ್ಧಧರ್ಮ, ಹಿಂದುತ್ವ ಮತ್ತು ಜಾತ್ಯಾತೀತತೆಗೆ ಸೀಮಿತವಾಗುತ್ತಿದೆ. ಮುಖ್ಯ ಅಂಶವಾಗಿರುವ ಹಿಂದುತ್ವ ಮತ್ತು ಬ್ರಾಹ್ಮಣತ್ವದ ಬಗ್ಗೆ ಚರ್ಚೆ ಅಥವಾ ಬರಹಗಳೇ ಇಲ್ಲದಂತಾಗಿದೆ. ಪುಲೆ, ಅಂಬೇಡ್ಕರ್, ಸಾಹು ಹಾಗೂ ಪೆರಿಯಾರ್‌ರಂತಹ ಗಣ್ಯರು ಬೆಳೆಸಿಕೊಂಡು ಬಂದಿರುವ ಈ ವೈಚಾರಿಕ ನಿಲುವನ್ನು ಮುಂದುವರೆಸುವುದು ಬಹುಜನರ ಕರ್ತವ್ಯವಾಗಿದೆ.

○ ಡಾ|| ಕೆ. ಜಮನದಾಸ್

ಅನು : ಜಿ.ಪಿ. ನಾಯಕ್

ಹಿಂದೂಕರಣ ಅಥವಾ ಬ್ರಾಹ್ಮಣೀಕರಣ

ಈ ನಡುವೆ ಪ್ರತಿಯೊಬ್ಬರು ಹಿಂದುತ್ವದ ಬಗ್ಗೆ ಮಾತನಾಡುತ್ತಾರೆ. ಅವರ ಪ್ರಕಾರ ಹಿಂದುತ್ವವೆಂಬುದು ಧರ್ಮವಲ್ಲ, ಬದಲಿಗೆ ಬದುಕಿನ ರೀತಿಯಷ್ಟೆ ಈ ವ್ಯಾಖ್ಯಾನದ ಅರ್ಥವೇನು? ಧರ್ಮ ಮತ್ತು ಬದುಕಿನ ರೀತಿಯಲ್ಲಿ ವ್ಯತ್ಯಾಸವಿದೆಯೇ? ಇದ್ದಲ್ಲಿ ಯಾವುದೀ ವ್ಯತ್ಯಾಸಗಳು ಎಂಬಿತ್ಯಾದಿಯಾಗಿ ಬಹುಜನರು ಯೋಚಿಸಬೇಕಾಗಿದೆ. ಈ ಬದೊಕಿಗಳೆಲ್ಲ ಬಹುಜನರನ್ನು ದಿಕ್ಕು ತಪ್ಪಿಸಿ ಬ್ರಾಹ್ಮಣತ್ವವನ್ನು ಎತ್ತಿಹಿಡಿಯುವ ಸಾಧನಗಳಲ್ಲವೇ? ಈ ಬಗ್ಗೆ ರಂಜಿತ್ ಪರದೇಶಿಯವರು ತಮ್ಮ ಪುಸ್ತಕ "ಪುಲೆ ಅಂಬೆಡ್ಕರಾಂಚೆ ಬ್ರಾಹ್ಮಣೀಕರಣ್ ಸಂಘ್ ಭಾಜಪ ಚೆ ದವ್ ಪೇಚ್" ದಲ್ಲಿ ಸವಿವರವಾಗಿ ಬರೆದಿದ್ದಾರೆ.

ಹಿಂದುತ್ವದಲ್ಲಿರುವ ಅಸಮಾನತೆಗಳು ಎಲ್ಲರಿಗೂ ತಿಳಿದಿರುವ ವಿಚಾರವಾದ್ದರಿಂದ ಆ ಬಗ್ಗೆ ತಿಳಿಯಲು ನಾವು ಶಾಸ್ತ್ರಗಳನ್ನು ಅಭ್ಯಾಸ ಮಾಡುವ ಅವಶ್ಯಕತೆಯಿಲ್ಲ. ಈ ಅಸಮಾನತೆಯನ್ನು ಬಗ್ಗುಬಡಿಯಲು ಪುಲೆಯವರು 'ಸತ್ಯಧರ್ಮ'ವನ್ನು ಪ್ರತಿಪಾದಿಸಿದರೆ ಅಂಬೇಡ್ಕರ್ ಮತ್ತೊಂದು ಹೆಜ್ಜೆ ಮುಂದಿಟ್ಟು ನಡೆದು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನವಲಂಬಿಸಿದರು. ಈ ಗಣ್ಯರು, ಸ್ತ್ರೀಪುರಷರಲ್ಲಿರುವ ಅಸಮಾನತೆ ವಿವಿಧ ಸಮುದಾಯಗಳ ನಡುವೆ ಇರುವ ಅಸಮಾನತೆ, ಬ್ರಾಹ್ಮಣಿಕೆಯ ಮೊಂಡು ಸಿದ್ಧಾಂತ ಇತ್ಯಾದಿಗಳನ್ನು ವಿಶ್ಲೇಷಿಸಿದ ನಂತರ ಹಿಂದೂ ಧರ್ಮವನ್ನು ತ್ಯಜಿಸುವ ತೀರ್ಮಾನ ಕೈಗೊಂಡರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಪುಲೆ ಮತ್ತು ಅಂಬೇಡ್ಕರ್ ನಡವಳಿಕೆಗಳನ್ನು ಸ್ವಾಮಿ ವಿವೇಕಾನಂದರು ಮತ್ತು ಅರವಿಂದೋ ಅವರು ಹಿಂದೂ ಧರ್ಮಕ್ಕೆ ತಂದ ಪುನರುಜ್ಜೀವನಕ್ಕೆ ಸಮಾನವೆಂದು ಭಾವಿಸುತ್ತಾರೆ. ಅಂಬೇಡ್ಕರ್ ತಮ್ಮ ಚಳವಳಿ ಜೀವನದ ಪ್ರಾರಂಭದಲ್ಲಿ ಹಿಂದೂ ಧರ್ಮದಲ್ಲಿ ಸುಧಾರಣೆಯ ಅಗತ್ಯವಿದೆ ಎಂದು ಹೇಳುತ್ತಿದ್ದುದನ್ನು ಮೂಲವಾಗಿ ಬಳಸಿಕೊಂಡು ಅಂಬೇಡ್ಕರ್ ಸಹ ಹಿಂದೂ ಧರ್ಮ ಸುಧಾರಕರೆಂದು ವಾದಿಸುತ್ತಾರೆ. ಈ ಆರ್‌ಎಸ್‌ಎಸ್ ಮಂದಿ ರಮೇಶ್ ಪತ್ರಾಂಗೆ ದಿನಾಂಕ ೨೧-೧೨-೧೯೨೮ರ 'ಬಹಿಷ್ಕೃತ್ ಭಾರತ್' ಪತ್ರಿಕೆಯನ್ನಾಧರಿಸಿ ತಮ್ಮ 'ಹೆಗ್ಗಡೆವಾರ್ ಆಣಿ ಅಂಬೇಡ್ಕರ್' ಕೃತಿಯಲ್ಲಿ ಅಂಬೇಡ್ಕರ್‌ರವರು ಜಾತಿ ಪದ್ಧತಿಯ ಪಿಡುಗುಗಳನ್ನು ಸವಿವರವಾಗಿ ಖಂಡಿಸಿದ ನಂತರ ಹಿಂದೂ ಧರ್ಮ ಒಡೆದು ಹೋಗುವುದನ್ನು ತಡೆಯಬೇಕಾದರೆ ಜಾತಿಪದ್ಧತಿಯನ್ನು ನಿರ್ಮೂಲನೆ ಮಾಡಬೇಕೆಂದು ಹೇಳಿರುವುದು ಸ್ಪಷ್ಟವಾಗುತ್ತದೆ. ಹಿಂದೂ ಧರ್ಮವನ್ನು ಮಹತ್ತರವಾಗಿ ಖಂಡಿಸಿರುವ ಅಂಬೇಡ್ಕರ್ ಭಾಷಣ ಬರಹಗಳ ಬಗ್ಗೆ ಆರ್‌ಎಸ್‌ಎಸ್ ನವರು ಬಾಯಿ ಬಿಡುವುದಿಲ್ಲ. ಆದರೆ ಅವರು ಹಿಂದೂ ಧರ್ಮ ಸುಧಾರಕನೆಂದು ಸಾರುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಹಿಂದೂ ಧರ್ಮ ಸುಧಾರಣೆ ಮಾಡುವುದು ನಮ್ಮ ಕರ್ತವ್ಯವಲ್ಲ ಎಂದು ಅಂಬೇಡ್ಕರ್ ಬಹಳಷ್ಟು ಬಾರಿ ಹೇಳಿರುವ ಮಾತನ್ನು ಬದಿಗೊತ್ತಿ ಇವರು ಹಿಂದೂ ಧರ್ಮ ಸುಧಾರಕರೆಂಬ ವಾದಕ್ಕಿಳಿದಿದೆ ಈ ಆರ್‌ಎಸ್‌ಎಸ್.

ಈ ಹಿಂದೂ ವಾದಿಗಳ ಮತ್ತೊಂದು ಗುರಿಯೆಂದರೆ ಅಂಬೇಡ್ಕರ್‌ರವರು ಇಸ್ಲಾಂ ಧರ್ಮದ ಬಗ್ಗೆ ಬರೆದಿರುವ ಅಭಿಪ್ರಾಯಗಳನ್ನು ತಪ್ಪು ತಪ್ಪಾಗಿ ವಿಶ್ಲೇಷಿಸಿ ಅವರು ಇಸ್ಲಾಂ ಧರ್ಮ ವಿರೋಧಿಗಳೆಂದು ಸುಳ್ಳು ಪ್ರಚಾರ ಮಾಡುವುದು. ಡಾ|| ಟೆಲ್‌ಟುಂಬ್ಡೆಯವರ ಇತ್ತೀಚಿನ ಪುಸ್ತಕವೊಂದು ಈ ವಿಚಾರವನ್ನು ಬೆಳಕಿಗೆ ತಂದಿದೆ.

ಈ ಮೇಲಿನ ಎರಡು ಅಂಶಗಳನ್ನು ಗಮನಿಸಿದರೆ ಸವರ್ಣೀಯ ಹಿಂದೂಗಳ ವೈಭವೀಕರಣ ಮತ್ತು ಮುಸ್ಲಿಂ ಬಾಂಧವರೊಡನೆ ದ್ವೇಷ ಕಾರುವ ಪ್ರವೃತ್ತಿ ಕಾಣಸಿಗುತ್ತದೆ. ಸಮರಸತ್ತ ಮಂಚ್‌ನವರು ನಾವು ಅಖಿಲ ಹಿಂದೂ ಧರ್ಮ ರಕ್ಷಕರೆಂದು ಹೇಳಿಕೊಂಡರೂ ಸಹ ಅವರ ನಡವಳಿಕೆಗಳು ಪ್ರಮುಖವಾಗಿ ಬ್ರಾಹ್ಮಣತ್ವವನ್ನು ಸಂರಕ್ಷಿಸುವುವುಗಳಾಗಿವೆ. ಹಿಂದುತ್ವದ ಆಂತರಿಕ ಅಂಶವಾದ 'ಬ್ರಾಹ್ಮಣೀಕರಣ'ವನ್ನು ಗೌಪ್ಯವಾಗಿಟ್ಟಿರುವುದರಿಂದ ಈ ವಿಷಯದ ಬಗ್ಗೆ ನಡೆಯುತ್ತಿರುವ ಸಮಕಾಲೀನ ಚರ್ಚೆಗಳು ಹಿಂದುತ್ವ ಮತ್ತು ಇಸ್ಲಾಂ, ಹಿಂದುತ್ವ ಮತ್ತು ಬೌದ್ಧಧರ್ಮ, ಹಿಂದುತ್ವ ಮತ್ತು ಜಾತ್ಯಾತೀತತೆಗೆ ಸೀಮಿತವಾಗುತ್ತಿದೆ. ಮುಖ್ಯ ಅಂಶವಾಗಿರುವ ಹಿಂದುತ್ವ ಮತ್ತು ಬ್ರಾಹ್ಮಣತ್ವದ ಬಗ್ಗೆ ಚರ್ಚೆ ಅಥವಾ ಬರಹಗಳೇ ಇಲ್ಲದಂತಾಗಿದೆ. ಪುಲೆ, ಅಂಬೇಡ್ಕರ್, ಸಾಹು ಹಾಗೂ ಪೆರಿಯಾರ್‌ರಂತಹ ಗಣ್ಯರು ಬೆಳೆಸಿಕೊಂಡು ಬಂದಿರುವ ಈ ವೈಚಾರಿಕ ನಿಲುವನ್ನು ಮುಂದುವರೆಸುವುದು ಬಹುಜನರ ಕರ್ತವ್ಯವಾಗಿದೆ.



ಬ್ರಾಹ್ಮಣತ್ವದ ವೈಭವೀಕರಣವನ್ನು ಗೌಪ್ಯವಾಗಿಟ್ಟಿರುವ ಆರ್‌ಎಸ್‌ಎಸ್ ಜಾತ್ಯಾತೀತರನ್ನು ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರನ್ನು ಬಹುಸಂಖ್ಯಾತ ಹಿಂದೂ ಧಾರ್ಮಿಕರ ವಿರೋಧಿಗಳೆಂದು ವಾದಿಸತೊಡಗಿವೆ. ಉದಾಹರಣೆಗೆ ಸವರ್ಣೀಯರು ತಮ್ಮ ಮಿತ್ರರಾದ ಸಾಮ್ರಾಜ್ಯಶಾಹಿಗಳು ಮತ್ತು ಬಂಡವಾಳಶಾಹಿಗಳ ಹಿತ ಕಾಪಾಡುವ ಸಲುವಾಗಿ ಕೆಳವರ್ಗದ ಹಿಂದೂಗಳನ್ನು ಪ್ರೇರೇಪಿಸಿ ಮುಸ್ಲಿಮರ ವಿರುದ್ಧ ಕಾಳಗಕ್ಕೆಳೆಸುತ್ತದೆ ಮತ್ತು ಜಾತ್ಯಾತೀತತೆಯನ್ನು ಪಾಲಿಸುವ ಎಡಪಂಥೀಯರು ಮುಸ್ಲಿಂ ಹಿತೈಷಿಗಳೆಂದು ಆಪಾದಿಸಿ ಬಹು ಸಂಖ್ಯಾತ ಹಿಂದೂಗಳ ಸಹಾನುಭೂತಿ ಪಡೆಯುತ್ತದೆ. ದುರಾದೃಷ್ಟವಶಾತ್ ಸವರ್ಣೀಯರ ಈ ಕುತಂತ್ರ ಮುಸ್ಲೀಮರು ಮತ್ತು ದಲಿತರಿಗೂ ಅರ್ಥವಾಗದಿರುವುದು ವಿಷಾದನೀಯ. ಆದ್ದರಿಂದ ಮುಸ್ಲಿಂ ಮತ್ತು ಕೆಳಜಾತಿಯ ಹಿಂದೂಗಳಲ್ಲೇ ಒಡಕುಂಟಾಗುತ್ತಿದೆ.

ರಾಮಜನ್ಮಭೂಮಿ ಬಾಬ್ರಿ ಮಸೀದಿ ವಿವಾದದ ಮೂಲ ಅಂಶಗಳೇನು. ನೋಡಲು ಇದೊಂದು ಹಿಂದೂ - ಮುಸ್ಲಿಂರ ಧಾರ್ಮಿಕ ಸಮಸ್ಯೆಯಾಗಿ ಕಾಣುತ್ತದೆ. ಆದರೆ ವಿವಿಧ ಹಿಂದೂ ಜಾತಿಗಳ ನಡುವಿನ ಕಲಹವಿದು ಎಂಬ ಸತ್ಯಾಂಶ ಎಷ್ಟು ಮಂದಿ ನಮ್ಮ ದಲಿತೇತರ ಹಿಂದುಳಿದವರಿಗೆ ಅರಿವಾಗಿದೆ ಎಂಬುದು ಗಮನಿಸಬೇಕಾದ ಅಂಶ. ೧೯೯೦ರಲ್ಲಿ ಅಂದಿನ ಪ್ರಧಾನಮಂತ್ರಿ ವಿ.ಪಿ.ಸಿಂಗ್ ಅವರು ಹಿಂದುಳಿದ ಜನಾಂಗದವರಿಗೆ ಸರ್ಕಾರಿ ಸೇವೆಗಳಲ್ಲಿ ಮೀಸಲಾತಿಯನ್ನು ನೀಡಲು ಮಂಡಲ್ ಆಯೋಗದ ವರದಿಯನ್ನು ಅನುಷ್ಠಾನಗೊಳಿಸಲು ಕ್ರಮ

ಕೈಗೊಂಡಾಗ ಆರ್‌ಎಸ್‌ಎಸ್ ನವರು ವಿ.ಪಿ. ಸಿಂಗ್ ಅವರನ್ನು ಬಗ್ಗುಬಡಿಯಲು ರಾಮಮಂದಿರದ ನೆಪದಲ್ಲಿ ರಥಯಾತ್ರೆಯನ್ನು ಪ್ರಾರಂಭಿಸಿದರು. 'ಅವರು ಮಂಡಲ್ ಆಂದೋಲನವನ್ನು ಪ್ರಾರಂಭಿಸಿ ದ್ದಕ್ಕಾಗಿ ನಾವು ಕಮಂಡಲವನ್ನು ಶುರುಮಾಡಿದೆವು' ಎಂದು ಅಟಲ್ ಬಿಹಾರಿ ವಾಜಪೇಯಿಯವರು ಹೇಳಿರುವ ಮಾತುಗಳಿಲ್ಲಿ ಗಮನಾರ್ಹ.

ನಂಗಲ್ ಮತ್ತು ಬೆಹರೆಯವರು ಮಹಾತ್ಮ ಪುಲೆಯವರನ್ನು 'ದುರ್ನಾತ ಹೊಡೆಯುವ ಗಲೀಜು' ಎಂದು ಖಂಡಿಸಿರುವುದು ಎರಡನೇ ಉದಾಹರಣೆ. ಇದು ಬಹುಜನರ ವಿರುದ್ಧ ಸವರ್ಣೀಯರ ಆಕ್ರೋಶದ ನಿದರ್ಶನ. ನಂಗಲ್ ಮತ್ತು ಬೆಹರೆಯವರ ನಡವಳಿಕೆಯನ್ನು ಖಂಡಿಸಲು ಬಹುಜನರು ಹೋರಾಟಕ್ಕಿಳಿದಾಗ ಸ್ವತಃ ಹಿಂದುಳಿದವರಾದ ಗೋಪಿನಾಥ್ ಮುಂಡೆಯವರು ಕೆಳಜಾತಿಯ ಧನ್‌ಗರ್, ಮಾಲಿ, ವಂಜೌರಿ ಇತ್ಯಾದಿಗಳನ್ನು ಸಂಘಪರಿವಾರದ ನೇತೃತ್ವದಲ್ಲಿ ಬೀದಿಗಿಳಿಸಿ ಬಹುಜನರ ವಿರುದ್ಧ ಹೋರಾಡಲು ಕರೆ ಇತ್ತರು. ಅಂಬೇಡ್ಕರ್ ಅವರು ಹಿಂದೂ ಧರ್ಮದ ಬ್ರಾಹ್ಮಣಿಕೆ ಮತ್ತು ಚತುರ್ವರ್ಣ ಭೇದವನ್ನು ಖಂಡಿಸಲು 'ದಿ ರೀಡಲ್ಸ್ ಆಫ್ ರಾಮ ಅಂಡ್ ಕೃಷ್ಣ' ಎಂಬ ಕೃತಿಯನ್ನು ಬರೆದರು. ಆದರೆ ಈ ವಿಚಾರವೇ ಬೆಳಕಿಗೆ ಬಾರದಿದ್ದುದರಿಂದ ಅಂಬೇಡ್ಕರ್ ಕೃತಿಗಳು ಹಿಂದೂ ದೇವತೆಗಳನ್ನು ಅವಹೇಳನ ಮಾಡುವ ಉದ್ದೇಶವನ್ನೊಂದಿದೆ ಎಂದು ಅಪಪ್ರಚಾರ ಮಾಡಲು ಸಂಘ ಪರಿವಾರಕ್ಕೆ ಸಾಧ್ಯವಾಗಿ ಹಿಂದುಳಿದ ಜನಾಂಗದ ಹಿಂದೂಗಳನ್ನು ದಲಿತರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾಗಿದೆ. ಹಿಂದುತ್ವದ ಹೆಸರಿನಲ್ಲಿ ಬ್ರಾಹ್ಮಣೀಕರಣ ಪ್ರಜ್ವಲಿಸತೊಡಗಿದೆ, ಎನ್ನಲು ಇವುಗಳೆಲ್ಲಾ ನಿದರ್ಶನಗಳು. ಆದ್ದರಿಂದ ಹಿಂದುತ್ವದ ಬದಲು ಬ್ರಾಹ್ಮಣತ್ವದ ಚರ್ಚೆ ಯಾಗಿ ಎಲ್ಲಾ ಜಾತಿಯ ಹಿಂದೂಗಳಲ್ಲಿ ಸಾಮರಸ್ಯ ಮೂಡ ಬೇಕಾಗಿದೆ. ಇಲ್ಲವಾದರೆ ಬ್ರಾಹ್ಮಣ ವಾದಿಗಳು ಜನಸಾಮಾನ್ಯ ರನ್ನು ಹಿಂದೂ ಧರ್ಮದಡಿಯಲ್ಲಿ ಒಂದು ಮಾಡಿ ಸಾಮಾಜಿಕ ಬದಲಾವಣೆಯನ್ನು ಬಯಸುವವರ ವಿರುದ್ಧ ಹೋರಾಟಕ್ಕಿಳಿಸುತ್ತವೆ.

ಹಿಂದುತ್ವ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವವರು ಬಹುಜನ ಹಿಂದೂಗಳಲ್ಲ, ಬದಲಿಗೆ ಅಲ್ಪಸಂಖ್ಯಾತ ಬ್ರಾಹ್ಮಣರು. ಈ ಬ್ರಾಹ್ಮಣತ್ವದ ಬಿರುದ್ಧ ಹೋರಾಡಲು ನಾವುಗಳು ಪುಲೆ, ಪೆರಿಯಾರ್, ಸಾಹು ಮತ್ತು ಅಂಬೇಡ್ಕರ್ ಸಿದ್ಧಾಂತಗಳನ್ನು ಜೀವಂತವಾಗಿಡಬೇಕಾಗಿದೆ.

ಭಾರತೀಯರನ್ನು ಹಿಂದೂಗಳು ಮತ್ತು ಇತರರೆಂದು ಗುಂಪು ಮಾಡಿ ವೈರತ್ವದ ಬೀಜ ಬಿತ್ತುವ ಬ್ರಾಹ್ಮಣರು ಕೆಳಜಾತಿಯ ಹಿಂದೂಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಇತರೇ ಧರ್ಮೀಯರನ್ನು ಹಿಂಸಿಸುತ್ತಾರೆ. ಕೆಳಜಾತಿಯ ರೈತ ಕುಟುಂಬದಿಂದ ಶ್ರಮಪಟ್ಟು ಚಕ್ರಾಧಿಪತಿಯಾಗಿದ್ದ ಛತ್ರಪತಿ ಶಿವಾಜಿಯನ್ನು ಇಂದಿನ ಬ್ರಾಹ್ಮಣ ಇತಿಹಾಸಜ್ಞರು ಅವರೊಬ್ಬ ಗೋವುಗಳ ಮತ್ತು ಬ್ರಾಹ್ಮಣರ ರಕ್ಷಿತರೆನ್ನುತ್ತಾರೆ. ಆದರೆ ಶಿವಾಜಿಯವರು ಬ್ರಾಹ್ಮಣ ರಕ್ಷಕರು ಅಲ್ಲ ಅಥವಾ ಗೋರಕ್ಷಕರೂ ಅಲ್ಲ ಎಂಬ ಸತ್ಯವನ್ನು ಶಿವಾಜಿಯವರು ಬರೆದಿರುವ ಪತ್ರಗಳನ್ನು ಸಂಶೋಧನೆ ಮಾಡಿ ಡಾ॥ಶೆಜ್ವಾಲ್ಕರ್ ಅವರು ಸಾಬೀತು ಪಡಿಸಿದ್ದಾರೆ.

ಶಿವಾಜಿಯವರೆಂದೂ ಗೋಪಾಲಕ ಅಥವಾ ಬ್ರಾಹ್ಮಣಪಾಲಕರೆಂದುಕೊಂಡಿಲ್ಲ, ಬದಲಿಗೆ ಅವರ ಆಶ್ರಯ ಪಡೆಯೊಳಗಿದ್ದ ಬ್ರಾಹ್ಮಣರು ಅವರನ್ನು ಹೀಗೆಂದು ಕರೆದರು.

ಹಿಂದುತ್ವ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸುತ್ತಿರುವವರು ಬಹುಜನ ಹಿಂದೂಗಳಲ್ಲ, ಬದಲಿಗೆ ಅಲ್ಪಸಂಖ್ಯಾತ ಬ್ರಾಹ್ಮಣರು. ಈ ಬ್ರಾಹ್ಮಣತ್ವದ ಬಿರುದ್ಧ ಹೋರಾಡಲು ನಾವುಗಳು ಪುಲೆ, ಪೆರಿಯಾರ್, ಸಾಹು ಮತ್ತು ಅಂಬೇಡ್ಕರ್ ಸಿದ್ಧಾಂತಗಳನ್ನು ಜೀವಂತವಾಗಿಡಬೇಕಾಗಿದೆ. ಭಾರತೀಯರನ್ನು ಹಿಂದೂಗಳು ಮತ್ತು ಇತರರೆಂದು ಗುಂಪು ಮಾಡಿ ವೈರತ್ವದ ಬೀಜ ಬಿತ್ತುವ ಬ್ರಾಹ್ಮಣರು ಕೆಳಜಾತಿಯ ಹಿಂದೂಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಇತರೇ ಧರ್ಮೀಯರನ್ನು ಹಿಂಸಿಸುತ್ತಾರೆ.

ಶಿವಾಜಿಯವರ ಸಿಂಹಾಸನಾರೋಹಣ ಸಮಾರಂಭದ ಮುದ್ರೆಯಲ್ಲಿಯೂ ಸಹ 'ಕ್ಷತ್ರಿಯ ಕುಲವಂತ' ಎಂದು ನಮೂದಿಸಲಾಗಿದೆ. 'ಗೋ-ಬ್ರಾಹ್ಮಣ ಪಾಲಕ'ನೆಂದೇನು ಹೇಳಿಲ್ಲ. ಶಿವಾಜಿ ನಿರ್ಮಿಸಿದ್ದು ಸಮಾನತಾ ಸಾಮ್ರಾಜ್ಯ. ಆದರೆ ಬ್ರಾಹ್ಮಣ ಇತಿಹಾಸಗಾರರು ಅವರನ್ನು ಹಿಂದೂ ಸಾಮ್ರಾಜ್ಯ ಸ್ಥಾಪಕರೆಂದು ಕರೆಯುತ್ತಾರೆ. ಶಿವಾಜಿ ಯವರೆಂದಿಗೂ ಮುಸ್ಲಿಮರ ವಿರೋಧಿಯಲ್ಲ. ಆದರೆ ಅವರು ಮುಸ್ಲಿಂ ವಿರೋಧಿಯಾಗಿದ್ದರೆಂಬ ಸುಳ್ಳು ಕತೆ ಹೇಳುವ ಬ್ರಾಹ್ಮಣರು ಹಿಂದೂ ಮುಸ್ಲಿಮರ ನಡುವೆ ಗಲಭೆ ನಡೆಸಲು ಪ್ರೋತ್ಸಾಹಿಸುತ್ತಾರೆ.

ದಲಿತರನ್ನು ಹಿಂದೂಧರ್ಮದ ಚೌಕಟ್ಟಿನೊಳಗೆ ಸೇರಿಸುವ ಮೊದಲು ಬ್ರಾಹ್ಮಣರಿಗೂ ಮತ್ತು ಬ್ರಾಹ್ಮಣೇತರ ಹಿಂದೂಗಳಿಗೂ ಮಹತ್ತರವಾದ ಘರ್ಷಣೆಗಳಾಗಿವೆ. ಜಾತಿ ಪದ್ಧತಿಯ ಮೊದಲು ವರ್ಣ ಪದ್ಧತಿ ಇದ್ದಾಗ ದ್ರೋಣಾ ಚಾರ್ಯರು ಏಕಲವ್ಯನ ಬೆರಳನ್ನು ಗುರುದಕ್ಷಿಣೆಯಾಗಿ ಪಡೆದು ಅವನ ಸಾಮರ್ಥ್ಯವನ್ನು ಕುಂಠಿತಗೊಳಿಸಿದ ಘಟನೆಯನ್ನು ಖಂಡಿಸುವ ಬದಲು ಅದೊಂದು ಮಹಾನ್ ಗುರುಭಕ್ತಿ ಎಂದು ಬಣ್ಣಿಸುತ್ತಾರೆ ಬ್ರಾಹ್ಮಣರು. ಇಂತಹ ಘಟನೆಗಳು ಆ ಕಾಲದ ಬ್ರಾಹ್ಮಣೀಕರಣವನ್ನು ಚಿತ್ರಿಸುತ್ತದೆ.

ಶಾತವಾಹನರ ಕಾಲದಲ್ಲಿ ಕೆಳಜಾತಿಯವರನ್ನು ಬ್ರಾಹ್ಮಣೀಕರಿಸುವ ಪ್ರವೃತ್ತಿ ಮಹಾರಾಷ್ಟ್ರದಲ್ಲಿತ್ತಾದರೂ ಸಹ ವಿವಿಧ ಜಾತಿಗಳಲ್ಲಿರುವ ಅಂಥವರನ್ನು ಸಂರಕ್ಷಿಸಲಾಗುತ್ತಿತ್ತು. ಡಾ॥ಕೇಳ್ಕರ್ ಅವರ ಪ್ರಕಾರ ಹಿಂದುತ್ವದ ಸಿದ್ಧಾಂತ ಐತಿಹಾಸಿಕವಲ್ಲ. ಹಿಂದೂ ಎಂಬುದು ಮೊಗಲರು ಭಾರತಕ್ಕೆ ಬಂದ ನಂತರ ಹುಟ್ಟಿಕೊಂಡ ಶಬ್ದ. ಆದ್ದರಿಂದ ಹಿಂದುತ್ವ ವನ್ನು ಸಮಾಜದ ಪರಿವರ್ತನಾ ಸಿದ್ಧಾಂತವಾಗಿ ಪರಿಗಣಿಸಲು ಸಾಧ್ಯವಿಲ್ಲ. ವೇದಾಂತಿಗಳಲ್ಲಿ ಮತ್ತು ಬೌದ್ಧಧರ್ಮಗಳಲ್ಲಿ ಸಿದ್ಧಾಂತಿಕ ವ್ಯತ್ಯಾಸಗಳಿವೆ. ಆದರೆ ಆರ್‌ಎಸ್‌ಎಸ್ ನವರು ಇದನ್ನು 'ಹಿಂದೂ ವೇದಾಂತತೆ' ಮತ್ತು 'ಹಿಂದೂಯೇತರ ಬೌದ್ಧಿಕತೆ' ಎಂದು ಪಟ್ಟಿ ಕಟ್ಟುತ್ತಾರೆ. ಅಂದರೆ ಹಿಂದುತ್ವದ ಹೆಸರಿನಲ್ಲಿ ಬಹುಜನರನ್ನು ಒಗ್ಗೂಡಿಸಿ ಸಾಮಾಜಿಕ ಕಲಹಗಳನ್ನು ಪ್ರೋತ್ಸಾಹಿಸುತ್ತಾರೆ.

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣಿಕೆ

ಪ್ರಾಚೀನ ಕಾಲದಲ್ಲಿ ಬ್ರಾಹ್ಮಣರು ಇತರೆ ವರ್ಗದವರನ್ನು ತೀರಾ ಹೀನಾಯವಾಗಿ ನಡೆಸಿಕೊಂಡಿದ್ದಾರೆ ಮತ್ತು ವಂಚಕತನದಿಂದ ವರ್ತಿಸಿದ್ದಾರೆ. ಅಂತಹ ಹೀನಾಯ ಮತ್ತು ವಂಚಕ ವರ್ತನೆಯನ್ನು ಆರ್‌ಎಸ್‌ಎಸ್ ನವರು ಇಂದಿಗೂ ಬೆಳೆಸಿಕೊಂಡು ಬಂದಿದ್ದಾರೆ. ಅಂತಹ ನಯವಂಚಕ ಸಿದ್ಧಾಂತ ಗಳಲ್ಲಿ ಕೆಲವನ್ನು ಡಾ॥ಕೇಳ್ಕರ್‌ರವರು ಕೆಳಕಂಡಂತೆ ಬಣ್ಣಿಸಿದ್ದಾರೆ.

೧. ಬ್ರಾಹ್ಮಣತೆ ನಮ್ಮೆಲ್ಲ ಪೂರ್ವಜರ ಧರ್ಮ. ಪ್ರಾಚೀನ ಕಾಲದಲ್ಲಿದ್ದ ಬ್ರಾಹ್ಮಣಿಕೆಯ ಬೌದ್ಧ ಧರ್ಮ ಮತ್ತು ಅಂಬೇಡ್ಕರ್ ಪ್ರತಿಪಾದಿಸಿದ ನೂತನ ಬೌದ್ಧ ಧರ್ಮಗಳೆರಡು ಒಂದೆಯೆ. ಆದ್ದರಿಂದ ಅಂಬೇಡ್ಕರ್‌ರ ಬೌದ್ಧ ಧರ್ಮ ಹಿಂದೂ ಧರ್ಮದ ಒಂದು ಅಂಗ.

೨. ವೇದಕಾಲದಲ್ಲಿ ಬ್ರಾಹ್ಮಣರು ಯಜ್ಞ ಮಾಡಲು ಅರ್ಹರಲ್ಲದವರನ್ನು ಅರ್ಹರಾಗಿಸಲು ವ್ರತ, ಸ್ತೋಮಗಳನ್ನು ಮಾಡುತ್ತಿದ್ದರು. ಹಾಗೆಯೇ ಈಗ ದಲಿತ ಬುದ್ಧರನ್ನು ಸಮರಸ್ತ ಆಂದೋಲನದಲ್ಲಿ ಸೇರಿಸಿಕೊಂಡು, ಹಣಕಾಸು ಆಸ್ತಿ ಯನ್ನೆಲ್ಲಾ ಕೊಟ್ಟು ಉನ್ನತ ಹುದ್ದೆಗಳನ್ನು ನೀಡಿ ಆರ್‌ಎಸ್‌ಎಸ್ ಸಿದ್ಧಾಂತವನ್ನು ಪ್ರಚಾರ ಮಾಡಲು ಬಳಸಿಕೊಳ್ಳುತ್ತಾರೆ.

೩. ಪ್ರಾಚೀನ ಕಾಲದಲ್ಲಿ ಪ್ರತಿಯೊಬ್ಬ ಜನಾಂಗದ ವ್ಯಕ್ತಿಯೂ ಸಹ ಯಾವುದೋ ಒಬ್ಬ ಬ್ರಾಹ್ಮಣ ಋಷಿಯಿಂದ – ಬ್ರಾಹ್ಮಣೇತರ ಹೆಣ್ಣಿನ ಗರ್ಭದಿಂದ ಹುಟ್ಟಿರುವನೆಂಬ ಕಥೆ ಕಟ್ಟಲಾಗುತ್ತಿತ್ತು. ಮಧ್ಯಾಂತರ ಇತಿಹಾಸದಲ್ಲಿ ಬ್ರಾಹ್ಮಣೇತರ ಜಾತಿಯ ಹಲವಾರು ಋಷಿಗಳು ಹುಟ್ಟಿಕೊಂಡಿದ್ದು ಇನ್ನೊಂದು ವಿಚಾರ. ಆದರೆ ಈಗ ಕ್ರಾಂತಿಕಾರಿ ಪುಲೆಯವರನ್ನು 'ಹಿಂದೂ ಈಶ್ವರ' ನೆಂದು ಮತ್ತು ಅಂಬೇಡ್ಕರರನ್ನು ಹಿಂದೂ ಧರ್ಮ ಸುಧಾರಕನೆಂದು ಹೇಳ ಹೊರಟಿದ್ದಾರೆ ಈ ಸವರ್ಣೀಯರು.

೪. ಬ್ರಾಹ್ಮಣೀಕರಣದಲ್ಲಿ ಎರಡು ಮೂಲ ಸಿದ್ಧಾಂತ ಗಳನ್ನು ಗಮನದಲ್ಲಿಡಲಾಗುತ್ತದೆ. ಅವುಗಳೆಂದರೆ ಇದು ಬೃಹತ್ ಪ್ರಮಾಣದಲ್ಲಿ ಆಗಬೇಕು ಮತ್ತು ಹೊಸ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಿಧ ಜಾತಿಗಳ ನಡುವೆ ಇರುವ ಅಂತರವನ್ನು ಉಳಿಸಿಕೊಂಡು ಬ್ರಾಹ್ಮಣರ ಉಚ್ಛತೆಯನ್ನು ಕಾಪಾಡಿಕೊಳ್ಳುವುದು. ಈ ನಡುವೆ ಎಚ್ಚೆತ್ತುಕೊಂಡ ದಲಿತರನ್ನು ಸಂತೈಸಲು ಮೀಸಲಾತಿ ವ್ಯವಸ್ಥೆಯನ್ನು ಬ್ರಾಹ್ಮಣಶಾಹಿಗಳ ಹಿಡಿತದಲ್ಲಿ ಇರಿಸಿ ವಿತರಿಸಲಾಗುತ್ತದೆ. ಈ ಹಿಂದೆ ಸಂಘ ಪರಿವಾರದವರು ಬ್ರಾಹ್ಮಣರಾದ ಹೆಗ್ಗಡೆವಾರ್, ಗೋಲ್‌ವಾಲ್ಕರ್, ದೀವರಸ್, ಸರ್ವರ್ಕರ್ ಇತ್ಯಾದಿಯವರನ್ನು ಮಾತ್ರ ಕೊಂಡಾಡುತ್ತಿದ್ದರು. ಆದರೀಗ ಪುಲೆ, ಅಂಬೇಡ್ಕರ್, ಗಾಂಧಿಯವರನ್ನು ಸಹ ತಮ್ಮ ಸ್ಮರಣ ಪಟ್ಟಿಯಲ್ಲಿ ಸೇರಿಸಿಕೊಳ್ಳಬೇಕಾಗಿದೆ. ಐಶ್ವರ್ಯ, ಘನತೆ ಅಥವಾ ಗೌರವಗಳನ್ನು ಕೆಳಜಾತಿಯವರೊಡನೆ ಹಂಚಿಕೊಳ್ಳ ಬೇಕಾಗಿದೆ. ಬಹುಜನರೊಡನೆ ಸಂಬಂಧ ಬೆಳೆಸಿಕೊಳ್ಳಲು ಬ್ರಾಹ್ಮಣರು ಹೇಳುವ ಕಟ್ಟುಕತೆಗಳಲ್ಲಿ ಅಂಬೇಡ್ಕರ್ ಒಮ್ಮೆ ಆರ್‌ಎಸ್‌ಎಸ್ ಶಾಲೆಯೊಂದಕ್ಕೆ ಭೇಟಿಯಿತ್ತು ಅಲ್ಲಿದ್ದ ದಲಿತ ಸ್ವಯಂ ಸೇವಕರನ್ನು ಕಂಡರೆಂಬುದು : ಆದರೂ ಸಹ ಸಂಘ ಪರಿವಾರದವರು ಸಾಮಾಜಿಕ ಸುಧಾರಣಾ ಆಂದೋಲನ ದಲ್ಲಿಯೂ ಸಹ ತಾವು ಬಹುಜನರಿಂದ ಮೇಲ್ಪಟ್ಟವರೆಂಬ ಸ್ವಾರ್ಥತೆಯನ್ನು ಬಿಟ್ಟುಕೊಡುವುದಿಲ್ಲ. □

ಪುಸ್ತಕ ವಿಮರ್ಶೆ

'ಡೆವಲಪ್‌ಮೆಂಟ್ ಆ್ಯಸ್ ಫ್ರೀಡಂ' ಎಂಬುದು ಅಮರ್ತ್ಯಸೇನ್ ಅವರ ಚಿಂತನೆಗಳ ಕೃತಿ. ಇದರಲ್ಲಿ ಅವರು ಯಾವ ತಾಂತ್ರಿಕ ಅರ್ಥಶಾಸ್ತ್ರೀಯ ವ್ಯಾಖ್ಯಾನವನ್ನು ಕೊಡದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಆರ್ಥಿಕತೆಯನ್ನಿರಿಸಿಕೊಂಡು ಬದುಕಿನ ವಿಶ್ಲೇಷಣೆ ನಡೆಸುತ್ತಾ ಸಾಗಿದ್ದಾರೆ. ಆದ್ದರಿಂದಲೇ ಅವರು ಇತಿಹಾಸದ ಬಗ್ಗೆ, ಸಂಪ್ರದಾಯದ ಬಗ್ಗೆ, ಮಹಿಳೆಯರ ಮಕ್ಕಳ ಬಗ್ಗೆ ಬದುಕಿನ ನಾನಾ ಮಗ್ಗುಲುಗಳ ಬಗ್ಗೆ ಚರ್ಚಿಸಿದ್ದಾರೆ. ಈ ಹೊತ್ತಗೆಯಲ್ಲಿ 'ಬೆಳವಣಿಗೆ' ಮತ್ತು 'ಸ್ವಾತಂತ್ರ್ಯ' ವನ್ನು ಸ್ವೀಕರಿಸಿದ್ದಾರೆ ಸೇನ್. ಅವರ ಪ್ರಕಾರ ಬೆಳವಣಿಗೆ ಯಾಗಬೇಕಾದರರೆ ಸ್ವಾತಂತ್ರ್ಯ ರಹಿತ ಸ್ಥಿತಿ ನಿರ್ಮೂಲನೆ ಯಾಗಬೇಕಾಗಿದೆ.

○ ಅರವಿಂದ ಚೊಕ್ಕಾಡಿ

ಡೆವಲಪ್‌ಮೆಂಟ್ ಆ್ಯಸ್ ಫ್ರೀಡಂ

ಅಂತರಂಗದ ಸ್ವಾತಂತ್ರ್ಯ

'ಡೆವಲಪ್‌ಮೆಂಟ್ ಆ್ಯಸ್ ಫ್ರೀಡಂ' ಎಂಬುದು ಅಮರ್ತ್ಯಸೇನ್ ಅವರ ಚಿಂತನೆಗಳ ಕೃತಿ. ಇದರಲ್ಲಿ ಅವರು ಯಾವ ತಾಂತ್ರಿಕ ಅರ್ಥಶಾಸ್ತ್ರೀಯ ವ್ಯಾಖ್ಯಾನವನ್ನು ಕೊಡದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಆರ್ಥಿಕತೆಯನ್ನಿರಿಸಿಕೊಂಡು ಬದುಕಿನ ವಿಶ್ಲೇಷಣೆ ನಡೆಸುತ್ತಾ ಸಾಗಿದ್ದಾರೆ. ಆದ್ದರಿಂದಲೇ ಅವರು ಇತಿಹಾಸದ ಬಗ್ಗೆ ಸಂಪ್ರದಾಯದ ಬಗ್ಗೆ ಮಹಿಳೆಯರ ಮಕ್ಕಳ ಬಗ್ಗೆ ಬದುಕಿನ ನಾನಾ ಮಗ್ಗುಲುಗಳ ಬಗ್ಗೆ ಚರ್ಚಿಸಿದ್ದಾರೆ. ಆದರೆ ೩೬೬ ಪುಟಗಳ ಹೊತ್ತಗೆಯಲ್ಲಿ 'ಬೆಳವಣಿಗೆ' ಮತ್ತು 'ಸ್ವಾತಂತ್ರ್ಯ' ವನ್ನು ಸ್ವೀಕರಿಸಿದ್ದಾರೆ ಸೇನ್.

ಅವರ ಪ್ರಕಾರ ಬೆಳವಣಿಗೆಯಾಗಬೇಕಾದರೆ ಸ್ವಾತಂತ್ರ್ಯ ರಹಿತ ಸ್ಥಿತಿ ನಿರ್ಮೂಲನೆಯಾಗಬೇಕಾಗಿದೆ. ಸ್ವಾತಂತ್ರ್ಯ ರಹಿತ ಸ್ಥಿತಿ ಆರ್ಥಿಕ ಬಡತನ, ಸಾಮಾಜಿಕ ತುಳಿತ, ಸಾರ್ವಜನಿಕ ಮೂಲಭೂತ ಸೌಲಭ್ಯಗಳ ಕೊರತೆ, ರಾಜಕೀಯ ಅಸಹನೆಗಳು ಒಳಗೊಳ್ಳುತ್ತವೆ. ಜಾಗತೀಕರಣದ ಸಾಂಸ್ಕೃತಿಕ ಅಪಾಯಗಳ ಕುರಿತು ಚರ್ಚಿಸುವಾಗ ಅವರು ಮನುಷ್ಯನ ಅಂತರಂಗದ ಸ್ವಾತಂತ್ರ್ಯ ಹರಣವಾಗುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾರೆ. ಅಂತರಂಗದ ಸ್ವಾತಂತ್ರ್ಯವೂ ಕೂಡ ಬೆಳವಣಿಗೆಯ ಸಾಧಕ ಶಕ್ತಿಯೆಂದು ಭಾವಿಸುತ್ತಾರೆ.



ಡೆವಲಪ್‌ಮೆಂಟ್ ಆ್ಯಸ್ ಫ್ರೀಡಂ
ಲೇ. ಅಮರ್ತ್ಯ ಸೇನ್,
ಪ್ರಕಾಶನ: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ವೈಎಮ್‌ಸಿಎ ಲೈಬ್ರರಿ ಬಿಲ್ಡಿಂಗ್, ಜೈಸಿಂಗ್ ರೋಡ್, ನವದೆಹಲಿ – ೧.
ಪುಟ : ೩೬೬, ಬೆಲೆ : ರೂ. ೨೫೦/-

ಸ್ಮಿತ್, ಸ್ವಾತಂತ್ರ್ಯವನ್ನು ಆರ್ಥಿಕ ಚಟುವಟಿಕೆಯ ಆಧಾರದಲ್ಲಿ ವ್ಯಾಖ್ಯಾನಿಸಿದರೆ ಸೇನ್ ಸಮಗ್ರ ಚಟುವಟಿಕೆಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸುತ್ತಾರೆ. ಅವರು ಇರಿಸಿಕೊಂಡಿರುವ 'ಸಮಗ್ರ'ದ ಪರಿಕಲ್ಪನೆಯೇ 'ಸ್ವಾತಂತ್ರ್ಯ'ವನ್ನು ಸಮಾಜವಾದಿ ಒಲವುಗಳೆಡೆಗೆ ತಿರುಗಿಸುತ್ತದೆ. ಆದರದು ಪ್ರಭುತ್ವ ನಿಯಂತ್ರಿತ ಸಮಾಜವಾದವಾಗಿರದೆ ವ್ಯಕ್ತಿ ನಿಯಂತ್ರಿತವಾಗಿದೆ. ಇಂಥಲ್ಲಿ ಸೇನ್, 'ಸಾಮಾಜಿಕ ಮೌಲ್ಯಗಳು' ಎಂಬ ಪ್ರಶ್ನೆಯನ್ನು ಎತ್ತುತ್ತಾರೆ. ಅದನ್ನು ಬಹಳ ಗೌಣವಾಗಿ ಸ್ಮಿತ್ ಕೂಡ ಗಮನಿಸಿದ್ದರು. ಆದರೆ ಸ್ಮಿತ್ ಸಾಮಾಜಿಕ ಮೌಲ್ಯಗಳನ್ನು ಆರ್ಥಿಕತೆಯೊಂದಿಗೆ ಸಂಯೋಜಿಸಿ ಒಟ್ಟೂ ಬದುಕನ್ನು ಆರ್ಥಿಕತೆಯ ತೆಕ್ಕೆಯಲ್ಲಿ ಬಂಧಿಸುತ್ತಾರೆ. ಅದಕ್ಕಿಂತ ಭಿನ್ನವಾಗಿ ಸೇನ್, ಸಾಮಾಜಿಕ ಮೌಲ್ಯಗಳನ್ನು ಸಂಸ್ಕೃತಿಯೊಂದಿಗೆ ಸಂಯೋಜಿಸುತ್ತಾರೆ. ಆರ್ಥಿಕತೆಯನ್ನು ಸಂಸ್ಕೃತಿಯೊಂದಿಗೆ ಒಳಗೊಳಿಸುತ್ತಾರೆ.

ಸೇನರ 'ಸ್ವಾತಂತ್ರ್ಯ'ದ ಪರಿಕಲ್ಪನೆ ಸಮಾಜವಾದಿ ಪ್ರಕ್ರಿಯೆಯಾಗಿ ಬದಲಾಗುವುದು ಈ ಸನ್ನಿವೇಶದಲ್ಲಿ 'ಆರ್ಥಿಕತೆ' ಎನ್ನುವುದು ಮೂಲತಃ ವ್ಯಕ್ತಿಯ ಅವಶ್ಯಕತೆಯಾಗಿದ್ದು ಆನಂತರ ಸಮಷ್ಟಿಯ ರೂಪತಾಳಿ ಸಾಮಾಜಿಕ ಅವಶ್ಯಕತೆಯಾಗುತ್ತದೆ. ಸಂಸ್ಕೃತಿ ಎನ್ನುವುದು ಮೂಲತಃ ಸಮಷ್ಟಿಯ ಅವಶ್ಯಕತೆಯಾಗಿದ್ದು ವ್ಯಕ್ತಿ ಸಮಾಜದ ಒಂದು ಅಂಗವಾಗಿ ಅದು ವೈಯಕ್ತಿಕ ಅವಶ್ಯಕತೆಯಾಗುತ್ತದೆ. ಆದ್ದರಿಂದ ಆರ್ಥಿಕತೆಯನ್ನು ಸಂಸ್ಕೃತಿಯೊಂದಿಗೆ ಒಳಗೊಳಿಸಿದಾಗ ಅದು ಸಮಾಜವಾದಿ ಸ್ವರೂಪ ತಾಳುತ್ತದೆ. ಸೇನ್ ಆ ಕೆಲಸವನ್ನು ಮಾಡುತ್ತಾರೆ. ಮುಕ್ತ ಸ್ವಾತಂತ್ರವಿದ್ದೂ ಸಾಮಾಜಿಕ ಹಿತ ಸಾಧನೆಗೆ ಕಾರಣವಾಗುವ ಅಂಶವನ್ನು ಸೇನ್ 'ಸಾಮಾಜಿಕ ಜವಾಬ್ದಾರಿ ಪ್ರಜ್ಞೆ' ಎನ್ನುತ್ತಾರೆ. ಇಲ್ಲಿ ಕೂಡ ಸೇನ್ ಮತ್ತು ಸ್ಮಿತ್ ನಡುವಿನ ಭಿನ್ನತೆಯನ್ನು ನೋಡಬಹುದು.

ಸ್ಮಿತ್‌ರ ಪ್ರಕಾರ ಸಾಮಾಜಿಕ ಜವಾಬ್ದಾರಿ ಅಂತಹ ಮುಖ್ಯ ವಿಷಯವಲ್ಲ. ವ್ಯಕ್ತಿ ತನ್ನ ಹಿತಕ್ಕಾಗಿ ಅನಿವಾರ್ಯವಾಗಿ ಸಾಮಾಜಿಕ ಹಿತವನ್ನು ಮಾಡುತ್ತಾನೆ (ಅರ್ಥಾತ್ ಸಾಮಾಜಿಕ ಹಿತದ ನಟನೆ) ಎನ್ನುತ್ತಾರೆ ಸ್ಮಿತ್. ಅವರ ಪ್ರಕಾರ ಸಾಮಾಜಿಕ ಹಿತ ವ್ಯಕ್ತಿಯ ಅನಿವಾರ್ಯತೆಯಷ್ಟೇ. ಸ್ಮಿತ್‌ರ ಈ ಅಭಿಪ್ರಾಯದ ದಟ್ಟ ಪ್ರಭಾವವನ್ನು ಜಾಗತೀಕರಣಕ್ಕೆ ಒಡ್ಡಿಕೊಂಡಿರುವ ಭಾರತದಲ್ಲಿ ಧಾರಳವಾಗಿ ಕಾಣಬಹುದು. ಇಲ್ಲಿ ಸಹಾಯ, ಸಹಕಾರ, ದಾನ, ಧರ್ಮ ಎಲ್ಲವೂ ಪ್ರಚಾರವನ್ನೂ ಗಿಟ್ಟಿಸಿ ಇನ್ನೊಂದೆಡೆ ಎನ್‌ಕ್ಯಾಶ್ ಮಾಡಿ ಕೊಳ್ಳುವ ಕ್ರಮವನ್ನು ಕಾಣಬಹುದು. ಆದರೆ ವ್ಯಕ್ತಿಹಿತವನ್ನೂ, ಸಮಾಜಹಿತವನ್ನೂ ಪ್ರಧಾನವಾಗಿ ಕಾಣುವ ಸೇನ್‌ರ ಪ್ರಕಾರ ಸಾಮಾಜಿಕ ಹಿತ ವ್ಯಕ್ತಿಯ ಅನಿವಾರ್ಯತೆ ಎಂಬುದಕ್ಕಿಂತ ಮುಖ್ಯವಾಗಿ ಅದು ವ್ಯಕ್ತಿಯ ಕರ್ತವ್ಯ. ಆದರಿಂದ ತನ್ನ ಹಿತ ಸಾಧನೆಯಾಗುತ್ತದೋ ಇಲ್ಲವೋ ಎಂಬುದಕ್ಕೆ ಎರಡನೆ ಆದ್ಯತೆಯಾಗಿದ್ದು ಅದು ನೈತಿಕ ಬದ್ಧತೆ ಎಂಬುದೇ ಮುಖ್ಯ ಸಂಗತಿ. ಹೆಚ್ಚುಕಮ್ಮಿ ಇದು ತೆರಿಗೆ ಸಲ್ಲಿಕೆಯನ್ನು ರೈತರ ನೈತಿಕ ಕರ್ತವ್ಯ (ಅದನ್ನು ರಾಜನ ಅಧಿಕಾರದಿಂದ ಹೊರಗಿರಿಸಲಾಗಿದೆ) ಎಂದು ಹೇಳಿದ ತಿರುವಳ್ಳುವರ್ ಅಭಿಪ್ರಾಯವನ್ನು ಹೋಲುತ್ತದೆ.

ಸೇನ್ ಅವರ ಈ ಚಿಂತನೆಯಿಂದ ದೇಶದ ಬೆಳವಣಿಗೆಯ ಕುರಿತ ಕಲ್ಪನೆ ಬಹುರೂಪಿಯಾದುದು ಎಂಬುದನ್ನು ಗಮನಿಸಬೇಕು. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ ರಂಗಗಳೆಲ್ಲದರ ಬೆಳವಣಿಗೆ ಆರ್ಥಿಕತೆಯ ಪ್ರಗತಿಗೆ ಕಾರಣವಾಗುತ್ತದೆ ಎನ್ನುವ ಅಭಿಪ್ರಾಯ ಪ್ರಸ್ತುತ ಜಾಗತೀಕರಣ ಸಂದರ್ಭದಲ್ಲಿ ಮಹತ್ವದ ಅಂಶ. ಯಾಕೆಂದರೆ ಜಾಗತೀಕರಣವು ಪ್ರಗತಿಯನ್ನು ಆರ್ಥಿಕ ಮುಖದಿಂದ ಮಾತ್ರ ವಿಶ್ಲೇಷಿಸುತ್ತದೆ. ಅಂಥಲ್ಲಿ ಸೇನ್‌ರ ಚಿಂತನೆಗಳು ಭಿನ್ನ ದೃಷ್ಟಿಯನ್ನಿಟ್ಟುಕೊಂಡಿದ್ದು ಸಮಗ್ರ ವ್ಯವಸ್ಥೆಯನ್ನು ಆಧರಿಸುವಂತಹದಾಗಿದೆ. ಬಹುಶಃ ಈ ಭಿನ್ನತೆಯನ್ನೇ ಆಧರಿಸಿ ತಾತ್ತ್ವಿಕ ಭಿನ್ನಾಭಿಪ್ರಾಯವನ್ನೂ, ಸೇನ್‌ರ ಸಮಾಜವಾದಿ ಜನತಾಂತ್ರಿಕ ಒಲವುಗಳನ್ನೂ ಸ್ಪಷ್ಟಪಡಿಸಬಹುದು.

ಸೇನ್ ಅವರು ಸಮಗ್ರತೆಯೆಡೆಗೆ ಚಾಚಿಕೊಳ್ಳುತ್ತಾರೆ ಎಂಬುದನ್ನು ಬಿಟ್ಟರೆ ಜಾಗತೀಕರಣದಲ್ಲಿ ತಾತ್ತ್ವಿಕವಾಗಿ ಪ್ರತಿಪಾದಿಸಿರುವ ಮುಕ್ತ ಸ್ವಾತಂತ್ರ್ಯವನ್ನು ಅವರೂ ಒಪ್ಪಿಕೊಳ್ಳುತ್ತಾರೆ. ಜಾಗತೀಕರಣದ ಹಿಂದೆ ಇರುವಂಥದ್ದು ಆ್ಯಡಂ ಸ್ಮಿತ್ ಅವರ ಬಂಡವಾಳಶಾಹಿ ಅರ್ಥಶಾಸ್ತ್ರ. ಸ್ಮಿತ್ ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯೂ ಸ್ವಾರ್ಥಿಯಾಗಿದ್ದು ಅವರವರ ಸ್ವಾರ್ಥಕ್ಕಾಗಿಯೇ ನಡೆಯುವ ಕ್ರಿಯೆಯು ಸಾಮಾಜಿಕ ಹಿತವನ್ನು ಸಾಧಿಸುತ್ತದೆ; ಆದ್ದರಿಂದ ಮುಕ್ತ ಅರ್ಥವ್ಯವಸ್ಥೆ ಇದ್ದಾಗ ಪೈಪೋಟಿ; ಪೈಪೋಟಿಯಿಂದ ಪ್ರಗತಿ ಸಾಧ್ಯ. ಆದರೆ ಸ್ಮಿತ್‌ರನ್ನು ನಿರಾಕರಿಸುವ ಸೇನ್ ಶೇಕ್ಸ್‌ಪಿಯರ್ ಮಾತುಗಳನ್ನು ಉದ್ಧರಿಸುತ್ತಾ 'ಸ್ಮಿತ್‌ರ ಸಿದ್ಧಾಂತ ಸಂಕುಚಿತ ಮನುಷ್ಯನನ್ನು ಇನ್ನಷ್ಟು ಸಂಕುಚಿತನನ್ನಾಗಿಸುವ ಸಿದ್ಧಾಂತವಾಗಿದೆ' ಎನ್ನುತ್ತಾರೆ. ಇಂಥಲ್ಲಿ ಸ್ಮಿತ್ ಹೇಳುವ ಸ್ವಾತಂತ್ರ್ಯಕ್ಕೂ ಸೇನ್ ಹೇಳುವ ಸ್ವಾತಂತ್ರ್ಯಕ್ಕೂ ಇರುವ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸಬೇಕು.

ಎರಡನೆಯದಾಗಿ ಸೇನ್‌ರ ಚಿಂತನೆಗಳು ಮಾರ್ಕ್ಸ್‌ವಾದಿ ವ್ಯವಸ್ಥೆಗಿಂತ ಕೊಂಚ ಭಿನ್ನವಾಗಿದೆ ಎಂಬುದನ್ನು ಗಮನಿಸಬೇಕು. ತಾತ್ತ್ವಿಕವಾಗಿ ಅದರ ಮುಖ್ಯ ಲೋಪವೆಂದರೆ ಸಮತಾವಾದಿ ವ್ಯವಸ್ಥೆಯಲ್ಲೂ ಆಳುವ ವರ್ಗವೊಂದು ಇರುತ್ತದೆ ಮತ್ತು ಅದರಲ್ಲೂ ಮನುಷ್ಯ ಸಹಜ ಸ್ವಾರ್ಥವಿರುತ್ತದೆ ಎಂಬುದರ ಬಗ್ಗೆ ವಿಶೇಷ ಕಾಳಜಿ ವಹಿಸದೆ ಆಳುವ ವರ್ಗ ಜನರ ಎಲ್ಲ ಆಶೋತ್ತರಗಳ ನೈಜ ಪ್ರತಿನಿಧಿಯಾಗಿರುತ್ತದೆ ಎಂದು ಭಾವಿಸಿರುವುದು. ಅದರಿಂದಾಗಿ ಆಳುವ ವರ್ಗ ಮಾನವ ಸಹಜ ದೌರ್ಬಲ್ಯಗಳಿಗೆ ಬಲಿಯಾದಾಗ ಅದನ್ನು ನಿವಾರಿಸುವ ಯಾವ ಮಾರ್ಗವೂ ಇಲ್ಲದೆ ಜನರ ಸ್ವಾತಂತ್ರ್ಯ ಹರಣವಾಗುತ್ತದೆ. ಆದರೆ ಸೇನ್‌ರ ಪ್ರಕಾರ ಯಾವುದೇ ಬೆಳವಣಿಗೆಗೂ ಪ್ರಧಾನ ಸೂತ್ರ ಸ್ವಾತಂತ್ರ್ಯವೇ. ಅಲ್ಲದೆ ಮಾರ್ಕ್ಸ್‌ವಾದಿ ವ್ಯವಸ್ಥೆ ಜನರ ಆರ್ಥಿಕ ಸ್ವಾತಂತ್ರ್ಯವನ್ನಷ್ಟೇ ಬಹುಮುಖ್ಯವೆಂದು ಭಾವಿಸುತ್ತದೆ. ಆಗ ಇತರೆಲ್ಲ ಸ್ವಾತಂತ್ರ್ಯ ಹರಣವಾಗಲು ಸಾಧ್ಯವಿದೆ. ಅದರಿಂದ ಪ್ರಗತಿ ಎಂಬುದು ಆರ್ಥಿಕ ಪ್ರಗತಿಯಾದೀತೇ ಹೊರತು ಸಮಗ್ರ ಪ್ರಗತಿಯಾಗಲು ಕಷ್ಟವಿದೆ.

ಸೇನ್‌ರ ಪ್ರಕಾರ ಸಮಗ್ರ ಪ್ರಗತಿಯು ಆರ್ಥಿಕ ಪ್ರಗತಿಗೆ ಪೂರಕವೇ ಹೊರತು ಪ್ರತ್ಯೇಕವಲ್ಲ. ತಾತ್ತ್ವಿಕವಾಗಿ ಹೇಗೇ ಇದ್ದರೂ ಮಾರ್ಕ್ಸ್‌ವಾದಿ ಪ್ರಭುತ್ವ ಜನರಿಗೆ ಫೀಡ್ ಮಾಡುತ್ತದೆಯೇ ಹೊರತು ಇಂಡಿವಿಜುವಲಿಟಿಯನ್ನು ಗಮನಿಸುವುದಿಲ್ಲ. ಅದರಿಂದ ಜನರ ಬದುಕು ಯಾಂತ್ರಿಕವಾಗಿಬಿಡುತ್ತದೆ. ಸೇನ್ ಇಂತಹ ವ್ಯವಸ್ಥೆಯನ್ನು ಒಪ್ಪುವುದಿಲ್ಲ. ಇಂಡಿವಿಜುವಲಿಟಿಯನ್ನು ಅವರು ಬಹುವಾಗಿ ಗೌರವಿಸುತ್ತಾರೆ. ಮನುಷ್ಯನನ್ನು ಪರಿಪೂರ್ಣ ಸೂಕ್ಷ್ಮ ಸಂವೇದನಾಶೀಲವೆಂದು ಪರಿಗಣಿಸುತ್ತಾರೆ. ಆದಾಗ್ಯೂ ಹುಡುಕಿ ಹುಡುಕಿ ಸೇನ್‌ರ ಆರ್ಥಿಕ ಚಿಂತನೆಗಳನಷ್ಟೇ ಪ್ರತ್ಯೇಕಿಸಿ ನೋಡಿದರೆ ಅದರಲ್ಲಿ ಮಾರ್ಕ್ಸ್‌ವಾದದ ದಟ್ಟ ಪ್ರಭಾವವಿರುವುದನ್ನು ಕಾಣಬಹುದು.

ಫ್ರೆಡ್ರಿಕ್ ಏಂಗೆಲ್ಸ್ ಒಂದು ಬಾರಿ ಆ ಕಾಲಮಾನದ ಅನಿವಾರ್ಯತೆಯಾಗಿ ಮಾರ್ಕ್ಸ್‌ವಾದವನ್ನು ಆರ್ಥಿಕತೆಯ ವ್ಯಾಪ್ತಿಗೊಳಪಡಿಸಬೇಕಾಯಿತೇ ಹೊರತು ಅದಕ್ಕೆ ಸಾಂಸ್ಕೃತಿಕ ಸ್ವರೂಪದ ಅಗತ್ಯವೂ ಇದೆಯೆಂದು ಒಪ್ಪಿಕೊಂಡಿದ್ದರು. ಪ್ರಾಯಶಃ ಸೇನ್ ಮಾರ್ಕ್ಸ್‌ವಾದಕ್ಕೆ ಕಲ್ಚರಲ್ ಡೈಮೆನ್ಷನ್ ಕೊಟ್ಟಿದ್ದಾರೇನೋ ಎಂದು ಭಾಸವಾಗುತ್ತದೆ. ಅದರಿಂದಾಗಿ ಅವರಿಗೆ ಯಾವುದೇ ವ್ಯವಸ್ಥೆಯಲ್ಲೂ ಮನುಷ್ಯ ಸಹಜ ಸ್ವಾರ್ಥ, ಆಳುವ ವರ್ಗವನ್ನು ತಟ್ಟಲು ಸಾಧ್ಯವಿದೆ ಎಂದು ಗುರುತಿಸಲು ಸಾಧ್ಯವಾಗಿದೆ. ಪ್ರಜ್ಞಾವಂತ ನಾಗರಿಕರು ಜವಾಬ್ದಾರಿಯುತರಾಗಲು ಸಾಧ್ಯವಾಗಿದೆ. ಇವೆಲ್ಲವೂ ಸೇನ್‌ರ ಒಲವು ಸಮಾಜವಾದ ಜನತಾಂತ್ರಿಕತೆಯ ಕಡೆಗಿದೆ ಎನ್ನಲು ಸಾಕ್ಷಿಯಾಗುತ್ತವೆ. ಸಮಕಾಲೀನ ಭಾರತದ ರಾಜಕೀಯ ವ್ಯವಸ್ಥೆಯೂ ಸಮಾಜವಾದಿ ಜನತಂತ್ರವೇ ಆಗಿರುವಾಗ ಸೇನ್ ಬಹಳ ಮುಖ್ಯರಾಗುತ್ತಾರೆ.

ಆದರೆ ಸ್ವಾತಂತ್ರ್ಯದಿಂದಲೇ ಬೆಳವಣಿಗೆ ಸಾಧ್ಯ ಎಂಬುದನ್ನು ಸಾಧಿಸಲೇಬೇಕೆಂಬ ಸೇನರ ಹಟವಾದಿ ಧೋರಣೆಯೂ ಕೃತಿಯಲ್ಲಿ ಪ್ರಕಟವಾಗಿದೆ. ಸ್ವಾತಂತ್ರ್ಯ, ಪ್ರಗತಿ ಮತ್ತು ಜನಸಂಖ್ಯಾ ನಿಯಂತ್ರಣದ ಬಗ್ಗೆ ಮಾತನಾಡುವಾಗ ಅವರು ಚೈನಾ ದೇಶ ಮತ್ತು ಕೇರಳ ರಾಜ್ಯಗಳನ್ನು ಹೋಲಿಸಿ ಅಂಕಿ

'ಸಾಮಾಜಿಕ ಜವಾಬ್ದಾರಿ' ಎನ್ನುವ ಮಾತು ಎಷ್ಟರ ಮಟ್ಟಿಗೆ ವ್ಯಕ್ತಿ ಸ್ವಾರ್ಥವನ್ನು ಬದಿಗಿರಿಸಿ ಸಾಮಾಜಿಕ ಹಿತಸಾಧಿಸಬಲ್ಲುದು ಎಂಬ ಪ್ರಶ್ನೆ ಸೇನರನ್ನು ಬಹುವಾಗಿ ಬಾಧಿಸಿರುವಂತಿದೆ. ಅದರ ಪರಿಣಾಮವಾಗಿ ಬಹುತೇಕ ಸಮಸ್ಯೆಗಳಿಗೆಲ್ಲ ಅವರು ಶಿಕ್ಷಣದಲ್ಲಿ ಅಂತಿಮ ಪರಿಹಾರವನ್ನು ಹುಡುಕುತ್ತಾ ಹೋಗಿದ್ದಾರೆ. ಶಿಕ್ಷಣವು ಮುಗ್ಧತೆಯನ್ನು ತೊಡೆದು ಹಾಕಿ ವೈಚಾರಿಕತೆಯನ್ನು ಉದ್ದೀಪಿಸುತ್ತದೆ. ಶಿಕ್ಷಣದ ಏರಿಕೆಯೊಡನೆ ಮನುಷ್ಯನ ಆಸೆಗಳು ಬೆಳೆಯುತ್ತವೆ. ಆಗ ಸುಶಿಕ್ಷಿತವಾಗಿ ಬರುವ ಸಮುದಾಯದ ಆಸೆ, ನಿರೀಕ್ಷೆಗಳನ್ನು ಪೂರೈಸಬಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಕರಗಳು ಇಲ್ಲದೆ ಹೋದರೆ ಶಿಕ್ಷಣವು ಸಾಮಾಜಿಕ ಪ್ರಜ್ಞೆ ಮೂಡಿಸುವ ಬದಲು ನೇತ್ಯಾತ್ಮಕ ಚಟುವಟಿಕೆಗೆ ಪ್ರೇರೇಪಿಸಬಲ್ಲುದು.

ಅಂಶಗಳನ್ನು ಕೊಟ್ಟು ಕೇರಳದಲ್ಲಿನ ಸ್ವಾತಂತ್ರ್ಯ ಮತ್ತು ಶಿಕ್ಷಣದಿಂದಾಗಿ ಚೈನಾಕ್ಕಿಂತ ಹೆಚ್ಚು ಜನಸಂಖ್ಯಾ ನಿಯಂತ್ರಣ ಸಾಧ್ಯವಾಗಿದೆ ಎನ್ನುತ್ತಾರೆ. ಅವರ ಅಭಿಪ್ರಾಯದ ಬಗ್ಗೆ ಎರಡು ಮಾತಿಲ್ಲವಾದರೂ ಅವರೆತ್ತಿಕೊಂಡಿರುವ ಹೋಲಿಕೆಯ ಬಗ್ಗೆ ತಕರಾರು ಎತ್ತಬೇಕಾಗುತ್ತದೆ. ಮೊದಲನೆಯದಾಗಿ ಒಂದು ರಾಷ್ಟ್ರವಾಗಿ ಚೈನಾಕ್ಕೆ ಇರುವಂತಹ ಸಮಸ್ಯೆಗಳು ಕೇರಳಕ್ಕೆ ಇಲ್ಲ. ಎರಡನೆಯದಾಗಿ ಚೈನಾ ಮತ್ತು ಕೇರಳದ ನಡುವೆ ಭೌಗೋಳಿಕ, ಸಾಂಸ್ಕೃತಿಕ, ಜನಾಂಗೀಯ ಭಿನ್ನತೆಗಳಿವೆ. ಮೂರನೆಯದಾಗಿ ಕೇರಳದ ಜನರು ಅಂಕಿ ಅಂಶಗಳ ಅವಲೋಕನಕ್ಕೆ ಸಿಗದೆ ರಾಷ್ಟ್ರದೊಳಗೆ ಮೊಬಿಲೈಸ್ ಆಗಲು

ಸೇನ್‌ರ ಪ್ರಕಾರ ಸಮಗ್ರ ಪ್ರಗತಿಯು ಆರ್ಥಿಕ ಪ್ರಗತಿಗೆ ಪೂರಕವೇ ಹೊರತು ಪ್ರತ್ಯೇಕವಲ್ಲ. ತಾತ್ತ್ವಿಕವಾಗಿ ಹೇಗೇ ಇದ್ದರೂ ಮಾರ್ಕ್ಸ್‌ವಾದಿ ಪ್ರಭುತ್ವ ಜನರಿಗೆ ಫೀಡ್ ಮಾಡುತ್ತದೆಯೇ ಹೊರತು ಇಂಡಿವಿಜುವಲಿಟಿಯನ್ನು ಗಮನಿಸುವುದಿಲ್ಲ. ಅದರಿಂದ ಜನರ ಬದುಕು ಯಾಂತ್ರಿಕವಾಗಿಬಿಡುತ್ತದೆ. ಇಂಡಿವಿಜುವಲಿಟಿಯನ್ನು ಅವರು ಬಹುವಾಗಿ ಗೌರವಿಸುತ್ತಾರೆ. ಮನುಷ್ಯನನ್ನು ಪರಿಪೂರ್ಣ ಸೂಕ್ಷ್ಮ ಸಂವೇದನಾ ಶೀಲನೆಂದು ಪರಿಗಣಿಸುತ್ತಾರೆ. ಆದಾಗ್ಯೂ ಹುಡುಕಿ ಹುಡುಕಿ ಸೇನ್‌ರ ಆರ್ಥಿಕ ಚಿಂತನೆಗಳನಷ್ಟೇ ಪ್ರತ್ಯೇಕಿಸಿ ನೋಡಿದರೆ ಅದರಲ್ಲಿ ಮಾರ್ಕ್ಸ್‌ವಾದದ ದಟ್ಟ ಪ್ರಭಾವವಿರುವುದನ್ನು ಕಾಣಬಹುದು.

ಸಾಧ್ಯವಿದೆ. ಆದರೆ ಚೈನಾದ ಜನರು ಮೊಬಿಲೈಸ್ ಆದರೆ ಬೇರೆ ದೇಶಗಳಿಗೆ ಆಗಬೇಕು; ಆಗ ಖಚಿತ ಅಂಕಿಅಂಶಗಳ ದಾಖಲೆ ದೊರಕುತ್ತದೆ.

ಹಾಗೆಯೇ ತಾವು ಮುಂದಿಡುವ 'ಸಾಮಾಜಿಕ ಜವಾಬ್ದಾರಿ' ಎನ್ನುವ ಮಾತು ಎಷ್ಟರ ಮಟ್ಟಿಗೆ ವ್ಯಕ್ತಿ ಸ್ವಾರ್ಥವನ್ನು ಬದಿಗಿರಿಸಿ ಸಾಮಾಜಿಕ ಹಿತಸಾಧಿಸಬಲ್ಲುದು ಎಂಬ ಪ್ರಶ್ನೆ ಸೇನರನ್ನು ಬಹುವಾಗಿ ಬಾಧಿಸಿರುವಂತಿದೆ. ಅದರ ಪರಿಣಾಮವಾಗಿ ಬಹುತೇಕ ಸಮಸ್ಯೆಗಳಿಗೆಲ್ಲ ಅವರು ಶಿಕ್ಷಣದಲ್ಲಿ ಅಂತಿಮ ಪರಿಹಾರವನ್ನು ಹುಡುಕುತ್ತಾ ಹೋಗಿದ್ದಾರೆ. ಆದರೆ ಶಿಕ್ಷಣವೇ ಅಂತಿಮ ಪರಿಹಾರವಾಗಬಲ್ಲುದೇ; ಸಾಮಾಜಿಕ ಪ್ರಜ್ಞೆಯ ಸಾಧನವಾಗಬಲ್ಲುದೇ ಎಂಬ ಪ್ರಶ್ನೆ ಇದೆ.

ಸಹಜವಾಗಿಯೇ ಶಿಕ್ಷಣವು ಮುಗ್ಧತೆಯನ್ನು ತೊಡೆದು ಹಾಕಿ ವೈಚಾರಿಕತೆಯನ್ನು ಉದ್ದೀಪಿಸುತ್ತದೆ. ಶಿಕ್ಷಣದ ಏರಿಕೆಯೊಡನೆ ಮನುಷ್ಯನ ಆಸೆಗಳು ಬೆಳೆಯುತ್ತವೆ. ಆಗ ಸುಶಿಕ್ಷಿತವಾಗಿ ಬರುವ ಸಮುದಾಯದ ಆಸೆ, ನಿರೀಕ್ಷೆಗಳನ್ನು ಪೂರೈಸಬಲ್ಲ ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಕರಗಳು ಇಲ್ಲದೆ ಹೋದರೆ ಶಿಕ್ಷಣವು ಸಾಮಾಜಿಕ ಪ್ರಜ್ಞೆ ಮೂಡಿಸುವ ಬದಲು ನೇತ್ಯಾತ್ಮಕ ಚಟುವಟಿಕೆಗೆ ಪ್ರೇರೇಪಿಸಬಲ್ಲುದು. ಇದರ ಅರ್ಥ ಶಿಕ್ಷಣದ ಏರಿಕೆಯಾಗಬಾರದೆಂದಲ್ಲ, ಅದು ಆಗಲೇಬೇಕಾದದ್ದು. ಆದರೆ ಅದರ ಜೊತೆಗೆ ಸುಶಿಕ್ಷಿತ ಸಮುದಾಯದ ನಿರೀಕ್ಷೆಗಳನ್ನು ಭರಿಸಿಕೊಡುವ ವ್ಯವಸ್ಥೆ ಸಿದ್ಧವಾಗಬೇಕಾಗುತ್ತದೆ. ಇದನ್ನು ಗಂಭೀರವಾಗಿಯೇ ಪರಿಗಣಿಸಿರುವ ಸೇನ್ ಜನಸಂಖ್ಯಾ ನಿಯಂತ್ರಣದ ಬಗ್ಗೆ ಮಹಿಳೆಯರ ಸ್ಥಾನಮಾನದ ಏರಿಕೆಯ ಬಗ್ಗೆ ಸಹಕಾರದ ಬಗ್ಗೆ ಔದ್ಯೋಗಿಕ ಸಾಧ್ಯತೆಗಳ ಬಗ್ಗೆ ವಿಪುಲವಾಗಿ ಚರ್ಚಿಸಿದ್ದಾರೆ. ಅದರಲ್ಲೂ ಉದ್ಯೋಗದ ಬಗ್ಗೆ ಅವರ ಚಿಂತನೆ ಗಮನಾರ್ಹ.

ಯಾಂತ್ರೀಕರಣವನ್ನು ಒಪ್ಪಿಕೊಳ್ಳುವ ಅವರು ಯಂತ್ರಗಳು ಜನಸಂಖ್ಯೆಯ ಉದ್ಯೋಗದ ಪೂರೈಕೆಗೆ ಎಷ್ಟು ಬೇಕೋ ಅಷ್ಟೇ ಇರಬೇಕಲ್ಲದೆ ಔದ್ಯೋಗಿಕ ಸಾಧ್ಯತೆಗಳನ್ನು ತೊಡೆದು ಹಾಕುವಂತಿರಬಾರದು ಎಂದಿರುವುದು ವಾಸ್ತವಿಕವಾಗಿ ಬಹಳ ಮಹತ್ತ್ವದ ವಿಚಾರ. ಆದರೂ ಇದು ವರ್ತುಲದೊಳಗಿನ ಪಯಣ ಎನ್ನಲೇಬೇಕಾಗುತ್ತದೆ. ಸಾಮಾಜಿಕ ಶೋಷಣೆಯ ನಿವಾರಣೆಗೆ, ಸ್ವಾತಂತ್ರ್ಯದ ಸಾಧನೆಗೆ ಶಿಕ್ಷಣವು ಮೂಲಭೂತ ಅವಶ್ಯಕತೆ. ಆದರೆ ಅದರ ಪೂರೈಕೆಯಾದಾಗ ಅದು ಬಯಸುವ ಪರಿಕರಗಳು ಸಿಗದೆ ಹೋದಾಗ ಮತ್ತೆ ಶಿಕ್ಷಣವೇ ಶೋಷಣೆಯನ್ನೂ, ಸ್ವಾತಂತ್ರ್ಯ ರಾಹಿತ್ಯವನ್ನೂ ಸೃಷ್ಟಿಸಿಬಿಡುತ್ತವೆ. ಇದು ಸೇನ್ ಮಾತ್ರ ಎದುರಿಸುವ ಸಮಸ್ಯೆಯಲ್ಲ, ಪ್ರತಿಯೊಬ್ಬ ಚಿಂತಕನೂ ಎದುರಿಸುವ ಸಮಸ್ಯೆಯೇ ಆಗಿದೆ. ಅಂಥಲ್ಲಿ ಬೆಳವಣಿಗೆಯ ದಟ್ಟ ತೆರೆದುಕೊಳ್ಳುವಿಕೆ ಒಂದು ವ್ಯವಸ್ಥೆಯ ಪಲ್ಲಟವನ್ನು ನಿರೀಕ್ಷಿಸುತ್ತದೆ. ಅದಕ್ಕೆ ಮಾರ್ಕ್ಸ್‌ವಾದದಂತಹ ಬಿಗಿ ಧೋರಣೆ ಬೇಕಾಗುತ್ತದೆ. ಸೇನರ ಮೃದು ಧೋರಣೆಗಳು ವ್ಯವಸ್ಥೆಯನ್ನು ಪಲ್ಲಟಗೊಳಿಸುವಷ್ಟು ಸಶಕ್ತವಾಗಿಲ್ಲ. ಆದರೂ ಬೆಳವಣಿಗೆಯ ನಿರೀಕ್ಷೆ ಇಟ್ಟುಕೊಂಡು ಉರುಳುವ ಒಂದು ಉರುಳು, ಬೆಳವಣಿಗೆಯನ್ನು ಒಂದೆರಡು ಮೆಟ್ಟಿಲುಗಳಷ್ಟು ಮೇಲೇರಿಸುತ್ತದೆ. ಆ ಮಟ್ಟಿನ ಬೆಳವಣಿಗೆಗೆ ಬೇಕಾದ ಎಲ್ಲ ಸಾಧ್ಯತೆಗಳನ್ನು 'ಡಿವಲಪ್‌ಮೆಂಟ್ ಆ್ಯಸ್ ಫ್ರೀಡಂ' ನಿಚ್ಚಳವಾಗಿ ತೆರೆದಿಡುತ್ತದೆ. □

ಬಸವಣ್ಣನೂ ಅಸ್ಪೃಶ್ಯರ ಉದ್ಧಾರವೂ

ವಿವೇಚನೆ

ವರ್ಣಾಶ್ರಮ ಪ್ರಿಯರ ಅಭಿಪ್ರಾಯದಂತೆ, ಬಸವೇಶ್ವರನು ಜನ ಭಯಕ್ಕೊಳಗಾಗಿ ಮತಾಚಾರ್ಯರಂತೆ ಚಾಣಕ್ಯವನ್ನು ಬಳಸಿ ಸಮದರ್ಶಿತ್ವದ ತತ್ವವನ್ನು ನುಡಿಯಿಂದ ಮಾತ್ರವೇ ಉಪದೇಶಿಸುತ್ತ ಹೋಗಿದ್ದರೆ ರಾಷ್ಟ್ರವು ಇನ್ನೂ ಎಷ್ಟು ಅಧೋಗತಿಗೆ ಮುಟ್ಟುತ್ತಿತ್ತೋ ಹೇಳಲಾಗದು. ಈ ಇಪ್ಪತ್ತನೆಯ ಶತಮಾನದಲ್ಲಿ ಉಚ್ಚವರ್ಣದವರಾದ ಬ್ರಾಹ್ಮಣರಿಗೆಲ್ಲ ಅದನ್ನು ಕೈಬಿಡುವ ಪ್ರಸಂಗ ಬಂದಿರುವಾಗ ಅತ್ಯಾಶ್ರಮಿಗಳಾದ ವೀರಶೈವರು ವೀರಶೈವರಲ್ಲಿ ಪುನಃ ಬ್ರಾಹ್ಮಣ್ಯವನ್ನು ಬಿತ್ತಲೆತ್ನಿಸುತ್ತಿರುವುದು ಬಹು ಲಜ್ಜಾಸ್ಪದವೇ ಸರಿ.

❍ ರೆವ್ಹರೆಂಡ್ ಚೆನ್ನಪ್ಪ ಉತ್ತಂಗಿ

ವರ್ಣಾತೀತವಾದ ವೀರಶೈವ ಧರ್ಮದಲ್ಲಿ ವರ್ಣಾಶ್ರಮ ಭೇದವನ್ನು ಉಳಿಸುವುದಕ್ಕೆ ಪ್ರಯತ್ನಿಸುವ ಕೆಲವರು, ಬಸವೇಶ್ವರನು ಮಾಡಿದ ಅಸ್ಪೃಶ್ಯತಾ ನಿವಾರಣೆಯ ಕಾರ್ಯವು ಶುದ್ಧ ತಪ್ಪು, ಅವನು ಜಾತಿ ಸಂಕರವನ್ನು ಮಾಡಿದ್ದರಿಂದಲೇ ವೀರಶೈವ ಸಮಾಜದಲ್ಲಿ ಇಷ್ಟು ಕಲಹ ಭೇದಗಳು ಉಂಟಾಗುವುದಕ್ಕೆ ಕಾರಣವಾಗಿರುವುದು, ಅವನು ಹೀಗೆ ಮಾಡದೇ ಹೋಗಿದ್ದರೆ ಈ ಸಮಾಜವು ಬ್ರಾಹ್ಮಣರಂತೆ ಬಹು ಒಗ್ಗಟ್ಟುಳ್ಳದ್ದೂ ಹೆಚ್ಚು ಸುಧಾರಣೆ ಹೊಂದಿದ್ದೂ ಆಗಿರುತ್ತಿತ್ತು, ಎಂದು ಅವನ ಮೇಲೆ ದೋಷಾರೋಪವನ್ನು ಹೊರಿಸುವರು. ಅಂದರೆ ಬಸವೇಶ್ವರನು ಶಂಕರ, ರಾಮಾನುಜ, ಮಧ್ವ ಮುಂತಾದ ಮತಾಚಾರ್ಯರಂತೆ ಉತ್ತಮ ವರ್ಣದವರನ್ನಷ್ಟೇ ವೀರಶೈವ ಸಮಾಜದಲ್ಲಿ ತೆಗೆದುಕೊಂಡು ವರ್ಣವ್ಯವಸ್ಥೆಯನ್ನು ಸ್ವಲ್ಪವೂ ಕೆಡಿಸದೆ ತನ್ನ ಮತಪ್ರಸಾರ ಮಾಡಬೇಕಾಗಿತ್ತೆಂದು ಇವರ ಅಭಿಪ್ರಾಯ.

ಬಸವಣ್ಣನವರ ವಿಷಯದಲ್ಲಿ ತರುವ, ಈ ತರದ ಆಕ್ಷೇಪಗಳು ಬಿಜ್ಜಳನ ಕಾಲದಿಂದ ಇಲ್ಲಿಯವರೆಗೂ ತಲೆದೋರುತ್ತಿರುವುವು. ಅವುಗಳಿಗೆ ಯೋಗ್ಯವಾದ ಉತ್ತರಗಳು ಅಂದಿಗೂ ಇದ್ದವು, ಇಂದಿಗೂ ಇವೆ. ಹೇಗಾದರೂ ಜಾತಿಯ ವಿಷಯವಾಗಿರುವ ದುರಹಂಕಾರವು ಸಮೂಲವಾಗಿ ನಾಶವಾಗುವ ಸಮಯವು ಈಗ ಬಂದೊದಗಿದೆ. ಆದರಿಂದ ಬಸವಣ್ಣನವರು ಮಾಡಿದ ಕಾರ್ಯದ ಯೋಗ್ಯತೆಯನ್ನು ತಿಳಿದುಕೊಳ್ಳುವಷ್ಟು ಪಕ್ವಸ್ಥಿತಿಗೆ ಹಿಂದೂ ದೇಶವು ಈಗೀಗ ಬರ ಹತ್ತಿರುವುದೆಂದು ಹೇಳಬೇಕು. ಬಿಜ್ಜಳನು ವರ್ಣಾಶ್ರಮ ಧರ್ಮವನ್ನುಳಿಸುವುದಕ್ಕಾಗಿ ಪ್ರಾಣವನ್ನು ಕೊಟ್ಟಿದ್ದರೆ ಬಸವೇಶ್ವರನು ಅದನ್ನು ಕಿತ್ತುಹಾಕುವುದಕ್ಕಾಗಿ ತನ್ನ ಪ್ರಾಣವನ್ನರ್ಪಿಸಿದನು. ಇವರಿಬ್ಬರಲ್ಲಿ ಯಾರದು ಸತ್ಯವೆಂಬುದು ರಾಷ್ಟ್ರ ನಾಯಕರು ಮುಂದೆ ಕೈಕೊಳ್ಳಲಿರುವ ಕಾರ್ಯದಿಂದ ನಿರ್ಣಯಿಸಲ್ಪಡುವುದು.

ವರ್ಣಾಶ್ರಮ ಪ್ರಿಯರ ಅಭಿಪ್ರಾಯದಂತೆ, ಬಸವೇಶ್ವರನು ಜನ ಭಯಕ್ಕೊಳಗಾಗಿ ಮತಾಚಾರ್ಯರಂತೆ ಚಾಣಕ್ಯವನ್ನು ಬಳಸಿ ಸಮದರ್ಶಿತ್ವದ ತತ್ವವನ್ನು ನುಡಿಯಿಂದ ಮಾತ್ರವೇ ಉಪದೇಶಿಸುತ್ತ ಹೋಗಿದ್ದರೆ ರಾಷ್ಟ್ರವು ಇನ್ನೂ ಎಷ್ಟು ಅಧೋಗತಿಗೆ ಮುಟ್ಟುತ್ತಿತ್ತೋ ಹೇಳಲಾಗದು. ಸನಾತನವಾದಿಗಳು ಹೇಳುವಂತೆ ಜಾತಿ ಭೇದದಿಂದ ಮಾನವ ಕೋಟಿಗೆ ಅಲ್ಪಸ್ವಲ್ಪ ಕಲ್ಯಾಣವಾಗಿದ್ದರೂ ಆಗಿರಬಹುದು. ಆದರೆ ಅದರಿಂದ ಅಹಿತವೇ ಹೆಚ್ಚಾಗಿರುವುದೆಂದು ನಿಸ್ಸಂದೇಹವಾಗಿ ಹೇಳುತ್ತೇವೆ. ಬಸವೇಶ್ವರನು ಕೈಕೊಂಡ ಈ ಕಾರ್ಯವನ್ನು ಮೇಲೆ ಹೇಳಿದ ಆಚಾರ್ಯತ್ರಯರು ಕೈಕೊಳ್ಳದೆ ಹೋದದ್ದರಿಂದ ಅದನ್ನೇ ಮುಂದುವರಿಸುವುದಕ್ಕೋಸ್ಕರ ರಾಮಮೋಹನ ರಾಯ್, ಕೇಶವಚಂದ್ರಸೇನ್, ದಯಾನಂದ ಸರಸ್ವತಿ ಮುಂತಾದ ಬೇರೆ ಮೂವರು ಬ್ರಾಹ್ಮಣರು ಅವತಾರವೆತ್ತಿ ವೇದದಲ್ಲಿ ಜಾತಿಭೇದವೇ ಇದ್ದಿಲ್ಲವೆಂದು ತೋರಿಸಿಕೊಡಬೇಕಾಯಿತು. ಬಾಂಧವರೇ, ಈ ಇಪ್ಪತ್ತನೆಯ ಶತಮಾನದಲ್ಲಿ ಉಚ್ಚವರ್ಣದವರಾದ ಬ್ರಾಹ್ಮಣರಿಗೆಲ್ಲ ಅದನ್ನು ಕೈಬಿಡುವ ಪ್ರಸಂಗ ಬಂದಿರುವಾಗ ಅತ್ಯಾಶ್ರಮಿಗಳಾದ ವೀರಶೈವರು ವೀರಶೈವರಲ್ಲಿ ಪುನಃ ಬ್ರಾಹ್ಮಣ್ಯವನ್ನು ಬಿತ್ತಲೆತ್ನಿಸುತ್ತಿರುವುದು ಬಹು ಲಜ್ಜಾಸ್ಪದವೇ ಸರಿ.

ಯಾವುದೇ ತರದಿಂದಾಗಲಿ ಜಾತಿಯನ್ನು ಸ್ಥಾಪಿಸುವುದು ಸ್ವಾರ್ಥಬುದ್ಧಿಯ ಮಾನವರ ಕೆಲಸವಾಗಿದೆ. ಇದನ್ನು ತೆಗೆದು ಹಾಕುವುದು ಸ್ವಾರ್ಥರಹಿತವಾದ ದೇವರ ಕೆಲಸವಾಗಿದೆ. ಇದಕ್ಕಾಗಿ ಆತನು ಮೊದಲು ಬುದ್ಧನನ್ನೂ ಸುಮಾರು ೬೦೦ ವರ್ಷಗಳ ತರುವಾಯ ಕ್ರಿಸ್ತನನ್ನೂ, ತಿರುಗಿ ೪೦೦-೫೦೦ ವರ್ಷಗಳ ತರುವಾಯ ಮಹಮ್ಮದನನ್ನೂ, ಅಲ್ಲಿಂದ ಸುಮಾರು ೬೦೦ ವರ್ಷಗಳ ತರುವಾಯ ಬಸವೇಶ್ವರನನ್ನೂ ಮತ್ತೆ ೬೦೦-೮೦೦ ವರ್ಷಗಳ ತರುವಾಯ ಮಹಾತ್ಮಾ ಗಾಂಧಿಯವರನ್ನೂ ಉದಯವಾಗ ಮಾಡಿರುವನು. ಇವರು ಲೋಕದೊಳಗಿನ ಸ್ವಾರ್ಥ, ದುರಹಂಕಾರ, ಜಾತಿಭೇದ ಮೊದಲಾದವುಗಳನ್ನು ತೆಗೆದು ಹಾಕಿ ಇವುಗಳ ಬದಲಾಗಿ ಜಗದ್ವ್ಯಾಪಕವಾದ ಪ್ರೇಮದ ಬೀಜಗಳನ್ನು ಬಿತ್ತುವುದಕ್ಕೆ ಹುಟ್ಟಿರುವರು. ಬಸವೇಶ್ವರನು ಉದ್ಧರಿಸಿದ ವೀರಶೈವ ಧರ್ಮವು ವಿಶ್ವಬಂಧುಪ್ರೇಮ ತತ್ವಗಳಿಂದ ತುಂಬಿ ತುಳುಕುತ್ತಿದೆ ಎಂದು ಆಡಂಬರದ ಮಾತುಗಳನ್ನಾಡುತ್ತಿದ್ದರೂ ವೀರಶೈವರ ಹೇಡಿತನದಿಂದಲೇ ಅದು ಇದುವರೆಗೆ ಹಿಂದುಳಿದಿರುವುದೆಂದು ಹೇಳಬೇಕು.



ಸದ್ವಾಂಶದ ಭ್ರಾಂತಿಯುಳ್ಳ ಕೆಲವು ವೀರಶೈವರು ಬಸವೇಶ್ವರನು ಮೇಲ್ಜಾತಿಯವರನ್ನಷ್ಟೇ ವೀರಶೈವರನ್ನಾಗಿ ಮಾಡಿದನೇ ಹೊರತು ಕೀಳು ಕುಲದವರನ್ನು ತನ್ನ ಸಮಾಜದಲ್ಲಿ ಸೇರಿಸಿಕೊಳ್ಳಲಿಲ್ಲ. ಆದ್ದರಿಂದ ತಮ್ಮಲ್ಲಿ ಜಾತಿ ಸಂಕರವಿಲ್ಲವೆಂದು ಅನ್ನುತ್ತಾರೆ. ಇವರು ಬಸವೇಶ್ವರನು ದಿವ್ಯ ಪುರುಷನೆಂದು ಒಪ್ಪಿಕೊಳ್ಳುತ್ತಿದ್ದರೂ ಅವನು ಮಾಡಿದ ಸಂಕರವನ್ನು ಮಾತ್ರ ಮನ್ನಿಸುವವರಲ್ಲ. ಹೀಗಾಗಿ ಅದನ್ನು ಮರೆಮಾಚಲು ಪ್ರಯತ್ನಿಸುತ್ತಿರುವರು. (ಬಳ್ಳಾರಿ ಸಿಂದಗಿ ಸಿದ್ದಪ್ಪನವರು ಬರೆದ ಬಸವ ಚರಿತ್ರೆಯನ್ನು ನೋಡಿರಿ.) ಇವರು ಹರಳಯ್ಯ ಮಧುವಯ್ಯಗಳಲ್ಲಿ ನಡೆದ ವಿವಾಹವು ಸುಳ್ಳೆಂದೂ ಅವರು ಮೇಲ್ಜಾತಿಯವರಾಗಿದ್ದರೆಂದೂ ಅದರಲ್ಲಿ ತೋರಿಸಲಿಕ್ಕೆ ಪ್ರಯತ್ನಪಟ್ಟಿರುವರು. ಬಸವೇಶ್ವರನು ಅಸ್ಪೃಶ್ಯರನ್ನು ವೀರಶೈವ ಸಮಾಜದಲ್ಲಿ ಸೇರಿಸಿಕೊಂಡನೆಂಬುವುದಕ್ಕೆ ಇದೊಂದು ಕಥೆಯನ್ನು ಬಿಟ್ಟರೂ ಇದಕ್ಕೆ ಆಧಾರ ಕೊಡುವ ಇತರ ಕಥೆಗಳು ಇನ್ನೂ ಅನೇಕ ದೊರೆಯುತ್ತವೆ.

ಉದಾಹರಣೆಗಾಗಿ (ಬಸವ ಪುರಾಣ ೫೬ನೆ ಸಂಧಿ ಶ್ಲೋಕ ೪೬ ರಿಂದ ೫೬ ರವರೆಗೆ ನೋಡಿರಿ) ಅಲ್ಲಿ ಅಸ್ಪೃಶ್ಯನಾದ ದೂಳಯ್ಯ ಇಲ್ಲವೆ ದೂಡಯ್ಯನ ಕಥೆಯು ಬರುತ್ತದೆ. ಅದರಲ್ಲಿ ಒಬ್ಬ ಬ್ರಾಹ್ಮಣನು ದೇಹದಾದ್ಯಂತವೂ ಕೆಸರಾಗುವಂತೆ ದೂಳಯ್ಯನ ಬಚ್ಚಲ ಕುಣಿಯಲ್ಲಿ ಹೊರಳಾಡಿ ಕುಷ್ಟರೋಗವನ್ನು ಹೋಗಲಾಡಿಸಿಕೊಂಡಂತೆ ತಿಳಿಯುತ್ತದೆ. ಇದಲ್ಲದೆ ಹರಿಹರ ಕವಿಯು ತನ್ನ ಬಸವರಾಜ ರಗಳೆಯ ೧೧ನೆಯ

ಸ್ಥಲದಲ್ಲಿ: 'ದೇವದೇವ, ಎಲೆಲೆಲೆ ಬಿಜ್ಜಳ, ಬಸವನ ನಡವಳಿ ದಿನದಿನಕ್ಕೆ ವಿಪರೀತವಾಗಿರ್ದಪ್ಪುದು ಹಿರಿಯ ಮಾಹೇಶ್ವರರೆಂದು ಬೆರಸಿ ಕೊಂಡಿಪ್ಪುದಂತಲ್ಲದೆ ಇಂದೀ ಗಳಿಗೆಯೊಳು ಹೊಲಗೇರಿಯೊಳೊರ್ವಂ ಪೊಲೆಯನೆಂದಡೆ ಕೋಪಂ-ಹಿರಿಯಭಕ್ತನ ಮನೆಯೊಳುಂಡುದಲ್ಲದೆ ನಿನ್ನೋಲಗದೊಳು ಪೊಲೆಗಲಸಲುಂಬಂದಪಂ' ಎಂದು ಅಸ್ಪೃಶ್ಯನಾದ ಕಂಬಳಿಯ ನಾಗಿದೇವನ ವಿಷಯವಾಗಿ ಹೇಳಿರುವನು.

ಇದಲ್ಲದೆ ಇನ್ನೂ ಬೇರೆ ಕಥೆಗಳನ್ನು ಇಲ್ಲಿ ಉದಾಹರಿಸಬಹುದು. ಇವು ಕೇವಲ ಪೌರಾಣಿಕ ಕಥೆಗಳೆಂದು ಹೇಳಿಕೊಂಡು ಇವುಗಳನ್ನು ನಂಬಲಿಕ್ಕೆ ಮನಸ್ಸಿಲ್ಲದ ವರ್ಣಾಶ್ರಮ ಪ್ರಿಯರಾದ ವೀರಶೈವರಿಗೆ ಬಸವೇಶ್ವರನ ಹೃದಯವನ್ನೇ ಬಿಚ್ಚಿತೋರಿಸುವ ಅವನ ವಚನಗಳಲ್ಲಿ ಕೆಲವನ್ನು ಇಲ್ಲಿ ಉದ್ಧರಿಸುತ್ತೇವೆ. ಇವುಗಳಲ್ಲಿ ಬಸವೇಶ್ವರನು ಹೊಲೆಯರು, ಮೋಚ್ಚಿಗರು, ಮಾದಿಗರು ಮುಂತಾದ ಅಸ್ಪೃಶ್ಯರನ್ನು ವೀರಶೈವ ಸಮಾಜದಲ್ಲಿ ಸೇರಿಸಿಕೊಂಡು ಅವರನ್ನು ತನಗಿಂತಲೂ ಶ್ರೇಷ್ಠರೆಂದು ಭಾವಿಸಿ ಅವರೊಡನೆ ಸಹಪಂಕ್ತಿಭೋಜನವನ್ನು ಮಾಡುತ್ತಿದ್ದುದಲ್ಲದೆ ಶರೀರ ಸಂಬಂಧವನ್ನು ಮಾಡುವುದಕ್ಕೆ ಸಿದ್ಧನಿದ್ದನೆಂದು ತಿಳಿಯುತ್ತದೆ. ಇವುಗಳಲ್ಲಿಯೇ ಬಸವೇಶ್ವರನ ಯಥಾರ್ಥತ್ವ, ನಮ್ರತೆ, ನಿರಹಂಕಾರ, ಅನುಪಮ ಭಕ್ತಿ ಸಮದರ್ಶಿತ್ವ, ಮೊದಲಾದ ಸದ್ಗುಣಗಳು ಅವನು ಅಸ್ಪೃಶ್ಯರನ್ನು ಅಪ್ಪಿದ ಮೂಲಕವಾಗಿಯೇ ಮುಮ್ಮಡಿಗೊಂಡು ಪ್ರಕಾಶಿಸುತ್ತಿರುವವು. ಅವನು ತನ್ನ ವಚನಗಳಲ್ಲಿ ಸ್ಪೃಶ್ಯರಿಗಿಂತ ಅಸ್ಪೃಶ್ಯರನ್ನೇ ಹೆಚ್ಚಾಗಿ ಹರಿಸಿದಂತೆ ತಿಳಿಯುತ್ತದೆ.

ಆ ವಚನಗಳು ಯಾವುವೆಂದರೆ –

ದೇವದೇವಾ ಬಿನ್ನಪವ ಅವಧಾರು! ವಿಪ್ರಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರೆಲ್ಲರನೊಂದೇ ಎಂಬೆ. ಈ ನುಡಿದ ನುಡಿಯೊಳಗೆ ಎಳ್ಳುಮೊನೆಯಷ್ಟು ಸಂದೇಹವುಳ್ಳರೆ ನೀನಂದೇ ಮೂಗು ಕೊಯ್ಯಿ ಕೂಡಲಸಂಗಮದೇವಾ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂದು ಕಷ್ಟತರದ ಹೊರೆಯ ಹೊರಸಿದರಯ್ಯ! ಕಕ್ಕಯ್ಯನು ಒಕ್ಕುದನಿಕ್ಕ ನೋಡಯ್ಯ ಕೂಡಲಸಂಗಮದೇವಾ.

ಅಪ್ಪನು ನಮ್ಮ ಮಾದರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರಕಕ್ಕಯ್ಯ, ಚಿಕ್ಕಯ್ಯನೆಮ್ಮಯ್ಯ ಕಾಣಿರಯ್ಯ, ಅಣ್ಣನು ನಮ್ಮ ಕಿನ್ನರಿಬೊಮ್ಮಯ್ಯ ಕೂಡಲ ಸಂಗಮದೇವಾ.

ಶೆಟ್ಟಿಯೆಂಬೆನೆ ಶಿರಿಯಾಳನ, ಮಡಿವಳನೆಂಬೆನೆ ಮಾಚಯ್ಯನ, ಡೋಹರನೆಂಬೆನೆ ಕಕ್ಕಯ್ಯನ, ಮಾದಾರನೆಂಬೆನೆ ಚೆನ್ನಯ್ಯನ ಆನು ಹಾರವನೆಂದೆಡೆ ಕೂಡಲ ಸಂಗಯ್ಯ ನಗುವನಯ್ಯ.

ಕಕ್ಕಯ್ಯನ ಮನೆಯಲು ಬೇಡಿದೆ, ದಾಸಯ್ಯನ ಮನೆಯಲ್ಲು ಬೇಡಿದೆ, ಚೆನ್ನಯ್ಯನ ಮನೆಯಲ್ಲು ಬೇಡಿದೆ. ಎಲ್ಲ ಪುರಾತನರು ನೆರೆದು ನನಗೆ ಭಕ್ತಿಭಿಕ್ಷವನೀಡಿದರೆ, ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ.

ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲ್ಲಿ ಬೆರಣಿಯನಾಯ ಹೋಗಿ ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮದೇವಾ.

ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದೊಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ! ತಲೆದಂಡ ತಲೆದಂಡ! ಭಕರಲ್ಲಿ ಕುಲವನರಿಸಿದರೆ ನಿಮ್ಮಾಣೆ ನಿಮ್ಮ ರಾಣಿವಾಸದಾಣೆ! ಕುಲಕ್ಕೆ ತಿಲಕ ನಮ್ಮ ಮಾದರಚೆನ್ನಯ್ಯ ಕೂಡಲಸಂಗಮದೇವಾ.

ವೇದ ನಡುನಡುಗಿತ್ತು, ಶಾಸ್ತ್ರವಗಲಿ ಕೆಲಸಾರಿತ್ತು ತರ್ಕತರ್ಕಿಸಲರಿಯದೆ ಮೂಗುವಟ್ಟಿತ್ತಯ್ಯ, ಆಗಮ ಹೊರತೊಲಗೆ ಅಗಲಿದ್ದಿತಯ್ಯಾ ನಮ್ಮ ಕೂಡಲ ಸಂಗನು ಮಾದರ ಚೆನ್ನಯ್ಯನ ಮನೆಯಲ್ಲುಂಡ ಕಾರಣ.

ಆವ ಕುಲವಾದಡೇನು ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ? ಜಾತಿ ಸಂಕರವಾದ ಬಳಿಕ... ಒಕ್ಕುದ ಕೊಂಬೆನವರಲ್ಲಿ ಕೂಸ (ಹೆಣ್ಣು) ಕೊಡುವೆ ಕೂಡಲಸಂಗಮದೇವಾ! ಇತ್ಯಾದಿ.

ಇದೇ ಮುಂತಾದ ವಚನಗಳಿಂದ ಬಸವೇಶ್ವರನು ಅಸ್ಪೃಶ್ಯರೊಡನೆ ಊಟ ಉಪಚಾರಗಳನ್ನು ನಡೆಸುತ್ತಿದ್ದನೆಂದೂ, ಅವರೊಡನೆ ಶರೀರ ಸಂಬಂಧವನ್ನು ಮಾಡುವುದಕ್ಕೂ ಸಿದ್ಧನಿದ್ದನೆಂದೂ ಗೊತ್ತಾಗುತ್ತದೆ.

ಹೇಗೆಂದರೆ–ಬಹುಕಾಲದಿಂದ ಯಾರೂ ಎಂದೂ ಮಾಡದೇ ಇರುವಂಥ, ಸಾಮಾನ್ಯವಾಗಿ ಎಲ್ಲರಿಗೆ ಅಶಕ್ಯವೆಂದು ತೋರುವಂಥ ಒಂದು ಕಾರ್ಯವನ್ನು ಪ್ರಥಮತಃ ಪ್ರಯೋಗ ಮಾಡಿ ನೋಡಬೇಕಾದರೆ ಮೊಟ್ಟಮೊದಲು ತಾನು ತನ್ನಲ್ಲಿ ಇಲ್ಲವೆ ತನ್ನ ಪಂಥದೊಳಗೆ ಅದನ್ನು ಮಾಡಬೇಕಾಗುತ್ತದೆ. ಅದರಂತೆಯೇ ಬಸವೇಶ್ವರನು ಮಾಡಿರುವನು. ಕ್ರೈಸ್ತ ಮಹಮ್ಮದೀಯ ಮುಂತಾದ ಜಗದ್ವ್ಯಾಪಕ ಧರ್ಮಗಳಾದರೂ ತಮ್ಮ ತಮ್ಮ ಧರ್ಮಗಳಲ್ಲಿಯೇ ಅಸ್ಪೃಶ್ಯತೆಯನ್ನು ನಿವಾರಣೆ ಮಾಡುತ್ತಿರುವವರಲ್ಲದೆ ಸ್ವಸಮಾಜ ಬಾಹ್ಯರಾದ ಅಸ್ಪೃಶ್ಯರ ಗೊಡವೆಗೆನೆ ಹೋಗುವುದಿಲ್ಲ.

ಅದರಂತೆ ಹಿಂದೂ ಸಮಾಜದೊಳಗಿನ ಅಸ್ಪೃಶ್ಯತೆಯನ್ನು ನಿವಾರಿಸುವುದಕ್ಕಾಗಿ ಆರ್ಯ ಸಮಾಜವು ಉದ್ಭವವಾಗಿರುವುದು. ಹೀಗೆ ಎಲ್ಲ ಸಮಾಜಗಳು ತಮ್ಮ ತಮ್ಮೊಳಗಿರುವ ಅಸ್ಪೃಶ್ಯತೆಯನ್ನು ನಿವಾರಿಸಿದರೆ ಅದು ಸಂಪೂರ್ಣವಾಗಿ ಮುರಿದು ಹಾಕಲ್ಪಟ್ಟು ಕಡೆಯಲ್ಲಿ ಹೇಳಹೆಸರಿಲ್ಲದಂತಾಗುವುದು. ತನ್ನ ಸಮಾಜದೊಳಗಿನ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಉಳಿದ ಸಮಾಜದವರಿಗೆ ಆದರ್ಶ ಭೂತನಾದ್ದರಿಂದ ಅವನು ಅಸ್ಪೃಶ್ಯತೆ ಎಂಬುದನ್ನೆಲ್ಲ ತೆಗೆದು ಹಾಕಲು ಪ್ರಯತ್ನಿಸಿದಂತಾಗಲಿಲ್ಲವೆ?

ತಮ್ಮನ್ನು 'ಬಸವಭಕ್ತ' ಎಂದೂ 'ವೀರಶೈವ ಸಮಾಜ ಹಿತಚಿಂತಕ' ಎಂದೂ ಕರೆದುಕೊಳ್ಳುತ್ತಿದ್ದ ರೆವರೆಂಡ್ ಚೆನ್ನಪ್ಪ ಉತ್ತಂಗಿ ಅವರು ಕನ್ನಡದ ಪ್ರಮುಖ ಸಂಶೋಧಕ ವಿದ್ವಾಂಸರಲ್ಲಿ ಒಬ್ಬರು. ಅವರು ಸರ್ವಜ್ಞನ ವಚನಗಳನ್ನು ಶೋಧಿಸಿ ಸಂಪಾದಿಸಿ ಪ್ರಕಟಗೊಳಿಸುವಲ್ಲಿ ಮಾಡಿದ ಕೆಲಸವು ಅಪ್ರತಿಮವಾಗಿದೆ. ಅವರ ದೀರ್ಘ ಸಂಶೋಧನೆಯ ಫಲವಾಗಿ 'ಅನುಭವ ಮಂಟಪದ ಐತಿಹಾಸಿಕತೆ'ಯೂ 'ಸಿದ್ಧರಾಮಣ್ಣನ ಲಿಂಗ ದೀಕ್ಷೆಯೂ' ವಾದಗಳ ಸುಳಿಯಿಂದ ಹೊರ ಬಂದು ನಿಚ್ಚಳ ಸತ್ಯದ ಬೆಳಕಿನಲ್ಲಿ ನಿಂತಿವೆ. ಶ್ರೀ ಚೆನ್ನಪ್ಪ ಉತ್ತಂಗಿಯವರು ೧೯೩೦ರ ಸುಮಾರಿಗೆ ಹರಳಯ್ಯ ಶರಣರ ವಿಸ್ತೃತವಾದ ಚರಿತ್ರೆಯುಳ್ಳ ಕಾವ್ಯವೊಂದನ್ನು ಸಂಶೋಧಿಸಿ ಸಂಪಾದಿಸಿದರು. ಆ ಕಾವ್ಯದ ಗದ್ಯಾನುವಾದವನ್ನು ಅವರು ವಿಸ್ತೃತ ವಿವೇಚನೆಯುಳ್ಳ ಮುನ್ನುಡಿ, ಹಿನ್ನುಡಿ ಇತ್ಯಾದಿ ಲೇಖನಗಳು ಸಹಿತ ೧೯೩೩ರಲ್ಲಿ ಪುಸ್ತಕ ರೂಪದಲ್ಲಿ 'ಬಸವೇಶ್ವರನೂ ಅಸ್ಪೃಶ್ಯರ-ಉದ್ಧಾರವೂ, ಹರಳಯ್ಯ ಮಧುವಯ್ಯಗಳ ಕಥೆ' ಎಂಬ ಹೆಸರಿನಿಂದ ಪ್ರಕಟಿಸಿದರು.

ಅಸ್ಪೃಶ್ಯತೆಯ ಸಮಸ್ಯೆಯನ್ನೆ ಕೇಂದ್ರ ಆಸಕ್ತಿಯನ್ನಾಗಿಟ್ಟುಕೊಂಡ ಶ್ರೀ ಉತ್ತಂಗಿಯವರು ಕಳೆದ ಶತಮಾನದ ೨೦-೩೦ರ ದಶಕಗಳಲ್ಲಿ ಬಸವಣ್ಣನವರ ಅಸ್ಪೃಶ್ಯತೆಯ ಕುರಿತ ವಿಚಾರಗಳು ಹಾಗು ಅವರು ನಡೆಸಿದ ಆಂದೋಲನದ ಬಗ್ಗೆ ಸಮಾಜದಲ್ಲಿ ಇದ್ದ ಸಂಭ್ರಮಾವಸ್ಥೆಯನ್ನು ಗಮನಿಸಿದ್ದರು. ಅಂತೆಯೆ ಅವರು 'ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ವೀರಶೈವರಾದವರು ಒಡ್ಡುವ ಆಕ್ಷೇಪ'ಗಳನ್ನು ಎತ್ತಿಕೊಂಡು ಅವುಗಳನ್ನು ನಿರಸನಗೊಳಿಸುವ ಟಿಪ್ಪಣಿಯನ್ನು ಆ ಪುಸ್ತಕದಲ್ಲಿ ಹಿನ್ನುಡಿಯಾಗಿ ಸೇರ್ಪಡಿಸಿದರು. ಈ ಲೇಖನವು ಬಸವಣ್ಣನವರ ವಿಚಾರಗಳನ್ನು ಆಧುನಿಕ ಯುಗದ ಸುಶಿಕ್ಷಿತರು ಬಸವಣ್ಣನ ಬಗ್ಗೆ ಹೊಗಳಿಕೆಯ ಮಾತುಗಳನ್ನು ಆಡುತ್ತಿರುವಂತೆಯೇ ಸನಾತನಿ ವಿಚಾರಗಳ ಹಿಡಿತದಲ್ಲಿ ಸಿಲುಕಿಕೊಂಡ ಸ್ಥಿತಿಯ ಹಿನ್ನೆಲೆಯಲ್ಲಿ ನಿಚ್ಚಳವಾಗಿ ಪ್ರಸ್ತುತ ಪಡಿಸಿದೆ. ಈ ಲೇಖನಕ್ಕೆ ಒಂದು ಐತಿಹಾಸಿಕ ದಾಖಲೆಯ ಮಹತ್ವವೂ ಇದೆ.

ಬಸವೇಶ್ವರನು ಸ್ವಜಾತಿಯಲ್ಲಿ ಸೇರಿದ ಅಸ್ಪೃಶ್ಯರನ್ನು ಉದ್ಧರಿಸಿದನಲ್ಲದೆ ತನ್ನ ಸಮಾಜದ ಹೊರಗಿರುವವರ ಅಸ್ಪೃಶ್ಯತೆಯನ್ನು ಹೋಗಲಾಡಿಸಲಿಲ್ಲ, ಅದರಿಂದ ಅವನು ಅಸ್ಪೃಶ್ಯರ ಉದ್ಧಾರಕನೆಂದು ಹೇಳಲಾಗದು ಎಂದು ಕೆಲವರು ಆಕ್ಷೇಪಿಸುತ್ತಾರೆ. ಈ ಆಕ್ಷೇಪಣೆಯು ಮೇಲೆ ಮೇಲೆ ನೋಡುವವರಿಗೆ ನಿಜವೆಂದು ತೋರಿದರೂ ಯಥಾರ್ಥ ವಿಚಾರಕರಿಗೆ ಇದರಲ್ಲಿ ವಿಶೇಷ ತಥ್ಯವಿರುವುದಿಲ್ಲವೆಂದು ಕಂಡುಬರುವುದು. ಬಸವೇಶ್ವರನ ಕಾರ್ಯವನ್ನು ಆಧುನಿಕ ದೃಷ್ಟಿಯಿಂದ ನೋಡುವ ಕೆಲವರು ಅವನು ಗಾಂಧೀಜಿಯವರಂತೆ ಇಡೀ ಅಸ್ಪೃಶ್ಯ ಸಮಾಜದ ಗೊಡವೆಗೆ ಹೋಗಲಿಲ್ಲ, ಅಂದರೆ ಭಕ್ತರಲ್ಲಿಯ ಅಸ್ಪೃಶ್ಯತೆಯನ್ನಷ್ಟೇ ನಿವಾರಣೆ ಮಾಡಿದನಲ್ಲದೆ ಭವಿಗಳಲಿದ್ದ ಅಸ್ಪೃಶ್ಯತೆಗೆ ಕೈ ಹಾಕಲಿಲ್ಲವೆಂದು ಹೇಳುತ್ತಾರೆ. ಒಂದು ಪ್ರಕಾರವಾಗಿ ಈ ಮಾತು ಸತ್ಯವೆಂದು ನಾವು ಒಪ್ಪಲೂಬಹುದು. ಆದರೆ ಇದರಿಂದ ಸಹ ಬಸವೇಶ್ವರನು ಸಾರ್ವತ್ರಿಕವಾಗಿ ಅಸ್ಪೃಶ್ಯತೆಯನ್ನು ನಿವಾರಣೆ ಮಾಡಿದನೆಂದೇ ಸಿದ್ಧಾಂತವಾಗುವುದು.

ಹೀಗಿದ್ದರೂ ತಕ್ಕಮಟ್ಟಿಗೆ ಯಥಾರ್ಥವಾದ ಕೆಲವರು ಬಸವೇಶ್ವರನು ಮಾಡಿದ ಕಾರ್ಯವು ಪ್ರಶಂಸನೀಯವಾದುದು, ಆದರೆ ಅದು ಸದ್ಯಕ್ಕೆ ತಮ್ಮಿಂದಾಗುವಂತಿಲ್ಲವೆಂದು ಒಪ್ಪಿಕೊಳ್ಳುವರು. ವೀರಶೈವರಲ್ಲಿ ಈ ಪಕ್ಷದವರೇ ಹೆಚ್ಚಾಗಿರುವರೆಂದೂ ಹೇಳಬಹುದು. ಆದರೆ ಇವರಲ್ಲಿಯೂ ಬ್ರಾಹ್ಮಣ್ಯವೂ ಅನೇಕ ಪ್ರಸಂಗಗಳಲ್ಲಿ ಸೂಕ್ಷ್ಮ ರೀತಿಯಲ್ಲಿ ಇರುವುದಾಗಿ ಕಂಡುಬರುವುದು. ಹೇಗೆ ಎಂದರೆ ಇವರಿಗೆ ವೀರಶೈವ ತತ್ವದ ಮೇಲೆ ವಿಶೇಷ ಪ್ರೇಮವಿದ್ದು ಅದರಲ್ಲಿ ಜಾತಿಭೇದಗಳಿಲ್ಲವೆಂದು ಇವರು ಸಹಜವಾಗಿ ಒಪ್ಪಿಕೊಳ್ಳುತ್ತಿದ್ದರೂ ಅದನ್ನು ಕಾರ್ಯಾರ್ಥವಾಗಿ ತೋರಿಸುವುದಕ್ಕೆ ಎಳ್ಳಷ್ಟಾದರೂ ಮನಸ್ಸು ಮಾಡುವವರಲ್ಲ. ವಿಚಾರ ಮಾತ್ರದಲ್ಲಿಯೇ ಇವರು ವೀರಶೈವರಾಗಿದ್ದು ಆಚಾರದಲ್ಲಿ ಬ್ರಾಹ್ಮಣ

ರನ್ನು ಹೋಲುವರು. ಇವರು ಇಂತಹ ಕಾರ್ಯಗಳು, ಬಸವಾದಿ ಪ್ರಮಥರಿಂದ ಮಾತ್ರವೇ ಸಾಧ್ಯವೆಂದೂ ಇಷ್ಟರೊಳಗಾಗಿ ಲಿಂಗಧಾರಿಗಳಾಗಿರುವವರಲ್ಲಿ ಎಷ್ಟೋ ಕುಂದುಕೊರತೆಗಳಿದ್ದು ಅವುಗಳನ್ನು ನಿವಾರಿಸುವುದಕ್ಕಿಂತ ಮುಂಚೆ ಹೊಸ ಜನರನ್ನು ಸಮಾಜದೊಳಗೆ ತೆಗೆದುಕೊಳ್ಳಲಾಗದೆಂದೂ, ಒಂದು ವೇಳೆ ಹೀಗೆ ಮಾಡಿದರೂ ಬರತಕ್ಕ ಜನರು ಬಹು ಯೋಗ್ಯರಾಗಿರಬೇಕೆಂದೂ ಪ್ರತಿಪಾದಿಸುವರು.

ಇವರು ಹೇಳುವ ಮಾತುಗಳು ಅಕ್ಷರಶಃ ಸತ್ಯವಿದ್ದು ಈ ಅವರ ಸುವರ್ಣ ಸೂತ್ರಕ್ಕನುಗುಣವಾಗಿ ಅವರು ಹೊರಗಿನವರನ್ನು ತೆಗೆದುಕೊಳ್ಳದೆ ಒಳಗಿದ್ದ ಲಿಂಗಧಾರಿಗಳೊಡನೆ ಏಕೀಭವಿಸಿ ನಡೆದಿದ್ದರೆ ಇಷ್ಟರೊಳಗಾಗಿ ವೀರಶೈವ ಸಮಾಜಕ್ಕೆ ಎಷ್ಟೋ ಕಲ್ಯಾಣವಾಗುತ್ತಿತ್ತು. ಆದರೆ ಈ ತರದ ಆಕ್ಷೇಪಗಳು ಅವರು ಕಾರ್ಯವನ್ನು ಮಾಡದೆ ಇರುವುದಕ್ಕೆ ಸಹಾಯ ಮಾಡುವ ಉತ್ತಮ ಸಾಧನಗಳಾಗಿರುವುವೆಂದು ಅವರ ವರ್ತನೆಯಿಂದ ತಿಳಿದುಬರುತ್ತದೆ. ಹೀಗಾಗಿ ಮೇಲೆ ಹೇಳಿದವರಲ್ಲಿ ಒಂದು ತರಹದ ಬ್ರಾಹ್ಮಣ್ಯವಿದ್ದರೆ ಈ ಪಕ್ಷದ ವೀರಶೈವರಲ್ಲಿ ಮತ್ತೊಂದು ತರಹದ ಬ್ರಾಹ್ಮಣ್ಯವು ಪ್ರತ್ಯಕ್ಷವಾಗುವುದು. ಈ ಪಕ್ಷದವರು ತಮ್ಮ ತತ್ವಕ್ಕನುಸಾರವಾಗಿ ಹೊಸಬರನ್ನು ಸೇರಿಸಿಕೊಳ್ಳುವ ಧೈರ್ಯವಿಲ್ಲದಿದ್ದರೂ, ಇಷ್ಟರೊಳಗಾಗಿ ವೀರಶೈವರಾದವರಲ್ಲಿರುವ ಜಾತಿಭೇದವನ್ನಾದರೂ ತೆಗೆದು ಹಾಕುವುದಕ್ಕೆ ಕಂಕಣಬದ್ಧರಾಗಬೇಕು. ಇಲ್ಲವಾದರೆ ಇವರು ಹೊಗಳಿಕೊಳ್ಳುವ ತತ್ವದಿಂದ ವಿಶೇಷ ಪ್ರಯೋಜನವಾಗದು.

ವೀರಶೈವ ತತ್ವವಿಚಾರದಲ್ಲಿ ಇವರಿಗಿಂತಲೂ ಸ್ವಲ್ಪ ಸುಧಾರಿಸಿದ ಬ್ರಾಹ್ಮಣ್ಯವುಳ್ಳ ಬೇರೆ ಕೆಲವರು ನಾವು ವೀರಶೈವ ತತ್ವವನ್ನು ಕಾರ್ಯದಲ್ಲಿ ತರುವುದಕ್ಕೆ ಸಿದ್ಧರಿದ್ದೇವೆ. ಕೆಳಗಿನ ಜಾತಿಗಳವರಿಂದ ಬಂದು ಲಿಂಗದೀಕ್ಷೆಯನ್ನು ಇಷ್ಟರೊಳಗಾಗಿ ತೆಗೆದುಕೊಂಡವರು ಇಲ್ಲವೆ ಇನ್ನು ಮುಂದೆ ತೆಗೆದುಕೊಳ್ಳಲಿಚ್ಛಿಸುವವರು ಮದ್ಯ ಮಾಂಸಗಳನ್ನು ಸಂಪೂರ್ಣವಾಗಿ ತ್ಯಜಿಸಿಬಿಟ್ಟು ಇಂತಿಷ್ಟು ವರ್ಷಗಳವರೆಗೆ ಸಮಾಜವು ಒಪ್ಪುವ ರೀತಿಯಿಂದ ನಡೆದುಕೊಂಡರೆ ಅವರು ಅಸ್ಪೃಶ್ಯರಾದಾಗ್ಯೂ ಯಾವ ಜಾತಿಯಿಂದ ಬಂದರೂ ಸರಿಯೇ ಅವರೊಡನೆ ಸಹಪಂಕ್ತಿ ಭೋಜನ ಮಾಡಿ ಬಸವೇಶ್ವರನ ಕಾಲದ ಪ್ರಮಥರಂತೆ ಶರೀರ ಸಂಬಂಧವನ್ನು ಸಹ ಮಾಡುವುದಕ್ಕೂ ಸಿದ್ಧರಿರುವೆವೆಂದು ಹೇಳುವರು. ಇವರು ಶುದ್ಧೀ ಸಂಘಟನ ಮುಂತಾದ ಸುಧಾರಕ ಸಂಘಗಳಿಗೆ ಸೇರಿ ತಮ್ಮ ಹೆಸರುಗಳನ್ನು ಕೊಡುವರು. ಮಾತ್ರವಲ್ಲದೆ ಅಸ್ಪೃಶ್ಯರಿಗೂ ಲಿಂಗಧಾರಣ ಮಾಡಿಸುವರು. ಆದರೆ ಇವರಲ್ಲಿ ಅನೇಕರು ತಮ್ಮ ತತ್ವದಂತೆ ಇವರೊಡನೆ ಬಳಿಕೆ ಭೋಜನಗಳನ್ನು ಮಾಡುವುದಕ್ಕೆ ಹಿಂಜರಿಯುವುದರಿಂದ ಅವರವರು ಇದ್ದ ಸ್ಥಿತಿಯಲ್ಲಿಯೇ ಉಳಿದುಬಿಡುವರು.

'ಯೋಗ್ಯರಿದ್ದರೆ' ಎಂಬ ದೊಡ್ಡ ತತ್ವವನ್ನು ಇವರು ಹಿಡಿದುಕೊಂಡು ಇಂತಹ ಕಷ್ಟದ ಕಾರ್ಯವನ್ನು ಕೈಕೊಳ್ಳದೆ ಇರುವುದಕ್ಕೆ ಅವರಿಗೆ ಬಹಳ ಅನುಕೂಲವಾಗುವುದರಿಂದ ಈ ತರದ ಆಕ್ಷೇಪಗಳನ್ನು ಪದೇ ಪದೆ ಅಡ್ಡ ತರುವರು. ಇಲ್ಲಿ ಯೋಗ್ಯರೆಂದರೆ ಯಾರು ? ಅವರ ಯೋಗ್ಯತೆಯನ್ನು ಅಳೆಯುವುದಕ್ಕೆ ಸಾಧನವಾದರೂ ಯಾವುದು ? ಎಂಬ ಪ್ರಶ್ನೆಗಳು ಹುಟ್ಟುತ್ತವೆ. ಹುಟ್ಟು ವೀರಶೈವರಾದವರಿಗಿಂತಲೂ ತಿಳಿದು ವೀರಶೈವರಾದವರಲ್ಲಿ ಅನೇಕಾವರ್ತಿ ಧರ್ಮತತ್ವವು ಹೆಚ್ಚಾಗಿ ಪ್ರಕಾಶಿಸುತ್ತಿರುವುದು ಸರ್ವರೂ ಒಪ್ಪತಕ್ಕ ಮಾತಾಗಿದೆ. ಹೀಗಿದ್ದರೂ ಹುಟ್ಟು ವೀರಶೈವರು ಸುಗುಣಿಗಳಾದ ಹೊರಗಿನವರನ್ನು ತೆಗೆದುಕೊಳ್ಳಲು ಆಕ್ಷೇಪಿಸುವುದು ಆಶ್ಚರ್ಯವಲ್ಲವೇ ?

ಯೋಗ್ಯರಿದ್ದರೆ ಮಾತ್ರ ಬಳಕೆ ಮಾಡಬಹುದೆಂಬ ವೀರಶೈವರು ಉದಾರ ಬುದ್ಧಿಯವರಂತೆ ನಟಿಸಿ ಹೇಳುತ್ತಿರುವ ಈ ತತ್ವಕ್ಕೆ ನಮ್ಮ ಸಂಪೂರ್ಣ ಸಮ್ಮತಿಯುಂಟು. ಆದರೆ ಇಂತಹ ಯೋಗ್ಯತೆ ಇಲ್ಲದವರು ಮಾಹೇಶ್ವರರಲ್ಲಿಯೂ ಇದ್ದರೆ ಇವರ ಈ ಸುವರ್ಣ ಸೂತ್ರವು ಅವರಿಗೂ ಹತ್ತುವುದಿಲ್ಲವೇ ಎಂಬ ಪ್ರಶ್ನೆ ಉಂಟಾಗುತ್ತದೆ. ಹೀಗಾಗಿ ಯೋಗ್ಯತೆಯನ್ನು ಪ್ರತಿಪಾದಿಸುವ ಮಹನೀಯರು ಈ ತತ್ವವನ್ನು ಸರ್ವರಿಗೂ ಹಚ್ಚಿದರೆ ಇದರಿಂದಲಾದರೂ ನಮ್ಮ ಸಮಾಜಕ್ಕೆ ವಿಶೇಷ ಕಲ್ಯಾಣವಾಗುವುದರಲ್ಲಿ ಸಂದೇಹವಿಲ್ಲ.

ಯೋಗ್ಯತೆಯ ತತ್ವವನ್ನು ಪ್ರತಿಪಾದಿಸುವವರೆಲ್ಲರೂ ತಮ್ಮ ತತ್ವದಂತೆ ಮೊದಲು ಕಾರ್ಯಪ್ರವೃತ್ತರಾಗಲಿ. ತಾವು ಆರಿಸಿ ತೆಗೆದುಕೊಂಡ ಆ ಯೋಗ್ಯರಲ್ಲಿಯೂ ದೋಷಗಳುಳಿದಿರುವವೋ ಇಲ್ಲವೋ ಎಂಬುದು ಆಮೇಲೆ ಅವರಿಗೆ ತಿಳಿಯುವುದು. ಯೋಗ್ಯತೆಯ ತತ್ವವು ಅವರವರ ದೃಷ್ಟಿಯಿಂದ ಸರಿಯಾಗಿರುವುದಲ್ಲದೇ ಸಂಪೂರ್ಣವಾದ ಯೋಗ್ಯತೆಯುಳ್ಳ ಮನುಷ್ಯನು ದೊರೆಯುವುದು ಅಸಾಧ್ಯವಾಗಿರುವುದರಿಂದ ಇದರಲ್ಲಿರುವ ದುರಹಂಕಾರವನ್ನು ಬಿಟ್ಟು ನಡೆಯಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿದೆ. ಈ ಮಹನೀಯರ ಪ್ರಯತ್ನವಿಲ್ಲದೇ ಹಿಂದು ದೇಶದಲ್ಲಿರುವ ಜಾತಿಭೇದವು ಇಲ್ಲವೇ ಅಸ್ಪೃಶ್ಯತೆಯು ತನ್ನಷ್ಟಕ್ಕೆ ತಾನೇ ನಿವಾರಣೆಯಾದರೆ ವೀರಶೈವರಲ್ಲಿ ಜಾತಿ ಭೇದವಿಲ್ಲವೆಂದು ಬಹುಕಾಲದಿಂದ ಹೇಳುತ್ತ ಬಂದವರಲ್ಲಿ ತಾವೇ ಮೊದಲಿನವರೆಂದು ಇವರು ಮುಂದೆ ಬಂದು ಸಮಾಜದಲ್ಲಿ ಮುಖಂಡರಾಗುವುದಕ್ಕೆ ಹೆಣಗುವರು. ಹೊತ್ತು ಬಂದಂತೆ ಕೊಡೆ ಹಿಡಿಯುವ ಇಂತಹ ಉತ್ತಮರ ಕೈಯಲ್ಲಿ ಎಷ್ಟು ಉದಾತ್ತ ತತ್ವಗಳಿದ್ದರೂ ಅದರಿಂದ ವಿಶೇಷ ಪ್ರಯೋಜನವಾಗದು.

ಯೋಗ್ಯರಿದ್ದರೆ ಮಾತ್ರ ಬಳಕೆ ಮಾಡಬಹುದೆಂಬ ವೀರಶೈವರು ಉದಾರ ಬುದ್ಧಿಯವರಂತೆ ನಟಿಸಿ ಹೇಳುತ್ತಿರುವ ತತ್ವಕ್ಕೆ ನಮ್ಮ ಸಂಪೂರ್ಣ ಸಮ್ಮತಿಯುಂಟು. ಆದರೆ ಇಂತಹ ಯೋಗ್ಯತೆ ಇಲ್ಲದವರು ಮಾಹೇಶ್ವರರಲ್ಲಿಯೂ ಇದ್ದರೆ ಇವರ ಈ ಸುವರ್ಣ ಸೂತ್ರವು ಅವರಿಗೂ ಹತ್ತುವುದಿಲ್ಲವೇ ಎಂಬ ಪ್ರಶ್ನೆ ಉಂಟಾಗುತ್ತದೆ. ಹೀಗಾಗಿ ಯೋಗ್ಯತೆಯನ್ನು ಪ್ರತಿಪಾದಿಸುವ ಮಹನೀಯರು ಈ ತತ್ವವನ್ನು ಸರ್ವರಿಗೂ ಹಚ್ಚಿದರೆ ಇದರಿಂದಲಾದರೂ ನಮ್ಮ ಸಮಾಜಕ್ಕೆ ವಿಶೇಷ ಕಲ್ಯಾಣವಾಗುವುದರಲ್ಲಿ ಸಂದೇಹವಿಲ್ಲ. ಇದನ್ನು ಪ್ರತಿಪಾದಿಸುವವರೆಲ್ಲರೂ ತಮ್ಮ ತತ್ವದಂತೆ ಮೊದಲು ಕಾರ್ಯಪ್ರವೃತ್ತರಾಗಲಿ. ಯೋಗ್ಯತೆಯುಳ್ಳ ಮನುಷ್ಯನು ದೊರೆಯುವುದು ಅಸಾಧ್ಯವಾಗಿರುವುದರಿಂದ ಇದರಲ್ಲಿರುವ ದುರಹಂಕಾರವನ್ನು ಬಿಟ್ಟು ನಡೆಯಬೇಕೆಂಬುದೇ ನಮ್ಮ ಮುಖ್ಯ ಉದ್ದೇಶವಾಗಿದೆ.

ಹೀಗಿದ್ದರೂ ಕೆಲವರು ವೀರಶೈವ ತತ್ವವೇನೋ ಉತ್ತಮ. ಆದರೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಅದು ಅವ್ಯವಹಾರಿಕವೆಂದೂ, ಇಂತಹ ಕಾರ್ಯಗಳು ಬಸವೇಶ್ವರನಂತಹ ಅವತಾರಿಕರಿಂದ ಮಾತ್ರವೇ ಸಾಧ್ಯವೆಂದೂ ಮುಂಡಿಗೆಗಳನ್ನು ಹಾಕುವರು. ಈ ನೆವಗಳ ನಿಜಾಂಶವನ್ನು ಬೈಲಿಗೆಳೆದು ಆಕ್ಷೇಪನಿರಸನದ ವಿಷಯವನ್ನು ಸಮಾಪ್ತಿಸುತ್ತೇವೆ.

'ತತ್ವವು ಉತ್ತಮವಾಗಿದೆ ಆದರೆ ಅದನ್ನು ವ್ಯವಹಾರದಲ್ಲಿ ತರುವಂತಿಲ್ಲ' ಎಂದನ್ನುವುದು 'ನೆಂಟರು ನನ್ನವರು. ಗಂಟಿಗೆ ಮಾತ್ರ ಕೈ ಹಾಕಬೇಡಿರಿ' ಎಂದು ಹೇಳಿದಂತಾಗುತ್ತದೆ. ಎಲ್ಲರೂ ಏಕ ಕಾಲದಲ್ಲಿ ಐಕ್ಯಮತ್ಯದಿಂದ ಏನು ಮಾಡುವರೋ ಅದೇ ವ್ಯವಹಾರಿಕವೆನಿಸುವುದು. ಕೆಲವರು ಮಾಡಬೇಕೆನ್ನುವವರು, ಕೆಲವರು ಅದನ್ನು ವಿರೋಧಿಸುವವರು ಕೂಡಿದರೆ ಅದೇ ಅವ್ಯವಹಾರಿಕವಾಗುವುದು. ತುರ್ಕಸ್ತಾನದ ಸ್ತ್ರೀಯರನ್ನು ನೋಡಿರಿ, ಅವರು ಸಾವಿರಾರು ವರ್ಷಗಳಿಂದ ರೋಮರೋಮದಲ್ಲಿ ಸೇರಿಹೋಗಿದ್ದ ಘೋಷಾ ಪದ್ಧತಿಯನ್ನು ಒಂದೆರಡು ವರ್ಷಗಳಲ್ಲಿಯೇ ಒಮ್ಮನಸ್ಸಿನಿಂದ ಕಿತ್ತೊಗೆದರು. ಅವರಂತೆಯೇ ಹಿಂದೂ ದೇಶವು ಏಕಮುಖವಾಗಿ ಜಾತಿಭೇದವನ್ನು ಇಲ್ಲವೆ ಅಸ್ಪೃಶ್ಯತೆಯನ್ನು ತೆಗೆದುಹಾಕಿದರೆ ಈ ಸಂಗತಿಯು ವ್ಯವಹಾರಿಕವಾಗುವುದು.

ವ್ಯವಹಾರವನ್ನು ಕಲ್ಪಿಸಿದವರು ನಾವೇ. ವ್ಯವಹಾರವನ್ನು ಬಿಡತಕ್ಕವರಾದರೂ ನಾವೇ. ಆದ್ದರಿಂದ ವ್ಯವಹಾರವು ನಮಗೋಸ್ಕರ ಬದುಕಬೇಕಲ್ಲದೆ ನಾವು ವ್ಯವಹಾರಕ್ಕೋಸ್ಕರ ಬದುಕುವುವವರಲ್ಲ. ವ್ಯವಹಾರವು ನಮ್ಮ ದಾಸನಾಗಿರಬೇಕಲ್ಲದೆ ನಾವು ವ್ಯವಹಾರದ ದಾಸರಾಗಿರಲಾಗದು. ಸ್ವಾರ್ಥ ಬುದ್ಧಿಯಿಂದ ಸ್ವಾರ್ಥ ಪರಾಯಣರಾಗಿ ಜನಭಯಕ್ಕೊಳಪಟ್ಟು ನಾವು ದುರ್ಬಲ ಮನಸ್ಕರಾದರೆ ಮಾತ್ರ ಇಂತಹ ಕಾರ್ಯಗಳು ಅವ್ಯವಹಾರಿಕವೆನಿಸುತ್ತವೆ.

ಇನ್ನು ಅವತಾರದ ವಿಷಯವಾಗಿರುವ ಆಕ್ಷೇಪವನ್ನು ವಿಚಾರಿಸುವಾ. ದೊಡ್ಡ ಕಾರ್ಯಗಳನ್ನು ಮಾಡಲಿಕ್ಕೆ ದೊಡ್ಡವರು ಬೇಕೆಂಬ ಮಾತು ಸರ್ವ ಸಮ್ಮತವಾಗಿದೆ. ಹಾಗೆಯೇ ವೀರಶೈವ ತತ್ವವನ್ನು ಕಾರ್ಯದಲ್ಲಿ ತರುವುದಕ್ಕೆ ಬಸವೇಶ್ವರನಂತಹ ಅವತಾರಿಕ ಪುರುಷನು ಬೇಕೆಂಬ ಮಾತಾದರೂ ಸತ್ಯವೇ. ಆದರೆ ಅವನಂತೆ ಕಾರ್ಯವನ್ನು ಮಾಡಲು ಪ್ರಯತ್ನಿಸುವವರಿಗೆ ಮಾತ್ರ ಇದು ಪ್ರಯೋಜನಕ್ಕೆ ಬೀಳುವುದಲ್ಲದೆ, ಕಾರ್ಯವನ್ನು ಮಾಡಲೊಲ್ಲದವರಿಗೆ ಈ ತರಹದ ಆಕ್ಷೇಪದಿಂದ ಯಾವ ಸಹಾಯವೂ ಆಗದು. ಯಾಕೆಂದರೆ ಅವತಾರಿಕರು, ಲೋಕದಲ್ಲಿರುವ ಮಾನವರು ತಮ್ಮನ್ನು ಅನುಸರಿಸಬೇಕೆಂತಲೇ ಅವತಾರವೆತ್ತಿರುವರು.

ಆಯಾ ಅವತಾರಿಕರ ಅನುಯಾಯಿಗಳು ಕೆಲವಂಶದಿಂದಲಾದರೂ ಅವರನ್ನು ಅನುಸರಿಸಿದ ಹೊರತು ಆ ಅವತಾರಕ್ಕಾಗಲಿ ಅವರ ಅನುಯಾಯಿಗಳಿಗಾಗಲಿ ಈ ಕರ್ಮಭೂಮಿಯಲ್ಲಿ ಬೆಲೆ ಇರುವುದಿಲ್ಲ. ಇಂತಹ ಕಾರ್ಯಗಳನ್ನು ಮಾಡುವುದಕ್ಕೆ ಅವತಾರಿಕರೇ ಬೇಕೆಂದು ಹೇಳುತ್ತ ಕೈಮುಚ್ಚಿಕೊಂಡು ಕೂಡ್ರುವುದಕ್ಕಾಗಿ ಅವತಾರಗಳಾಗಿದ್ದರೆ ಅಂತಹ ಅವತಾರಿಗಳು ಕೈಲಾಸದಲ್ಲಿರುವುದೇ ಉತ್ತಮವೆಂದು ನಮ್ಮ ಅಭಿಪ್ರಾಯ.

ಬಸವೇಶ್ವರನಿಗೆ ಮುಂಚೆಯೂ, ಅವನ ತರುವಾಯದಲ್ಲಿಯೂ ಇದ್ದ ವೀರಶೈವರು ಬಸವೇಶ್ವರನೇ ಬೇಕೆಂದು ಕಾರ್ಯಮಾಡದೆ ಕೂತಿದ್ದರೆ ಅವನಿಂದ ಇಂತಹ ಕಾರ್ಯಗಳಾಗುವದೊತ್ತಟ್ಟಿಗಿರಲಿ, ಅದಕ್ಕೆ ವಿರೋಧವಾಗಿ ವಿಘ್ನವನ್ನೇ ತಂದಂತಾಗುತ್ತಿತ್ತೆಂದು ಬೇರೆ ಹೇಳುವ ಕಾರಣವಿಲ್ಲ. ಇದಕ್ಕೆ ಬಸವೇಶ್ವರನ ಪೂರ್ವದಲ್ಲಿದ್ದ ದೇವರದಾಸಿಮಯ್ಯ, ಶಂಕರ ದಾಸಿಮಯ್ಯ, ವರದಾನಿಗುಡ್ಡಮ್ಮ ಮುಂತಾದ ಕರ್ಮವೀರರ ಹೆಸರುಗಳನ್ನೂ ತರುವಾಯದ ಕಾಲದಲ್ಲಿ ಮತಪ್ರಸಾರದ ಅನೇಕ ನೂತನ ಪುರಾತನರ ಹೆಸರುಗಳನ್ನೂ ವೀರಶೈವರ ಇತಿಹಾಸದಿಂದ ಧಾರಾಳವಾಗಿ ಉದಾಹರಿಸಬಹುದು.

ಇಂತಹ ಕಾರ್ಯಗಳಲ್ಲಿ ಅವತಾರಿಕರ ಅವಶ್ಯಕತೆಗಿಂತಲೂ ಅವರಲ್ಲಿದ್ದ ಮನಸ್ಸೇ ನಮ್ಮಲ್ಲಿರಬೇಕಾದುದೇ ಮುಖ್ಯವಾದ ವಿಷಯವಾಗಿದೆ. ಹೇಗೆಯೇ ಇರಲಿ, ವೀರಶೈವರಲ್ಲಿ ಜಾತಿ ಭೇದವಿಲ್ಲ ವೀರಶೈವ ಧರ್ಮವು ವರ್ಣಾತೀತವಾದುದು. ಅಪ್ರಾಕೃತವಾದದ್ದು ಎಂದು ಸುಮ್ಮನೆ ಹೆಮ್ಮೆಪಡುವುದಕ್ಕಿಂತ ಇಂತಹ ಉದಾತ್ತ ತತ್ವವನ್ನು ಸಾಧ್ಯವಿದ್ದ ಮಟ್ಟಿಗೆ ಕಾರ್ಯದಲ್ಲಿ ತರುವುದೇ ಮಹತ್ವವಾದ ಸಂಗತಿಯು.

ವೀರಶೈವ ಸಮಾಜದ ಸುತ್ತಲೂ ಮುಸಲ್ಮಾನ, ಕ್ರೈಸ್ತ ಆರ್ಯ ಸಮಾಜ ಮುಂತಾದ ಮತಪ್ರಸಾರಕ ಧರ್ಮಗಳು ಎಡಬಿಡದೆ ಕೆಲಸ ಮಾಡುತ್ತಿದ್ದು, ಜಗದ್ವ್ಯಾಪಕ ತತ್ವವುಳ್ಳ ಧರ್ಮದ ಅನುಯಾಯಿಗಳೆಂದು ಬಡಾಯಿಕೊಚ್ಚುತ್ತ ಕೈ ಮುಚ್ಚಿಕೊಂಡು ಕೂತರೆ, ಹೊರಗಿನವರು ಸಮಾನ ಹಕ್ಕಿನಿಂದ ಒಳಗೆ ಬರುವಂತಿಲ್ಲ, ಒಳಗಿನಿಂದ ಹೊರಗೆ ಹೋಗುವವರಿಗೆ ಪ್ರತಿಬಂಧವಿಲ್ಲ, ಇನ್ನುಳಿದವರಲ್ಲಿ ಜೀವವಿಲ್ಲ. ಇಂತಹ ಸ್ಥಿತಿಯಾದರೆ ಹಿಂದೂಸ್ಥಾನದ ೩೨ ಕೋಟಿ ಪ್ರಜೆಗಳಲ್ಲಿ ೪೦ ಲಕ್ಷದಿಂದ ಮಾತ್ರ ಕೂಡಿಕೊಂಡಿರುವ ಈ ವೀರಶೈವ ಸಮಾಜವು ಕೆಲವು ವರ್ಷಗಳಲ್ಲಿಯೇ ಕ್ಷೀಣಿಸಿ ಹೋಗುವುದರಲ್ಲಿ ಸಂದೇಹವಿಲ್ಲ. □

> **ವೀರಶೈವರಲ್ಲಿ ಜಾತಿ ಭೇದವಿಲ್ಲ, ವೀರಶೈವ ಧರ್ಮವು ವರ್ಣಾತೀತವಾದುದು. ಅಪ್ರಾಕೃತವಾದದ್ದು ಎಂದು ಸುಮ್ಮನೆ ಹೆಮ್ಮೆ ಪಡುವುದಕ್ಕಿಂತ ಇಂತಹ ಉದಾತ್ತ ತತ್ವವನ್ನು ಸಾಧ್ಯವಿದ್ದ ಮಟ್ಟಿಗೆ ಕಾರ್ಯದಲ್ಲಿ ತರುವುದೇ ಮಹತ್ವವಾದ ಸಂಗತಿ. ವೀರಶೈವ ಸಮಾಜದ ಸುತ್ತಲೂ ಮುಸಲ್ಮಾನ, ಕ್ರೈಸ್ತ ಆರ್ಯ ಸಮಾಜ ಮುಂತಾದ ಮತಪ್ರಸಾರಕ ಧರ್ಮಗಳು ಎಡಬಿಡದೆ ಕೆಲಸ ಮಾಡುತ್ತಿದ್ದು, ಜಗದ್ವ್ಯಾಪಕ ತತ್ವವುಳ್ಳ ಧರ್ಮದ ಅನುಯಾಯಿಗಳೆಂದು ಬಡಾಯಿಕೊಚ್ಚುತ್ತ ಕೈ ಮುಚ್ಚಿಕೊಂಡು ಕೂತರೆ, ಹೊರಗಿನವರು ಸಮಾನ ಹಕ್ಕಿನಿಂದ ಒಳಗೆ ಬರುವಂತಿಲ್ಲ, ಒಳಗಿನಿಂದ ಹೊರಗೆ ಹೋಗುವವರಿಗೆ ಪ್ರತಿಬಂಧವಿಲ್ಲ, ಇನ್ನುಳಿದವರಲ್ಲಿ ಜೀವವಿಲ್ಲ.**

ಕಾಲ ಬದಲಾಗಿದೆ.... ನಾವೂ ಬದಲಾಗಿದ್ದೇವೆ
ಈಗಿನದು ಜಾತ್ಯಾತೀತ ವ್ಯವಸ್ಥೆ

ನಮ್ಮೂರಿನ ಶಾಲೆಗೆ ಹೊಸದಾಗಿ ಬಂದ ಮಾಸ್ತರು
ಎಸ್ಸೀನಾ?... ಎಂದು ಕೇಳಿರಬಹುದು
ಅವರ ಜಾತಿ ಕಟ್ಟಿಕೊಂಡು ನಮಗೇನೂ ಆಗಬೇಕಿಲ್ಲ...
CASUALLY... ಕೇಳಿದ್ದು ಅಷ್ಟೆ!

ಮೊನ್ನೆ ಬಾಡಿಗೆ ಮನೆ ಹುಡುಕಿಕೊಂಡು ಬಂದ
ಮಹಿಳೆರನ್ನು ನೀವು ಕನ್ನಡಿಗರಾ ಎಂದು ಕೇಳಿದ್ದು
SUDDEN ಆಗಿ ಯಾವ ಜಾತಿ ಎಂದು ಕೇಳಬಾರದಲ್ಲ....
ಜತೆಗೆ... ನಾನೆಲ್ಲಿ EXPOSE ಆಗಿ
ಬಿಡುತ್ತೇನೋ... ಎಂಬ ಭಯವೂ ಇತ್ತೆನ್ನಿ:

ಕಾಲ ಬದಲಾಗಿದೆ...... ನಾವೂ ಬದಲಾಗಿದ್ದೇವೆ

ಆದರೆ ಕೆಲವೊಮ್ಮೆ 'ಬಾಯಿ ತಪ್ಪಿ'..ನೀವು ಎಸ್ಸೀನಾ..?
ಎಂದು ಬಿಡುತ್ತೇನೆ.. ಹಾಳು ಆಚಾರವಿಲ್ಲದ ನಾಲಿಗೆ
ಕೆಲವೊಮ್ಮೆ ತನ್ನ ನೀಚ ಬುದ್ಧಿ ತೋರಿಸಿಬಿಡುತ್ತದೆ:
ಅವತ್ತಿಡೀ.. ನಾನು EXPOSE ಆಗಿ ಬಿಟ್ಟೆನೋ ಎಂಬ ಅಳುಕು!

CASTE NO BAR... ಎಷ್ಟೊಂದು SWEET... ನೋಡಿ
ಆದಿತ್ಯವಾರದ ಇಂಗ್ಲಿಷ್ ದಿನಪತ್ರಿಕೆಗಳಲ್ಲಿ..... MATRIMONIAL
ಜಾಹಿರಾತುಗಳಡಿಯಲ್ಲಿ... ಜಾತಿ ಪದ್ಧತಿ ಸತ್ತು ಹೋಗುತ್ತಿದೆ.....
ಎನಿಸಿ ಒಂಥರಾ ಥ್ರಿಲ್... ನವ ಸಮಾಜ ನಿರ್ಮಾಣದ ಕನಸು

ಮೀಸಲಾತಿಗೆ ನಮ್ಮ ವಿರೋಧವಿಲ್ಲಪ್ಪ.. UPPER CASTE ನವರಿಗೆ
ಅನ್ಯಾಯವಾಗಬಾರದಷ್ಟೆ.. ನಮ್ಮದು LOWER CASTE... ಆ ವಿಚಾರ ಬಿಡಿ
MERIT ಆಧಾರದಲ್ಲೇ ನಮಗೆ ವಿಶ್ವಾಸ:

CASTE ಬಗ್ಗೆ ನಾವೇನೂ ತಲೆಕೆಡಿಸಿಕೊಂಡಿಲ್ಲಪ್ಪ.
ಅಂತಹ MEAN MENTALITY ನಮ್ಮದಲ್ಲಪ್ಪ...
ನಮ್ಮದು ವಿಶಾಲ ದೃಷ್ಟಿಕೋನ... ಮನಸ್ಸೂ ರೋಗಗ್ರಸ್ಥವಲ್ಲ!
ಸ್ವಲ್ಪ SUPERIORITY COMPLEXION ಅಷ್ಟೆ.

ಅಂದ ಹಾಗೆ....
DALITHS ಅಂದ್ರೆ ಯಾರು? ಎಸ್ಸಿಗಿಂತ ಅಪ್ಪರ್ರಾ..?
ಆರೆಸ್ಸೆಸ್‌ನಲ್ಲಿ ಡಿಎಸ್ಸೆಸ್ ಜನ ಕಡಿಮೆ ಯಾಕೆ?
ನಮಗೆ EDUCATED.. CIVILISED... CULTURED ಎಸ್ಸಿಗಳೆಂದರೆ ಇಷ್ಟ!
ಆದರೆ ಅಂತವರನ್ನು ಹುಡುಕೋದು ಕಷ್ಟ!



○ ಡಿ.ಎಂ. ಚಿನ್ನಪ್ಪ, ಸೋಮವಾರಪೇಟೆ

ದಲಿತ್ ಡೈರಿ

ಸಂವಿಧಾನದ ಹೆಸರಿನಲ್ಲಿ ಆಯ್ಕೆಯಾದ ಸದಸ್ಯರು ಪಾರ್ಲಿಮೆಂಟಿನಲ್ಲಿ ತಮ್ಮ ಆಸನಗಳನ್ನು ಸ್ವೀಕರಿಸಲಿದ್ದಾರೆ. ಅಸ್ತಿತ್ವಕ್ಕೆ ಬಂದಿರುವ ಸರ್ಕಾರ ಸಂವಿಧಾನ ಮತ್ತು ಭಾರತ ಗಣರಾಜ್ಯದಡಿ ಪ್ರಮಾಣ ವಚನ ಸ್ವೀಕರಿಸಿದೆ. ಹೀಗಿರಲು ಸಂವಿಧಾನ ಮತ್ತು ಅದರ ಉದ್ದೇಶಗಳೇನೆಂಬುದರ ಬಗ್ಗೆ ಮತ್ತು ಬಹು-ಪಕ್ಷ ಪ್ರಜಾಪ್ರಭುತ್ವ ಈ ದೇಶಕ್ಕೆ ಅಗತ್ಯವೇ ಮುಂತಾದ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಅಲ್ಲದೆ ಈ ಬಹು-ಪಕ್ಷದಲ್ಲಿರುವ ಅನೇಕ ಅಪರಾಧಿಗಳು ಪಾರ್ಲಿಮೆಂಟಿನ ನಡುಮಂಟಪದಲ್ಲಿ ಪ್ರವೇಶಿಸಲು ಮಾನ್ಯತೆಯನ್ನು ಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ.

'ಗಣರಾಜ್ಯ' ಒಪ್ಪದ ಮುಖ್ಯವಾಹಿನಿ

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

೧೫ನೇ ಲೋಕಸಭೆಯ ಆಯ್ಕೆಯ ಅಂತಿಮ ಹಂತದಲ್ಲಿ ಭಾರತ ತೊಡಗಿದೆ. ದಲಿತ ಡೈರಿಯಂತಹ ಧ್ವನಿಗಳು ಈ ಇಡೀ ಚುನಾವಣೆಯ ಬಗ್ಗೆಯೇ ಸಂದೇಹ ವ್ಯಕ್ತಪಡಿಸುತ್ತಿವೆ. ೧೯೫೨ ರಿಂದ ಹಿಡಿದು ಇಂದಿನ ೧೫ನೇ ಲೋಕಸಭಾ ಚುನಾವಣಾ ಚಟುವಟಿಕೆಯ ಹಿಂದಿರುವ ತರ್ಕವಾದರೂ ಏನು ? ಅಂದರೆ ಭಾರತವು ಒಂದು ಜನತಂತ್ರ ದೇಶ, ಅತಿ ದೊಡ್ಡ - ಉತ್ತರ ಅಮೇರಿಕಾಗಿಂತಲೂ ದೊಡ್ಡದು, ಇಡೀ ಯೂರೋಪ್ ಖಂಡವನ್ನು ಒಟ್ಟಾರೆಯಾಗಿ ತೆಗೆದುಕೊಂಡರೂ ಸಹ ದೊಡ್ಡದಾದುದು. ಪ್ರೌಢ-ಮತದಾರರು ಆಳಲು ಯೋಗ್ಯರಾದವರನ್ನು ಆರಿಸಲು ನಿರ್ಧಾರ ಮಾಡಲಿದ್ದಾರೆ.

ಎನ್‌ಡಿಎ ತನ್ನ ಪಂಗಡದೊಡನೆ, ನರೇಂದ್ರಮೋದಿಯನ್ನು ಮುಂದಾಳುವನ್ನಾಗಿ ಮಾಡಿಕೊಂಡು, 'ಭಾರತವನ್ನು ಅಭಿವೃದ್ಧಿಗೊಂಡ ದೇಶಗಳಲ್ಲಿ ಒಂದೆಂದು' ಸಾಧಿಸಲು ಅನುವು ಮಾಡಿಕೊಡಬೇಕೆಂದು ಕೋರುತ್ತಿದೆ. ಮಹತ್ವಾಕಾಂಕ್ಷೆಯ ಶ್ರೇಷ್ಠ ಧ್ಯೇಯವೆಂದರೆ ತಪ್ಪಾಗಲಾರದು. ಕಾಂಗ್ರೆಸ್ ಸಂಯುಕ್ತ ಬಣ ಲಾಲೂ ಪ್ರಸಾದ್ ಯಾದವ್‌ನನ್ನು ತೋಮಸ್ ಜಾಫರ್ಸ್‌ನ್ ಮಾಡಿಕೊಂಡು 'ಭಾರತದ ಜಾತ್ಯಾತೀತ' ಚೌಕಟ್ಟನ್ನು ಉಳಿಸಿಕೊಳ್ಳಲು 'ಆಯ್ಕೆ' ಮಾಡಬೇಕೆಂದು ಕೋರುತ್ತಿದೆ. ಇದು ಶ್ರೇಷ್ಠಗುರಿಯೇ ಸರಿ. ಹೀಗಿರುವಲ್ಲಿ ತೃತೀಯ ರಂಗವೇಕೆ ಅಸ್ತಿತ್ವಕ್ಕೆ ಬರಬಾರದೆಂದು ತೃತೀಯ ಬಾರಿ ಪ್ರಯತ್ನಿಸುತ್ತಿದೆ.

ಸಂವಿಧಾನದ ಹೆಸರಿನಲ್ಲಿ ಆಯ್ಕೆಯಾದ ಸದಸ್ಯರು ಪಾರ್ಲಿಮೆಂಟಿನಲ್ಲಿ ತಮ್ಮ ಆಸನಗಳನ್ನು ಸ್ವೀಕರಿಸಲಿದ್ದಾರೆ. ಮೇ ಮಧ್ಯದಲ್ಲಿ ಅಸ್ತಿತ್ವಕ್ಕೆ ಬರಲಿರುವ ಸರ್ಕಾರ ಸಂವಿಧಾನ ಮತ್ತು ಭಾರತ ಗಣರಾಜ್ಯದಡಿ ಪ್ರಮಾಣ ವಚನ ಸ್ವೀಕರಿಸಲಿದೆ. ಹೀಗಿರಲು ಸಂವಿಧಾನ ಮತ್ತು ಅದರ ಉದ್ದೇಶಗಳೇನೆಂಬುದರ ಬಗ್ಗೆ ಮತ್ತು ಬಹು-ಪಕ್ಷ ಪ್ರಜಾಪ್ರಭುತ್ವ ಈ ದೇಶಕ್ಕೆ ಅಗತ್ಯವೇ ಮುಂತಾದ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಿದೆ. ಅಲ್ಲದೆ ಈ ಬಹು-ಪಕ್ಷದಲ್ಲಿರುವ ಅನೇಕ ಅಪರಾಧಿಗಳು ಪಾರ್ಲಿಮೆಂಟಿನ ನಡುಮಂಟಪದಲ್ಲಿ ಪ್ರವೇಶಿಸಲು ಮಾನ್ಯತೆಯನ್ನು ಗಿಟ್ಟಿಸಲು ಪ್ರಯತ್ನಿಸುತ್ತಿದ್ದಾರೆ.

ಭಾರತೀಯ ಮುಖ್ಯವಾಹಿನಿಯ ಸಂಕಥನಗಳಲ್ಲಿ ಗಣರಾಜ್ಯ ಅಥವಾ ಸಂವಿಧಾನದ ಬಗ್ಗೆ ಚರ್ಚೆ ನಡೆದಾಗಲೆಲ್ಲಾ ಅದರ ಪಿತಾಮಹ ಡಾ|| ಅಂಬೇಡ್ಕರನ್ನು ಎಲ್ಲೂ ಉಲ್ಲೇಖಿಸುವುದಿಲ್ಲ. ಇದೊಂದು ಅಸಾಮಾನ್ಯವಾದ ತುಂಟತನ. ಅಮೇರಿಕಾದಲ್ಲಿ 'ರಾಷ್ಟ್ರ-ಪ್ರಭುತ್ವ'ದ ಚರ್ಚೆ ಬಂದಾಗಲೆಲ್ಲಾ ಅಮೇರಿಕಾದ ಸ್ವಾತಂತ್ರ್ಯ ಘೋಷಣೆಯ ಕರಡನ್ನು ತಯಾರಿಸಿದ ತೋಮಸ್ ಜಾಫರ್ಸ್‌ನ್‌ನ ಉಲ್ಲೇಖ ಬಂದೇ ತೀರಬೇಕು. ಆದ್ದರಿಂದ ಭಾರತದ ಸಂವಿಧಾನದಲ್ಲಿ ಮುಖ್ಯವಾಹಿನಿಯ ರಾಜಕೀಯವನ್ನು ಹೆದರಿಸುವಂಥ ಯಾವುದೋ ಮಹತ್ವದ ಸಂಗತಿ ಇರಬಹುದೆಂದು ತೋರುತ್ತದೆ.

ಡಾ|| ಅಂಬೇಡ್ಕರ್ ೧೯೫೬ರಲ್ಲಿ ಬೌದ್ಧಧರ್ಮಕ್ಕೆ ಪರಿವರ್ತನೆಯಾದ ಅನಂತರದಲ್ಲಿ ಮಾಡಿದ ಮಹತ್ವದ ನಿರ್ಣಯವೆಂದರೆ ಭಾರತೀಯ ರಿಪಬ್ಲಿಕನ್ ಪಕ್ಷದ ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು ಅದರ 'ಗುರಿಗಳು ಮತ್ತು ಉದ್ದೇಶಗಳು' ಎನ್ನುವ ಅಧ್ಯಾಯದಲ್ಲಿ ಹೀಗೆಂದು ಬರೆದಿದ್ದಾರೆ. 'ಭಾರತದ ಜನಗಳಾದ ನಾವು ಭಾರತವನ್ನು ಒಂದು ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರಚಿಸಲು ಸಂಕಲ್ಪ ಮಾಡುತ್ತೇವೆ. ಹಾಗೂ ಅದರ ಎಲ್ಲಾ ನಾಗರಿಕರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ; ವಿಚಾರ, ಅಭಿವ್ಯಕ್ತಿ ನಂಬಿಕೆ ಮತ್ತು ಧರ್ಮ ಶ್ರದ್ಧೆಯ ಸ್ವಾತಂತ್ರ್ಯ; ಸ್ಥಾನಮಾನ ಮತ್ತು ಸಮಾನ ಅವಕಾಶ ; ಹಾಗೂ ವ್ಯಕ್ತಿಗೌರವ ಮತ್ತು ರಾಷ್ಟ್ರದ ಐಕ್ಯತೆಯನ್ನು ಮುಖ್ಯವಾಗಿ ಬೆಳೆಸಲು ಸಂಕಲ್ಪ ಮಾಡುವವರಾಗಿ, ನಮ್ಮ ಸಂವಿಧಾನ ಸಭೆಯಲ್ಲಿ ೧೯೪೯ನೆಯ ನವೆಂಬರ್ ತಿಂಗಳ ಇಪ್ಪತ್ತನೆಯ ತಾರೀಖಿನಂದು, ಈ ಮೂಲಕ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.' ಮುಂದುವರೆದು, ಡಾ|| ಅಂಬೇಡ್ಕರ್ ಹೇಳುವುದೇನೆಂದರೆ, 'ಪ್ರಸ್ತಾವನೆಯಲ್ಲಿ ನಿರೂಪಿಸಿದಂತೆ ಧ್ಯೇಯೋದ್ದೇಶಗಳಾದ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಈ ರಿಪಬ್ಲಿಕನ್ ಪಕ್ಷದ ಗುರಿ - ಉದ್ದೇಶಗಳಾಗಿವೆ.' (ಪು. ೧೫೬, ಬರಹಗಳು ಮತ್ತು ಭಾಷಣಗಳು, ಸಂ. ೧೭, ಭಾಗ ೨).

ನವೆಂಬರ್ ೧೯೪೯ರಲ್ಲಿ ಸಂವಿಧಾನದ ಅಂತಿಮ ರೂಪ ಸಿದ್ಧವಾಗಿ, ಅದರ ಪ್ರಸ್ತಾವನೆಯ ಮೂಲ ರೂಪವನ್ನು ಸಂವಿಧಾನ ಸಭೆಯಲ್ಲಿ ನೆಹರೂರವರು ಮಂಡಿಸಿದಾಗ ಒಮ್ಮತದಿಂದ ಸ್ವೀಕರಿಸಲಾಯಿತು. ಕರಡು

○ ಅನು : ಡೊಮಿನಿಕ್.ಡಿ

ತಯಾರಿಕಾ ಸಮಿತಿಯು ಡಾ|| ಅಂಬೇಡ್ಕರವರ ನಾಯಕತ್ವದಲ್ಲಿ ಅಗತ್ಯ ತಿದ್ದುಪಡಿಗಳೊಂದಿಗೆ ಸಂವಿಧಾನದ ಪ್ರಸ್ತಾವನಾ ಧ್ಯೇಯೋದ್ದೇಶದ ಪ್ರತಿಯನ್ನು ಒಪ್ಪಿಕೊಳ್ಳಲಾಯಿತು. ಹೀಗೆ ಇದೇ ಮುಂದಿನ ಭಾರತೀಯ ಗಣರಾಜ್ಯದ ಸಂವಿಧಾನ ಸಭೆಯ ಗುರಿಯೂ ಆಯಿತು.

ಅಂಬೇಡ್ಕರವರ ರಾಜಕೀಯ ಧೋರಣೆಗಳಲ್ಲಿ ಭಾರತೀಯ ಸಂವಿಧಾನ ಪ್ರಸ್ತಾವನಾ ಭಾಗವೇ ಭಾರತೀಯ ಸಮಾಜವನ್ನು ನ್ಯಾಯ ಮತ್ತು ಸಮಾನತೆಯ ಆಧಾರದಲ್ಲಿ ಬದಲಾಯಿಸುವ ಗುರಿಯನ್ನು ಹೊಂದಿತ್ತು. ಆದರಿಂದಲೇ ಅದನ್ನೇ ರಿಪಬ್ಲಿಕನ್ ಪಕ್ಷದ ಗುರಿ-ಉದ್ದೇಶಗಳನ್ನಾಗಿ ಮಾಡಿಕೊಳ್ಳಲಾಯಿತು. ಅಂದರೆ ರಿಪಬ್ಲಿಕನ್ ಪಕ್ಷದ ಆಸಕ್ತಿಯು, ಭಾರತೀಯ ಗಣರಾಜ್ಯದ ಆಸಕ್ತಿಯೇ ಆಗಿತ್ತು. ಡಾ|| ಅಂಬೇಡ್ಕರನ್ನು ಹೊರತುಪಡಿಸಿ ಅಥವಾ ರಿಪಬ್ಲಿಕನ್ ಪಕ್ಷವನ್ನು ಹೊರತುಪಡಿಸಿ ಒಬ್ಬ ನಾಯಕ ಅಥವಾ ಪಕ್ಷ ಗಣರಾಜ್ಯದ ಗುರಿ-ಉದ್ದೇಶಗಳನ್ನು ತನ್ನ ಗುರಿ-ಉದ್ದೇಶಗಳನ್ನಾಗಿ ಸ್ವೀಕರಿಸಿದ್ದಾರೆಯೇ? ಅಥವಾ ಈ ಗಣರಾಜ್ಯದ ಗುರಿ – ಉದ್ದೇಶಗಳನ್ನು ಹಿಂದಿನ ೧೩ ಲೋಕಸಭೆಗಳು ಸಾಧಿಸಿವೆಯೇ ?

ಭಾರತೀಯ ಸಮಾಜದ ಮುಖ್ಯವಾಹಿನಿಯು ಇಂದಿಗೂ ಗಣರಾಜ್ಯದ ಸಂಕಲ್ಪವನ್ನು ಒಪ್ಪಲಾಗಿಲ್ಲ. ಇದು ಸಮಾಜ ರಾಜಕೀಯ ನಡಾವಳಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಎಲ್ಲಾ ಮೂರು ಪ್ರಧಾನ ಚಿಂತನೆಗಳು ಹಾಗೂ ಅವುಗಳಿಂದ ಹುಟ್ಟಿರುವ ಸಾಮಾಜಿಕ, ರಾಜಕೀಯ ಚಳವಳಿಗಳು ನಿರಂತರವಾಗಿ ಗಣರಾಜ್ಯಕ್ಕೆ ತೀವ್ರವಾದ ವಿರೋಧವನ್ನು ವ್ಯಕ್ತಪಡಿಸುತ್ತವೆ. ಪಾರಂಪಾರಿಕ ಸಾಮಾಜಿಕ ಮೌಲ್ಯಗಳನ್ನು ಪುನಃ ಪುನಃ ಆರ್.ಎಸ್.ಎಸ್. ಪರಿವಾರ ಉಚ್ಚರಿಸುತ್ತಾ ಬಂದಿದೆ. ಅಲ್ಲದೇ ಅದೇ ಹಳೆಯ ರಾಜಕೀಯ ಸನಾತನಿ ಮೌಲ್ಯಗಳು ರಾಜ್ಯಾಂಗದ ಎಲ್ಲಾ ಸಂಕಲ್ಪಗಳನ್ನು ಬದಿಗೊತ್ತಿವೆ. ಎಡಪಂಥೀಯ ಚಿಂತನಾ ವಾಹಿನಿಯೂ ಸಹ ಗಣರಾಜ್ಯದ ಅಧಿಕಾರವನ್ನು ವಿರೋಧಿಸುವುದರಿಂದ, ಅಂತಿಮವಾಗಿ ಆರ್.ಎಸ್.ಎಸ್. ಚಿಂತನಾ ಕ್ರಮದಲ್ಲೇ ಬೀಳುತ್ತದೆ. ಹಾಗೆಯೇ ಲಿಬರಲ್ ವಾಹಿನಿಯೂ ಸಹ 'ಇನ್ಸ್‌ಪೆಕ್ಟರ್ ರಾಜ್'ನ ಹುಳುಕನ್ನು ನಿರಂತರವಾಗಿ ಮಾತನಾಡುವುದರಿಂದ ಅದೂ ಸಹ ಸಾಂಪ್ರದಾಯಿಕ ಮೌಲ್ಯ ವ್ಯವಸ್ಥೆಯನ್ನೇ ಅನುಸರಿಸುತ್ತದೆ. ಪ್ರಭುತ್ವ ನಿಯಂತ್ರಣಾ ವ್ಯವಸ್ಥೆಯ ಕೆಡುಕನ್ನೇ ಬುದ್ಧಿಜೀವಿಗಳು, ಅದರಲ್ಲೂ ವಿಶೇಷವಾಗಿ ಮಾಧ್ಯಮಗಳು ಬೈಯ್ಯುತ್ತಲೇ ಬಂದಿವೆ. ಗಣರಾಜ್ಯದ ಗುರಿ-ಉದ್ದೇಶಗಳಿಗೆ ನಾಯಕರು ಬದ್ಧರಾಗಿರುವಂತೆ ಯಾವುದೇ ಮಾಧ್ಯಮ ಸಂಘಟನೆಯೂ ಏಕೆ ಚಕಾರವೆತ್ತುತ್ತಿಲ್ಲ?

ಸಂವಿಧಾನ ಸಭೆಯು ಆದರ್ಶಗಳಿಂದ ನೂತನ ಭಾರತ ಸಾಮಾಜಿಕ ವ್ಯವಸ್ಥೆಯೊಂದನ್ನು ಕಲ್ಪಿಸಿತ್ತು. ಆದರೇ ಇಂದು ಭಾರತೀಯ ರಾಜಕಾರಣವು ಅದರಿಂದ ದೂರ ಸಾಗಿಬಿಟ್ಟಿದೆ. ಗಣರಾಜ್ಯಕ್ಕಾಗಿ ಪಾರ್ಲಿಮೆಂಟು ಮತ್ತು ನಾಗರಿಕರಿಗಾಗಿ ಗಣರಾಜ್ಯ ಎಂದಿರಬೇಕಿತ್ತು. ಸಮಕಾಲೀನ ಭಾರತೀಯ ರಾಜಕಾರಣವು ತನ್ನ ನಡಾವಳಿಯನ್ನು ಮರು ವ್ಯಾಖ್ಯಾನಿಸಿಕೊಂಡಿದ್ದು ಪಾರ್ಲಿಮೆಂಟ್ ತನ್ನ ಗಣರಾಜ್ಯದ ಮೂಲ ಧ್ಯೇಯೋದ್ದೇಶಗಳಿಂದ ಹಿಂದೆ ಸರಿದಿದ್ದು ೧೯೫೦ರ ಹಿಂದಿನ ಸಾಮಾಜಿಕ ವ್ಯವಸ್ಥೆಯನ್ನೇ ಜೀವಿಸುತ್ತಿದೆ. ಇಲ್ಲಿ ಪ್ರಜೆಗಳು ಒಂದಲ್ಲ ಒಂದು ಜಾತಿ/ಗುಂಪಿನ ಸದಸ್ಯರಾಗಿ ಜೀವಿಸುತ್ತಿದ್ದಾರೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಇಂದು ಗಣರಾಜ್ಯವು ಜಾತಿ ನಿಯಂತ್ರಿತ ಸಾಮಾಜಿಕ ವ್ಯವಸ್ಥೆಯಲ್ಲಿ ಮಧ್ಯೆ ಪ್ರವೇಶಿಸುವಂತಿಲ್ಲ. ಇದರರ್ಥ ಭಾರತೀಯರು ಆಧುನಿಕತೆ ಮತ್ತು ಅಭಿವೃದ್ಧಿಯಲ್ಲಿ ಅಧಿಕ ಸಾಧನೆ ಮಾಡಿದೇವೆಂದು ಹೇಳುವಾಗಲೇ ಸಾಮಾಜಿಕ ವ್ಯವಸೆಯಲಿ


ಸೌಜನ್ಯ : ದಿ ಹಿಂದೂ

ಇನ್ನೂ ಭೂತದಲ್ಲೇ ಇದ್ದಾರೆ. ಇದೊಂದು ಹಿಮಾಲಯ ಪರ್ವತದಷ್ಟು ದೊಡ್ಡ ವಿಪರ್ಯಾಸ. ಇಲ್ಲಿ ಮುಖ್ಯವಾಹಿನಿ ಸಮಾಜ ಆಧುನಿಕ ಜಗತ್ತನ್ನು ಬಯಸುತ್ತಲೇ ಮಧ್ಯಯುಗೀನ ಕಾಲದಲ್ಲಿ ಮುಳುಗಿದೆ. ಈ ತರ್ಕದಲ್ಲಿ ಯಾವುದೇ ಸಮಾಜ ಮುನ್ನಡೆದಿಲ್ಲ. ಹೀಗಿರುವಾಗ ಹೊಸ ಲೋಕಸಭೆಯ ಆಯ್ಕೆ ಬಗ್ಗೆ ಯಾವುದೇ ಚರ್ಚೆ ನಡೆಯದೆ ೧೪ ನೇ ಲೋಕಸಭೆಯ ಆರಿಸ ಹೊರಟಿರುವುದು ದುರಂತವೇ ಸರಿ.

ರೆಡ್ಡಿ ಕ್ರಾಂತಿಯ ಛಾಯೆಗಳು :

ಅಂತಿಮವಾಗಿ ಟಿ.ಡಿ.ಪಿ. ಅಧ್ಯಕ್ಷ ಚಂದ್ರಬಾಬು ನಾಯ್ಡುಗೆ ಏನು ಸಿಗಬೇಕಿತ್ತೊ ಅದು ಸಿಕ್ಕಿದೆ. ಕಮ್ಮೇತರ, ಜಾತ್ ಜಾತಿಗೆ ಸಮನಾದ ಗುಂಪುಗಳ ಮತಗಳಿಂದ ಆತನ ೯ ವರ್ಷಗಳ ಕ್ರೌರ್ಯ ಪ್ರತ್ಯೇಕಗೊಂಡಿತು. ದಲಿತವಾಹಿನಿಯು ಖುಷಿಪಡಲು ಎಲ್ಲಾ ಕಾರಣಗಳೂ ಇವೆ. ದಲಿತ ವಿರೋಧಿ ಅಲೆಯನ್ನು ಅಧಿಕೃತವಾಗಿ ಹೊಂದಿರುವ ಎರಡು ಪ್ರಮುಖ ಪಕ್ಷಗಳೆಂದರೆ ಟಿ.ಡಿ.ಪಿ ಮತ್ತು ಮುಲಾಯಂ ಸಿಂಗ್‌ನ ಎಸ್.ಪಿ. ಆಂಧ್ರಾದಲ್ಲಿರುವ ಎರಡು ಮುಖ್ಯ ದಲಿತ ಬಣಗಳೆಂದರೆ ಮಾದಿಗ ಮತ್ತು ಮಾಲಾ. ಇವೆರಡರ ಮಧ್ಯೆ ವಿಭಜನಾತ್ಮಕ ಚಟುವಟಿಕೆಯಲ್ಲಿ ನಾಯ್ಡು ತೊಡಗಿದ್ದ ಮಾದಿಗ ಸಮುದಾಯ ತಮ್ಮ ನ್ಯಾಯಯುತ ಕುಂದುಕೊರತೆಗಳನ್ನು ಹೊಂದಿತ್ತು. ಎಲ್ಲಾ ಮದ್ಯದಂಗಡಿಗಳನ್ನು ಅಥವಾ ಪಿಡಬ್ಲ್ಯೂಡಿ ಗುತ್ತಿಗೆಗಳನ್ನು ಅಥವಾ ಖಾಸಗೀ ವಲಯದಲ್ಲಿ ಉದ್ಯೋಗವನ್ನು ಮಾದಿಗ ಸಮುದಾಯಕ್ಕೆ ನಾಯ್ಡು ಒದಗಿಸಿದಲ್ಲಿ ಅವರ ಮಾಲಾ ಸಹೋದರ ಗುಂಪಿಗೆ ವಿವಾದವೇನೂ ಇರುತ್ತಿರಲಿಲ್ಲ. ಉದ್ಯೋಗ ಮಾರುಕಟ್ಟೆ ಕುಸಿಯುತ್ತಿರುವಾಗ ಅಧಿಕ ಉದ್ಯೋಗಗಳನ್ನು ದಲಿತರಿಗೆ ಸೃಷ್ಟಿಸುವಲ್ಲಿ ಎರಡೂ ಗುಂಪುಗಳಿಗೂ ಅನುಕೂಲವಾಗುತ್ತಿತ್ತು. ಹೀಗಿರುವಲ್ಲಿ ನಾಯ್ಡು ಮೀಸಲಾತಿಯಲ್ಲಿ ವಿಭಜನೆ ತಂದು ದಲಿತರ ಸಿಟ್ಟಿಗೆ ಕಾರಣವಾದ.

ಹಾಗೆಯೇ ಸಾಮ್ರಾಜ್ಯಶಾಹಿ ವಿರೋಧಿಗಳಿಗೂ ಖುಷಿಪಡಲು ಸಕಾರಣಗಳಿವೆ. ವಿಶ್ವಬ್ಯಾಂಕಿನೆದುರು 'ಮಾದರಿ ರಾಜ್ಯ' ವೆಂದು ಆಂಧ್ರಾ ತೋರಿತಾದ್ದರಿಂದ ಸಾಮ್ರಾಜ್ಯಶಾಹಿಗಳಿಗೆ 'ಅದು ಮಾರಾಟವಾಗಿದೆ' ಎಂದು ಕಂಡಿತು. ಜಾತ್ಯಾತೀತ ಪ್ರಧಾನಮಂತ್ರಿಯ ಸಾಮರ್ಥ್ಯವಿದ್ದ ನಾಯ್ಡು ಎನ್‌ಡಿಎ ಗುಂಪಿಗೆ ಪಲ್ಟಿಗೊಂಡಾಗ ಸೆಕ್ಯುಲರ್ ಗುಂಪಿಗೆ ಖುಷಿಯಾಗಿರಬೇಕು. ಹಾಗೆಯೇ ನಕ್ಸಲೀಯರೂ ಸಹ ಸಂತೋಷಿಸುತ್ತಿರಬಹುದು. 'ಅದೊಂದು ಸಾಮಾಜಿಕ ವ್ಯವಸ್ಥೆಯ ಸಮಸ್ಯೆಯೇ ಹೊರತು ನಕ್ಸಲಿಸಂ ಅಲ್ಲ' ಎಂಬುದನ್ನು ನಾಯ್ಡು ಅರ್ಥೈಸಲಾಗಿಲ್ಲ ಅಥವಾ ಅರ್ಥೈಸಲು ಸಿದ್ಧವಿರಲಿಲ್ಲವೆಂದು ಕಾಣುತ್ತದೆ. ಕಾಂಗ್ರೆಸ್ ನೇತೃತ್ವದ ಅಭ್ಯರ್ಥಿಗಳನ್ನು ಬೆಂಬಲಿಸಲು ಮುಂದೆ ಬಂದದ್ದು ಶುಭ ಸೂಚನೆಯೇ ಸರಿ, ನಕ್ಸಲ್ ಗುಂಪುಗಳು ಚುನಾವಣಾ ರಾಜಕಾರಣದತ್ತ ಹತ್ತಿರ ಬರಲಾರಂಭಿಸಿದರು. ಬರಗಾಲ ಪೀಡಿತ ಗ್ರಾಮ ಪ್ರದೇಶಗಳೂ ಸಹ ನೆಮ್ಮದಿಯ ನಿಟ್ಟುಸಿರು ಬಿಟ್ಟಿರಬಹುದು. ನಾಯ್ಡು ನೀರಿನ ಸಮಸ್ಯೆ ಬಗೆಹರಿಸುವ ಬದಲು, ಆತ ಸೈಬರ್‌ಬಾದ್‌ಗೆ ಒತ್ತು ಕೊಟ್ಟು ನೀರನ್ನು ಬಾಟಲಿಗಳಲ್ಲಿ ತುಂಬಿಸಿಟ್ಟ.

ಕಾಂಗ್ರೆಸ್‌ನ ಸಾಮಾನ್ಯ ಮನುಷ್ಯ ಉಲ್ಲಾಸ ಪಡಲು ಕಾರಣಗಳಿವೆ. ಆದರೆ ಮಿ| ನಾಯ್ಡು ಮೂಲಭೂತ ಬದುಕಿನ ಸತ್ಯವನ್ನೇ ಮರೆತುಬಿಟ್ಟ : 'ಯಾವುದೇ ಸಮಾಜದಲ್ಲಿ ಜನ ಸಾಮಾನ್ಯ ಬಹುಸಂಖ್ಯೆಯಲ್ಲಿರುತ್ತಾನೆ. ಆದ್ದರಿಂದ ಇವರ ಕೊರತೆಗಳಿಗೆ ನಿರ್ಲಕ್ಷ್ಯ ತೋರಿದಲ್ಲಿ ಪರಿಣಾಮ ಊಹಿಸಲಸಾಧ್ಯ. ಒಂದು ದಶಕದ ಅಧಿಕಾರ- ರಾಜಕಾರಣದ ಕಂದರದಿಂದ ಕಾಂಗ್ರೆಸ್‌ನ ಜನ ಹೊರಬಂದು ಖುಷಿ ಅನುಭವಿಸುತ್ತಿದ್ದಾರೆ. ಅಂದರೆ ಟಿಡಿಪಿಯ ಸೋಲೇ ಒಂದು ಅಚ್ಚರಿಯ ಕ್ರಾಂತಿ. ರಾಜ್ಯದಲ್ಲಿನ ರಾಜಕೀಯ ವಾಹಿನಿಯಲ್ಲಿ ಸಂತಸದ ಅಲೆ ಹಬ್ಬಿದೆ.

ಆದರೆ ಈಗಷ್ಟೇ ಮುಕ್ತಾಯವಾದ ಕ್ರಾಂತಿಯಲ್ಲಿ 'ಜಾತಿ' ಸಂಗತಿ ಗೈರು ಹಾಜರಾಗಿತ್ತೆ ಅಥವಾ ಗೈರು ಹಾಜರಾಗಬಹುದೇ? ದಲಿತ ಡೈರಿಯ ದೃಷ್ಟಿಯಲ್ಲಿ ಭಾರತದಲ್ಲಿ ಜಾತಿ ಪದ್ಧತಿ ಇದ್ದಂತೆ ಆಂಧ್ರದಲ್ಲೂ ಇದೆ. ಡಾ||ವೈ.ಎಸ್.ರಾಜಶೇಖರ ರೆಡ್ಡಿ ಒಬ್ಬ ರೆಡ್ಡಿ ಶೂದ್ರನಾದರೂ ಒಬ್ಬ ಭೂಮಿಹಾರ್‌ನಾಗಿ ಬಿಹಾರಿಗೆ ಸಮ. ಈತ ಮುಖ್ಯಮಂತ್ರಿಯಾಗಲಿದ್ದಾನೆ. ಮಿ| ರೆಡ್ಡಿಯ ಆಯ್ಕೆ ಕಾಂಗ್ರೆಸ್‌ಗೆ ಅನಿವಾರ್ಯ ಆಯ್ಕೆಯೇ ? ಟಿಡಿಪಿ ಕಮ್ಮ ಜಾತಿ ಪಕ್ಷವಾಗಿರುವುದರಿಂದ ಕಾಂಗ್ರೆಸ್‌ಗೆ ಜಾತಿ ಆಧಾರ ಇದೆಯೇ? ರೆಡ್ಡಿ ಜಾತಿ ಕಾಂಗ್ರೆಸ್ ಆಧಾರವಾಗಿದೆಯೇ ?

೧೯೫೬ ರಿಂದ ಆಂಧ್ರವನ್ನು ೨೦ ಮಂದಿ ಮುಖ್ಯಮಂತ್ರಿಗಳು ಆಳಿದ್ದಾರೆ. ಅವರಲ್ಲಿ ೧೫ ಮಂದಿ ಕಾಂಗ್ರೆಸ್ ಪಕ್ಷದವರಾಗಿದ್ದು ಅವರಲ್ಲಿ ೧೧ ಮಂದಿ ಅಥವಾ ಶೇ ೭೩. ೩೩ ರಷ್ಟು ಮಂದಿ ರೆಡ್ಡಿ ಜಾತಿಯವರಾಗಿದ್ದಾರೆ. ಅಥವಾ ೪೮.೫ ವರ್ಷಗಳಲ್ಲಿ (೧.೫ ವರ್ಷ ರಾಷ್ಟ್ರಪತಿ

ಆಡಳಿತ) ಕಾಂಗ್ರೆಸ್ ಆಂಧ್ರಾ ರಾಜ್ಯದಲ್ಲಿ ೩೩.೫ ವರ್ಷಗಳಷ್ಟು ಅಥವಾ ೧೯೫೩ರ ಶೇ ಪ್ರಮಾಣ ೬೭. ೬೭ ರಷ್ಟಿದೆ. ಉಳಿದ ೧೧.೫ ವರ್ಷಗಳು ರೆಡ್ಡಿ ಜಾತಿಯವರಲ್ಲ. (ಬ್ರಾಹ್ಮಣರಾದ ಟಿ.ಪ್ರಕಾಶಂ ೧೩ ತಿಂಗಳು, ಪಿ.ವಿ.ನರಸಿಂಹ ರಾವ್ ೧೬ ತಿಂಗಳು, ವೇಲಮ, ಉತ್ತರಪ್ರದೇಶದ ಯಾದವರಿಗೆ ಸಮ ; ಜೆ. ವೆಂಗಲ್‌ರಾವ್ ೪ ವರ್ಷ ಎರಡು ತಿಂಗಳು ಮತ್ತು ದಲಿತ ಡಿ. ಸಂಜೀವಯ್ಯ ಎರಡು ವರ್ಷ ಎರಡು ತಿಂಗಳು ಮುಖ್ಯಮಂತ್ರಿಗಳಾಗಿದ್ದರು.) ಆದ್ದರಿಂದ ಕಾಂಗ್ರೆಸ್ ಸರ್ಕಾರ ಬಂದಾಗಲೆಲ್ಲ ಆಂಧ್ರಾದಲ್ಲಿ ರೆಡ್ಡಿ ಜಾತಿಯವರು ಮುಖ್ಯಮಂತ್ರಿಯಾಗುವುದು ಅನಿರೀಕ್ಷಿತವೇನು ಅಲ್ಲ.

ಟಿಡಿಪಿಯು ಆಂಧ್ರವನ್ನು ೧೬ ವರ್ಷಗಳ ಕಾಲ ಆಡಳಿತ ನಡೆಸಿದೆ. ಮುಖ್ಯಮಂತ್ರಿಗಳಿಬ್ಬರೂ (ಎನ್‌ಟಿಆರ್ ಮೂರು ಸಲ, ನಾಯ್ಡು ಎರಡು ಸಲ) ಕಮ್ಮ ಜಾತಿಯವರೇ! ಅಂದರೆ ಇದು ಕಾಕತಾಳೀಯವೇ ?

ಆಂಧ್ರಾದಲ್ಲಿ ರಾಜಕಾರಣ ಕಾಂಗ್ರೆಸ್ ಆಡಳಿತದಲ್ಲಿ ರೆಡ್ಡಿ ಮತ್ತು ಟಿಡಿಪಿ ಸಂದರ್ಭದಲ್ಲಿ ಕಮ್ಮಗಳ ಸುತ್ತಲೂ ಸುತ್ತುತ್ತಿದೆ. ೧೯೮೪ರವರೆಗೆ ಕಮ್ಮ ಜಾತಿಯವರು ಮುಖ್ಯಮಂತ್ರಿಯಾಗಲು ಸಾಧ್ಯವಿರಲಿಲ್ಲ. ರೆಡ್ಡಿ ವಿರೋಧಿ ಅಲೆಯು ಎನ್‌ಟಿಆರ್‌ನ ಮೇಲೇರುವಿಕೆಗೆ ಸಹಾಯ ಮಾಡಿದೆ. ರೆಡ್ಡಿಗಳು ರಾಜ್ಯದಲ್ಲಿ ಸಾಕಷ್ಟು ಕಬಳಿಸಿದ್ದರೆನ್ನುವುದರಲ್ಲಿ ಸಂಶಯವಿಲ್ಲ. ಇತರೆ ಜಾತಿಗಳಾದ ಓಬಿಸಿಗಳು ಟಿಡಿಪಿಯನ್ನು ಬೆಂಬಲಿಸಿದ್ದರಿಂದ ೧೯೯೪ರ ನಂತರ ರೆಡ್ಡಿಗಳು ಅಧಿಕಾರವನ್ನು ಕಳೆದುಕೊಂಡರು. ಕಮ್ಮಗಳ ಆಡಳಿತಾವಧಿಯಲ್ಲಿ ಟಿಡಿಪಿ ರಾಜ್ಯವನ್ನು ವಿದೇಶವನ್ನು ಕೊಳ್ಳೆಹೊಡೆದು ಓಡಿದಂತೆ ಕಬಳಿಸಿದರು.

ಈ ವಿದ್ಯಮಾನವನ್ನು ಕಾಂಗ್ರೆಸ್ ಬೇಗನೆ ಗಮನಿಸಿತು. ಯು.ಪಿ. ಯಲ್ಲಿ ಲೋಧರಿಗೆ ಸಮಾನವಾದ ಕಾಪು ಓಬಿಸಿ, ಸಾಮಾಜಿಕ ರಾಕ್ಷಸ ಜಾತಿ, ನುಂಗಲು ಕಾಯುತ್ತಿದ್ದ ವ್ಯಕ್ತಿಯನ್ನು ಪಕ್ಷದ ಅಧ್ಯಕ್ಷನನ್ನಾಗಿ ಮಾಡಿತು. ಆದ್ದರಿಂದ ಈಗಷ್ಟೇ ಮುಗಿದಿರುವ ಕ್ರಾಂತಿಯಲ್ಲಿ ಇತರೆ ಸಂಗತಿಗಳನ್ನು ಹೊರತುಪಡಿಸಿದರೆ ರೆಡ್ಡಿ ಜಾತಿಯವರು ಅಧಿಕಾರವನ್ನು ವಹಿಸಿಕೊಳ್ಳಲು ನಡೆಸಿದ ಹೋರಾಟವಷ್ಟೆ ಅಧಿಕಾರ ಚಕ್ರ ಪೂರ್ಣ ಸುತ್ತು ಬಂದಿದ್ದು ರೆಡ್ಡಿಗಳ ಪ್ರಾಬಲ್ಯವನ್ನು ವಿರೋಧಿಸಿ ಟಿಡಿಪಿ ಸೇರಿಕೊಂಡವರೇ ಈಗ ರೆಡ್ಡಿಗಳನ್ನು ಸೇರಿಕೊಳ್ಳುವ ಮೂಲಕ ಕಮ್ಮಗಳ ಮಧ್ಯಯುಗೀನ ಕಾಲವನ್ನು ತಿರಸ್ಕರಿಸಿದ್ದಾರೆ. ಕಮ್ಮಗಳಿಗೆ ಹೋಲಿಸಿದಲ್ಲಿ ರೆಡ್ಡಿಗಳು ಅಷ್ಟೇನು ಮಧ್ಯಯುಗೀನರಲ್ಲ. ಈ ಗ್ರಹಿಕೆಯಲ್ಲಿ ಶೋಷಿತರು ಕೆಲವು ಸಮಯ ನಿಟ್ಟುಸಿರು ಬಿಡಬಹುದಾಗಿದೆ.

ಮೇ ೨೦೦೪ ಬ್ರಾಹ್ಮಣ ವಿರೋಧಿ ಅಲೆ :

ಎನ್‌ಡಿಎ ಮತ್ತು ಕಾಂಗ್ರೆಸ್ ಸಂಯುಕ್ತ ರಂಗಗಳು ಗಂಗಾ ಬಯಲಲ್ಲಿ ಯುದ್ಧ ನಡೆಸಿದ್ದರೆ ಮತ್ತೊಂದೆಡೆ ಒಂದು ಸಣ್ಣ ದನಿಯಾದರೂ ಶಕ್ತಿಯುತವಾಗಿ ಬ್ರಾಹ್ಮಣೇತರ ಮತ್ತು ಬನಿಯಗಳ ವಿರೋಧಿ ಅಲೆಯು ಮತದಾರರನ್ನು ತಟ್ಟಿತು. ಗೆದ್ದವರಾಗಲಿ, ಸೋತವರಾಗಲಿ ಅಥವಾ ಚುನಾವಣಾ ಪೂರ್ವ ಸಮೀಕ್ಷಕರಾಗಲಿ ಯಾರೂ ಅರಿಯದ ಸಂಗತಿ ಸಮಾಜದೊಳಗೆ ಘಟಿಸುತ್ತಿದೆ.

ನಗರ ಪಾಲಿಕೆಯ ಬುಲ್ಡೋಜರ್‌ಗಳು ಬಹುಸಂಖ್ಯಾತರಾದ ಡೆಲ್ಲಿಯ ಕೊಳಚೆಗೇರಿ ಜನ, ಅಸಂಘಟಿತ ನೆಲೆಗಳಲ್ಲಿರುವವರ ಮೇಲೆ ಕೆಂಗಣ್ಣು ಬೀರುತ್ತಿದೆ. ಕಳೆದ ೫ ವರ್ಷಗಳಲ್ಲಿ ನೂರಾರು ಸ್ಲಂಗಳು ನಾಶವಾಗಿವೆ ಅಥವಾ ಅವುಗಳನ್ನು ಮತ್ತೊಂದೆಡೆ ಬದಲಾಯಿಸಲಾಗಿದೆ. ಏಕೆಂದರೆ ಅನೇಕ ಕೈಗಾರಿಕಾ ಘಟಕಗಳು ಮುಚ್ಚಿವೆ. ಅಲ್ಲದೆ ಇದೆಲ್ಲಾ ಜಗಮೋಹನ್‌ನ 'ಶುದ್ಧ ಡೆಲ್ಲಿ'ಯ ಕಾರ್ಯಕ್ರಮ. ನಾನು ಜೀವಿಸುವ ಸಂಕಿರಣದಲ್ಲಿರುವ ಅನೇಕ ಕೆಲಸದಾಳುಗಳು, ಪ್ಲಂಬರ್‌ಗಳು, ಕಾವಲುಗಾರರೆಲ್ಲಾ ಜಗಮೋಹನ್‌ನನ್ನು ಚೆನ್ನಾಗಿ ಬಲ್ಲರು. ಹಾಗೆಯೇ ಕೂಲಿಗಾರರು, ತರಕಾರಿ ಮಾರುವವರು, ಕಾರುಚಾಲಕರು, ಕೈಗಾರಿಕಾ ಕಾರ್ಮಿಕರು ಸಹ ತಿಳಿದಿದ್ದಾರೆ. ಇವರ ಪರಿಕಲ್ಪನೆಯಲ್ಲಿ ಜಗಮೋಹನ್ ಸರ್ವನಾಶಕ. ಅವರ ಅಸ್ತಿತ್ವವನ್ನೇ ಡೆಲ್ಲಿಯಲ್ಲಿ ಪಣಕ್ಕಿಟ್ಟಿರುವವನಾಗಿದ್ದಾನೆ.

ಡೆಲ್ಲಿಗೆ ಬಂದ ಮಿಲಿಯಗಟ್ಟಲೆ ಕೊಳಚೆ ನಿವಾಸಿಗಳಲ್ಲಿ ಅನೇಕರು ದಲಿತರು ಮತ್ತು ಕೆಳವರ್ಗದ ಶೂದ್ರರಾಗಿದ್ದು ಗಂಗಾಬಯಲಿನಿಂದ ವಲಸಿಗರಾಗಿ ಬಂದವರು. ಕಲ್ಕತ್ತಾದ ಕೈಗಾರಿಕೆಗಳು ಸ್ಥಗಿತಗೊಂಡಾಗ ಮತ್ತು ಮಂಬಾಯಿಯ ಬಟ್ಟೆ ಗಿರಣಿಗಳು ನೆಲ ಕಚ್ಚಿದಾಗ ಡೆಲ್ಲಿಯು ಅನೇಕರಿಗೆ ಭವಿಷ್ಯದ ನೆಲೆಯಾಯಿತು. ಈ ಕೂಲಿಗಾರರು ಏಪ್ರಿಲ್-ಮೇ ತಿಂಗಳಲ್ಲಿ ತಮ್ಮ ಮೂಲ ವಾಸಸ್ಥಾನಗಳಿಗೆ ವಾಪಾಸ್ಸಾಗುತ್ತಾರೆ. ಆ ಸಮಯದಲ್ಲಿ ಕೊಯ್ಲು ಮತ್ತು ಮದುವೆ ಸಮಯ. ಏಪ್ರಿಲ್‌ನಲ್ಲಿ ಅವರು ಮನೆಗೆ ಒಯ್ದು ಸುದ್ದಿ ತುಂಬಾ ಸ್ಪಷ್ಟವಿತ್ತು: 'ಬಿಜೆಪಿ ಮುನ್ನಡೆಸಿದ ಎನ್‌ಡಿಎ ನಗರ ಭಾರತದಿಂದ ಬಡಜನರನ್ನು ಹೊರದೂಡಲು ನಿರ್ಧರಿಸಿತ್ತು. ಇದೇ ಎನ್‌ಡಿಎಗೆ ಮುಳುವು ಆಗಿತ್ತು.

ಭಾರತೀಯ ಜನಸಂಖ್ಯೆಯಲ್ಲಿ ದಲಿತರು ೧/೪ ರಷ್ಟಿದ್ದಾರೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಸರ್ಕಾರಿ ಉದ್ಯೋಗಗಳು, ಶಿಕ್ಷಣದಲ್ಲಿ ಅಲ್ಪಮಟ್ಟಿಗಿನ ಅನುಕೂಲ ಇವೆರಡನ್ನು ಬಿಟ್ಟರೆ ದಲಿತ ಸಮುದಾಯಕ್ಕೆ ಇನ್ನಾವುದೇ ಅವಕಾಶಗಳು ಇರಲಿಲ್ಲ. ಶಿಕ್ಷಣದ ಖಾಸಗೀಕರಣ ದಲಿತರನ್ನು ಶಿಕ್ಷಣದಿಂದ ದೂರವಿರಿಸುತ್ತದೆ. ಅಲ್ಲದೆ ರಾಜ್ಯಾಂಗದ ಸಾರ್ವಜನಿಕ ವಲಯಗಳನ್ನು ಖಾಸಗೀಗೊಳಿಸುವುದರಿಂದ ದಲಿತರನ್ನು ೧೯೫೦ರ ಹಿಂದಕ್ಕೊಯ್ಯುತ್ತದೆ. ಬಂಡವಾಳ ಹಿಂತೆಗೆತ ಸಚಿವರಾದ ಅರುಣ್‌ಶೌರಿ ತನ್ನ 'ವರ್ಷಿಪಿಂಗ್ ಫಾಲ್ಸ್ ಗಾಡ್ಸ್' ನಿಂದಾಗಿ ಅತ್ಯಂತ ದ್ವೇಷಿತ ವ್ಯಕ್ತಿಯಾಗಿದ್ದು ಶಿಕ್ಷಿತ ದಲಿತ ಸಮುದಾಯದಲ್ಲೇ ಆತನ ಹೆಸರೇ ಹೆದರಿಕೆಯನ್ನುಂಟುಮಾಡಿತ್ತು. ಭಾರತದ ಪ್ರತಿಯೊಂದು ಜಿಲ್ಲೆಯಲ್ಲೂ ಸಹ, ವೃತ್ತಿಪರವಲ್ಲದಿದ್ದರೂ ಸಹ ಒಂದಲ್ಲಾ ಒಂದು ದಲಿತ ಪತ್ರಿಕೆ ಇದೆ. ಇವುಗಳೆಲ್ಲಾ ಬಿಜೆಪಿಯ ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣವನ್ನು ವಿರೋಧಿಸುವಲ್ಲಿ ಸಮ್ಮತಿಯನ್ನು ವ್ಯಕ್ತಪಡಿಸಿದ್ದವು. ಶೂದ್ರರಿಗೂ ಸಹ ಇದು ಮಂಡಲ್ ಮೀಸಲಾತಿಯನ್ನು ಸ್ಥಗಿತಗೊಳಿಸುವಂಥ ಕ್ರಮವೆಂದೆ ತಿಳಿಯಿತು.

> ರಾಜಕೀಯ ಅಪಘಾತವೆನ್ನಿ ಅಥವಾ ಕಾಕತಾಲೀಯವೆನ್ನಿ - ಇಂದು ಭಾರತವನ್ನು ಬ್ರಾಹ್ಮಣೇತರರು ಆಳುವ ಕಾಲ ಬಂತೆಂಬುದನ್ನು ಸಿಖ್-ಜಾತ್ ಅಥವಾ ಹುಟ್ಟು ಶೂದ್ರ ಡಾ॥ಮನಮೋಹನ್‌ಸಿಂಗ್ ತೋರಿಸಿದ್ದಾರೆ. ರಕ್ಷಣಾ ಇಲಾಖೆಯನ್ನು ಹೊರತುಪಡಿಸಿ ನೋಡಿದಲ್ಲಿ ಅದನ್ನು ಒಬ್ಬ ಬ್ರಾಹ್ಮಣ ಪ್ರಣಬ್ ಮುಖರ್ಜಿಯ ಉಸ್ತುವಾರಿಗೆ ಒಪ್ಪಿಸಿರುವುದು ವಿಪರ್ಯಾಸವೇ ಸರಿ. ಯುದ್ಧದಲ್ಲಿ ಬ್ರಾಹ್ಮಣ ಎಂದಾದರೂ ಶೋಭಿಸಿದ್ದಾನೆಯೇ? ಗೃಹ ಮಂತ್ರಿಯಾಗಿರುವ ಶಿವರಾಜ್ ಪಾಟೀಲ್ ಅತ್ಯಂತ ನಿಪುಣನಾದ ಶೂದ್ರ. ಅಲ್ಲದೆ ವಿದೇಶ ಖಾತೆಯು ಸಹ ಹುಟ್ಟು ಜಾತ್‌ನಾದ ನಟವರ್ ಸಿಂಗ್‌ಗೆ ಸಂದಿದೆ.

'ಭಾರತ ಪ್ರಕಾಶಿಸುತ್ತಿದೆ' ಎನ್ನುವ ಪ್ರಚಾರಾಂದೋಲನವು ಸಹ ೧೯೮೯ರ ರಾಜೀವ್‌ಗಾಂಧಿಯ '೨೧ನೇ ಶತಮಾನ'ದ ಘೋಷಣೆಯ ಪ್ರತೀಕವಾಗಿತ್ತು. ಅಂದು ಅದು ಸಾರ್ವಜನಿಕವಾಗಿ ಅಪಹಾಸ್ಯ ಮತ್ತು ವ್ಯಂಗ್ಯಚಿತ್ರಗಾರರಿಗೆ ವಸ್ತುವಾಗಿತ್ತು. ಇಂದು ಸಾಮಾನ್ಯವಾಗಿ ತಿಳಿದಿರುವ ಸಂಗತಿ 'ಸಂಪರ್ಕ ಕ್ರಾಂತಿ'ಯು ರಾಜೀವ್‌ಗಾಂಧಿಯ ಪ್ರಯತ್ನವಾಗಿತ್ತೇ ವಿನಃ ಎನ್‌ಡಿಎನ ಕೊಡುಗೆಯೇನೂ ಅಲ್ಲ. ಈ ಲೇಖನವನ್ನು ಸಹ ಇತರ ಮಿಲಿಯ ಸುದ್ದಿಗಳಂತೆ ಕಂಪ್ಯೂಟರ್‌ನಲ್ಲಿ ರೂಪಿಸಿದ್ದು ಅಲ್ಲದೆ 'ದಿ ಪಾಯನಿಯರ್'ನ್ನು ನಿಮಿಷಕ್ಕಿಂತ ಕಡಿಮೆ ಅವಧಿಯಲ್ಲಿ ತಲುಪುತ್ತದೆ. ೧೯೯೦ರಲ್ಲಿ ಒಂದು ಲೇಖನದ ಕರಡು ಪ್ರತಿ ತಯಾರಿಸಿ ಟೈಪ್ ಮಾಡಿ ಕಳುಹಿಸುವಾಗ ಕಮ್ಮಿಯೆಂದರೂ ಒಂದು ವಾರ ಬೇಕಾಗುತ್ತಿತ್ತು. ಇದರೊಡನೆ ಇರುತ್ತಿದ್ದ ಕಷ್ಟ-ಖರ್ಚು-ವೆಚ್ಚಗಳನ್ನು ಇಲ್ಲಿ ಹೇಳಲಾಗದು.

ರಾಜೀವ್‌ಗಾಂಧಿ ಅದ್ಭುತ ದಾರ್ಶನಿಕರಾದರೂ ಕೂಡ ಆತ ತನ್ನ ಘೋಷಣೆಯನ್ನು 'ಸಾಮಾಜಿಕ ಮುಖ'ವನ್ನು ನೀಡುವುದರಲ್ಲಿ ಸೋತಿದ್ದ. ಆದರೂ ಆತ ಭಾರತದಲ್ಲಿ ಮರು-ಕೈಗಾರೀಕರಣವನ್ನು ಆರಂಭಿಸಿದ್ದ. ಇದರಂತೆಯೇ 'ಭಾರತ ಪ್ರಕಾಶಿಸುತ್ತಿದೆ' ಎನ್ನುವ ಘೋಷಣೆಯೂ ಸಹ ನಿರ್ಗತಿಕರಿಗೆ ಒಂದು ಅಣಕವಾಗಿತ್ತು. ಭಾರತದ ಕೆಳವರ್ಗಗಳು ತಮ್ಮ ಸ್ಥಿತಿಗತಿಗಳು ತೀವ್ರವಾಗಿ ಕುಸಿಯುತ್ತಿರುವುದನ್ನು ಕಂಡಾಗ, ಇಂಥ ಘೋಷಣೆಗಳು ಅವರ ಗಾಯಕ್ಕೆ ಮತ್ತಷ್ಟು ಉಪ್ಪನ್ನು ಸವರಿದಂತಾಯಿತ್ತಷ್ಟೆ ಎನ್‌ಡಿಎ ನಾಯಕರು ಹೇಗೆ ಭಾರತವು ಆಹಾರೋತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದೆ ಎಂದಾಗ, ಭೂಹೀನ ಕಾರ್ಮಿಕರು ಬೆವರು ಸುರಿಸಿ ಕಾಳಿಗಾಗಿ ದುಡಿಯುತ್ತಿದ್ದು ಮತ ಚಲಾಯಿಸಲು ಕಾಯುತ್ತಿದ್ದರು.

ಎನ್‌ಡಿಎ 'ಭಾರತ ಪ್ರಕಾಶಿಸುತ್ತಿದೆ' ಎನ್ನುವ ಘೋಷಣೆಯನ್ನು 'ಸಾಮಾಜಿಕ' ವಾಗಿಸುವಲ್ಲಿ ಸೋತು ಸುಣ್ಣವಾಯಿತು. ಸಾಮಾಜಿಕ ಮುಖವೆಂದರೆ ನಿರ್ಗತಿಕರಿಗೆ ಅನುಕೂಲಕರವಾದ ನೀತಿಗಳನ್ನು ಎನ್‌ಡಿಎ ಹೊರತರಲಿಲ್ಲ. ಅದರ ದೊಡ್ಡ ಸಾಧನೆಯೆಂದರೆ 'ಗ್ರಾಹಕ ಸಂಸ್ಕೃತಿ'ಯನ್ನು ಪರಿಚಯಿಸುವ ಮೂಲಕ ಆರ್ಥಿಕತೆಗೆ ಚಾಲನೆಯನ್ನು ನೀಡಿದ್ದು ೧೦ ವರ್ಷಗಳ ನಂತರವಷ್ಟೆ ಅದರ ಪರಿಣಾಮ ಕಾಣುವುದು. ಇಲ್ಲಿ ಗಮನದಲ್ಲಿಡಬೇಕಾದ ಸಂಗತಿಯೆಂದರೆ ಅನಾನುಕೂಲ ಗುಂಪುಗಳಿಗೆ ಸಹಾಯವಾಗುವುದು ಕೈಗಾರೀಕೃತ ಭಾರತದಿಂದ ಅಷ್ಟೆ ಏಕೆಂದರೆ ಅಂಥ ನಗರೀಕೃತ ಭಾರತದಿಂದಷ್ಟೆ ಜಾತಿ ಆಚರಣೆ ಕಮ್ಮಿಯಾಗುತ್ತದೆ.

ಈ ಹಿಂದಿನ ಬಿಜೆಪಿಯ ಮುಖವಾಣಿಯಾದ ಜನಸಂಘ ೬೦ರ ದಶಕದ ತನಕ 'ಬನಿಯಾ ಪಕ್ಷ'ವೆಂದು ಪರಿಗಣಿತವಾಗಿತ್ತು. ಆದರೆ ೭೦-೯೦ರ ದಶಕಗಳಲ್ಲಿ 'ಬನಿಯ-ಬ್ರಾಹ್ಮಣ' ಐಡೆಂಟಿಟಿಯನ್ನು ಪಡೆದು 'ಹಿಂದುತ್ವ'ದ ಐಡೆಂಟಿಟಿಯಾಯ್ತು. ಮೊದಮೊದಲು ಎನ್‌ಡಿಎ ಕಾಂಗ್ರೆಸ್‌ನ ಬಿಂಬದಂತಿದ್ದು ಇತರ ಗುಂಪುಗಳು ಅದರತ್ತ ಆಕರ್ಷಿತಗೊಂಡವು. ಆದರೆ ಜಗಮೋಹನ್, ಅರುಣ್ ಶೌರಿ, ಮತ್ತು ಪ್ರಮೋದ್ ಮಹಾಜನ್ ಗಳೆಂಬ ತ್ರಿಮೂರ್ತಿ

ಡೈರಿಯ ನಾಲ್ಕನೇ ವಾರ್ಷಿಕೋತ್ಸವ :

ದಿನ ಪತ್ರಿಕೆಗಳಲ್ಲಿ ದಲಿತ ಕಾಲಂ ಏಕಿಲ್ಲ ?

೧೯೯೯ರ ಏಪ್ರಿಲ್‌ನಲ್ಲಿ ದಲಿತ ಡೈರಿ ಉದಯಿಸಿತು. ಈ ಏಪ್ರಿಲ್‌ನಲ್ಲಿ ದಲಿತ ಡೈರಿ ತನ್ನ ನಾಲ್ಕನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿದೆ. ಭೋಪಾಲ್‌ನಿಂದ ದಿ ಪಾಯನೀಯರ್‌ನ ಮೂರನೇ ಆವೃತ್ತಿ ಬರುತ್ತಿದ್ದು ಈ ಏಪ್ರಿಲ್‌ನಲ್ಲಿ ಎಂಥ ಅಚ್ಚರಿಯ ಕಾಕತಾಲೀಯ ಘಟನೆ! ಈ ಹಿಂದಕ್ಕೆ ಹೋಗುವುದಾದರೆ ದಲಿತ ಡೈರಿಯ ಆರಂಭ ದಿಂದಲೂ ಪ್ರಚಲಿತವಿದ್ದ ಗಾಳಿ ಸುದ್ದಿಯೆಂದರೆ ೧೩೬ ವರ್ಷ ಹಳೆಯ ಪತ್ರಿಕೆ ಮುಚ್ಚಿಹೋಗುವುದರಲ್ಲಿತ್ತು. ಆದರೆ ಚಂದನ ಮಿತ್ರನ ಆಂತರಿಕ ಶಕ್ತಿಯಿಂದ ದಿ ಪಾಯನೀಯರ್ ಮುಂದುವರೆಯಿತು. ಈಗ ಲಕ್ನೋ ಮತ್ತು ದೆಹಲಿಯ ಅನಂತರ ಭೋಪಾಲ್ ಮೂರನೇ ಆವೃತ್ತಿಯನ್ನು ಆರಂಭಿಸಿದೆ.

ನನಗೆ ಭೋಪಾಲ್/ಭೋಪಾಲ್ ಸಮ್ಮೇಳನ/ಭೋಪಾಲ್ ಘೋಷಣೆಯಿಂದಾಗಿ ಭಾವನಾತ್ಮಕ ಸಂಗತಿಯಾಗಿದೆ. ಇದಕ್ಕಿಂತ ಮುಂಚೆ ಭೋಪಾಲ್ 'ಗ್ಯಾಸ್ ದುರಂತ'ಕ್ಕೆ ಹೆಸರುವಾಸಿಯಾದದ್ದು. ಸಮಕಾಲೀನ ದಲಿತ ಚಳವಳಿಯಲ್ಲಿ ಭೋಪಾಲ್ ಸಮ್ಮೇಳನ ಒಂದು ಚಾರಿತ್ರಿಕ ಘಟನೆಯಾಗಿರುವುದು ಗೂಗಲ್ ಇಂಟರ್‌ನೆಟ್ ಶೋಧನೆಯಲ್ಲಿ ಕಾಣುತ್ತದೆ. ಒಂದು ದುಃಖಕರ ಸಂಗತಿ ಎಂದರೆ ದಿಗ್ವಿಜಯ್‌ಸಿಂಗ್ ಈಗ ಗದ್ದುಗೆಯಲ್ಲಿ ಇಲ್ಲ. ಹೀಗಿದ್ದರೂ ಸಹ ಆತನಿಂದಲೇ ದಲಿತರಿಗೆ ವೈವಿಧ್ಯತೆ (ಪಾಲುದಾರಿಕೆ)ಯ ಅವಕಾಶ ತೆರೆದದ್ದು. ಆದರೆ ಆತನ ಅನಂತರದಲ್ಲಿ ಬಂದ ಮಹಿಳೆಯು ಅದನ್ನು ಸರ್ವನಾಶ ಮಾಡಲು ಪಣತೊಟ್ಟಂತೆ ಕಾಣುತ್ತದೆ. ಆದರೂ ಆಕೆ ದಲಿತ ಬಹುಜನ ಪರಿಭಾಷೆಯಲ್ಲಿ ನಮ್ಮವರೇ ಆದ ಮಹಿಳೆಯಾಗಿದ್ದಾಳೆ.

ದೆಹಲಿಯಲ್ಲಿರುವ ದಿನಪತ್ರಿಕೆಗಳಾದ ದಿ ಹಿಂದೂ, ದಿ ಇಂಡಿಯನ್ ಎಕ್ಸ್‌ಪ್ರೆಸ್, ದಿ ಟೈಮ್ಸ್ ಆಫ್ ಇಂಡಿಯಾ, ದಿ ಹಿಂದೂಸ್ಥಾನ್ ಟೈಮ್ಸ್, ದಿ ಏಷಿಯನ್ ಏಜ್ ಇತ್ಯಾದಿ.. ಏಕೆ ಒಂದು ಸಾಪ್ತಾಹಿಕ ಕಾಲಂ ಅನ್ನು ಒಬ್ಬ ದಲಿತ ಲೇಖಕನಿಂದ ಬರೆಸಲಿಲ್ಲ ಎಂಬುದನ್ನು ದಲಿತ ಚರಿತ್ರೆ ತಿಳಿಯಲು ಬಯಸುತ್ತದೆ. ಇದೇ ಅಂಶವು ಪ್ರಾದೇಶಿಕ ದಿನಪತ್ರಿಕೆಗಳಾದ ಹಿಂದಿ, ತೆಲುಗು, ಕನ್ನಡ, ತಮಿಳು, ಮಲೆಯಾಳಂ, ಮರಾಠಿ, ಗುಜರಾತಿ, ಬಂಗಾಲಿ, ಒರಿಯ, ಅಸ್ಸಾಮಿ... ಗಳಿಗೂ ಅನ್ವಯಿಸುತ್ತದೆ. ದಲಿತ ಡೈರಿ ಆರಂಭವಾಗಿ ನಾಲ್ಕು ವರ್ಷಗಳೇ ಕಳೆದರೂ ಸಹ ಯಾವುದೇ ದಿನಪತ್ರಿಕೆಯೂ ಸಹ ದಲಿತ ಕಾಲಂ ಇನ್ನೂ ಏಕೆ ಆರಂಭಿಸಿಲ್ಲ?

೧೯೯೯ರ ಏಪ್ರಿಲ್‌ನಲ್ಲಿ ಮೂರು ಸಂಗತಿಗಳು ನನ್ನ ಮನದಲ್ಲಿದ್ದವು. ೧. ನಾನು ನನಗನಿಸಿದ್ದನ್ನು ಬರೆಯುತ್ತೇನೆಯೇ ವಿನಃ ಸಿವಿಲ್ ಸರ್ವಿಸ್‌ಗೆ ಅರ್ಜಿ ಸಲ್ಲಿಸುವುದಿಲ್ಲವೆಂದು ನಿರ್ಧರಿಸಿದ್ದೆ. ಜೆ.ಎನ್.ಯು.ಗೆ ನನ್ನ ಪಿ.ಜಿ.ಗೆ ಹೋದಾಗ, ಪ್ರವೇಶ ಪರೀಕ್ಷೆಯಲ್ಲಿ ನಾನು ಮೊದಲಿಗನಾಗಿದ್ದೆ. ೪ ಡಜನ್‌ನಷ್ಟು ವಿದ್ಯಾರ್ಥಿಗಳು ಸಿವಿಲ್ ಸರ್ವಿಸ್‌ಗೆ ಸೇರ್ಪಡೆಯಾಗಿದ್ದರು. ನನ್ನ ಬ್ಯಾಚ್‌ನಲ್ಲಿ ಕೆಲವು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳೂ ಇದ್ದರು. ಅವರೆಲ್ಲಾ ಈಗ ಕ್ಲಾಸ್ ೧ನ ಸರ್ಕಾರಿ ನೌಕರಿಯಲ್ಲಿರಬಹುದು. ಇವರಲ್ಲಿ ನಾನು ಅತ್ಯಧಿಕ ಅಂಕ ಗಳಿಸಿ ತೇರ್ಗಡೆಯಾಗಿದ್ದೆ.

ನನ್ನ ಇಬ್ಬರು ಸಂಬಂಧಿಕರೊಡನೆ ನಾನು ಸಿಪಿಐ (ಎಂ.ಎಲ್)ನ ಸದಸ್ಯನಾದೆ. ನನ್ನ ಕಾಲೇಜಿಗೆ ಒಂದು ಮೈಲಿಗಿಂತ ಕಮ್ಮಿಯಿರುವ ದೂರವನ್ನು ಕ್ರಮಿಸಲು ನನ್ನ ಕುಟುಂಬದವರು ೧೯೭೭ರಲ್ಲಿ ೩೫೦ ಸಿ.ಸಿ. ರಾಯಲ್ ಎನ್‌ಫೀಲ್ಡ್ ಬೈಕನ್ನು ನೀಡಿದ್ದು ನನ್ನ ಶ್ರಮವನ್ನು ಒಪ್ಪಲಾರರು. ಅದೇ ಕುಟುಂಬ ಅಂದು ಲಕ್ಸುರಿಯೆನಿಸಿದ ಬಜಾಜ್ ಚೇತಕ್ ಸ್ಕೂಟರನ್ನು ೧೯೮೮ರಲ್ಲಿ ಖರೀದಿಸಲು ಅನುಮತಿಸಿತ್ತು. ಇಂಥ ಕುಟುಂಬ ನಾನು ಯೂನಿವರ್ಸಿಟಿಯಲ್ಲಿ ಕೆಲಸಕ್ಕೆ ಸೇರಿದ್ದು ಕಂಡು ನಿರಾಶೆಗೊಂಡಿರಬೇಕು. ಆದರೆ ಭಿನ್ನವಾದದ್ದನ್ನು ಮಾಡಲು ನಾನು ನಿರ್ಧರಿಸಿದೆ. ಏನೆಂದು ಗೊತ್ತಿರಲಿಲ್ಲ. ಅಂದಿನ ಆ ಚಾರಿತ್ರಿಕ ಸಂದರ್ಭದಲ್ಲಿ ದಲಿತ ವಿಮೋಚನೆಗಾಗಿ ನಡೆದಿರುವ ಹೋರಾಟದಲ್ಲಿ ಸಹಪಾಠಿಯಾಗಲು ನಿರ್ಧರಿಸಿದ್ದೆ.

ಎರಡನೆಯ ಸಂಗತಿಯೆಂದರೆ ನನ್ನೆದುರಿಗಿನ ಸವಾಲುಗಳು : ಈಗಾಗಲೇ ದಲಿತ ಅವಕಾಶದ ಮೇಲೆ ಸವಾರಿ ಮಾಡುತ್ತಿರುವ ಎಡಪಂಥೀಯ/ಲಿಬರಲ್‌ಗಳು ನನ್ನ ಕಾಲಂಗೆ ಒಪ್ಪುತ್ತಾರೆಂಬ ಭರವಸೆ ಇರಲಿಲ್ಲ. ದಿನ ಪತ್ರಿಕೆಗಳು ಏಕೆ ದಲಿತರ ಬರವಣಿಗೆ/ಪತ್ರಿಕೆ/ಮಾಸಿಕಗಳನ್ನು ದೂರವಿಟ್ಟವು ಎಂಬುದಕ್ಕೆ ದಲಿತ ಚರಿತ್ರೆ ವಿವರಣೆಯನ್ನು ಕೇಳುತ್ತವೆ. ಒಬ್ಬ ಎಡಪಂಥೀಯ/ಲಿಬರಲ್/ ಸೆಕ್ಯುಲರ್ ಮತ್ತು ಇತರೆ ಪತ್ರಕರ್ತರಿಲ್ಲದ ಒಂದೇ ಒಂದು ಪತ್ರಿಕೆ ಡೆಲ್ಲಿಯಲ್ಲಿ ಕಾಣಸಿಗದು. ನಾನು ಸಹ ಅವರ ಹಾದಿಯಲ್ಲೇ ಸಾಗಬೇಕೆಂದು ಬಯಸಿದ್ದರು. ೧೯೯೯ರಲ್ಲಿ ಬಿಜೆಪಿಯನ್ನು ದೂಷಿಸಬೇಕಾಗಿತ್ತು. ರಾಜೀವ್‌ಗಾಂಧಿಯ ಸಂದರ್ಭದಲ್ಲಿ ಪ್ರತಿವಾರ ಭೋಫರ್ಸ್ ಭ್ರಷ್ಟಾಚಾರವನ್ನು ಖಂಡಿಸಿ ಬರೆಯಬೇಕಾಗಿತ್ತು. ಅಲ್ಲದೆ ಸಂಜೆ ಆರ್‌ಎಸ್‌ಎಸ್‌ನೊಡನೆ ಕುಡಿಯುವುದು ರಾಷ್ಟ್ರೀಯ ಹಿತಾಸಕ್ತಿಯಾಗಿತ್ತು.

ದೆಹಲಿಯಲ್ಲಿರುವ ದಿನಪತ್ರಿಕೆಗಳಾದ
ದಿ ಹಿಂದೂ, ದಿ ಇಂಡಿಯನ್ ಎಕ್ಸ್‌ಪ್ರೆಸ್,
ದಿ ಟೈಮ್ಸ್ ಆಫ್ ಇಂಡಿಯಾ,
ದಿ ಹಿಂದೂಸ್ಥಾನ್ ಟೈಮ್ಸ್
ದಿ ಏಷಿಯನ್ ಏಜ್ ಇತ್ಯಾದಿ..
ಏಕೆ ಒಂದು ಸಾಪ್ತಾಹಿಕ ಕಾಲಂ ಅನ್ನು
ಒಬ್ಬ ದಲಿತ ಲೇಖಕನಿಂದ ಬರೆಸಲಿಲ್ಲ
ಎಂಬುದನ್ನು ದಲಿತ ಚರಿತ್ರೆ ತಿಳಿಯಲು
ಬಯಸುತ್ತದೆ. ಇದೇ ಅಂಶವು ಪ್ರಾದೇಶಿಕ
ದಿನಪತ್ರಿಕೆಗಳಾದ ಹಿಂದಿ, ತೆಲುಗು, ಕನ್ನಡ,
ತಮಿಳು, ಮಲೆಯಾಳಂ, ಮರಾಠಿ, ಗುಜರಾತಿ,
ಬಂಗಾಲಿ, ಒರಿಯ, ಅಸ್ಸಾಮಿ... ಗಳಿಗೂ
ಅನ್ವಯಿಸುತ್ತದೆ. ದಲಿತ ಡೈರಿ ಆರಂಭವಾಗಿ
ನಾಲ್ಕು ವರ್ಷಗಳೇ ಕಳೆದರೂ ಸಹ
ಯಾವುದೇ ದಿನಪತ್ರಿಕೆಯೂ ಸಹ
ದಲಿತ ಕಾಲಂ ಇನ್ನೂ ಏಕೆ ಆರಂಭಿಸಿಲ್ಲ?

ದಲಿತ ಡೈರಿ ತುರ್ತು ಪರಿಸ್ಥಿತಿಯ ಸಮಯದಲ್ಲಿ ಉದಯಿಸಿದ್ದಲ್ಲಿ ಇಂದಿರಾಗಾಂಧಿಯನ್ನು ದೂರಬೇಕಾಗಿತ್ತು. ಆಕೆ ಬ್ಯಾಂಕು ಮತ್ತು ವಿಮೆಗಳನ್ನು ರಾಷ್ಟ್ರೀಕರಣ ಮಾಡಿದಾಗ ಅದನ್ನು ತಿರಸ್ಕರಿಸಿ ಬರೆಯಬೇಕಿತ್ತು. ಸ್ವಾತಂತ್ರ್ಯ ಹೋರಾಟದ ವೇಳೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ನಾನು ವಿರೋಧಿಸಿ ಲೇಖನ ಪ್ರಕಟಿಸಬೇಕಾಗುತ್ತಿತ್ತು. ಅಂದರೆ ನಾನು ಇವೆಲ್ಲವನ್ನೂ ಬಿಟ್ಟು ದಲಿತ ಹಕ್ಕುಗಳ ಬಗ್ಗೆ ಮಾತನಾಡಿದಲ್ಲಿ ನನ್ನನ್ನು ರಾಕ್ಷಸನನ್ನಾಗಿ ಮಾಡಬಹುದಾಗಿತ್ತು. ಪ್ರಶ್ನೆಯೆಂದರೆ ಪ್ರತಿ ಬೇಸಿಗೆಯಲ್ಲಿ ಅಮೇರಿಕಾದಲ್ಲಿ ಒಂದು ಸೆಮಿನಾರ್‌ಗೆ ಹೋಗಲು ವೀಸಾ ಗಿಟ್ಟಿಸುವ ಲೆಫ್ಟ್/ಲಿಬರಲ್/ಸೆಕ್ಯುಲರ್ ಲೇಖಕರು ಯಾಕೆ ಎಂದೂ 'ಕಪ್ಪು ಜನರಿಗೆ ಭಾಗೀದಾರಿಕೆ' ಅಥವಾ 'ಕ್ಯಾಪಿಟಲ್ ಡೆಮಾಕ್ರಸಿ'ಯ ಬಗ್ಗೆ ಬರೆದಿಲ್ಲ? ಏಕೆ ದಲಿತ ಡೈರಿ ಮಾತ್ರ ಅದರ ಬಗ್ಗೆ ಯೋಚಿಸಬೇಕು. ಇಂದು ಡೆಲ್ಲಿಯಲ್ಲಿ ಮಾರ್ಕ್ಸಿಸಂ, ಲಿಬರಲಿಸಂ, ಸೆಕ್ಯುಲರಿಸಂ ಇತ್ಯಾದಿಗಳನ್ನು ನಂಬಿರುವ ವ್ಯಕ್ತಿಗಳ ಮಧ್ಯೆ ನಾನು ಖಳನಾಯಕನಾಗಿದ್ದೇನೆ. ದಲಿತನೊಬ್ಬ ಸುಮ್ಮನೆ ಇತರರನ್ನು ಅನುಸರಿಸಬೇಕಷ್ಟೆ.

ಮೂರನೇ ಪ್ರಶ್ನೆಯೆಂದರೆ ಸಾಂಪ್ರದಾಯಿಕ ದಲಿತ ಬುದ್ಧಿಜೀವಿಗಳು ಸಾಕಷ್ಟು ಅನುಭವಸ್ಥರು, ಸೂಕ್ಷ್ಮಗ್ರಾಹಿಗಳು ವಯಸ್ಸಿನಲ್ಲಿ ಹಿರಿಯರಾದ ಇವರು ಒಡ್ಡುವ ಸವಾಲುಗಳು. ಅಂಬೇಡ್ಕರೋತ್ತರ ಕಾಲದಲ್ಲಿ ದಲಿತ ಚಿಂತನೆ ಭೂತದಲ್ಲಿ ಹೂತು ಹೋಗಿದೆ - ಬ್ರಾಹ್ಮಣ / ಹಿಂದೂ/ಆರ್ಯನ್‌ರನ್ನು ಬೈಯ್ಯುವುದೊಂದು ಭಾವಾವೇಶದ ಫ್ಯಾಶನ್. ಈಗ ಗ್ರಾಮೀಣ ಪ್ರದೇಶದಲ್ಲಿನ ಸಂಘರ್ಷಗಳು ಪಲ್ಲಟಗೊಂಡಿದ್ದು ಮೇಲ್ವದರಿನ ಶೂದ್ರರನ್ನು ದಲಿತರು ಎದುರು ಹಾಕಿಕೊಳ್ಳಬೇಕಿದೆ, ಬ್ರಾಹ್ಮಣರನ್ನಲ್ಲ. ೧೯೯೯ರಲ್ಲೇ ದಲಿತ ಬರವಣಿಗೆಗಳು ನಿಸ್ತೇಜಗೊಂಡಿವೆಯೆಂದೂ, ಅಪ್ರಸ್ತುತವೆಂದೂ ಬರೆದಿದ್ದೆ. ಆದ್ದರಿಂದ 'ಅಮೂರ್ತದಿಂದ ವಾಸ್ತವದತ್ತ' ಎಂಬ ನನ್ನ ನಿಲುವು ದಲಿತ ಚಿಂತನೆಯನ್ನು ಎದುರು ಹಾಕಿಕೊಂಡಿತು. ನನ್ನ ಪ್ರಕಾರ ದಲಿತ ಚಿಂತನೆಯ ಕೇಂದ್ರವೆಂದರೆ ಭೂಸುಧಾರಣೆಗಳು, ಶಿಕ್ಷಣ, ಖಾಸಗೀ ಕ್ಷೇತ್ರದಲ್ಲಿ ಪ್ರವೇಶ, ವಾಣಿಜ್ಯ/ ಕೈಗಾರಿಕೆ/ಬಂಡವಾಳ ಮಾರುಕಟ್ಟೆ ಸಾರ್ವಜನಿಕ ಸಂಸ್ಥೆಗಳಾದ ಮಾಧ್ಯಮ/ಫಿಲಂ/ಸಂಗೀತ ಇತ್ಯಾದಿಗಳು. ಇವೆಲ್ಲಾ ಸಮಗ್ರವಾಗಿ ದಲಿತ ಅಜೆಂಡಾ ಆದದ್ದು ಭೋಪಾಲ್ ಘೋಷಣೆ ದಾಖಲೆಯಲ್ಲಿ. ನಾಲ್ಕು ವರ್ಷಗಳ ಪಯಣ ಕಷ್ಟಕರವಾದರೂ ಸಂತೋಷದಾಯಕವಾಗಿತ್ತು. ಈಗ ಅದನ್ನು ತೆಲುಗು, ಕನ್ನಡ ಮತ್ತು ಇತರೆ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗುತ್ತಿದೆ. ನನಗೀಗ ರಾಷ್ಟ್ರೀಯ ಹಿಂದಿ ಪತ್ರಿಕೆಯಲ್ಲಿ ಒಂದು ಕಾಲಂ ಇದೆ. ಹಾಗೂ ಇತರೆ ಪ್ರಕಟಣೆಗಳಲ್ಲೂ ನನ್ನ ಅವಕಾಶಕ್ಕೆ ಕೊರತೆಯಿಲ್ಲ. ೧೯೯೯ರ ಕ್ಷೀಣ ಧ್ವನಿಯು ಈಗ ದೊಡ್ಡದಾಗಿ ಸಮಕಾಲೀನ ದಲಿತ ವಿಚಾರಧಾರೆಯಲ್ಲಿ ಹೊಸ ವ್ಯಾಖ್ಯೆಯನ್ನು ಆರಂಭಿಸಿದೆ. □

ಗಳು 'ಭಾರತ ಪ್ರಕಾಶಿಸುತ್ತಿದೆ' ಎಂಬ ಘೋಷಣೆಯನ್ನು ವ್ಯುತ್ಪತ್ತಿ ಮಾಡಿ, 'ಬನಿಯ-ಬ್ರಾಹ್ಮಣ' ಐಡೆಂಟಿಟಿಯನ್ನು ಎನ್‌ಡಿಎಗೆ ತಂದು ಕೊಟ್ಟರು.

ಎಲ್ಲಾ ಬ್ರಾಹ್ಮಣೇತರ-ಬನಿಯಾಗಳಲ್ಲದ ಜಾತಿಗಳು ಬೇಗನೆ ಎನ್‌ಡಿಎ ರಾಜ್ಯದ ಬೊಕ್ಕಸವನ್ನು ಕೈಗಾರಿಕಾ/ವಾಣಿಜ್ಯ ಮನೆಗಳಿಗೆ ಮತ್ತು ಬನಿಯಾಗಳ ಮನೆಗಳಿಗೆ ತುಂಬುತ್ತಿದೆ ಎಂಬ ಮುಕ್ತಾಯಕ್ಕೆ ಬಂದವು. ರಾಜ್ಯಾಂಗದ ಸಂಸ್ಥೆಗಳೆಲ್ಲವನ್ನು ಖಾಸಗೀಕರಿಸುವುದೆಂದರೆ ಬ್ರಾಹ್ಮಣರಿಗೆ ಬಿಟ್ಟುಕೊಡುವುದು ತಾನೆ. ಈ ಸುದ್ದಿಯನ್ನು ಅಸಂಘಟಿತರಾದವರು ಬ್ರಾಹ್ಮಣೇತರ, ಬನಿಯಗಳಲ್ಲದ ಜನ ಜೀವಿಸುತ್ತಿದ್ದ ಅರಾವಳಿ, ರಾಜಸ್ಥಾನದ ವಿಂಧ್ಯಾ ಬಯಲು ಪ್ರದೇಶ, ಮಧ್ಯಪ್ರದೇಶ, ಛತ್ತೀಸ್‌ಗಡ, ಒರಿಸ್ಸಾ ಪ್ರಚುರ ಪಡಿಸಿದರು. ಈ ಪ್ರದೇಶಗಳಲ್ಲೇನೂ ಬ್ರಾಹ್ಮಣೇತರ ಚಳವಳಿಯ ಚರಿತ್ರೆಯೇನು ಇರಲಿಲ್ಲ, ತಮ್ಮ ಸ್ಥಿತಿಗತಿಯ ಬಗ್ಗೆ ಅರಿವಿದ್ದ ಅವರು ಎನ್‌ಡಿಎ ಬಗ್ಗೆ ಭಯಭೀತರಾಗಿ ಅದನ್ನು ಅಧಿಕಾರದಿಂದ ಕಿತ್ತೆಸೆಯಲು ಮತಪೆಟ್ಟಿಗೆಗಳತ್ತ ಸಾಗಿದರು. ಜಾತಿ ಲೆಕ್ಕಾಚಾರದ ಅಧ್ಯಯನ ಕೈಗೊಂಡಲ್ಲಿ ೧೪ನೇ ಲೋಕಸಭಾ ಸದಸ್ಯರಲ್ಲಿ ಈ ಸಲ ಅತಿ ಕಮ್ಮಿ ಬ್ರಾಹ್ಮಣ-ಬನಿಯಾ ಎಂ.ಪಿಗಳು ಇರುವುದನ್ನು ಕಾಣಬಹುದು. ಇದೊಂದು ಅಚ್ಚರಿಯ ಬ್ರಾಹ್ಮಣ-ಬನಿಯ ವಿರೋಧಿ ಅಲೆಯೆಂಬುದನ್ನು ಅನೇಕರು ಗಮನಿಸದಾದರು.

೨೦೦೪ ರ ತೀರ್ಪು : ಬ್ರಾಹ್ಮಣೇತರರಿಗೆ ಜಯ :

ರಾಜಕೀಯ ಅಪಘಾತವೆನ್ನಿ ಅಥವಾ ಕಾಕತಾಳೀಯವೆನ್ನಿ - ಇಂದು ಭಾರತವನ್ನು ಬ್ರಾಹ್ಮಣೇತರರು ಆಳುವ ಕಾಲ ಬಂತೆಂಬುದನ್ನು ಸಿಖ್-ಜಾತ್ ಅಥವಾ ಹುಟ್ಟು ಶೂದ್ರ ಡಾ॥ಮನಮೋಹನ್‌ಸಿಂಗ್ ತೋರಿಸಿದ್ದಾರೆ. ರಕ್ಷಣಾ ಇಲಾಖೆಯನ್ನು ಹೊರತುಪಡಿಸಿ (ಅದೂ ಸಹ ನಿಜವಾಗಿಯೂ ಶೂದ್ರರಿಗೇ ಸಿಗಬೇಕಿತ್ತು) ನೋಡಿದಲ್ಲಿ ಅದನ್ನು ಒಬ್ಬ ಬ್ರಾಹ್ಮಣ ಪ್ರಣಬ್ ಮುಖರ್ಜಿಯ ಉಸ್ತುವಾರಿಗೆ ಒಪ್ಪಿಸಿರುವುದು ವಿಪರ್ಯಾಸವೇ ಸರಿ. ಯುದ್ಧದಲ್ಲಿ ಬ್ರಾಹ್ಮಣ ಎಂದಾದರೂ ಶೋಭಿಸಿದ್ದಾನೆಯೇ? ಗೃಹ ಮಂತ್ರಿಯಾಗಿರುವ ಶಿವರಾಜ್ ಪಾಟೀಲ್ ಅತ್ಯಂತ ನಿಪುಣನಾದ ಶೂದ್ರ. ಅಲ್ಲದೆ ವಿದೇಶ ಖಾತೆಯು ಸಹ ಹುಟ್ಟುಜಾತ್‌ನಾದ ನಟವರ್ ಸಿಂಗ್‌ಗೆ ಸಂದಿದೆ. ಒಂದು ದಶಕದ ಹಿಂದೆ ದೆಹಲಿಯಲ್ಲಿ ಜಾತರ ಅಂತರಾಷ್ಟ್ರೀಯ ಸಮ್ಮೇಳನ ನಡೆದಾಗ ಅದರಲ್ಲಿ ಭಾಗವಹಿಸಿದ ಸದಸ್ಯರೆಲ್ಲಾ ಪಶ್ಚಿಮ ಉತ್ತರ ಪ್ರದೇಶ, ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನಗಳಿಂದ ಬಂದವರು.

ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಿಯಾಗಿ ಜೈಪಾಲ್ ರೆಡ್ಡಿ ಜವಾಬ್ದಾರಿ ವಹಿಸಿದ್ದಾರೆ. ಸಾಂಪ್ರದಾಯಿಕವಾಗಿ ರೆಡ್ಡಿಗಳೆಲ್ಲರು ಸುಸಂಸ್ಕೃತರೇನೂ ಆಗಿರಲಿಲ್ಲ. ಸಾಂಪ್ರದಾಯಿಕ ಶೂದ್ರ ಶ್ರೇಣಿಯಲ್ಲಿರುವ ಪಿ. ಚಿದಂಬರಂ ಹಣಕಾಸು ಮಂತ್ರಿಯಾಗಲಿದ್ದಾರೆ. ಆದರೆ ತಮಿಳು ಮಾನದಂಡದಲ್ಲಿ ಬನಿಯಾಗಳಿಗೆ ಸಮನಾದ ಶೆಟ್ಟಿಯಾರ್ ಜಾತಿಯಿಂದ ಬಂದಿರುವ ಪಿ. ಚಿದಂಬರಂ ಹಣವನ್ನು ಹೂಡುವ ಬದಲು ಬಚ್ಚಿಡುವುದೇ ಹೆಚ್ಚು.

ಶಿಕ್ಷಣ ಖಾತೆ ಠಾಕೂರ್ ಅರ್ಜುನ್‌ಸಿಂಗ್‌ಗೆ ದೊರೆತಿದೆ. ಠಾಕೂರ್ ಸಮುದಾಯ ಚಾರಿತ್ರಿಕವಾಗಿ ಯಾವುದೇ ರೀತಿ ಜ್ಞಾನಕ್ಕೆ ವಿರೋಧಿಯಾಗಿತ್ತು. ಪ್ರವಾಸೋದ್ಯಮ ಕಮ್ಮ ಜಾತಿ ರೇಣುಕಾಚೌಧರಿಗೆ ದೊರೆತಿದೆ. ಕೆಲವು ಕಮ್ಮ ಅಧಿಕಾರಿಗಳನ್ನು ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿರಿಸಿದಲ್ಲಿ ಅನೇಕ ಪ್ರವಾಸಿ ಯೂರೋಪಿಯನ್ನರು ಬೇಗನೆ ಹೊರಹೋಗುವ ವಿಮಾನವನ್ನು ಹತ್ತುತ್ತಾರೆ. ರೈಲ್ವೆ ಖಾತೆಯು ಪಕ್ಕಾ ಶೂದ್ರನಾದ ಲಾಲೂ ಪ್ರಸಾದ್ ಯಾದವ್‌ಗೆ ಸಿಕ್ಕಿದ್ದು ಪ್ರಯಾಣಿಕರು ಮತ್ತಷ್ಟು ಜೀವ ವಿಮೆ ಮಾಡಬೇಕಾಗುತ್ತದೆ. ಆತನ ಹಿಂದಿನ ಮಂತ್ರ ನಿತೀಶ್ ಕುಮಾರ್ ಈ ಅಂಶವನ್ನು ಮತ್ತಷ್ಟು ಸಾಧಿಸಿ ತೋರಿಸಿದ್ದಾರೆ. ಅಂತಿಮವಾಗಿ ಈ ಶತಮಾನದ ಮೊದಲ ದಶಕದ ಜೋಕ್ ಎಂಬಂತೆ ಐಟಿ ಮತ್ತು ಸಂಪರ್ಕ ಖಾತೆ ದಯಾನಿಧಿ ಮಾರನ್ ಎಂಬ ಶೂದ್ರನಿಗೆ ದೊರೆತಿದೆ. ಹಾಸ್ಯ ಮುಂದುವರೆಯುತ್ತದೆ. ಒಬ್ಬ ನಿಪುಣ ಶೂದ್ರ ತನ್ನ ಜಾಣ್ಮೆಯಿಂದ ಇನ್ನೊಬ್ಬ ಶೂದ್ರ ಭೂಮಾಲೀಕನಿಗೆ ನಿರ್ಮಿಸಿರುವ ಮನೆ ೨೨ನೇ ಶತಮಾನದೆಂದು ಲಿಖಿತವಾಗಿದ್ದು ಆತನ ಪ್ರಕಾರ ಊಟದ ಕೋಣೆ ಮತ್ತು ಪಾಯಿಖಾನೆಗೆ ವ್ಯತ್ಯಾಸವೇ ಇಲ್ಲವಾಗಿದೆ. ಆತನ ವಾದವೆಂದರೆ ಎರಡು ಶತಮಾನಗಳ ಹಿಂದೆ ಪಾಯಿಖಾನೆ ಮತ್ತು ಸ್ನಾನದ ಕೋಣೆಗಳನ್ನು ಒಂದೇ ಎಂದು ಯಾರೂ ಭಾವಿಸಿರಲಿಲ್ಲ! ಕೃಷಿ ಖಾತೆ ಎಂದಿನಂತೆ ಮರಾಠ ಶರದ್ ಪವಾರ್‌ಗೆ ಸಿಕ್ಕಿದೆ. ಈತನಿಗೆ ಉತ್ಪಾದನೆಗಿಂತ ಹೆಚ್ಚಾಗಿ ಆಹಾರ ಕೊರತೆಯನ್ನು ನೋಡಿಕೊಳ್ಳುವುದೇ ಹೆಚ್ಚು ಲಾಭದಾಯಕ.

ದಲಿತರು ತಮ್ಮ ಕುರುಡು ಬೆಂಬಲದ ಹೊರತಾಗಿಯೂ ಹಾಗು ಇಂದಿಗೂ ಅಂತಹ ಬೆಂಬಲವನ್ನು ವ್ಯಕ್ತಪಡಿಸುತ್ತಾ ಬಂದಿರುವವರಾಗಿರುವುದರಿಂದ ಕಾಂಗ್ರೆಸ್ ಪಕ್ಷ ಈ ಚಾರಿತ್ರಿಕ ಅವಕಾಶವನ್ನು ತೆಗೆದುಕೊಂಡು ಕಳೆದ ೫ ದಶಕಗಳಿಂದ ದಲಿತರಿಗೆ ತೋರಿದ ನಿರ್ಲಿಪ್ತತೆಯನ್ನು ಈಗ ಸರಿಪಡಿಸಿಕೊಳ್ಳಬೇಕಾಗಿದೆ. ಅಲ್ಲದೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಮೀನ್ದಾರಿ ವ್ಯವಸ್ಥೆ ರದ್ದಾದಾಗಿನಿಂದ ಶೂದ್ರರು ದಲಿತರ ವಿರುದ್ಧ ಮಾಡಿರುವ ಅಪರಾಧಗಳಿಗೆ ಈಗ ತಕ್ಕ ಪರಿಹಾರ ಒದಗಿಸುವ ಚಾರಿತ್ರಿಕ ಅವಕಾಶ ಬಂದಿದೆ.

ಆದರೆ ಅಲ್ಲೊಂದು ಬೆಳ್ಳಿಗೆರೆ ಕಾಣಿಸಿಕೊಳ್ಳುತ್ತದೆ. ಎಲ್ಲಾ ಮಂತ್ರಿಗಳು ಅನುಮೋದನೆಯನ್ನು ಈ ಮಣ್ಣಿನೊಡನೆ ಸಾವಯವ ಸಂಬಂಧವಿಲ್ಲದ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯಿಂದ ಪಡೆಯಬೇಕಾಗಿರುವುದು. ಆಕೆಗೆ ಸಹಜವಾದ ಜಾತಿ ಆಸಕ್ತಿಯೇನು ಇಲ್ಲ. ಅಲ್ಲದೆ ಆಕೆ ಹುಟ್ಟಿನಿಂದಲೇ ಜಾತಿಯಲ್ಲಿ ಇರದವಳಾಗಿ, ಜಾತಿಯ ಬಗ್ಗೆ ನಿರ್ಲಿಪ್ತ ಧೋರಣೆ. ದಲಿತರು ಮತ್ತು ಇತರ ಕೆಳವರ್ಗಗಳಿಗೆ ಇಂಥ ವ್ಯಕ್ತಿಯ ಆಯ್ಕೆಯೇ ಸೂಕ್ತ. ಇಂತಹ ಆಯ್ಕೆಯನ್ನು ಆಧುನಿಕ ಚರಿತ್ರೆಯು ಸಹ ಬೆಂಬಲಿಸುತ್ತದೆ. ಶಿಕ್ಷಣದಲ್ಲಿ ದಲಿತರಿಗೆ ಭಾರತೀಯರು ಬಾಗಿಲು ತೆರೆಯುವಂತೆ ಬ್ರಿಟಿಷರು ಸತತವಾಗಿ ಹೋರಾಟ ನಡೆಸಿದರಲ್ಲದೆ ಎಲ್ಲರನ್ನು ಕಾನೂನಿನ ಮುಂದೆ ಸಮಾನರನ್ನಾಗಿ ಮಾಡಿದರು. ಇದಲ್ಲದೆ ಪ್ರಸ್ತುತ ಸಚಿವಾಲಯವು ಪಾರ್ಲಿಮೆಂಟು ಅಥವಾ ಜನರಿಗೆ ಬದ್ಧತೆಯಾಗುವದಕ್ಕಿಂತಲೂ ಹೆಚ್ಚಿಗೆ ಸೋನಿಯಾಗಾಂಧಿಗೆ ಬದ್ಧತೆಯನ್ನು ತೋರಿಸಬೇಕಾಗಿದೆ. ಪಾರ್ಲಿಮೆಂಟಿನಲ್ಲಿ ಬಹುಸಂಖ್ಯಾತರಾಗಿರುವ ಶೂದ್ರರು ತಮ್ಮ ಜಾತಿ ಗುಂಪುಗಳಿಗೆ ಪ್ರಧಾನವಾಗಿ ಪ್ರತಿನಿಧಿಸುವುದರಿಂದ ದಲಿತರಿಗೆ ಮೇಲಿನ ರೀತಿಯೆ ಸೂಕ್ತವಾದುದು.

ಪಾಶ್ಚಾತ್ಯ ಸಂಸ್ಕೃತಿ ಮತ್ತು ಆಡಳಿತ ವ್ಯವಸ್ಥೆಗೆ ಪ್ರಧಾನಮಂತ್ರಿ ಡಾ॥ ಮನಮೋಹನ್‌ಸಿಂಗ್ ಹೆಚ್ಚು ತೆರೆದುಕೊಂಡಿರುವುದರಿಂದ ತನ್ನ ಜಾತ್ ಸಿಖ್‌ರಿಗಿಂತ ಭಿನ್ನವಾಗಿರುತ್ತಾರೆಂದು ಭಾವಿಸಬಹುದು. ಹಾಗೆಯೇ ಅನೇಕ ಶೂದ್ರ ಮಂತ್ರಿಗಳು ಸಹ ವರ್ತಿಸಲಿದ್ದಾರೆ ಅಲ್ಲದೆ ಸೋನಿಯಾ ಗಾಂಧಿಯವರ ಅಪಾರ ನಂಬಿಕೆಯನ್ನು ಪಡೆದಿರುವ ಡಾ॥ಮನಮೋಹನ್‌ಸಿಂಗ್ ಸೋನಿಯಾಗಾಂಧಿಗೆ ಹೆಚ್ಚು ನಂಬಿಕಸ್ಥನಾಗಿರಬೇಕಾಗುತ್ತದೆ.

ಒಂದು ರೀತಿಯಲ್ಲಿ ಮೇ ೨೦೦೪ ಚುನಾವಣೆ ಮಹತ್ವದ್ದು. ಏಕೆಂದರೆ ಶ್ರೀಮಂತರ ಪರವಾಗಿದ್ದ ಮತ್ತು ದಲಿತ ವಿರೋಧಿ ನೀತಿಗಳನ್ನು ಅನುಸರಿಸುತ್ತಿದ್ದ ಎನ್‌ಡಿಎ ಸರ್ಕಾರವನ್ನು ಸ್ಪಷ್ಟವಾಗಿ ತಿರಸ್ಕಾರ ಮಾಡಲಾಗಿದೆ. ಅಲ್ಲದೆ ಮತ್ತೊಂದು ರೀತಿಯಲ್ಲೂ ಚುನಾವಣಾ ತೀರ್ಪು ಮುಖ್ಯವಾದದ್ದು : ಅಂದರೆ ಚುನಾವಣಾ ಪೂರ್ವದಲ್ಲಿ ಆಡಳಿತ ನಡೆಸುವ ಹೊಂದಾಣಿಕೆ ಏನೂ ಇರಲಿಲ್ಲ. ಇದೊಂದು ಸೈದ್ಧಾಂತಿಕ ಮತ್ತು ನೈತಿಕ ಸಮಸ್ಯೆ. ಚುನಾವಣಾ ನಂತರದ ಮೈತ್ರಿಯು ಪ್ರಜಾತಾಂತ್ರಿಕ ನೆಲೆಯೊಂದನ್ನು ಪ್ರಚೋದಿಸುತ್ತದೆ. ಈ ಗ್ರಹಿಕೆಯಲ್ಲಿ ಸಂಯುಕ್ತ ಮೈತ್ರಿಯು ಆಳಲು ಮಾನ್ಯತೆಯನ್ನು ಪಡೆದಿದೆಯಾದರೂ ಈ ಮಾನ್ಯತೆ ಬಂದಿರುವುದು ಭಿನ್ನ ಹಿತಾಸಕ್ತಿಯ ಚೌಕಾಸಿ ಗುಂಪುಗಳಿಂದ ಅಷ್ಟೆ.

ದಲಿತರು, ಬ್ರಾಹ್ಮಣೇತರರು ಮತ್ತು ಕಾಂಗ್ರೆಸ್ ಪಾರ್ಟಿ ಮೂವರೂ ಸಹ ಚಾರಿತ್ರಿಕ ಅವಕಾಶಗಳನ್ನು ಹೊಂದಿರುವವರು. ಈ ಚುನಾವಣೆಯಲ್ಲಿ ಯಾವುದೇ ಪಕ್ಷ ಎಡಪಂಥೀಯ/ಪ್ರಗತಿಪರ ಅಥವಾ ಸೆಕ್ಯುಲರ್/ಲಿಬರಲ್/ಬ್ರಾಹ್ಮಣವಿರೋಧಿ/ದಲಿತ ಇತ್ಯಾದಿ ಯಾವುದೇ ಸೈದ್ಧಾಂತಿಕ ನೆಲೆಯಲ್ಲಿದ್ದರೂ ಸಹ ಹೊಸ ಸರ್ಕಾರದ ಭಾಗವಾದವು. ಆದ್ದರಿಂದ ಸಮಕಾಲೀನ ಚರಿತ್ರೆಯಲ್ಲಿ ದಲಿತರಿಗೆ ಇದೊಂದು ಚಾರಿತ್ರಿಕ ಕ್ಷಣವೆಂದೇ ಹೇಳಬೇಕಾಗುತ್ತದೆ.

ದಲಿತರು ತಮ್ಮ ಕುರುಡು ಬೆಂಬಲದ ಹೊರತಾಗಿಯೂ ಹಾಗು ಇಂದಿಗೂ ಅಂತಹ ಬೆಂಬಲವನ್ನು ವ್ಯಕ್ತಪಡಿಸುತ್ತಾ ಬಂದಿರುವವರಾಗಿರುವುದರಿಂದ ಕಾಂಗ್ರೆಸ್ ಪಕ್ಷ ಈ ಚಾರಿತ್ರಿಕ ಅವಕಾಶವನ್ನು ತೆಗೆದುಕೊಂಡು ಕಳೆದ ೫ ದಶಕಗಳಿಂದ ದಲಿತರಿಗೆ ತೋರಿದ ನಿರ್ಲಿಪ್ತತೆಯನ್ನು ಈಗ ಸರಿಪಡಿಸಿಕೊಳ್ಳಬೇಕಾಗಿದೆ. ಅಲ್ಲದೆ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜಮೀನ್ದಾರಿ ವ್ಯವಸ್ಥೆ ರದ್ದಾದಾಗಿನಿಂದ ಶೂದ್ರರು ದಲಿತರ ವಿರುದ್ಧ ಮಾಡಿರುವ ಅಪರಾಧಗಳಿಗೆ ಈಗ ತಕ್ಕ ಪರಿಹಾರ ಒದಗಿಸುವ ಚಾರಿತ್ರಿಕ ಅವಕಾಶ ಬಂದಿದೆ. ಬ್ರಾಹ್ಮಣರು ತಮ್ಮ ಯಾಜಮಾನ್ಯಕ್ಕೆ ವಿರುದ್ಧವಾಗಿ ಜಮೀನ್ದಾರಿ ವ್ಯವಸ್ಥೆಯನ್ನು ರದ್ದುಪಡಿಸಿರುವುದಾದರೆ, ಶೂದ್ರರು ಅಂಥದನ್ನು ಏಕೆ ಮಾಡಬಾರದು? □

ಸ್ಮೋಗಟಕ

ನಮ್ಮೊಳಗೊಬ್ಬ ಗಾಂಧಿ ಇರುವನೇ ?

○ ಡಾ|| ಕಾ.ವೆಂ. ಶ್ರೀನಿವಾಸಮೂರ್ತಿ

ಇರುವ ಎಲ್ಲ ಬಣ್ಣಗಳನ್ನು ಬಳಸಿದರೂ ಗಾಂಧೀಜಿಯವರ ಪೂರ್ಣ ಚಿತ್ರವನ್ನು ಬಿಡಿಸಲಿಕ್ಕಾಗುವುದಿಲ್ಲ. ಇದು ಗಾಂಧೀಜಿಯವರ ಹಿರಿಮೆ. ಇಂತಹ ಗಾಂಧೀಜಿಯನ್ನು ನಾವು ಉಳಿಸಿಕೊಳ್ಳಬೇಕಿತ್ತು. ಆದರೆ ಹತ್ಯೆ ಮಾಡಿದೆವು. ಈ ಹತ್ಯೆ ಅವರ ದೇಹದ ಹತ್ಯೆ ಮಾತ್ರವಾಗಿರದೆ ಅವರ ತತ್ವಗಳ ಹತ್ಯೆಯೂ ಆಗಿದೆ. ಆದ್ದರಿಂದ ಅವರು ಹುಟ್ಟಿದ ಗುಜರಾತ್ ಇಂದು ಗ್ಗೋದ್ರಾ ಆಗಿದೆ. ಸೌಹಾರ್ದತೆ ನೆಲೆಯಾಗಬೇಕಿದ್ದ ಭಾರತದಲ್ಲಿ ಕೋಮುವಾದೀ ದಳ್ಳುರಿಯು ಅಸ್ತಿತ್ವವನ್ನು ಪಡೆಯುತ್ತಿದೆ. ಇಂತಹ ಸನ್ನಿವೇಶದಲ್ಲಿ ಹಿಂಸೆಯ ನಿರ್ಮೂಲನೆ ಅಥವಾ ಗಾಂಧೀಜಿಯವರ ಅಹಿಂಸಾ ತತ್ವದ ಪಾಲನೆ ಪ್ರಸ್ತುತವೆನಿಸಿದೆ.

ಗಾಂಧೀಜಿಯವರು ಧಾರ್ಮಿಕ ಪ್ರವೃತ್ತಿಯವರೇ ಆಗಿದ್ದರು. ಆದರೆ ಅವರ ಹಿಂದೂ ಧರ್ಮವು ಗೋಡ್ಸೆ ಕಲ್ಪಿಸಿಕೊಂಡಿದ್ದ ಮಾದರಿಯದ್ದು ಆಗಿರಲಿಲ್ಲ. ಅವರ ಧರ್ಮವು ಅನ್ಯಧರ್ಮವನ್ನು ಸಹಿಷ್ಣುತೆಯಿಂದ ಕಾಣುತ್ತಿತ್ತಲ್ಲದೆ, ಹಾಗೆ ಕಾಣುವಾಗ ಅಲ್ಲಿ ಸೋದರ ವಾತ್ಸಲ್ಯವನ್ನು ಹೊಮ್ಮಿಸುತ್ತಿತ್ತು. ಆದ್ದರಿಂದಲೇ ಹಿಂದೂ-ಮುಸ್ಲಿಂ ಎಂಬ ಎರಡೂ ಧರ್ಮಗಳ ಜನರಿಗೆ ಅವರು ಆಪ್ತರಾಗುತ್ತಿದ್ದುದು. ಆದರೆ ಧರ್ಮವನ್ನು ಕೋಟೆಯನ್ನಾಗಿ ಪರಿಭಾವಿಸಿದ ಕೆಲವು ಸಂಕುಚಿತಮತಿಗಳು ಮಾತ್ರ ಅವರ ವಿಶಾಲ ಮನೋಧರ್ಮವನ್ನು, ಸಹಬಾಳ್ವೆಯ ಜೀವನ ಧ್ಯೇಯವನ್ನು ಅರಿಯದೆ, ಎರಡು ಭಾರತಗಳ ನಿರ್ಮಾಣಕ್ಕೆ ಪೂರ್ವ ಪೀಠಿಕೆಯನ್ನು ಹಾಕಿದರು. ಅದು ಘಟಿಸುವಾಗ ಗಾಂಧೀಜಿಯವರು ಅರ್ಧ ಸತ್ತರು. ಅದರ ಕೆಲವೇ ತಿಂಗಳುಗಳಲ್ಲಿ ಪೂರ್ಣವಾಗಿ ಸಾಯಲಟ್ಟರು.

ಗಾಂಧೀಜಿಯವರ ಭಾರತವು ಸ್ವರಾಜ್ಯವನ್ನು ಎತ್ತಿಹಿಡಿಯುತ್ತದೆ. ಆದರೆ ಇವತ್ತಿನ ಸನ್ನಿವೇಶವು ಸ್ವಾವಲಂಬನೆ, ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತ ಜಾಗತಿಕ ಬಂಡವಾಳಶಾಹಿಗೆ ತುತ್ತಾಗುತ್ತಿದೆ. ಇಲ್ಲಿ ಸ್ವತಂತ್ರ ರಾಜ್ಯದ ಕಲ್ಪನೆ ಇಲ್ಲ; ಬದಲಿಗೆ ಪರತಂತ್ರ ಹಾಗೂ ಪರೋಕ್ಷ ದಾಸ್ಯದ ಕಲ್ಪನೆ ಇದೆ. ಇದು ಹೆಚ್ಚು ಹೆಚ್ಚು ಸಾಕಾರಗೊಳ್ಳುತ್ತಿರುವ ಕಳೆದ ಒಂದು ದಶಕದಲ್ಲಿ ಗಾಂಧೀಜಿಯವರ ಸ್ವರಾಜ್ಯ ಕಲ್ಪನೆ ನಮ್ಮನ್ನು ಕಾಡಿದರೆ ಅದು ಆರೋಗ್ಯಕರ ಬೆಳವಣಿಗೆ ಎಂದೇ ನಾನು ಭಾವಿಸುತ್ತೇನೆ.

ಗಾಂಧೀಜಿಯವರು ಗ್ರಾಮ ಸ್ವರಾಜ್ಯದ ಕನಸನ್ನು ಹೊತ್ತಿದ್ದರು. ಅದು ರಾಜಕೀಯವಾಗಿ ಈಗ ಅನುಷ್ಠಾನಕ್ಕೆ ಬಂದಿದೆ. ಆದರೆ ಇವುಗಳಿಗೆ ಆರ್ಥಿಕ ಬಲವೆಂಬ ಬೆನ್ನೆಲುಬು ಇಲ್ಲವಾದ್ದರಿಂದ ನಾಮರೂಪಿ ಗ್ರಾಮಸ್ವರಾಜ್ಯ ಮಾತ್ರ ಅಸ್ತಿತ್ವದಲ್ಲಿ ಇರುವಂತಾಗಿದೆ. ಇಂತಹ ಗ್ರಾಮವು ಸುಸಜ್ಜಿತ ರಸ್ತೆ, ಚರಂಡಿ, ಬೀದಿ ದೀಪ, ಶಾಲೆ, ಆಸ್ಪತ್ರೆ ಮುಂತಾದ ಮೂಲಭೂತ ಅವಶ್ಯಕತೆಗಳಿಗೆ ಅತೀತವಾಗಿರುವುದರಿಂದ ಅಲ್ಲಿ ಗಾಂಧಿ ಇಲ್ಲವಾಗಿದ್ದಾರೆ. ಇಂತಹ ಗ್ರಾಮಗಳಲ್ಲಿ ಯಾವುದು ಇಲ್ಲದಿದ್ದರೂ ಸಾರಾಯಿ ಮಾತ್ರ ಗಾಳಿಯಷ್ಟೇ ಸಹಜವಾಗಿ ಸಿಗುತ್ತದೆ. ಇದು ಗಾಂಧೀಜಿಯವರ ಮದ್ಯಪಾನ ವಿರೋಧಿ ಆಂದೋಲನಕ್ಕೆ ಸಿಕ್ಕ ಜಯ!

ಗಾಂಧೀಜಿಯವರು ದೊಡ್ಡ ಕೈಗಾರಿಕೆಗಳಿಗಿಂತ ಗುಡಿ ಕೈಗಾರಿಕೆಗಳಿಗೆ ಹೆಚ್ಚಿನ ಒತ್ತನ್ನು ನೀಡಿದ್ದರು. ಇದು ಭಾರತೀಯ ಜನಸಂಖ್ಯೆಯನ್ನು ಸಮಸ್ಯೆಯನ್ನಾಗಿಸದೆ ಸಂಪನ್ಮೂಲವನ್ನಾಗಿಸುವ ತಂತ್ರವಾಗಿತ್ತು. ಅದಕ್ಕಾಗಿ ಚರಕ, ಖಾದಿ ಮುಂತಾದ ಸಂಗತಿಗಳನ್ನು ಒಳಗೊಂಡ ಸ್ವದೇಶೀ ಮಂತ್ರವನ್ನು ತತ್ವಶಃ



ಗಾಂಧೀಜಿಯವರನ್ನು ಕುರಿತ ಉತ್ಸವಗಳಿಗೆ, ಅವರ ಹೆಸರಿನ ರಸ್ತೆಗಳಿಗೆ, ಅವರ ಹೆಸರಿನಲ್ಲಿ ಬಿಡುಗಡೆಯಾಗುತ್ತಿರುವ ಕೋಟಿಗಳಿಗೆ, ಅವರ ಹೆಸರಿನ ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆಗಳಿಗೆ ಬರವಿಲ್ಲ. ಆದರೆ ಬರವಿರುವುದು ಅವರ ತತ್ವಕ್ಕೆ ಮಾತ್ರ. ಅವರ ತತ್ವಕ್ಕೆ ಬರ ಇಲ್ಲದಿದ್ದಾಗ ಅಲ್ಲಿ ಮಾತೃ ಭಾಷಾ ಮಾಧ್ಯಮದ ಶಿಕ್ಷಣ ವ್ಯವಸ್ಥೆಯು ತಲೆ ಎತ್ತುತ್ತದೆ. ಧರಿಸಲ್ಪಟ್ಟ ಖಾದಿಗೆ ಯೋಗ್ಯತೆ ದಕ್ಕುತ್ತದೆ. ಗಾಂಧೀಜಿಯನ್ನು ಕುರಿತ ಭಾಷಣಗಳ ಬೆವರಿಗೆ ಸ್ವಲ್ಪ ವಿರಾಮ ಪ್ರಾಪ್ತವಾಗುತ್ತದೆ. ಪ್ರಸಿದ್ಧ ವ್ಯಕ್ತಿ ಈ ದೇಶದಲ್ಲಿ ಯಾರೂ ಇಲ್ಲ; ಅಂತೆಯೇ ಅವರ ತತ್ವಾನುಷ್ಠಾನ ಆಚರಣೆಯ ಬರ ಕೂಡ.

ಕಾರ್ಯಗತಗೊಳಿಸಿದರು. ಆದ್ದರಿಂದಲೇ ಅವರು ಮಾಡಿದ ಕ್ರಾಂತಿಗೆ ತಾವು ಹೆಚ್ಚಿನ ಭಾಷಣವನ್ನು ಮಾಡುವ ಅಗತ್ಯ ಬೀಳಲಿಲ್ಲ. ಜನರಿಗೆ ಕಣ್ಣುಗಳಿವೆ ಎಂಬುದಕ್ಕೆ ಇದು ಸಾಕ್ಷಿ!

ಭಾರತದ ಸಾಮಾಜಿಕ ಅಸಮಾನತೆಯು ನಾನಾ ರೂಪಗಳಲ್ಲಿ ವ್ಯಕ್ತವಾಗುತ್ತದೆ. ಜಾತಿ, ವರ್ಗ, ಲಿಂಗ; ಇವು ಆ ರೂಪಗಳಾಗಿವೆ. ಇಂತಹ ಸರ್ವ ಅಸಮಾನತೆಯ ಮೂಲವು ಭೂಮಿ ಎಂಬ ಉತ್ಪಾದನಾ ಶಕ್ತಿಯನ್ನು ಅವಲಂಬಿಸಿದೆ. ಆದ್ದರಿಂದ ಅದು ಶ್ರಮಯೋಗ್ಯ ರೈತರಲ್ಲಿ ಸಮಾನ ಹಂಚಿಕೆಗೆ ಒಳಪಟ್ಟಾಗ ಗ್ರಾಮದಲ್ಲಿನ ಆರ್ಥಿಕ ಅಸಮಾನತೆ ತೊಲಗಿ, ಕ್ರಮೇಣ ಸಾಮಾಜಿಕ ಸಮಾನತೆಯೂ ಏರ್ಪಡುತ್ತದೆ ಎಂದು ಗಾಂಧೀಜಿಯವರು ನಂಬಿದರು. ಅದಕ್ಕಾಗಿ ಅವರು ಒಂದು ಗ್ರಾಮದ ಹಿಡುವಳಿ ಜಮೀನು ಯಾರೊಬ್ಬರ ಖಾಸಗಿ ಆಸ್ತಿಯಾಗದೆ, ಅದು ಆ ಗ್ರಾಮದ ಸಹಕಾರೀ ಸಂಸ್ಥೆಯ ಸ್ವತ್ತಾಗಬೇಕು ಎಂದು ಬಯಸಿದ್ದು. ಆಗ ಕೃಷಿ ಕಾರ್ಮಿಕನು ಭೂಮಿಯ ಹಕ್ಕುದಾರನಾಗುತ್ತಾನೆಯೇ ಹೊರತು ಜಮೀನುದಾರಿಕೆಯನ್ನು ಮಾಡುವವನಲ್ಲ. ಇದು ಗಾಂಧೀಜಿಯವರ 'ರೈತ' ಪರಿಕಲ್ಪನೆ. ಬಂಡವಾಳಶಾಹಿ ನಿಯಂತ್ರಿಸುತ್ತಿರುವ ಮತ್ತು ಸಮಾಜವಾದಿ ಎಂದು ಸ್ವಯಂ ಘೋಷಿಸುತ್ತಿರುವ ಇವತ್ತಿನ ವ್ಯವಸ್ಥೆಯ ಅಣಕ ಇದು.

ಗಾಂಧೀಜಿಯವರನ್ನು ಕುರಿತ ಉತ್ಸವಗಳಿಗೆ, ಅವರ ಹೆಸರಿನ ರಸ್ತೆಗಳಿಗೆ, ಅವರ ಹೆಸರಿನಲ್ಲಿ ಬಿಡುಗಡೆಯಾಗುತ್ತಿರುವ ಕೋಟಿಗಳಿಗೆ, ಅವರ ಹೆಸರಿನ ಆಂಗ್ಲ ಮಾಧ್ಯಮ ಶಿಕ್ಷಣ ಸಂಸ್ಥೆಗಳಿಗೆ ಬರವಿಲ್ಲ. ಆದರೆ ಬರವಿರುವುದು ಅವರ ತತ್ವಕ್ಕೆ ಮಾತ್ರ. ಅವರ ತತ್ವಕ್ಕೆ ಬರ ಇಲ್ಲದಿದ್ದಾಗ ಅಲ್ಲಿ ಮಾತೃ ಭಾಷಾ ಮಾಧ್ಯಮದ ಶಿಕ್ಷಣ ವ್ಯವಸ್ಥೆಯು ತಲೆ ಎತ್ತುತ್ತದೆ. ಧರಿಸಲ್ಪಟ್ಟ ಖಾದಿಗೆ ಯೋಗ್ಯತೆ ದಕ್ಕುತ್ತದೆ. ಗಾಂಧೀಜಿಯನ್ನು ಕುರಿತ ಭಾಷಣಗಳ ಬೆವರಿಗೆ ಸ್ವಲ್ಪ ವಿರಾಮ ಪ್ರಾಪ್ತವಾಗುತ್ತದೆ. ಪ್ರಸಿದ್ಧ ವ್ಯಕ್ತಿ ಈ ದೇಶದಲ್ಲಿ ಯಾರೂ ಇಲ್ಲ; ಅಂತೆಯೇ ಅವರ ತತ್ವಾನುಷ್ಠಾನ ಆಚರಣೆಯ ಬರ ಕೂಡ.

ಗಾಂಧೀಜಿಯವರ ಆತ್ಮಕತೆಯಷ್ಟು ತೂಕದ ಆತ್ಮಕತೆ ನನಗೆ ಇವತ್ತಿಗೂ ಬೇರೊಂದು ಕಂಡಿಲ್ಲ. ಇದು ತತ್ವನಿಷ್ಠತೆ, ಕಾರ್ಯಬದ್ಧತೆ ಮತ್ತು ಅಭಿವ್ಯಕ್ತಿಯ ಪ್ರಾಮಾಣಿಕತೆ ಎಂಬ ಮಾನದಂಡಗಳನ್ನಾಧರಿಸಿದ ಮಾತು. ಇಂತಹ ಆತ್ಮ ಕಥಾನಕದ ಮೂಲಕ ಭಾರತದ ಚಾರಿತ್ರಿಕ ಘಟ್ಟವೊಂದರ ಸಾಂಸ್ಕೃತಿಕ ಕಥಾನಕವೂ ತೆರೆದುಕೊಳ್ಳುತ್ತದೆ. ಇಂತಹ ಬಹುಕೋನಾಕೃತಿಗಳ ಕೃತಿ ಗಾಂಧೀಜಿ ಕುರಿತ ಅರ್ಥವಿವರಣೆಗೆ ಮೊದಲ ಪ್ರಮಾಣವಾಗುತ್ತದೆ ಎಂಬುದು ನನ್ನ ಭಾವ.

ಹತ್ತೊಂಭತ್ತು-ಇಪ್ಪತ್ತನೆಯ ಶತಮಾನದ ಬ್ರಿಟನ್ ಸಾಮ್ರಾಜ್ಯಶಾಹಿ ಬೇರೆ. ಅದು ನೇರ. ಇಪ್ಪತ್ತು-ಇಪ್ಪತ್ತೊಂದನೆಯ ಶತಮಾನದ ಅಮೇರಿಕನ್ ಸಾಮ್ರಾಜ್ಯಶಾಹಿ ಬೇರೆ. ಇದು ಅಪ್ರತ್ಯಕ್ಷ. ಎದುರಿಗೆ ಕಾಣುವ ರಾವಣನೊಡನೆ ಕಾದಾಡಬಹುದು; ಆದರೆ ಕಾಣದೆಯೇ ಕಾದುವ ಇಂದ್ರಜಿತ್ ನೊಡನೆ ಹೇಗೆ ಕಾದಾಡುವುದು. ಇದು ಅಮೇರಿಕನ್ ಸಾಮ್ರಾಜ್ಯಶಾಹಿ ಎದುರಿನಲ್ಲಿ ಭಾರತದಂತಹ ಪ್ರಗತಿಶೀಲ ರಾಷ್ಟ್ರಗಳು ಅನುಭವಿಸುತ್ತಿರುವ ಸ್ಥಿತಿ. ಅಂದು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಯಾವುದೇ ಬಂದೂಕನ್ನು ಹಿಡಿಯದ ಮತ್ತು ಯಾವುದೇ ಸಶಸ್ತ್ರವೇಷವನ್ನು ಧರಿಸದ ಫಕೀರ ಗಾಂಧಿಯನ್ನು ಸಹಿಸುವುದು ಅಸಾಧ್ಯವಾಯಿತು. ಆದ್ದರಿಂದ ಅದು ಭಾರತವನ್ನು ತೊರೆಯುವುದು ಎರಡಿಲ್ಲದ ಮಾತಾಯಿತು. ಆದರೆ ಇಂದಿನ ಅಮೇರಿಕನ್ ಸಾಮ್ರಾಜ್ಯಶಾಹಿಗೆ ಎದುರು ಹೋರಾಟವನ್ನು ಕಟ್ಟುವ 'ಗಾಂಧಿ' ಯಾರಿದ್ದಾನೆ ನಮ್ಮಲ್ಲಿ? ಬಹುಶಃ ಗಾಂಧಿ ಮಾತ್ರ 'ಗಾಂಧಿ'ಗೆ ಸಮವೇನೋ! ಆದರೂ ಆಶಾಭಾವವಿರಲಿ. □

ಜಾಗೃತಿ

ಜಾಗತೀಕರಣ ನಮ್ಮ ಮನೆ ಬಾಗಿಲಿಗೇ ಬಂದಿದೆ. 'ಪ್ರಗತಿಯ ಬಸಿರೆಂದು' ಬಲಿಷ್ಠ ರಾಷ್ಟ್ರಗಳು ಬಣ್ಣಿಸುತ್ತಿರುವ ಜಾಗತೀಕರಣದಿಂದ ಭಾರತದ ಅಲಕ್ಷಿತ ಜನಸಮುದಾಯ ತತ್ತರಿಸಿ ಹೋಗುತ್ತಿದ್ದು ಮುಂಬರುವ ದಿನಗಳು ಕರಾಳವಾಗಲಿವೆ ಎಂಬುದು ಭಾರತದಲ್ಲಿ ದಲಿತ ಮಾನವ ಹಕ್ಕುಗಳ ರಾಷ್ಟ್ರೀಯಾಂದೋಲನ ಶೋಧಿಸಿ ಪ್ರಕಟಿಸಿರುವ ಮಾಹಿತಿಯಿಂದ ತಿಳಿದುಬಂದಿದೆ. ಜಾಗತೀಕರಣದ ಬಗೆಗಿನ ಎಲ್ಲಾ ಭರವಸೆಗಳು ಎಂಥ ಹಸಿ ಸುಳ್ಳು ಎಂಬುದು ಈ ಮಾಹಿತಿಯಿಂದ ತಿಳಿದುಬರುತ್ತದೆ. ಈ ಮಾಹಿತಿಯನ್ನಾಧರಿಸಿದ ಸಂಶೋಧನಾ ಲೇಖನಮಾಲೆಯ ಮೂರನೇ ಕಂತು ಇದು.

○ ಅನು: ಡಿ. ಡೊಮಿನಿಕ್

ಮರೆಯಾದ ಕಲ್ಯಾಣ ರಾಜ್ಯ



ನಿಜವಾದ ಬಡಜನರನ್ನು ತಲುಪಲು ಭಾರತ ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಶ್ವಬ್ಯಾಂಕಿನ ಸೂಚನೆಯ ಮೇರೆಗೆ ಸಣ್ಣದಾಗಿಸಲು ನಿರ್ಧರಿಸಿತು. ಇದರ ಹಿಂದಿನ ಉದ್ದೇಶ ಆಹಾರ ಸಬ್ಸಿಡಿಯನ್ನು ಕಡಿತಗೊಳಿಸುವುದೇ ಆಗಿತ್ತು. ಮಾರುಕಟ್ಟೆ ಮತ್ತು ಸಾ.ವಿ. ವ್ಯವಸ್ಥೆಯ ನಡುವಿನ ಸಗಟು ಬೆಲೆಗಳಲ್ಲಿ ಬಡವರಲ್ಲದವರೆಲ್ಲಾ ತಪ್ಪಿಸಿಕೊಂಡಿದ್ದರು. ೧೯೯೧ರಲ್ಲೇ ಈ ದೇಶದ ಬಡಜನರಿಗೆ ೪೬.೫ ಮಿಲಿಯ ಟನ್ ಆಹಾರಧಾನ್ಯ ಬೇಕಿತ್ತು. ಆದರೆ ಸರ್ಕಾರವು ಪಿಡಿಎಸ್‌ನ ವ್ಯವಸ್ಥೆಗೆ ೧೬.೬ ಮಿಲಿಯ ಟನ್ನುಗಳನ್ನಷ್ಟೇ ಬಿಡುಗಡೆ ಮಾಡಿತು. ಅಂದರೆ ಶೇ ೬೪ ರಷ್ಟು ಕೊರತೆಯನ್ನು ಅನುಭವಿಸುವಂತಾಯ್ತು. ಈ ಹೊಸ ಯೋಜನೆಯು ಮತ್ತಷ್ಟು ದಲಿತರನ್ನು ಬಡತನ ಮತ್ತು ಹಸಿವಿಗೆ ತಳ್ಳುತ್ತದೆ.

ಸಾರ್ವತ್ರಿಕ ವಿತರಣಾ ವ್ಯವಸ್ಥೆಯಿಂದ ನಿರ್ದಿಷ್ಟ ಪಿಡಿಎಸ್ ಯೆಡೆಗೆ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಪಲ್ಲಟಗೊಂಡಿದೆ. ಈ ನಿರ್ದಿಷ್ಟ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಜನರನ್ನು ಬಡವರು, ಬಡತನ ರೇಖೆಗಿಂತ ಕೆಳಗಿನವರು ಮತ್ತು ಬಡವರಲ್ಲದವರೆಂದು ವರ್ಗೀಕರಿಸಿತು. ಈ ವಿಭಜನೆಯಿಂದ ದ್ವಿಮುಖ ಬೆಲೆಯ ವ್ಯವಸ್ಥೆಗೆ ಅನುವು ಮಾಡಿಕೊಟ್ಟಿತು. ಅಂದರೆ ನಿಜವಾದ ಬಡವರಿಗೆ ಸಬ್ಸಿಡಿಯೆಂದು, ಬಡವರಲ್ಲದವರಿಗೆ ಮಾರುಕಟ್ಟೆಯ ಬೆಲೆಯನ್ನು ನಿರ್ಧರಿಸಿತು. ಉದಾಹರಣೆಗೆ ಸರ್ಕಾರವು ಅಕ್ಕಿ ಮತ್ತು ಗೋಧಿ ಬೆಲೆಯನ್ನು ಹೆಚ್ಚಿಸಿದಾಗ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಆಹಾರ ಧಾನ್ಯಗಳಿಗೆ ಶೇ ೬೮ರಷ್ಟು ಹೆಚ್ಚು ಬೆಲೆಯನ್ನು ತೆರಬೇಕಾಯ್ತು. ಆದರೆ ಬಡತನ ಇಲ್ಲದ ಕುಟುಂಬಗಳು ಶೇ ೨೫ರಷ್ಟು ಪಾವತಿಸಿದವು. ಈ ಪಿಡಿಎಸ್ ಬೆಲೆಗಳನ್ನು ಪ್ರತಿ ಸಲವೂ ಅಂದರೆ ಕೆಲವು ವಾರಗಳಿಗೊಮ್ಮೆಯಂತೆ ಹೆಚ್ಚಿಸಲಾಗಿ, ಕೃಷಿ ಕೂಲಿಯನ್ನು ಮಾತ್ರ ಹಲವು ವರ್ಷಗಳಿಗೊಮ್ಮೆ ಮಾತ್ರ ಮರು ಪರಿಶೀಲಿಸಲಾಯಿತು. ಶ್ರೀಮಂತ ರಾಜ್ಯವಾದ ಮಹಾರಾಷ್ಟ್ರದಲ್ಲಿ ಕನಿಷ್ಠ ಕೂಲಿ ನಿಗದಿ ಮಾಡಿ ಎಂಟು ವರ್ಷಗಳಾಯಿತು. ೧೯೯೨-೯೫ರ ನಡುವೆ ಸರ್ಕಾರವು ಪಿಡಿಎಸ್ ವ್ಯವಸ್ಥೆಯ ಬೆಲೆಯನ್ನು ನಿಯಂತ್ರಿಸಿತ್ತಾದರೂ ಶೇ ೮೫ರಷ್ಟು ಹೆಚ್ಚಾಯಿತು. ಅಂದರೆ ೧೯೯೧ರ ಆಧಾರದಲ್ಲಿ ಕ್ರಮೇಣ ಬೆಲೆಗಳು ಶೇ ೧೦೦ರಷ್ಟು ಹೆಚ್ಚಾಯಿತು. ಇದು ದಲಿತರ ಆಹಾರಭದ್ರತೆಯ ಹಕ್ಕಿನ ಮೇಲೆ ತೀವ್ರವಾದ ಹೊಡೆತವನ್ನು ನೀಡಿದೆ. ಈಗಾಗಲೇ ಅಂಕಿ- ಅಂಶಗಳು ತೋರಿಸಿರುವಂತೆ ಪಿಡಿಎಸ್ ವ್ಯವಸ್ಥೆಯಲ್ಲಿ ೧೯೮೯-೯೦ರಿಂದ ೧೯೯೨-೯೪ರ ನಡುವೆ ಅವುಗಳ ಪೂರೈಕೆಯ ಹೊರತಾಗಿಯೂ ಅಕ್ಕಿ ಮತ್ತು ಗೋಧಿಯ ಕೊಳ್ಳುವಿಕೆ ಕಮ್ಮಿಯಾಗಿದೆ. ಅಂದರೆ ಈ ಬೆಲೆಯೂ ಸಹ ದಲಿತರಿಗೆ ಎಟುಕದಂತಾಗಿದೆ.

ದೇಶದ ಅನೇಕ ಭಾಗಗಳಲ್ಲಿ ಮಿಲಿಯಗಟ್ಟಳೆ ದಲಿತರು ಕೃಷಿ ಕೂಲಿಯಾಳುಗಳಾಗಿ ದುಡಿಯುತ್ತಿರುವವರು ದಿನಕ್ಕೆ ರೂ. ೧೨ ರಿಂದ ರೂ. ೩೦ ರವರೆಗೆ ಪಡೆಯುತ್ತಾರಷ್ಟೆ (ಇದು ಕನಿಷ್ಠ ಕೂಲಿ ವೇತನದ ನಿಯಮಗಳ ಉಲ್ಲಂಘನೆಯಾಗಿದೆ) ಅಂದರೆ ಅವರ ಗಳಿಕೆಯೆಲ್ಲವೂ ಆಹಾರಕ್ಕಾಗಿ ವಿನಿಯೋಗವಾಗುತ್ತದೆ. ಉದಾರೀಕರಣದ ಕಾಲ ಹಾಗೂ ಪಿಡಿಎಸ್ ವ್ಯವಸ್ಥೆಯಲ್ಲಿನ ಬೆಲೆಗಳ ಹೆಚ್ಚಳವು ದಲಿತರ ಬದುಕಿಗೆ ಮಾರಕವಾಗಿ ಪರಿಣಮಿಸಿವೆ. ಅರೆ ಹೊಟ್ಟೆಯ ಬದುಕೇ ಅವರ ಪಾಲಾಗಿದೆ.

ದಲಿತರನ್ನೊಳಗೊಂಡಂತೆ ಭಾರತೀಯ ಜನತೆಗೆ ದಿನವೊಂದಕ್ಕೆ ಅಗತ್ಯವಾಗಿರುವ ದ್ವಿದಳನ ಧಾನ್ಯಗಳ ಕೊರತೆಯು ಮೇಲೆ ಹೇಳಿದ ಎಲ್ಲವುಗಳ ಒಟ್ಟಾರೆಯ ಪರಿಣಾಮವೆಂದೇ ಹೇಳಬೇಕಾಗುತ್ತದೆ. ಅಂದರೆ ಆರ್ಥಿಕ ಸುಧಾರಣೆಗಳ ಮೊದಲ ಎರಡು ವರ್ಷಗಳಲ್ಲಿ ಆಹಾರ ಧಾನ್ಯಗಳ ದೊರೆಯುವಿಕೆ ತಲಾ ವ್ಯಕ್ತಿಗೆ ಶೇ. ೮.೪೩ರಷ್ಟು ಕಮ್ಮಿಯಾಯಿತು ಹಾಗೂ ದ್ವಿದಳ ಧಾನ್ಯ ಶೇ. ೧೨.೦೨ರಷ್ಟಕ್ಕೆ ಕುಸಿಯಿತು. ೧೯೯೧ರ ಸನ್ನಿವೇಶವನ್ನು ೧೯೯೬ಕ್ಕೆ ಹೋಲಿಸುವುದಾದರೆ ತಲಾ ವ್ಯಕ್ತಿಗೆ ದೊರಕಬೇಕಾದ ಆಹಾರಧಾನ್ಯಗಳು ಕ್ರಮವಾಗಿ ೫೧೦ ಗ್ರಾಂಗಳಿಂದ ೪೬೧ ಗ್ರಾಂಗಳಿಗೆ ಇಳಿಯಿತು. ಅಂದರೆ ಮಿಲಿಯಗಟ್ಟಳೆ ದಲಿತ ಕೃಷಿ ಕಾರ್ಮಿಕರ ಮೇಲಾಗುವ ಪರಿಣಾಮವನ್ನು ಊಹಿಸಲಾದೀತೆ. ಈ ಜನರೇ ದೇಶಕ್ಕೆ ಬೇಕಾಗುವ ಆಹಾರವನ್ನು ಬೆಳೆಯುತ್ತಿರುವುದು! ಭಾರತೀಯ ಜನರ ಮಧ್ಯೆಯಿರುವ ತೀವ್ರವಾದ ಜಾತಿಯ ಅಸಮಾನತೆ ಮೊದಲೇ ದಲಿತರನ್ನು ವಂಚಿಸುತ್ತಿದೆ. ಹೀಗಿರುವಲ್ಲಿ ಆರ್ಥಿಕ ಸಮೀಕ್ಷೆಗಳು ಸೂಚಿಸುತ್ತಿರುವ ಅಂಕಿ-ಅಂಶಗಳು ಏನೇನು ಅಲ್ಲ ಎನ್ನಬೇಕು. (ಆರ್ಥಿಕ ಸಮೀಕ್ಷೆ- ೧೯೯೩-೯೪)

ತರಕಾರಿ ಪ್ರೋಟೀನ್ ಅಂಶಗಳು ದ್ವಿದಳನ ಧಾನ್ಯ ಗಳಿಂದ ಮಾತ್ರ ದೊರೆಯುತ್ತದೆಯಾದ್ದರಿಂದ ಅವುಗಳು ದಲಿತರಿಗೆ ದೊರೆಯದಾದಾಗ ಪೌಷ್ಠಿಕತೆಯ ಕೊರತೆ ಅವರನ್ನು ಕಾಡುತ್ತದೆ. ಈ ಪೌಷ್ಠಿಕತೆಯ ಕೊರತೆಯು ದಲಿತ ಮಹಿಳೆಯರನ್ನು ಮತ್ತು ಮಕ್ಕಳನ್ನು ಮತ್ತಷ್ಟು ತೊಂದರೆಗೆ ಸಿಲುಕಿಸುತ್ತದೆ. ಭಾರತೀಯ ಸಮಾಜದಲ್ಲಿ ಗಂಡು ಮಕ್ಕಳ ಪ್ರಾಧಾನ್ಯತೆಯು ದಲಿತ ಜನರನ್ನು ಬಿಟ್ಟಿಲ್ಲ. 'ಸೆಪ್ಟೆಂಬರ್ ೨೦೦೩ರಲ್ಲಿ ಬರಗಾಲ ಪೀಡಿತ ಲೆಸ್ಲಿಗಂಜ್ ವಿಭಾಗ, ಪಲಾಮು ಜಿಲ್ಲೆ ಜಾರ್ಖಂಡ್‌ಗಳಲ್ಲಿ ಹಸಿವಿನಿಂದ ಸಾವನ್ನಪ್ಪಿದುದರ ಬಗ್ಗೆ ವರದಿಗಳಾಗಿವೆ. ಹೀಗೆ ಸತ್ತವರಲ್ಲಿ ಅನೇಕರು ದಲಿತ ಕೂಲಿ ಕೃಷಿಕರಾಗಿದ್ದು ಅದರಲ್ಲೂ ಮಹಿಳೆಯರು ಮತ್ತು ಮಕ್ಕಳೇ ಹೆಚ್ಚಾಗಿದ್ದಾರೆ. ನಿರಂತರವಾದ ಬರಗಾಲದಿಂದಾಗಿ ಅನೇಕ ಭೂ ಮಾಲೀಕರು ತಮ್ಮ ಭೂಮಿಯಲ್ಲಿ ಕೃಷಿ ಮಾಡದೆ ಇರುವುದರಿಂದ ಕೃಷಿ ಶ್ರಮಶಕ್ತಿಯ ಬೇಡಿಕೆ ಕುಸಿಯುತ್ತದೆ. ದುರಂತವೆಂದರೆ ಈ ಎಲ್ಲಾ ಹಳ್ಳಿಗಳಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯು ನಿಷ್ಕ್ರಿಯೆಗೊಳಗಾಗಿವೆ. ಮಾರ್ಚ್ ೨೦೦೦ದ ನಂತರದಲ್ಲಿ ರೇಷನ್ ಕಾರ್ಡುಗಳು ತೋರಿಸಿದ್ದೇನೆಂದರೆ ಅವುಗಳಲ್ಲಿ ಯಾವುದೇ ಉಲ್ಲೇಖಗಳು ಕಂಡುಬಂದಿಲ್ಲ. ಹಳ್ಳಿಗರು ಹೇಳಿದ್ದೇನೆಂದರೆ ಕಳೆದೆರೆಡು ವರ್ಷಗಳಿಂದ ರೇಷನ್ ಕಾರ್ಡುದಾರರಿಗೆ ಯಾವುದೇ ಆಹಾರ ಧಾನ್ಯದ ಪೂರೈಕೆಯಾಗಿಲ್ಲ. ಅಧಿಕೃತ ಬಡತನದ ವರದಿಯ ನಂತರವೂ ಆ ವಿಭಾಗದಲ್ಲಿ ಯಾವುದೇ ಸರ್ಕಾರಿ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿಲ್ಲ. (ಪಿ.ಯು.ಸಿ.ಎಲ್; ರಾಂಚಿ ಪರಿಶೀಲನಾ ವರದಿ, ೨೧.೯.೦೩)

'ಅತೀ ಹೆಚ್ಚು ಹಸಿವಿನಿಂದ ಸತ್ತ ಪ್ರಕರಣಗಳು ಒರಿಸ್ಸಾದ ಕಾಶೀಪುರದಲ್ಲಿ ೨೦೦೧ರಲ್ಲಿ ವರದಿಯಾಗಿದೆ. ಈ ವರದಿಯನ್ನು ರಾಜ್ಯ ಸರ್ಕಾರ ವಿಷಪೂರಿತ ಆಹಾರದಿಂದಾದುದೆಂದು ಮರೆಮಾಚಲು ಯತ್ನಿಸಿತು. ಪರಿಹಾರ ಕಾರ್ಯಕ್ರಮಗಳ ಅಸಮರ್ಥ ಅನುಷ್ಠಾನದಿಂದಾಗಿ ಈ ಸಾವುಗಳು ಸಂಭವಿಸಿದವೆಂದು ಅನಂತರದಲ್ಲಿ ಗೊತ್ತಾಯಿತು'. (ವಂದನಾ ಶಿವ (ಸಂ), ನಿಗಮಗಳಿಂದ ಆಹಾರದ ಅಪಹರಣ, ೨೦೦೨)

ಅಂತಿಮ ವಿಶ್ಲೇಷಣೆಯೆಂದರೆ ಆರ್ಥಿಕ ಸುಧಾರಣೆಗಳು ಪ್ರಾಧಾನ್ಯತೆಗೆ ಬರುತ್ತಿದ್ದಂತೆ ಸಂವಿಧಾನಾತ್ಮಕ ಸಂರಕ್ಷಣಾ ನಿಯಮಗಳನ್ನು ಗಾಳಿಗೆ ತೂರಲಾಗಿ, ದಲಿತರ ದುಡಿಮೆ ಹಾಗೂ ಆಹಾರ ಭದ್ರತೆಯ ಹಕ್ಕುಗಳು ಉಲ್ಲಂಘನೆಗೊಳಗಾಗಿದೆ. ವಾಣಿಜ್ಯ ಷರತ್ತುಗಳ ಮುಂದುವರೆಸುವಿಕೆ ಮತ್ತು ಬಂಡವಾಳಶಾಹಿ ಬೆಳವಣಿಗೆ ಶ್ರೀಮಂತರಿಗೆ ವರದಾನವಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಮೇಲ್ಜಾತಿ ರೈತರು ತಮ್ಮ ಯಾಜಮಾನ್ಯವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುತ್ತಾರೆ. ಕುಸಿಯುತ್ತಿರುವ ಉದ್ಯೋಗ ಮಾರುಕಟ್ಟೆಯಲ್ಲಿ ದಲಿತರು ಮತ್ತು ರೈತಾಪಿ ಜನ ಮುಳುಗಿಬಿಡುತ್ತಾರೆ. ಅಲ್ಲದೆ, ಆರ್ಥಿಕ ಸುಧಾರಣೆಗಳು ಸನಾತನ ಜಾತಿ ವ್ಯವಸ್ಥೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆಯಲ್ಲದೆ, ಗ್ರಾಮೀಣ ಭಾರತದಲ್ಲಿ ಭೂಮಾಲೀಕ ವ್ಯವಸ್ಥೆಯನ್ನು ಹೆಚ್ಚಿಸುತ್ತದೆ.

ಗಂಭೀರ ಪ್ರಶ್ನೆಗಳು

★ ಕಲ್ಯಾಣ ರಾಜ್ಯದ ಪಾತ್ರಗಳನ್ನು ಹಿಂತೆಗೆದುಕೊಳ್ಳುವ ಸರ್ಕಾರದ ನಿಲುವು ದಲಿತ ಕೃಷಿ ಕಾರ್ಮಿಕರ ನಿರುದ್ಯೋಗಕ್ಕೆ ಕಾರಣವಾಗಿ, ಅವರು ನಗರಗಳಿಗೆ ವಲಸೆ ಹೋಗುವಂತಾಗಿ ಬದುಕಿನ ಕಠಿಣ ವಾಸ್ತವಗಳನ್ನು ಅನುಭವಿಸುವಂತಾಗಿದೆಯಲ್ಲವೇ?

★ ಮೇಲ್ಜಾತಿ ಹಣ ನೀಡುವವರ ಕೈಗೆ ದಲಿತರು ಸಿಲುಕುತ್ತಿರುವುದು ಕೃಷಿಯಲ್ಲಿ ತಂದಿರುವ ಹೊಸ ಆರ್ಥಿಕ ಸುಧಾರಣೆಗಳಿಂದಲೇ ಆಗಿರುವುದರಿಂದ, ಡಾ|| ಅಂಬೇಡ್ಕರವರು ಆಶಿಸಿದ, ಹೋರಾಡಿದ ಅವರ ವಿಮೋಚನೆ ದೂರವಾಗಿ ಅವರು ಮತ್ತೆ ಜೀತಕ್ಕೆ ಸಿಲುಕಿದಂತಾಗುತ್ತದೆಯಲ್ಲವೇ?

★ ವಿಶ್ವಬ್ಯಾಂಕ್ ಆದೇಶದ ಮೇರೆಗೆ ಭಾರತೀಯ ಸರ್ಕಾರ ತಂದಿರುವ ಪಿಡಿಎಸ್ ವ್ಯವಸ್ಥೆ ದಲಿತರಿಗೆ ಅಪ್ರಸ್ತುತವಾಗಿರುವಾಗ ಮಾನವ ಹಕ್ಕುಗಳ ದೃಷ್ಟಿಯಿಂದ ಸರ್ಕಾರ ಮತ್ತು ಇತರೆ ಕಂಪನಿಗಳು ತರುತ್ತಿರುವ ಅಭಿವೃದ್ಧಿ ಯೋಜನೆಗಳನ್ನು ಪ್ರಶ್ನಿಸಬಾರದೇ?

ಉದ್ಯೋಗ ಹಕ್ಕಿನ ಮೇಲಿನ ಪರಿಣಾಮ

'ಜಾಗತೀಕರಣ, ಆರ್ಥಿಕ ಬೆಳವಣಿಗೆ ಮತ್ತು ಉದ್ಯೋಗದ ನಡುವಿನ ಅಂತರ್ ಸಂಬಂಧಗಳನ್ನು ಅರ್ಥೈಸುವುದನ್ನು ಬಿಟ್ಟರೆ, ಬೇರೆ ಏನೋ ಮಹತ್ವದ್ದೊಂದು ಇವತ್ತಿನ ಜಗತ್ತಿನಲ್ಲಿ ಇದೆ ಎಂದು ನಾನು ನಂಬುತ್ತಿಲ್ಲ'

(ಜೆಫ್ರಿ ಸಾಚ್ಸ್, ನಿರ್ದೇಶಕರು, ಅಂತರರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ ಹಾರ್ವರ್ಡ್.)

ಕಳೆದ ದಶಕದಲ್ಲಿ ಮಹತ್ವದ ಆರ್ಥಿಕ ಸುಧಾರಣೆಗಳನ್ನು ಜಾರಿಯಾಗಿಸಿದ ಭಾರತೀಯ ಸರ್ಕಾರವು ಹಣಕಾಸು ಸಂಗತಿಗಳಿಗೆ ಸಂಬಂಧಿಸಿದಂತೆ ಅನೇಕ ಬದಲಾವಣೆಗಳನ್ನು ತಂದಿದ್ದಲ್ಲದೆ ಅವನ್ನು ಜಾರಿಯಾಗಿಸಲು ಬೇಕಾದ ಕ್ರಮಗಳನ್ನು ತೆಗೆದುಕೊಂಡಿತು. ಅವುಗಳಲ್ಲಿ

೧. ವ್ಯಾಪಾರೇತರ ಪದಾರ್ಥಗಳನ್ನು ವಾಣಿಜ್ಯ ಪದಾರ್ಥ ವಿಭಾಗಕ್ಕೆ ಪಲ್ಲಟಗೊಳಿಸಲಾಯಿತಲ್ಲದೆ, ಅದನ್ನು ಆಮದು ಚಟುವಟಿಕೆಗಳಿಗೆ ರಫ್ತು ಉದ್ದೇಶಿತ ಚಟುವಟಿಕೆಗಳನ್ನಾಗಿ ಬದಲಾಯಿಸಲಾಯಿತು.

೨. ವಾಣಿಜ್ಯ ಮತ್ತು ವಿದೇಶಿ ಹಣ ಹೂಡಿಕೆಗೆ ಪೂರಕವೆಂಬಂತೆ ಉದಾರೀಕರಣ ನೀತಿಯಡಿ ಭಾರತೀಯ ಮಾರುಕಟ್ಟೆ ವಿಶ್ವ ಆರ್ಥಿಕತೆಗೆ ಮುಕ್ತವಾಗಿಸಲಾಯಿತು.

೩. ಸಾರ್ವಜನಿಕ ಉದ್ದಿಮೆಗಳಿಗೆ ಹೂಡುತ್ತಿದ್ದ ಹಣವನ್ನು ಹಿಂತೆಗೆದುಕೊಳ್ಳುವುದರ ಮೇಲೆ ಒತ್ತು ನೀಡಿ, ಅವುಗಳ ಖಾಸಗೀಕರಣವನ್ನು ಹೆಚ್ಚೆಚ್ಚು ಅನುಮೋದಿಸಲಾಯಿತು.

> **ಬಡ ಜನರಲ್ಲಿ ಅತ್ಯಧಿಕ ಮಂದಿ ದಲಿತರಾಗಿರುವವರೆಗೆ ೧೯೯೦ರ ಆರ್ಥಿಕ ಬೆಳವಣಿಗೆಯಿಂದ ಏನೇನೂ ಪ್ರಯೋಜನವಾಗಿಲ್ಲ. ೧೯೯೩ರಲ್ಲಿ ಒಂದು ಅಧ್ಯಯನದ ಪ್ರಕಾರ ೨೫ ಮಿಲಿಯ ಜನ ನಿರುದ್ಯೋಗಿಗಳಾಗಿದ್ದರು. ಅವರಲ್ಲಿ ಸುಮಾರು ೧೦ ಮಿಲಿಯ ಜನ ನಗರ ಮತ್ತು ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಸಂಘಟಿತ ಕಾರ್ಮಿಕರೇ ಆಗಿದ್ದರು. ಸರ್ಕಾರ ತಂದ ಆರ್ಥಿಕ ಸುಧಾರಣೆಗಳ ಬಲಿಪಶುಗಳೇ ಇವರು.**

ಹೀಗೆ ಮಾಡುವುದರ ಮೂಲಕ ಶ್ರಮಶಕ್ತಿಯನ್ನು ಅಸಡ್ಡೆ ಮಾಡಲಾಯಿತಲ್ಲದೆ, ಸಾರ್ವಜನಿಕ ವಲಯದಲ್ಲಿ ಉದ್ಯೋಗ ಕುಸಿಯುವಂತಾಯಿತು.

೪. ಕೃಷಿ ಮತ್ತು ಕೃಷಿಯೇತರ ಉದ್ಯಮಗಳಿಗೆ ನೀಡುತ್ತಿದ್ದ ಬ್ಯಾಂಕ್ ಸಾಲವನ್ನು ಕಡಿತಗೊಳಿಸಲಾಯಿತು. ಇದು ಕೃಷಿ ಮತ್ತು ಕೃಷಿಯೇತರ ಉದ್ಯಮಗಳಿಗೆ ಮಾರಕವಾಗಿ ಪರಿಣಮಿಸಿತಲ್ಲದೆ ಗ್ರಾಮೀಣ ಉದ್ಯೋಗ ಕ್ಷೇತ್ರಕ್ಕೂ ಅಪಾಯವನ್ನುಂಟು ಮಾಡಿತು.

ಹೀಗೆ ದೇಶದ ಕೈಗಾರಿಕಾಭಿವೃದ್ಧಿ ಮತ್ತು ನಿರುದ್ಯೋಗ ಸಮಸ್ಯೆಯ ನಿವಾರಣೆ ಮಾಡಲು ಉದಾರೀಕರಣದ ವಿದೇಶಿ ಹೂಡಿಕೆಯನ್ನು ಆರ್ಥಿಕ ಸುಧಾರಣೆಗಳ ಸಂದರ್ಭದಲ್ಲಿ ಬಹುವಾಗಿ ಒಪ್ಪಿಕೊಳ್ಳಲಾಯಿತು. ಹೀಗಿದ್ದಾಗ್ಯೂ ೧೯೯೩ ರಲ್ಲಿ ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಸಿ) ತನ್ನ ಮಾನವ ಅಭಿವೃದ್ಧಿ ವರದಿಯಲ್ಲಿ ಗುರುತಿಸಿದ್ದೇನೆಂದರೆ ಬಹುರಾಷ್ಟ್ರೀಯ ಕಂಪನಿಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅಧಿಕ ಬಂಡವಾಳವನ್ನು ಹೂಡಿದವಾದರೂ, ಉದ್ಯೋಗವನ್ನೇನು ಸೃಷ್ಟಿಸಲಿಲ್ಲ. ಹೀಗೆ ೧೯೯೦ ರಿಂದ ೧೯೯೩ರವರೆಗೆ ಹಾಗೆ ಸೃಷ್ಟಿಯಾದ ಉದ್ಯೋಗಗಳು ಭಾರತದ ಉದ್ಯೋಗ ಮಾರುಕಟ್ಟೆಯಲ್ಲಿ ವಾರ್ಷಿಕವಾಗಿ ಪ್ರವೇಶಿಸುತ್ತಿದ್ದ ಸಂಖ್ಯೆಗೂ ಸಮವಾಗಿರಲಿಲ್ಲ!

ಉದ್ಯೋಗ ಕ್ಷೇತ್ರದ ಮೇಲೆ ಜಾಗತೀಕರಣದ ಪ್ರಭಾವ

ಬಡ ಜನರಲ್ಲಿ ಅತ್ಯಧಿಕ ಮಂದಿ ದಲಿತರಾಗಿರುವವರೆಗೆ ೧೯೯೦ರ ಆರ್ಥಿಕ ಬೆಳವಣಿಗೆಯಿಂದ ಏನೇನೂ ಪ್ರಯೋಜನವಾಗಿಲ್ಲ. ೧೯೯೩ರಲ್ಲಿ ಒಂದು ಅಧ್ಯಯನದ ಪ್ರಕಾರ ೨೫ ಮಿಲಿಯ ಜನ ನಿರುದ್ಯೋಗಿಗಳಾಗಿದ್ದರು. ಅವರಲ್ಲಿ ಸುಮಾರು ೧೦ ಮಿಲಿಯ ಜನ ನಗರ ಮತ್ತು ಗ್ರಾಮೀಣ ಕೃಷಿಯೇತರ ಚಟುವಟಿಕೆಗಳ ಅಸಂಘಟಿತ ಕಾರ್ಮಿಕರೇ ಆಗಿದ್ದರು. ಸರ್ಕಾರ ತಂದ ಆರ್ಥಿಕ ಸುಧಾರಣೆಗಳ ಬಲಿಪಶುಗಳೇ ಇವರು. (ಮಂಡಲ್, ಸುದಿಪ್ರೊ, ನಿರುದ್ಯೋಗ ಮತ್ತು ಸ್ಥಿರಗೊಳಿಸುವಲ್ಲಿ ಪರಿಹಾರ ಕ್ರಮಗಳು : ಭಾರತ ೧೯೯೨-೯೪, ಇ.ಪಿ.ಡಬ್ಲ್ಯು, ಜನವರಿ ೧೯೯೩)

ಉದ್ಯೋಗ ಸೃಷ್ಟಿಗಾಗಿ ವಿಶೇಷ ರಾಷ್ಟ್ರೀಯ ಯೋಜನಾ ಸಮಿತಿಯ ಅಂದಾಜಿನ ಮೇರೆಗೆ ಪ್ರಸ್ತುತ ನಿರುದ್ಯೋಗ ಹೆಚ್ಚಳ ಶೇ ೭ ರಷ್ಟು ಹೆಚ್ಚುತ್ತಿದೆ. (ಆದರೆ ೧೯೯೯-೨೦೦೦ ದಲ್ಲಿ ಸರ್ಕಾರದ ಪ್ರಕಾರ ನಿರುದ್ಯೋಗ ಸಮಸ್ಯೆ ಶೇ ೨.೨ ರಷ್ಟು ಮಾತ್ರ!) ಈ ವೇಗದಲ್ಲಿ ಹೋದರೆ ೨೦೦೭ರ ಹೊತ್ತಿಗೆ ದೇಶದಲ್ಲಿ ೪೫ ಮಿಲಿಯ ನಿರುದ್ಯೋಗಿಗಳು ಹೆಚ್ಚಾಗಲಿದ್ದಾರೆ. ಉದಾರೀಕರಣದ ನಂತರದಲ್ಲಿ ಅಂದರೆ ೧೯೯೦ರ ಸಂದರ್ಭದಲ್ಲಿ ಉದ್ಯೋಗ ಸೃಷ್ಟಿಯು ೧೯೮೦ರ ಸಂದರ್ಭಕ್ಕಿಂತ ಮೂರು ಪಾಲು ಕಡಿಮೆಯಾಗಿದೆ. ಹಾಗಾಗಿ ಆರ್ಥಿಕ ಬೆಳವಣಿಗೆ ಹೆಚ್ಚಿನ ಉದ್ಯೋಗ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂಬ ವಾದ ಬಿದ್ದು ಹೋಗುತ್ತದೆ. (ಅಪಕಲ್ಪನೆಯಾಗಿ ಶ್ರಮದ ವ್ಯಯ : ಔಟ್‌ಲುಕ್ ಮ್ಯಾಗಜಿನ್ ೧೭. ೦೫. ೨೦೦೨)

೧೯೯೦ರ ಸಂದರ್ಭದಲ್ಲಿ ನಗರ ಮತ್ತು ಹಳ್ಳಿಗಳಲ್ಲಿ ಉದ್ಯೋಗ ಬೆಳವಣಿಗೆ ಕ್ಷೀಣಿಸಿದೆ. ಅಂಕಿ-ಅಂಶಗಳ ಪ್ರಕಾರ ಸಾರ್ವಜನಿಕ ವಲಯದಲ್ಲೂ ಉದ್ಯೋಗ ತೀವ್ರ ಕುಸಿತವನ್ನು ಕಂಡಿದೆ. ೧೯೯೭ರಲ್ಲಿ ಉದ್ಯೋಗ ಶೇ ೦.೬೭ರಷ್ಟು ಮಾತ್ರ, ಆದರೆ ೧೯೮೭ರಲ್ಲಿ ಅದು ೧೨.೭ ರಷ್ಟು ಬೆಳವಣಿಗೆ ಕಂಡಿತ್ತು. ಹೀಗಿರುವಲ್ಲಿ ಖಾಸಗೀ ರಂಗದಲ್ಲಿ ಅದು ಸ್ವಲ್ಪ ಮಟ್ಟಿಗಿನ ಬೆಳವಣಿಗೆಯನ್ನು ಕಂಡಿದೆ.

ಸಾರ್ವಜನಿಕ ವಲಯದಲ್ಲಿ ಉದ್ಯೋಗ ಸೃಷ್ಟಿ ೧೯೮೦ರ ಕೊನೆಯಲ್ಲಿ ೧೧.೦ ಮಿಲಿಯ ಇದ್ದದ್ದು ೧೯೯೦ರ ಆರಂಭಕ್ಕೆ ೬.೨ ಮಿಲಿಯಕ್ಕೆ ಇಳಿಯಿತು. ಇದೇ ಅವಧಿಯಲ್ಲಿ ಖಾಸಗೀ ವಲಯದಲ್ಲಿ ೨.೦೮ ಮಿಲಿಯ ಇದ್ದದ್ದು ೨.೪೯ ಮಿಲಿಯಕ್ಕೆ ಏರಿತ್ತು.

೧೯೯೧ರಲ್ಲಿ ಕೇಂದ್ರ ಸರ್ಕಾರದಲ್ಲಿ ೪.೦೩ ಮಿಲಿಯ ಉದ್ಯೋಗಗಳು ಇದ್ದು ಮರು ವರ್ಷ ಆ ಸಂಖ್ಯೆ ೪.೧೪ ಮಿಲಿಯಕ್ಕೇರಿತು. ಆದರೆ ಅನಂತರದ ಎರಡು ವರ್ಷಗಳಲ್ಲಿ ಆ ಸಂಖ್ಯೆ ಕ್ರಮವಾಗಿ ೩.೯೭ ಮಿಲಿಯ ಮತ್ತು ೩.೮೪ ಮಿಲಿಯಕ್ಕೆ ಇಳಿಯಿತು.

೧೯೮೦ರಲ್ಲಿ ಸಂಘಟಿತ ವಲಯದಲ್ಲಿ ವಾರ್ಷಿಕ ಉದ್ಯೋಗ ಸೃಷ್ಟಿ ಶೇ ೧.೭ ರಷ್ಟು ಕುಸಿತವನ್ನು ಕಂಡಿತ್ತಲ್ಲದೆ, ೧೯೯೨-೯೩ರ ಹೊತ್ತಿಗೆ ಅದು ಶೇ ೦.೬ ಕ್ಕಿಳಿಯಿತು. ಈ ಕುಸಿತದೊಡನೆ ಕಾಣುವ ಸಂಗತಿಯೆಂದರೆ ಸಂಘಟಿತ ವಲಯದಲ್ಲಿ ಶ್ರಮದ ಅಳವಡಿಕೆ ಕುಸಿಯುತ್ತಿದ್ದರೆ ಅಸಂಘಟಿತ ವಲಯದಲ್ಲಿ ಅಧಿಕಶ್ರಮ ತೊಡಗಿಸಿಕೊಂಡದ್ದು ಕಂಡುಬರುತ್ತದೆ. ಅಂದರೆ ೧೯೮೭-೮೮ ರಲ್ಲಿ ಶ್ರಮವು

ತೂಗುಯ್ಯಾಲೆಯಲ್ಲಿ ತೊಡಗಿದ್ದು ಶೇ ೨೯.೬ ರಿಂದ ೧೯೯೩-೯೪ರ ಹೊತ್ತಿಗೆ ಶೇ ೩.೨ ರಷ್ಟು ಹೆಚ್ಚುತ್ತದೆ. ಅಂದರೆ ೧೯೮೩-೯೪ರ ನಡುವೆ ಶೇ ೨.೦೪ ರಷ್ಟು ಉದ್ಯೋಗ ಕುಸಿದಿದ್ದು ೧೯೯೩-೨೦೦೦ದ ನಡುವೆ ಶೇ ೦.೯೮ಕ್ಕೆ ಕುಸಿಯುತ್ತದೆ.

ಹಾಗೆಯೇ ಉದ್ಯೋಗ ವಿನಿಮಯದಲ್ಲೂ ಮೇಲಿನಂತೆ ಉದ್ಯೋಗದ ಅವಕಾಶಗಳು ಕುಸಿದಿರುವುದನ್ನು ಕಾಣಬಹುದಾಗಿದೆ. ಅಧಿಕೃತವಾಗಿ ಸೂಚಿಸಿರುವ ಹುದ್ದೆಗಳು ೧೯೮೯-೯೦ರಲ್ಲಿ ೦.೫೯ ಮಿಲಿಯ ಇದ್ದದ್ದು ೧೯೯೨-೯೩ ರಲ್ಲಿ ೦.೪ ಮಿಲಿಯನ್‌ಗೆ ಇಳಿದು, ಅನಂತರದ ವರ್ಷದಲ್ಲಿ ೦.೩೮ ಮಿಲಿಯನ್‌ಗೆ ಇಳಿಯುತ್ತದೆ. ಮೇಲಿನ ವರ್ಷಗಳಲ್ಲಿ ನೇಮಿತರಾದವರ ಸಂಖ್ಯೆಯ ಕ್ರಮವಾಗಿ ೦.೨೯ ಮಿಲಿಯ, ೦.೨೩ ಮಿಲಿಯ ಹಾಗೂ ೦.೨೨ ಮಿಲಿಯನ್‌ಗೆ ಕುಸಿದು ನಿಲ್ಲುತ್ತದೆ. ಈ ವರ್ಷಗಳಲ್ಲಿ ಸೂಚಿತ ಹುದ್ದೆಗಳಿಗೆ ನೇಮಿತ ರಾದವರ ಸರಾಸರಿಯೂ ಸಹ ಕ್ರಮೇಣ ಕುಸಿತವನ್ನು ಕಾಣುತ್ತದೆ. ಶೇ ೮೫, ಶೇ ೭.೯, ಹಾಗೂ ಶೇ ೬.೭.

ದಲಿತರ ಉದ್ಯೋಗದ ಮೇಲೆ ಜಾಗತೀಕರಣದ ಪ್ರಭಾವ

ದಲಿತರ ಆರ್ಥಿಕ ಸಬಲೀಕರಣದ ದೃಷ್ಟಿಯಿಂದ ಆರ್ಥಿಕ ಸುಧಾರಣೆಗಳ ಪ್ರಯೋಜನ ಹಾಗೂ ತದನಂತರದ ಆರ್ಥಿಕ ಬೆಳವಣಿಗೆಯನ್ನು ಗಮನಿಸಿದಾಗ ಬಹುಸಂಖ್ಯಾತ ಬಡದಲಿತರಿಗೆ ಏನೇನು ದೊರೆತಿಲ್ಲ ಎಂಬುದನ್ನು ಗಮನಿಸ ಬೇಕಾಗುತ್ತದೆ. ೯ನೇ ಪಂಚವಾರ್ಷಿಕ ಯೋಜನೆಯ ಮಧ್ಯಂತರ ವರದಿಯಲ್ಲಿ ರಾಷ್ಟ್ರೀಯ ಯೋಜನಾ ಆಯೋಗವು ಗಮನಿಸಿದ ಸಂಗತಿಯೆಂದರೆ ಬದಲಾಗುತ್ತಿರುವ ಸರ್ಕಾರದ ನೀತಿಗಳು ದಲಿತರಿಗೆ ದುಷ್ಪರಿಣಾಮವನ್ನು ಬೀರಿವೆ. ೧೯೭೭-೭೮, ೧೯೮೩, ೧೯೯೩-೯೪ ಮತ್ತು ೧೯೯೯-೨೦೦೦ ವರ್ಷಗಳಲ್ಲಿ ದಲಿತೇತರರಿಗೆ ಹೋಲಿಸಿದಾಗ ದಲಿತರ ನಿರುದ್ಯೋಗವು ದಲಿತೇತರರಿಗಿಂತ ಹೆಚ್ಚಾಗಿದ್ದುದನ್ನು ರಾಷ್ಟ್ರೀಯ ಮಾದರಿ ಸಮೀಕ್ಷೆಗಳು ದಾಖಲಿಸಿದವು. ಇನ್ನೊಂದು ಮುಖ್ಯ ಸಂಗತಿಯೆಂದರೆ ೧೯೭೭-೭೮ ಮತ್ತು ೧೯೯೩-೯೪ರ ನಡುವೆ ನಿರುದ್ಯೋಗ ಸಮಸ್ಯೆ ಇಳಿಮುಖವಾಗುತ್ತಿದ್ದು ಉದಾರೀಕರಣದ ನಂತರದಲ್ಲಿ ದಿಢೀರನೆ ಉಲ್ಲೇಖಿಸಿರುವುದನ್ನು ಕಾಣುತ್ತೇವೆ.

ಹಾಗೆಯೇ ೧೯೯೦ರ ವರ್ಷದಲ್ಲಿ ದಲಿತರಿಗೆ ಉತ್ತಮ ಉದ್ಯೋಗ ದೊರಕುವಲ್ಲಿಯೂ ಕೂಡ ಇಳಿಮುಖ ಕಂಡುಬಂದಿದೆ. ೧೯೮೭-೮೮ ರಿಂದ ೧೯೯೯-೨೦೦೦ದ ನಡುವೆ ನಗರ ಪ್ರದೇಶಗಳಲ್ಲಿ ಸ್ವಂತ ಉದ್ಯೋಗದಲ್ಲಿ ತೊಡಗಿಕೊಂಡವರ ಮತ್ತು ಅನಿಯಮಿತ ಕಾರ್ಮಿಕರ ಸಂಖ್ಯೆ ಹೆಚ್ಚಾದುದನ್ನು ಒಂದೆಡೆ ಕಂಡರೆ, ಅದೇ ವರ್ಷಗಳಲ್ಲಿ ವೇತನ ಪಡೆಯುವ ದಲಿತರಲ್ಲಿ ಕುಸಿತ ಕಂಡುಬರುತ್ತದೆ. ಅಂದರೆ ಅನಿಯಮಿತ ಕೆಲಸಗಳು ಹೆಚ್ಚಾದಂತೆ ದಲಿತರಿಗೆ ಉತ್ತಮ ವೇತನದ ಕೆಲಸದ ಅವಕಾಶಗಳು ಮುಚ್ಚಿಹೋಗುವುದನ್ನು ಗಮನಿಸಬಹುದು. ಆದರೆ ದಲಿತೇತರರಿಗೆ ಸ್ವಂತ ಉದ್ಯೋಗ ಮತ್ತು ವೇತನ ಹುದ್ದೆಗಳು ಹೆಚ್ಚಾಗುತ್ತಿದ್ದು ಅನಿಯಮಿತ ಕೆಲಸಗಳು ಇಳಿಮುಖವಾಗಿವೆ. ಅಂದರೆ ಅವರಲ್ಲಿ ಭದ್ರತೆ ಮತ್ತು ಸಂಘಟಿತ ವಲಯದಲ್ಲಿ ಉದ್ಯೋಗದತ್ತ ಮುನ್ನಡೆ ಕಂಡುಬರುತ್ತಿದೆ. ಹೀಗಿರುವಾಗ ಉದ್ಯೋಗ ಮಾರುಕಟ್ಟೆಯಲ್ಲಿ ದಲಿತರು ಅಸಮಾನವಾಗಿ ಪಾಲ್ಗೊಳ್ಳುತ್ತಿರುವುದನ್ನು ನಾವು ಗಮನಿಸುತ್ತೇವೆ.

ಸರ್ಕಾರದ ಸುಧಾರಣಾ ಕ್ರಮಗಳು ಸಾರ್ವಜನಿಕ ವಲಯದಲ್ಲಿ ಬಜೆಟ್ ಬೆಂಬಲವನ್ನು ವಿಶೇಷವಾಗಿ ಕಡಿತಗೊಳಿಸಿದ್ದು, ಬಂಡವಾಳ ಪ್ರೇರಿತ ಪದಾರ್ಥಗಳ ಆಮದು ನೀತಿ ಉದಾರೀಕರಣದ ನಂತರದಲ್ಲಿ ಹೆಚ್ಚಾದ್ದರಿಂದ ೩,೦೦,೦೦೦ ಸಣ್ಣ ಕೈಗಾರಿಕ ಘಟಕಗಳು ರೋಗಗ್ರಸ್ತವಾಗಿವೆ. ಇದರಿಂದಾಗಿ ಸಾವಿರಗಟ್ಟಲೆ ಜನ ನಿರುದ್ಯೋಗಿಗಳಾಗಿದ್ದಾರೆ. ಕಳೆದ ವರ್ಷದ ಬಜೆಟ್ ಸಣ್ಣ ಕೈಗಾರಿಕೆಗಳ ೧೪ ವಸ್ತುಗಳನ್ನು ಮೀಸಲು ಪಟ್ಟಿಯಿಂದ ಹೊರತೆಗೆಯಿತು. ಹಾಗೆಯೇ ಈ ವರ್ಷ ೫೦ ವಸ್ತುಗಳನ್ನು ಆ ಪಟ್ಟಿಯಿಂದ ಹೊರಗೆ ಇಡಲಾಯಿತು. ಅಂದರೆ ಸಣ್ಣ ಕೈಗಾರಿಕೆಗಳಿಗೆ ಒದಗಿಸುತ್ತಿದ್ದ ಸಂರಕ್ಷಣಾ ಕ್ರಮಗಳು ಸಡಿಲಗೊಂಡಿತು. ಈ ಉದ್ದಿಮೆಗಳ ಪದಾರ್ಥಗಳಿಗೆ ಬೇಡಿಕೆ ಇಲ್ಲದಂತೆ ಮಾಡುವುದರ ಮೂಲಕ ಈ ಸಣ್ಣ ಉದ್ದಿಮೆಗಳಿಗೆ ಮತ್ತು ಕಾರ್ಮಿಕರಿಗೆ ಅಪಾಯವನ್ನು ತಂದೊಡ್ಡಲಾಗಿದೆ. ಹೆಚ್ಚಾದ ಪೈಪೋಟಿ, ಅಧಿಕ ಖರ್ಚು ಮತ್ತು ಬೆಲೆಗಳ ಮೇಲಿನ ಒತ್ತಡಗಳಿಂದಾಗಿ ಈ ಉದ್ದಿಮೆಗಳ ಭವಿಷ್ಯವೇ ತೂಗುಯ್ಯಾಲೆಯಲ್ಲಿವೆ. ಈ ಪ್ರಕ್ರಿಯೆಯಲ್ಲಿ ಸುಧಾರಣೆಗಳ ಪರಿಣಾಮವಾಗಿ ದಲಿತರಿಗೆ ಉದ್ಯೋಗಾವಕಾಶಗಳು ಮುಚ್ಚಿಹೋಗುತ್ತವೆ.

ಸರ್ಕಾರದ ಸುಧಾರಣಾ ಕ್ರಮಗಳು ಸಾರ್ವಜನಿಕ ವಲಯದಲ್ಲಿ ಬಜೆಟ್ ಬೆಂಬಲವನ್ನು ವಿಶೇಷವಾಗಿ ಕಡಿತಗೊಳಿಸಿದ್ದು, ಬಂಡವಾಳ ಪ್ರೇರಿತ ಪದಾರ್ಥಗಳ ಆಮದು ನೀತಿ ಉದಾರೀಕರಣದ ನಂತರದಲ್ಲಿ ಹೆಚ್ಚಾದ್ದರಿಂದ ೩,೦೦,೦೦೦ ಸಣ್ಣ ಕೈಗಾರಿಕ ಘಟಕಗಳು ರೋಗಗ್ರಸ್ತವಾಗಿವೆ. ಇದರಿಂದಾಗಿ ಸಾವಿರಗಟ್ಟಲೆ ಜನ ನಿರುದ್ಯೋಗಿಗಳಾಗಿದ್ದಾರೆ. ಕಳೆದ ವರ್ಷದ ಬಜೆಟ್ ಸಣ್ಣ ಕೈಗಾರಿಕೆಗಳ ೧೪ ವಸ್ತುಗಳನ್ನು ಮೀಸಲು ಪಟ್ಟಿಯಿಂದ ಹೊರತೆಗೆಯಿತು. ಹಾಗೆಯೇ ಈ ವರ್ಷ ೫೦ ವಸ್ತುಗಳನ್ನು ಆ ಪಟ್ಟಿಯಿಂದ ಹೊರಗೆ ಇಡಲಾಯಿತು. ಅಂದರೆ ಸಣ್ಣ ಕೈಗಾರಿಕೆಗಳಿಗೆ ಒದಗಿಸುತ್ತಿದ್ದ ಸಂರಕ್ಷಣಾ ಕ್ರಮಗಳು ಸಡಿಲಗೊಂಡಿತು. ಈ ಉದ್ದಿಮೆಗಳ ಪದಾರ್ಥಗಳಿಗೆ ಬೇಡಿಕೆ ಇಲ್ಲದಂತೆ ಮಾಡುವುದರ ಮೂಲಕ ಈ ಸಣ್ಣ ಉದ್ದಿಮೆಗಳಿಗೆ ಮತ್ತು ಕಾರ್ಮಿಕರಿಗೆ ಅಪಾಯವನ್ನು ತಂದೊಡ್ಡಲಾಗಿದೆ.

ಆದ್ದರಿಂದ ಈ ಗತಿಯ ಸೂಚನೆಯೆಂದರೆ ಗ್ರಾಮೀಣ ಉತ್ಪಾದನೆ ತೀವ್ರವಾಗಿ ಕುಸಿಯುತ್ತಿದ್ದು ನಗರ ಕೇಂದ್ರಿತ ಆಧುನಿಕ ಚಟುವಟಿಕೆಗಳತ್ತ ಉದ್ಯೋಗಗಳು ಕೇಂದ್ರೀಕರಣಗೊಳ್ಳುತ್ತವೆ. ಹಾಗೆಯೇ ಇದು ಕೃಷಿಕ್ಷೇತ್ರವನ್ನು ಮಟ್ಟ ಹಾಕುತ್ತಾ ಅಂತಿಮವಾಗಿ ದಲಿತರನ್ನು ಬಾಧಿಸುತ್ತದೆ. ಏಕೆಂದರೆ ಹೆಚ್ಚಿನ ದಲಿತರು ಕೃಷಿ ಕೂಲಿ ಕಾರ್ಮಿಕರೇ ಆಗಿದ್ದಾರೆ.

ಸಾರ್ವಜನಿಕ ವಲಯದ ಖಾಸಗೀಕರಣದ ಪರಿಣಾಮಗಳು

ಸಾರ್ವಜನಿಕ ವಲಯ ಉದ್ದಿಮೆಗಳ ಖಾಸಗೀಕರಿಸುವ ಮತ್ತು ಸರ್ಕಾರಿ ಕಛೇರಿಗಳ ಗಾತ್ರವನ್ನು ತಗ್ಗಿಸುವ ಪ್ರಯತ್ನಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಗಾಗಲೇ ಕೈಗೊಂಡಿವೆ. ಸುಧಾರಣೆಗಳ ನಂತರದ ೧೯೯೧-೯೨ರ ಬಜೆಟ್‌ನ ೯ ತಿಂಗಳಲ್ಲಿ ಶೇ ೬.೧ ರಷ್ಟು ಬಜೆಟ್ ಕಡಿತವನ್ನು ಸಾರ್ವಜನಿಕ ವಲಯಗಳಿಗೆ ಮಾಡಲಾಗಿದೆ. ಅಲ್ಲದೆ ಇದನ್ನು ಅನಂತರದಲ್ಲಿ ನಿರಂತರವಾಗಿ ಮುಂದುವರೆಸಲಾಗಿದೆ. ಈ ಸನ್ನಿವೇಶದಲ್ಲಿ ಸಾರ್ವಜನಿಕ ಘಟಕಗಳು ತಮ್ಮ ವಸ್ತುಗಳ ಬೆಲೆಗಳನ್ನು ಏರಿಸಲೇಬೇಕಾದ ಸ್ಥಿತಿ ಎದುರಾಗಿ, ಬಹುರಾಷ್ಟ್ರೀಯ ಕಂಪನಿಗಳೊಡನೆ ಸ್ಪರ್ಧಿಸಲಾಗದೆ, ಅಂತಿಮವಾಗಿ ಖಾಸಗೀಕರಿಸಲೇಬೇಕಾದ ಒತ್ತಡ ಏರ್ಪಡುತ್ತದೆ. ಇದರ ಫಲಿತಾಂಶವೆಂದರೆ ಸಾರ್ವಜನಿಕ ವಲಯ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ದಲಿತರು ಪಾಲ್ಗೊಳ್ಳಲಾಗಲಿಲ್ಲ. ವಾಸ್ತವದಲ್ಲಿ ಈ ಎರಡು ಕ್ಷೇತ್ರಗಳಲ್ಲಷ್ಟೇ ಮೀಸಲಾತಿಯು ದಲಿತರಿಗೆ ಮತ್ತು ಆದಿವಾಸಿಗಳಿಗೆ ಇದ್ದದ್ದು.

ಈ ಮೀಸಲಾತಿ ಇದ್ದಾಗ್ಯೂ ಈಗಾಗಲೇ ಸರ್ಕಾರಿ ಸೇವೆಗಳಲ್ಲಿ ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿ ದಲಿತರಿಗೆ ಅಸಮಾನ ಉದ್ಯೋಗ ಅವಕಾಶಗಳು ಇವೆ. ಇವತ್ತಿನ ಸಾರ್ವಜನಿಕ ವಲಯವನ್ನು ತೆಗೆದುಕೊಂಡಲ್ಲಿ ದಲಿತರೆಲ್ಲ ಕೆಳಹಂತದ ಹುದ್ದೆಗಳು, ಅದರಲ್ಲೂ ವಿಶೇಷವಾಗಿ ಕಸಗುಡಿಸುವ ಕೆಲಸದಲ್ಲೇ ಕೇಂದ್ರೀಕೃತವಾಗಿರುವುದನ್ನು ಕಾಣುತ್ತೇವೆ. ಉನ್ನತ ಹುದ್ದೆಗಳನ್ನು ಪರಿಗಣಿಸಿದಲ್ಲಿ ಪರಿಶಿಷ್ಟ ಜಾತಿಗಳಿಗೆ ಮೀಸಲಿಟ್ಟಿರುವ ಶೇ ೧೫ ರಷ್ಟು ಉದ್ಯೋಗಗಳಲ್ಲಿ ಕಡಿಮೆ ಪ್ರಾತಿನಿಧ್ಯವನ್ನು ನೋಡುತ್ತೇವೆ. ಅಂದರೆ ಶ್ರೇಣೀಕೃತ ಜಾತಿ ಪದ್ಧತಿಯ ಹಿಡಿತ ಎಷ್ಟು ಬಲವಾಗಿದೆಯೆಂಬುದನ್ನು ಗಮನಿಸಬಹುದು.

ಶೇ ೧೬ ರಷ್ಟಿರುವ ದಲಿತರು ಸಾರ್ವಜನಿಕ ರಂಗದಲ್ಲಿ ತಮ್ಮ ಸಂಖ್ಯೆಗಿಂತ ಅಧಿಕವಾಗಿ ಕಸಗುಡಿಸುವ ಕೆಲಸದಲ್ಲಿ ನಿರತರಾಗಿರುವುದು ಕಸುಬು ಆಧಾರಿತ ಜಾತಿಗುಣವನ್ನೇ ಸೂಚಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲು ಹುದ್ದೆಗಳನ್ನು ತುಂಬದಿರುವುದರ ಬಗ್ಗೆ ವರದಿಗಳನ್ನು ಗಮನಿಸಿದ್ದಲ್ಲಿ ರಾಜ್ಯ ಸರ್ಕಾರದಲ್ಲಿ ೨೫,೦೦೦ ಹುದ್ದೆಗಳು ಹಾಗೂ ಕೇಂದ್ರ ಸರ್ಕಾರ ಸೇವೆಗಳಲ್ಲಿ ೧೦,೦೦,೦೦೦ ಹುದ್ದೆಗಳು ಖಾಲಿಯಾಗಿಯೇ ಇವೆ. ಕೆಲವು ಹುದ್ದೆಗಳಿಗೆ ೧೯೭೮ ರಿಂದಲೂ ನೇಮಕಾತಿ ಮಾಡಿರುವುದಿಲ್ಲ! (ದಿ ಹಿಂದೂ, ೨.೨.೯೯, ಉದ್ಧೃತ ಎ. ಇರುದಯಂ, ಪ್ರಬಂಧ ೧೯೯೯).

ಎಸ್‌ಸಿ/ಎಸ್‌ಟಿಗಳಿಗಿರುವ ರಾಷ್ಟ್ರೀಯ ಆಯೋಗವು ವರದಿ ಮಾಡಿರುವಂತೆ ಈ ಗುಂಪುಗಳಿಗೆ ಇರುವ ಬ್ಯಾಕ್‌ಲಾಗ್ ಹುದ್ದೆಗಳು ಕೇಂದ್ರ ಸರ್ಕಾರ ಇಲಾಖೆಗಳಲ್ಲಿ ಶೇ ೫೪.೩೦ ರಷ್ಟು ಸಾರ್ವಜನಿಕ ಬ್ಯಾಂಕುಗಳಲ್ಲಿ ಶೇ ೪೫.೧೦ ರಷ್ಟು ಹಾಗೂ ಶೇ ೮೮.೧೮ ರಷ್ಟು ಸಾರ್ವಜನಿಕ ಉದ್ದಿಮೆಗಳಲ್ಲಿ ಖಾಲಿ ಇವೆ. (ಪಜಾ/ಪಪಂಗಳ ರಾಷ್ಟ್ರೀಯ ಆಯೋಗ ವರದಿ, ೧೯೯೬-೯೭, ೧೯೯೭-೯೮, ಉದ್ಧೃತ ಎ. ಇರುದಯಂ, ಪ್ರಬಂಧ, ೧೯೯೯).

ಮೀಸಲಾತಿ ಇಲ್ಲವಾಗಿಸುವಿಕೆ ಮತ್ತು ಮಾರುಕಟ್ಟೆ ತಾರತಮ್ಯ

ಮೀಸಲಾತಿಯನ್ನು ಸಮರ್ಪಕ ರೀತಿಯಲ್ಲಿ ಜಾರಿಗೊಳಿಸದಿದ್ದರೂ, ದಲಿತರಿಗಾಗಿ ಏನು ಪ್ರಗತಿಪರ ಕ್ರಮಗಳನ್ನು ಕೈಗೊಳ್ಳಲಾಗಿತ್ತೋ ಅವುಗಳನ್ನೀಗ ಹಿಂತೆಗೆದುಕೊಳ್ಳಲಾಗುತ್ತಿದೆ. ಪ್ರಸ್ತುತ ರೈಲ್ವೆ, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಅಂಚೆ ಮತ್ತು ದೂರವಾಣಿ ಇಲಾಖೆಗಳಲ್ಲಿ ಕಾರ್ಮಿಕರಿಗೆ ಕಡ್ಡಾಯ ನಿವೃತ್ತಿ, ಗಾತ್ರ ಸಣ್ಣದಾಗಿಸುವಿಕೆ ಮುಂತಾಗಿ ಕ್ರಮಗಳನ್ನು

ಜಾರಿಯಾಗಿಸಲಾಗುತ್ತಿದೆ. ಈ ಕ್ರಮಗಳು ಸುಮಾರು ೧೦,೦೦,೦೦೦ ಶ್ರಮಿಕರಿಗೆ ತೊಂದರೆಯಾಗಲಿದೆ. ಇದರಲ್ಲಿ ಸುಮಾರು ೨,೦೦,೦೦೦ ಕಾರ್ಮಿಕರು ದಲಿತರಾಗಿದ್ದಾರೆ.

ಹಾಗೆ ಸಾರ್ವಜನಿಕ ವಲಯದಲ್ಲಿ ಉದ್ಯೋಗಗಳು ಕಡಿಮೆಯಾಗುತ್ತಿದ್ದು ಖಾಸಗೀ ರಂಗದಲ್ಲಿ ಉದ್ಯೋಗ ಹೆಚ್ಚುತ್ತಿರುವುದನ್ನು ಮತ್ತಷ್ಟು ಅಸಮಾನತೆಗಳಿಗೆ ಕಾರಣವಾಗಲಿವೆ. ಏಕೆಂದರೆ ಖಾಸಗೀಕರಣದ ಮುಖ್ಯ ಉದ್ದೇಶ ಲಾಭಗಳಿಕೆಯೇ ಹೊರತು ಉದ್ಯೋಗ ಭರವಸೆಯೇನೂ ಅಲ್ಲ. (ಮಹಾನ್ ರಾನೊಬಿನ್ ಸಮಿತಿ ವರದಿ ೧೯೬೪ ಹಜಾರಿ ಸಮಿತಿ ವರದಿ ೧೯೬೭).

ಇದು ಏಕೆಂದರೆ ಸರ್ಕಾರ ಮತ್ತು ಸಾರ್ವಜನಿಕ ರಂಗದಲ್ಲಿರುವಂತೆ ಖಾಸಗೀ ರಂಗದಲ್ಲಿರುವ ತಾರತಮ್ಯದ ವಿರುದ್ಧ ರಕ್ಷಣೆಯಿಲ್ಲ. ತಾರತಮ್ಯದ ವಿರುದ್ಧ ವಿವಿಧ ಮಾರುಕಟ್ಟೆಗಳಲ್ಲಿ ಅಂದರೆ ಕಾರ್ಮಿಕರು, ಭೂಮಿ, ಬಂಡವಾಳ ಮತ್ತು ಸಾಮಾಜಿಕ ಸೇವೆಗಳಲ್ಲಿ ರಕ್ಷಣೆ ಇಲ್ಲ. ಆದ್ದರಿಂದ, ಮೀಸಲಾತಿ ನೀತಿಯ ರಕ್ಷಣೆಯಿಲ್ಲದೆ, ಮಾರುಕಟ್ಟೆಯ ವಿವಿಧ ಕಾರ್ಯಾಚರಣೆಗಳಿಂದ ದಲಿತರು ಅವಮಾನಕ್ಕೀಡಾಗುತ್ತಿದ್ದಾರೆ. ಈಗಾಗಲೇ ಬ್ಯಾನರ್ಜಿ ಮತ್ತು ನೈತ (೧೯೯೧) ರವರ, ದೇಶಿ ಮತ್ತು ಸಿಂಗ್ (೧೯೯೫) ರವರು ನಗರ ಪ್ರದೇಶಗಳ ಉದ್ಯೋಗ ಮಾರುಕಟ್ಟೆಗಳಲ್ಲಿನ ಅಸ್ಪೃಶ್ಯತೆ ಆಧಾರಿತ

ಮೂರು ಗಂಭೀರ ಪ್ರಶ್ನೆಗಳು

ಆರ್ಥಿಕ ತಾರತಮ್ಯದ ತೀವ್ರತೆಯ ಬಗ್ಗೆ ವರದಿಗಳನ್ನು ಪ್ರಕಟಿಸಿದ್ದಾರೆ. ೧೯೭೫-೭೬ರ ದೆಹಲಿ ನಗರದ ಉದ್ಯೋಗ ಮಾರುಕಟ್ಟೆ ಕುರಿತ ಬ್ಯಾನರ್ಜಿ ಮತ್ತು ನೈತರ ಅಧ್ಯಯನದಲ್ಲಿ ಬಳಕೆಯಾಗಿರುವ ಸ್ಟಾಂಡರ್ಡ್ ವಿಧಾನಗಳಲ್ಲಿ ಜಾತಿ ತಾರತಮ್ಯಗಳಿರುವುದನ್ನು ಗಮನಿಸಿದ್ದಾರೆ; ಅಂದರೆ, ಉದ್ಯೋಗ ಪಡೆಯುವಿಕೆಯಲ್ಲಿ ತಾರತಮ್ಯವಿದ್ದು ಇದು ಮುಖ್ಯ ಸಂಗತಿಯೆಂದು ಗಮನಿಸಿದ್ದಾರೆ. ಈ ಅಧ್ಯಯನಕಾರರು ಹೇಳುವಂತೆ, 'ಪಾರಂಪರಿಕ ತಂತ್ರಗಾರಿಕೆಯಲ್ಲಿ ಈ ತಾರತಮ್ಯ ಕ್ರಿಯಾಶೀಲವಾಗಿದ್ದು ಅಸ್ಪೃಶ್ಯ ಜಾತಿಗಳ ಜನ ಕಡಿಮೆ ವೇತನದ, ಕೆಳದರ್ಜೆ ಕೆಲಸಗಳಲ್ಲಿ ವಿರೋದಾಭಾಸವೆಂಬಂತೆ ತೊಡಗಿಕೊಂಡಿದ್ದಾರೆ.'

ಹೀಗೆ ತಾರತಮ್ಯ ಮಾಡುವವರು ಇತರೆ ಕಾರ್ಮಿಕರು ಮತ್ತು ಮಾಲೀಕರೇ ಆಗಿದ್ದಾರೆ. ಪ್ರಸ್ತುತದಲ್ಲಿ ಈ ತಾರತಮ್ಯ ಆಚರಣೆಯಲ್ಲಿ ಇಲ್ಲದಿದ್ದರೂ ಕೂಡ ಹಿಂದಿನ ತಾರತಮ್ಯದ ಅನುಭವಗಳು ವರ್ತಮಾನದ ಉದ್ಯೋಗ ಆಯ್ಕೆಯಲ್ಲಿ ಪ್ರಭಾವ ಬೀರುವುದನ್ನು ಕಾಣಬಹುದು. ಇದಕ್ಕೆ ಪೂರಕವೆಂಬಂತೆ ನೇಮಕಾತಿಯ ಸಂದರ್ಭದಲ್ಲಿ ಪ್ರಭಾವಿ ವ್ಯಕ್ತಿಗಳ ಸಂಪರ್ಕ ಎಷ್ಟು ಮುಖ್ಯ ಎಂಬುದನ್ನು ತಾರತಮ್ಯದ ಒಂದು ಭಾಗವಾಗಿ ವಿವರಿಸಿಕೊಳ್ಳಬಹುದು. ಆದರೆ ಪ್ರತಿಷ್ಠಿತ ಉದ್ಯೋಗಗಳಲ್ಲಿ ನೇಮಕಾತಿ ಕಠಿಣ ವಿಧಾನಗಳನ್ನು ಒಳಗೊಡಿಸುತ್ತದೆ. ಹೀಗಿರುವಲ್ಲಿ ಜಾತಿವ್ಯವಸ್ಥೆ ಆರ್ಥಿಕ ಕ್ರಮವಾಗಿ ತನಗೆ ಬೇಕಾದ ಜಾತಿಗಳಿಗೆ ಮಾತ್ರ ಉದಾರಭಾವವನ್ನು ತಾಳುತ್ತಿರುತ್ತದೆ. ಅಂದರೆ, ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞಾಪೂರ್ವಕವಾಗಿ ಆರ್ಥಿಕ ಹಿತಾಸಕ್ತಿಯನ್ನು ಆಧರಿಸಿದ್ದು ಅಂತಹ ಪೂರ್ವಗ್ರಹೀತವನ್ನು ಹೋಗಲಾಡಿಸುವುದು ಕಷ್ಟವಾಗುತ್ತದೆ.'

ಕರ್ನಾಟಕದಲ್ಲಿ ನಡೆಸಿದ ಒಂದು ಅಧ್ಯಯನದ ಪ್ರಕಾರ ಪ್ರತಿಕ್ರಿಯಿಸಿದವರಲ್ಲಿ ಶೇ ೮೫ ರಷ್ಟು ದಲಿತರು ಪಾರಂಪರಿಕ ಕಸುಬುಗಳಲ್ಲೇ ನಿರತರಾಗಿರುವುದು ಕಂಡು ಬಂದು, ಕೇವಲ ಶೇ ೧೫ ರಷ್ಟು ಮಂದಿ ಮಾತ್ರ ಮತ್ತೊಂದು ವೃತ್ತಿಗೆ ಹೋಗಿದ್ದಾರೆ. ನಗರ ಪ್ರದೇಶಗಳಲ್ಲಿ ಶೇ ೫೮ ರಷ್ಟು ದಲಿತರು ಪಾರಂಪರಿಕ ಜಾತಿ ವೃತ್ತಿಯಿಂದ ಹೊರಬಂದಿರುವುದನ್ನು ವಿವರಿಸಿದ್ದಾರೆ. ೧೯೮೭-೮೮ರಲ್ಲಿ ಒರಿಸ್ಸಾದಲ್ಲಿ ಮಾಡಿದ ಅಧ್ಯಯನದ ಪ್ರಕಾರ ಆರ್ಥಿಕ ಕ್ಷೇತ್ರದಲ್ಲಿ ಇಂಥದೇ ತಾರತಮ್ಯವನ್ನು ಗಮನಿಸಲಾಗಿದೆ.

ಹಾಗೆಯೇ ಆಂಧ್ರಪ್ರದೇಶದಲ್ಲಿ ನಡೆದ ಅಧ್ಯಯನದ ಪ್ರಕಾರ ದಲಿತರು ತಮ್ಮ ಪಾರಂಪರಿಕ ಉದ್ಯೋಗಗಳಿಂದ ಹೊರಬರಲು ಇಷ್ಟಪಟ್ಟಾಗ ಸವರ್ಣೀಯರು ಅವರನ್ನು ದೂಷಿಸಿದ್ದರು ಇಲ್ಲವೇ ದೌರ್ಜನ್ಯ ನಡೆಸಿದ್ದರು. (ಎಸ್.ಕೆ.ತೋ ರಟ್- ಪ್ರಾದೇಶಿಕ ಅಭಿವೃದ್ಧಿ ಅಧ್ಯಯನ ಕೇಂದ್ರ, ಜೆ.ಎನ್.ಯು., ದೆಹಲಿ)

ಹೀಗಿರುವಲ್ಲಿ ಖಾಸಗಿ ರಂಗದ ಉದ್ಯೋಗ ಅವಕಾಶಗಳು ಔಪಚಾರಿಕವಾಗಿ ಮಾರ್ಪಟ್ಟು ಅವಕಾಶಗಳು ಕೂಡ ಖಾಸಗಿಯಾಗಿ, ಉನ್ನತ ಶಿಕ್ಷಣ ಮತ್ತು ತಾಂತ್ರಿಕ ಕೌಶಲ್ಯಗಳನ್ನು ನಿರೀಕ್ಷಿಸುವುದರಿಂದಾಗಿ ಭಾರತದಲ್ಲಿನ ಬಹುಸಂಖ್ಯಾತ ದಲಿತರು ಹೊರಗೇ ಉಳಿದುಬಿಡುತ್ತಾರೆ. ಆದ್ದರಿಂದ ಸಂಘಟಿತ ಕ್ಷೇತ್ರಕ್ಕೆ ಹೆಜ್ಜೆಯಿಡಲು ಪ್ರಯತ್ನಿಸುವ ದಲಿತರು ನಿರಾಶೆಗೊಂಡು ಜಾತಿಪದ್ಧತಿಯ ಕಾರಣದಿಂದಾಗಿ ಸಾಮಾಜಿಕ, ಆರ್ಥಿಕ ತಾರತಮ್ಯದ ನೆರಳಲ್ಲೇ ಜೀವಿಸಬೇಕಾಗುತ್ತದೆ. ಹೀಗೆ ಕುಸಿಯುತ್ತಿರುವ ಅವಕಾಶಗಳಿಂದಾಗಿ ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸುವುದರಿಂದಾಗಿ ಅವರ ಸ್ಥಿತಿ ಮತ್ತಷ್ಟು ಡೋಲಾಯಮಾನ ಸ್ಥಿತಿಗೆ ತಲುಪುತ್ತದೆ. ಹೀಗೆ ಉದ್ಯೋಗ ಮಾರುಕಟ್ಟೆಯ ಮೇಲೆ ಭರವಸೆಯಿಟ್ಟು ಯಾವುದೇ ಭರವಸೆಯಿಲ್ಲದ ಮಾರುಕಟ್ಟೆಯ ವಿವಿಧ ಕ್ಷೇತ್ರಗಳಲ್ಲಿ ತೊಳಲಾಡಬೇಕಾಗುತ್ತದೆ. ನಗರಗಳಲ್ಲಿ ದಲಿತರು ವೇತನ ಉದ್ಯೋಗ ಕ್ಷೀಣಿಸುತ್ತಿರುವುದರಿಂದ ಇತರ ಅನಿಯಮಿತ ಉದ್ಯೋಗಗಳಿಗೆ ದೂಡಲ್ಪಡುತ್ತಾರೆ. ಈ ಪ್ರಸಕ್ತ ಸನ್ನಿವೇಶವನ್ನು ಕೂಡಲೇ ಬದಲಾಯಿಸದಿದ್ದಲ್ಲಿ ರಾಷ್ಟ್ರೀಯ ಮುಖ್ಯವಾಹಿನಿಯಿಂದ ಮತ್ತಷ್ಟು ಅಂಚಿಗೆ ಸರಿದು ಕೊನೆಗೆ ಸಾಮಾಜಿಕವಾಗಿ ಬಹಿಷ್ಕೃತರಾಗೇ ಉಳಿಯುತ್ತಾರೆ.

ಗಂಭೀರ ಪ್ರಶ್ನೆಗಳು

★ ಜಾಗತೀಕರಣದ ಆಕ್ರಮಣದಿಂದಾಗಿ ಸರ್ಕಾರವು ತನ್ನ ಕಲ್ಯಾಣ ಯೋಜನೆಗಳಿಂದ ಹಿಂದೆ ಸರಿಯುತ್ತಿರುವಾಗ ಕೃಷಿ, ಕೈಗಾರಿಕೆ ಅಥವಾ ಸೇವಾ ಕ್ಷೇತ್ರಗಳು ಖಾಸಗೀಕರಣಗೊಂಡು ವೇತನ, ಉದ್ಯೋಗ, ಸಾಮಾಜಿಕ ಭದ್ರತೆ, ಇತರೆ ಸೌಕರ್ಯಗಳೆಲ್ಲವೂ ಖಾಸಗಿಯವರ ಕೃಪೆಯಲ್ಲಿರುವಾಗ ಕಾರ್ಮಿಕರ ಪಾಡೇನು?

★ ಸರ್ಕಾರಿ ಸೇವೆಗಳು ತೀವ್ರವಾಗಿ ಖಾಸಗೀಕರಣಗೊಳ್ಳುವಾಗ ಮೀಸಲಾತಿ ನೀತಿಯೂ ಸಹ ಅರ್ಥ ಕಳೆದುಕೊಳ್ಳದಂತೆ ಮಾಡಲಾಗುತ್ತಿರುವುದರ ಹಿಂದಿನ ಹುನ್ನಾರವೇನು? ದೇಶದಲ್ಲಿ ಹೊಸ ಆರ್ಥಿಕ ನೀತಿಯು ಜಾರಿಯಾಗುವಾಗ ಖಾಸಗೀ ರಂಗದಲ್ಲಿ ಮೀಸಲಾತಿಯನ್ನು ಏಕೆ ಜಾರಿಯಾಗಿಸಲಿಲ್ಲ?

★ ಉದ್ಯೋಗ ಮಾರುಕಟ್ಟೆಯಲ್ಲಿ ದಲಿತರು ಯಶಸ್ವಿಯಾಗಿ ಸ್ಪರ್ಧಿಸಲು ಅಗತ್ಯವಾದ ಶಿಕ್ಷಣ ಮತ್ತು ಸಾಮರ್ಥ್ಯವನ್ನು ಪಡೆಯಲು ಸರ್ಕಾರ ಏಕೆ ತನ್ನ ಬಜೆಟ್‌ನಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಬಾರದು? □

ಸಂವಾದ

ಲೇಖಕರಲ್ಲಿ ಮನವಿ

'ಸಂವಾದ'ವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಶೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು.

'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

ಝೆನ್

ಅವಲೋಕನ ಕಥೆ ಪ್ರಸಂಗ ಸಂವಾದ ಒಗಟು ಮುಂಡಿಗೆಗಳು

○ಕೆ.ವಿ. ಸುಬ್ಬಣ್ಣ





ಲಾಟೀನಿನ ಕುರುಡ

ವೃದ್ಧನಾದ ಝೆನ್ ಗುರುವೊಬ್ಬ ಶ್ರದ್ಧೆ ಸಾಲದ ತನ್ನ ಶಿಷ್ಯರಿಗೆ ಈ ಕೆಳಗಿನ ಕಥೆ ಹೇಳುತ್ತಿದ್ದನಂತೆ-

ಒಬ್ಬ ಕುರುಡ. ಒಂದು ದಿನ ಆತ, ತನ್ನ ಸ್ನೇಹಿತನ ಮನೆಗೆ ಹೋಗಿದ್ದ. ಅಲ್ಲಿಂದ ತಿರುಗಿ ಮನೆಗೆ ಹೊರಟಾಗ ರಾತ್ರಿಯಾಗಿ ಹೋಗಿತ್ತು. ಕುರುಡ ತನ್ನ ಮಿತ್ರನಿಗೆ ಹೇಳಿದ- 'ಅಪ್ಪಾ ಮಿತ್ರಾ, ರಾತ್ರಿ, ಕತ್ತಲು. ನಿನ್ನ ಲಾಟೀನು ಕೊಡು. ಒಯ್ಯುತ್ತೇನೆ' ಎಂದು.

'ಸರಿ ಕೊಡುತ್ತೇನೆ. ಆದರೆ, ಕಣ್ಣು ಕಾಣಿಸದಿರುವಾಗ ಲಾಟೀನಿನಿಂದ ಏನು ಪ್ರಯೋಜನ?' ಎಂದ ಸ್ನೇಹಿತ.

ಕುರುಡ ಹೇಳಿದ - 'ನನಗೆ ಕಾಣುವುದಿಲ್ಲ, ಹೌದು. ಆದರೆ, ಲಾಟೀನು ಹಿಡಿದಿರುವುದರಿಂದ ಬೇರೆಯವರಿಗೆ ನಾನು ಸ್ಪಷ್ಟ ಕಾಣುತ್ತೇನಲ್ಲ. ಬೇರೆಯವರಾದರೂ ನನ್ನ ಮೇಲೆ ಕಾಣದೆ ಬಂದು ಹಾಯುವುದನ್ನು ತಪ್ಪಿಸಿಕೊಳ್ಳಬಹುದಲ್ಲ.'

ಸ್ನೇಹಿತ ಲಾಟೀನನ್ನು ಕೊಟ್ಟ. ಬಿದಿರು ಕಡ್ಡಿಗಳಿಂದ ಮಾಡಿದ ಲಾಟೀನು ಅದು; ಒಳಗೆ ಒಂದು ಮೇಣದಬತ್ತಿಯಿಟ್ಟು ಹೊರಗೆ ಕಾಗದ ಹೊದೆಸಿದ್ದು.

ಕುರುಡ, ಲಾಟೀನು ಹಿಡಿದು ಹೊರಟ. ದಾರಿಯಲ್ಲಿ ಸ್ವಲ್ಪ ದೂರ ಹೋಗಿದ್ದನಷ್ಟೇ, ಅಷ್ಟರಲ್ಲಿ ಅಕೋ, ಯಾವನೋ ಒಬ್ಬ ನೇರ ಬಂದು ಆತನಿಗೆ ಡಿಕ್ಕಿ ಹೊಡೆದೇಬಿಟ್ಟ. ಕುರುಡನಿಗೆ ಸಿಟ್ಟು ಚಿಮ್ಮಿತು. 'ಯಾರಪ್ಪಾ ಅದು, ನಿನಗೆ ನಾನು ಹಿಡಿದ ಲಾಟೀನೂ ಕಾಣಿಸಲಿಲ್ಲವೇ?' ಎಂದು ಅಬ್ಬರಿಸಿದ.

ಎದುರಿನವ ಹೇಳಿದ- 'ಲಾಟೀನು ಹಿಡಿದಿದ್ದಿಯೆ, ಸರಿ. ಆದರೆ, ಒಳಗಿನ ಮೇಣದಬತ್ತಿ ಹಚ್ಚಿಕೊಳ್ಳಬಾರದಾ ?'

ಹಗುರದ ಮಾತು

ಅಧ್ಯಯನ ಮಾಡುತ್ತಿದ್ದ ಡೊಕೆನ್ ಎಂಬಾತನಿಗೆ, ಅಲ್ಲಿಂದ ತುಂಬ ದೂರದಲ್ಲಿದ್ದ ಒಂದು ವಿಹಾರಕ್ಕೆ ಹೋಗಿ ಬರಬೇಕೆಂದು ಆಜ್ಞೆಯಾಯ್ತು. ಈ ತಿಂಗಳುಗಟ್ಟಲೆ ದೀರ್ಘ ಯಾತ್ರೆಯಿಂದ ತನ್ನ ಅಧ್ಯಯನ ಕುಂಠಿತವಾಗುತ್ತದಲ್ಲ ಎಂದು ಆತ ಆತಂಕಗೊಂಡ. ಆಮೇಲೆ ಈಗಾಗಲೇ ಸಾಕಷ್ಟು ಅಧ್ಯಯನ ಮಾಡಿಕೊಂಡಿದ್ದ ತನ್ನ ಮಿತ್ರನಾದ ಹಿರಿಯ ವಿದ್ಯಾರ್ಥಿ ಸೊಗೆನ್ ಎಂಬುವನ ಹತ್ತಿರ ಹೋದ. 'ಮಿತ್ರಾ, ನೀನು ನನ್ನ ಜೊತೆಗೆ ಯಾತ್ರೆಗೆ ಬರಲು ಅಪ್ಪಣೆ ಕೇಳಿ ಪಡೆದುಕೋ. ನನಗೆ ಉಪಕಾರವಾಗುತ್ತದೆ. ಎಷ್ಟೋ ವಿಷಯಗಳು ನನಗೆ ತಿಳಿಯವು. ನೀನು ಜೊತೆಯಲ್ಲಿ ಬಂದರೆ, ಪ್ರಯಾಣ ಮಾಡುವಾಗಲೇ ಚರ್ಚಿಸಿ ಮನನ ಮಾಡಿಕೊಳ್ಳಬಹುದು' ಎಂದ.



ಸೊಗೆನ್, ಇಲ್ಲ ಅನ್ನಲಿಲ್ಲ. ಹೀಗೆ ಹೇಳಿದ-- 'ಸರಿಯಪ್ಪ ಒಪ್ಪುತ್ತೇನೆ. ಒಂದು ಪ್ರಶ್ನೆ ಕೇಳುತ್ತೇನೆ, ಆದೀತಾ ? ನೀನು ಹಸಿದಿದ್ದೀಯೆ, ನಾನು ಅನ್ನ ತಿಂದರೆ, ಹಸಿದ ನಿನಗೆ ಅದರಿಂದ ತೃಪ್ತಿಯುಂಟಾದೀತೋ? ನೀನು ಕುಂಟನಾಗಿದ್ದೀಯೆ, ನಾನು ವಿಲಾಸದಿಂದ ನೃತ್ಯಗತಿಯಲ್ಲಿ ನಡೆಯುತ್ತಿದ್ದರೆ ಅದರಿಂದ ನೀನು ತೃಪ್ತನಾಗುತ್ತೀಯೋ? ನಿನ್ನ ಮೂತ್ರಕೋಶ ತುಂಬಿಕೊಂಡಿದೆ. ನಾನು ಮೂತ್ರ ವಿಸರ್ಜನೆ ಮಾಡಿದರೆ, ನಿನಗೆ ಹಗುರವಾದೀತೋ ?'

ಕಥೆಯ ಅಲೆಗಳು

ಮಹಾಸಾಗರದಲ್ಲಿ ಆಕಾಶದೆತ್ತರ ಭಾರಿ ಅಲೆಗಳು ಏಳುತ್ತವಲ್ಲ, ಅವಕ್ಕೆ, ಓ-ನಮಿ ಎಂದು ಕರೆಯುತ್ತಾರೆ. ಓ-ನಮಿ ಎಂದೇ ಹೆಸರಿಟ್ಟುಕೊಂಡಿದ್ದ ಒಬ್ಬ ಮಲ್ಲನಿದ್ದ. ಆತನಿಗೆ ಅದ್ಭುತವಾದ ಶಕ್ತಿಯಿತ್ತು; ಮಲ್ಲಯುದ್ಧದಲ್ಲಿ ಅಪಾರ ಪರಿಣತಿಯಿತ್ತು; ಖಾಸಗಿ ಹೋರಾಟದಲ್ಲಿ ಆತ, ತನ್ನ ಗುರುವನ್ನೇ ಕ್ಷಣಮಾತ್ರದಲ್ಲಿ ಸೋಲಿಸಿ ಕೆಡವುತ್ತಿದ್ದ. ಆದರೆ ತೊಂದರೆಯೆಂದರೆ, ಬಹಿರಂಗವಾಗಿ ಮಲ್ಲಯುದ್ಧಕ್ಕೆ ನಿಂತಾಗ ಮಾತ್ರ ಆತ, ನಿರ್ಬಲನಾಗಿ ಬಿಡುತ್ತಿದ್ದ; ಹೊಸದಾಗಿ ಕಲಿಯಲು ಬಂದ ಆತನ ಶಿಷ್ಯರೂ ಆತನನ್ನು ಸೋಲಿಸಿ ಬಿಡುತ್ತಿದ್ದರು.

ಹೀಗಿರುವಾಗ ಒಮ್ಮೆ ಆತ, ಒಬ್ಬ ಗುರುವಿನ ಬಳಿಗೆ ಹೋದ. ಆ ಗುರು ಆಗ, ಅಲ್ಲೇ ಸಮುದ್ರತೀರದಲ್ಲಿದ್ದ ಒಂದು ದೇವಾಲಯದಲ್ಲಿ ಬೀಡುಬಿಟ್ಟಿದ್ದ. ಓ-ನಮಿ, ಗುರುವಿನ ಹತ್ತಿರ ಹೋಗಿ ತನ್ನ ದೌರ್ಬಲ್ಯವನ್ನು ಹೇಳಿಕೊಂಡ. ಅದರ ನಿವಾರಣೆಗೆ ಮಾರ್ಗ ಸೂಚಿಸುವಂತೆ ಬೇಡಿಕೊಂಡ.

ಗುರು ಹೀಗೆ ಹೇಳಿದ -

'ಓ-ನಮಿ ಎಂಬುದು ನಿನ್ನ ಹೆಸರಲ್ಲವೆ? ಒಳ್ಳೆಯದು. ಇವತ್ತು ರಾತ್ರಿ ಈ ದೇವಾಲಯದಲ್ಲಿ ಉಳಿದುಕೋ. ಸಮುದ್ರದ ಅಲೆಗಳಿಗೆ ಕಿವಿಗೊಟ್ಟು ಆಲೈಸು. ನೀನೇ ಆ ಅಲೆಗಳು ಎಂದು ಸಂಭಾವಿಸಿಕೋ. ನೀನೊಬ್ಬ ಮಲ್ಲ ಎನ್ನುವುದನ್ನು ಮರೆತುಬಿಡು. ಆಕಾಶದೆತ್ತರ ಎದ್ದು ಎದುರಿಗಿರುವ ಎಲ್ಲವನ್ನೂ ಅನಾಮತ್ತಾಗಿ ಆವರಿಸಿಬಿಡುವ ಆ ಉತ್ತುಂಗ ವೀಚಿಗಳೇ ನೀನಾಗಬೇಕು. ನೀನು ಅವೇ ಆಗಬೇಕು.

ಹೀಗೆ ಹೇಳಿ ಗುರು ಅಲ್ಲಿಂದ ನಿರ್ಗಮಿಸಿದ. ಓ-ನಮಿ, ಅಲ್ಲೇ ಉಳಿದುಕೊಂಡ.

ಅಲೆಗಳ ಬಗ್ಗೆಯೇ, ಕೇವಲ ಅಲೆಗಳ ಬಗ್ಗೆಯೇ ಚಿಂತಿಸಬೇಕೆಂದು ಆತ ಹೆಣಗಿದ. ಆದರೆ ಹಾಗೆ ಮಾಡಿದಂತೆಲ್ಲ ಬೇರೆ ನೂರೆಂಟು ಯೋಚನೆಗಳು ಬಂದು ಮುತ್ತತೊಡಗುತ್ತಿದ್ದವು. ಕ್ರಮೇಣ ಹಾಗೇ ಸಾಧನೆ ಮಾಡಿ ಮಾಡಿ, ಕಡೆಗೊಮ್ಮೆ, ಅಲೆಗಳ ಬಗ್ಗೆಯೇ ಚಿಂತಿಸುವುದು ಸಾಧ್ಯವಾಯಿತು. ರಾತ್ರಿ ಸವೆಯುತ್ತ ನಡೆದಂತೆ ಅಲೆಗಳು ಉನ್ನತೋನ್ನತವಾಗಿ ಮೇಲಕ್ಕೆ ನೆಗೆದು ಅಪ್ಪಳಿಸತೊಡಗಿದವು. ಅಪ್ಪಳಿಸುವ ಆ ಅಲೆಗಳ ಹೊಡೆತಕ್ಕೆ, ಬುದ್ಧದೇವನ ಎದುರಿದ್ದ ಹೂದಾನಿಯಲ್ಲಿನ ಕಂಚಿನ ಪ್ರತಿಮೆ ಕೂಡಾ ಕೊಚ್ಚಿಕೊಂಡು ಹೋಯ್ತು. ಬೆಳಕು ಹರಿಯುವ ಹೊತ್ತಿಗೆ, ಇಡೀ ದೇವಾಲಯ ಎದ್ದುಬೀಳುವ ನೀರಿನ ಭಾರೀ ಅಲೆಗಳಾಗಿ ಪರಿವರ್ತಿತಗೊಂಡಿತ್ತು. ಓ-ನಮಿ, ಹಾಗೇ ಕೂತಿದ್ದ. ತುಟಿಗಳಂಚಿನಲ್ಲಿ ಮೆಲುನಗೆ ಮೂಡಿಕೊಳ್ಳುತ್ತಿತ್ತು.

ಆ ದಿನವೇ ಆತ, ಬಹಿರಂಗ ಮಲ್ಲಯುದ್ಧದಲ್ಲಿ ಭಾಗವಹಿಸಿದ. ಬಗೆ ಬಗೆಯ ಎಲ್ಲ ಪಟ್ಟುಗಳಲ್ಲಿಯೂ ಗೆದ್ದು ಜಯಭೇರಿ ಬಾರಿಸಿದ. ಆ ದಿನದಿಂದ ಮೊದಲಾಗಿ, ಜಪಾನ್‌ನಲ್ಲಿ ಆತನನ್ನು ಯಾರೂ ಎಂದೂ ಸೋಲಿಸುವುದು ಸಾಧ್ಯವಾಗಲಿಲ್ಲ.



ನೀರು ಸೇದುವ ಹಾಡು

ಪ ಅಂಗ್ ಯೂನ್ ಎಂಬ ಕವಿ ಹೀಗೆ ಉದ್ಗರಿಸುತ್ತಾನೆ-

ಇಕೊ ಎಂಥ ಚೋದ್ಯ, ನೋಡಿಕೊಳ್ಳುತ್ತೇನೆ,
ಇದೆಲ್ಲ ಒಂದೊಂದೂ ಅದ್ಭುತವಲ್ಲವೇನೆ-
ನೀರು ಸೇದುತ್ತೇನೆ, ಕಟ್ಟಿಗೆ ಹೊರುತ್ತೇನೆ, ನಾನೆ ನಾನೇ.

ಹೊಸ ಪುಸ್ತಕ

ಸ್ವರವಚನ ವಾಹಿನಿ ಸಂ: ೨

ಸಂ. ಎಸ್. ಶಿವಣ್ಣ

ಬೆಲೆ: ರೂ. ೫೦/-

ವಾಚನ, ಶ್ರವಣ-ಎರಡೂ ಪಾತಾಳಿಗಳಲ್ಲಿ ಜೀವಂತ ವಾಹಿನಿಯಾಗಿ ಪ್ರವಹಿಸುವ ಸ್ವರವಚನ ವಾಹಿನಿಗಳು ಉಪೇಕ್ಷಿತ ರಚನೆಗಳಾಗಿ ಬೆಳಕಿಗೆ ಬಾರದೇ ಹೋಗಿವೆ. ಇಂತಹ ವಚನಗಳು ಅನಾಮಧೇಯ ಕರ್ತೃ ಹೆಸರಿನಲ್ಲಿಯೂ ವಿಪುಲ ಪ್ರಮಾಣದಲ್ಲಿ ಸಿಗುತ್ತವೆ. ಇಂಥವುಗಳನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಮಹತ್ ಕಾರ್ಯವನ್ನು ಲೇಖಕರು ಕೈಗೊಂಡಿದ್ದಾರೆ. ಅವರ ಈ ಇತಿಹಾಸ ಸಂರಕ್ಷಣೆಯ ಕೆಲಸ ಅಭಿನಂದನೀಯವಾದುದು.

ಪ್ರಕಾಶಕರು: ಲಿಂಗಾಯತ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ.



ಶ್ರೀ ಸ್ವಾಮಿ ವಿವೇಕಾನಂದ ಹಿಂದು ಸನಾತನವಾದಿಯೇ ?

ಸಂ. ಕೋ. ಚೆನ್ನಬಸಪ್ಪ

ಬೆಲೆ: ರೂ. ೧೨/-

ಶ್ರೀ ಸ್ವಾಮಿ ವಿವೇಕಾನಂದರನ್ನು ಹಿಂದೂ ಸನಾತನವಾದಿಯೆಂಬಂತೆ ಬಿಂಬಿಸುತ್ತ ಕೋಮು ಭಾವನೆಯನ್ನು ಇನ್ನಷ್ಟು ಉದ್ದೀಪನಗೊಳಿಸುತ್ತಿರುವವರಿಗೆ ಈ ಪುಸ್ತಕ ತಕ್ಕ ಉತ್ತರ ನೀಡಬಲ್ಲದು. ಕೋಮು ಭಾವನೆಯನ್ನು ತೊಡೆದು ಪರಮತ ಸಹಿಷ್ಣುತೆ ಎಂಬ ಅಮೂಲ್ಯ ಗುಣದ ಬಗ್ಗೆ ಸ್ವಾಮೀಜಿ ಅಂದೇ ಸೂಕ್ತ ಮಾರ್ಗವನ್ನು ಸೂಚಿಸಿದ್ದರು. ಅವುಗಳನ್ನು ಒಂದೆಡೆ ಸಂಗ್ರಹಿಸಿ ಓದುಗನ ಕೈಗಿಟ್ಟಿರುವ ಖ್ಯಾತಿ ಕನ್ನಡದ ಪ್ರಸಿದ್ಧ ಲೇಖಕರಾದ ಕೋಚೆ ಅವರಿಗೆ ಸಲ್ಲಬೇಕು.

ಪ್ರಕಾಶಕರು : ನವಕರ್ನಾಟಕ ಪ್ರಕಾಶನ, ಬೆಂಗಳೂರು.



ಶಬ್ದ ಸೋಪಾನ

ಲೇ. ವಿರೂಪಾಕ್ಷಪ್ಪ ಕೋರಗಲ್

ಬೆಲೆ: ರೂ. ೨೦/-

ಶ್ರೀ ಶಿವಮೂರ್ತಿ ಮುರುಘ ರಾಜೇಂದ್ರ ಶರಣರ ಚಿಂತನೆ-ವಿಚಾರಗಳ ಹಲವು ಆಯಾಮಗಳನ್ನು ಈ ಪುಸ್ತಕದಲ್ಲಿ ಲೇಖಕರು ಪರಿಚಯಿಸಿದ್ದಾರೆ.

ಸ್ತ್ರೀ ಸಮಾನತೆ, ಜಾತ್ಯತೀತ ಸಮಾಜ ಬಸವತತ್ವಾನುಷ್ಠಾನ, ಪರಿಸರ ಜಾಗೃತಿ, ಶಿಕ್ಷಣ, ದಲಿತ ಕಾಳಜಿ ಹೀಗೆ ಶರಣರ ವಿಚಾರಗಳು ಹಲವು ಧಾರೆಗಳಲ್ಲಿ ಹೊಮ್ಮಿರುವುದನ್ನು ಇಲ್ಲಿ ದರ್ಶಿಸಬಹುದಾಗಿದೆ.

ಪ್ರಕಾಶಕರು: ಬಸವಕೇಂದ್ರ, ಶ್ರೀ ಮುರುಘಾ ರಾಜೇಂದ್ರ ಗ್ರಂಥಮಾಲೆ, ಚಿತ್ರದುರ್ಗ.

ಕಾರ್ಯಕ್ರಮ

ಲೇ. ಬಂದಗದ್ದೆ ರಾಧಾಕೃಷ್ಣ

ಬೆಲೆ: ರೂ. ೨೦/-

ಕಾರ್ಯಕ್ರಮ ಮತ್ತು ಕಾಯಿಲೆ ಎಂಬ ಎರಡು ಕಥೆಗಳನ್ನೊಳಗೊಂಡ ಈ ಪುಸ್ತಕವನ್ನು ಓದುತ್ತಿದ್ದರೆ ಸಾಗರದ ಅಪ್ಪಟ ಆಡುಮಾತು, ಸರ್ಕಾರಿ ಜೀಪುಗಳು, ಕಾರ್ಯಕ್ರಮಕ್ಕೆ ತಯಾರಾಗುತ್ತಿರುವ ಅಂಗನವಾಡಿ ಮಕ್ಕಳು, ರಸ್ತೆಯಲ್ಲಿ ತೆವಳುವ ಹಂದಿಗೋಡು ಕಾಯಿಲೆ ಪೀಡಿತ ಕಡ್ಡಿ ಮಕ್ಕಳು ಇವೆಲ್ಲಾ ಕಣ್ಣ ಮುಂದೆ ಹಾದು ಹೋದಂತೆ ಭಾಸವಾಗುತ್ತದೆ.

ಕಥೆಗಾರ ತನ್ನ ಊರನ್ನು ಬಹಳ ಸೂಕ್ಷ್ಮವಾಗಿ ಗ್ರಹಿಸಿ ಓದುಗನ ಮನಮುಟ್ಟುವಂತೆ ಕಥಾ ರೂಪಕ್ಕೆ ಇಳಿಸಿರುವುದು ಅಚ್ಚರಿ ಮೂಡಿಸುವಂತಿದೆ.

ಪ್ರಕಾಶಕರು : ಪುಸ್ತಕ ಹೊಂಬಾಳೆ, ಕೆಳದಿ, ಸಾಗರ.



ಸಾಂಸ್ಕೃತಿಕ ಮುಖಾಮುಖಿ

ಲೇ. ಡಾ|| ರಂಗರಾಜ ವನದುರ್ಗ

ಬೆಲೆ: ರೂ. ೧೦೦/-

ಕರ್ನಾಟಕದ ಸಂಸ್ಕೃತಿ, ಪರಂಪರೆಯನ್ನು ವೈಚಾರಿಕವಾಗಿ ಪ್ರಶ್ನಿಸುವ ಮತ್ತು ಪ್ರಗತಿಯನ್ನು ಜನಪರವಾಗಿ ಗ್ರಹಿಸುವ ಕೇಂದ್ರ ಪ್ರಜ್ಞೆಯನ್ನು ಇಲ್ಲಿ ಕಾಣಬಹುದು.

ಪುಸ್ತಕದ ಹೆಸರೇ ಸೂಚಿಸುವಂತೆ ಕರ್ನಾಟಕದ ಭಾಷಿಕ, ಸಾಹಿತ್ಯಿಕ, ದೈವಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ, ಭೌಗೋಳಿಕ, ರಾಜಕೀಯ ಮುಂತಾದ ಮಗ್ಗುಲುಗಳನ್ನು ಇಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ಮುಖಾಮುಖಿ ನಡೆಸಲಾಗಿದೆ.

ಪ್ರಕಾಶಕರು : ಕನಕ ಸಾಹಿತ್ಯ ಪ್ರತಿಷ್ಠಾನ, ಬೆಂಗಳೂರು.

ಎಡ್ವರ್ಡ್ ಸೈದ್

ಲೇ. ಶೆಲ್ಲಿವಾಲಿಯಾ

ಅನು : ರಾಮಲಿಂಗಪ್ಪ ಟಿ. ಬೇಗೂರು

ಬೆಲೆ: ರೂ. ೫೦/-

ಸಾಹಿತ್ಯ, ಸಂಗೀತ, ಇತಿಹಾಸ, ತತ್ವಶಾಸ್ತ್ರ ಈ ಎಲ್ಲ ಶಿಸ್ತುಗಳನ್ನೂ ಒಳಗೊಂಡ ಸಂಸ್ಕೃತಿ ಚರಿತ್ರೆ ಮತ್ತು ಸಮಕಾಲೀನ ಜಾಗತಿಕ ರಾಜಕಾರಣಗಳ ಆಳ ಜ್ಞಾನವುಳ್ಳ ಸೈದ್‌ನ ಚಿಂತನೆಗಳನ್ನು ಈ ಪುಸ್ತಕದಲ್ಲಿ ಕಾಣಬಹುದು.

ಸೈದ್‌ನ ದೃಷ್ಟಿ ಧೋರಣೆಗಳನ್ನು ಪರಿಚಯಿಸುವಲ್ಲಿ ಚಂಡೀಗಢದ ಲೇಖಕರಾದ ಶೆಲ್ಲಿ ವಾಲಿಯಾ ಬಹುತೇಕ ಯಶಸ್ಸು ಸಾಧಿಸಿದ್ದಾರೆ.

ಅದನ್ನು ಕನ್ನಡಿಗರಿಗೆ ಪರಿಚಯಿಸಿದ ಕೀರ್ತಿ ರಾಮಲಿಂಗಪ್ಪ ಟಿ. ಬೇಗೂರು ಅವರಿಗೆ ಸಲ್ಲುತ್ತದೆ.

ಪ್ರಕಾಶಕರು : ಅಧ್ಯಯನ ಮಂಡಲ ಮತ್ತು ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.



ವಿವೇಕಾನಂದರ ವಿಚಾರಗಳು

ವೇದ, ಬೈಬಲ್, ಖುರಾನ್ ಗಳು, ಪುರಾಣಗಳು, ಎಲ್ಲಾ ಪವಿತ್ರ ಗ್ರಂಥ ರಾಶಿಗಳೂ ಕೊಂಚ ಕಾಲದವರೆಗೆ ವಿಶ್ರಾಂತಿ ಪಡೆಯಲಿ. ದೇಶ ವೆಲ್ಲ ದಯೆ ಮತ್ತು ಪ್ರೇಮದ ಪ್ರತ್ಯಕ್ಷ ದೇವರನ್ನು ಆರಾಧಿಸಲಿ. ವಿಭಕ್ತವಾಗಿ ರುವ ಪ್ರತಿಯೊಂದು ಭಾವನೆಯೂ ಬಂಧನ ಕಾರಿ, ಭೇದರಹಿತವಾದ ಪ್ರತಿಯೊಂದು ಭಾವನೆಯೂ ಮುಕ್ತಿ ಪ್ರಾಪಂಚಿಕತೆಯಿಂದ ಪೂರ್ಣಮತ್ತ ರಾಗಿರುವ ಜನಗಳ ಮಾತು ಭಯಗೊಳಿಸದಿರಲಿ. ಚರಿತ್ರೆ, ಸಾಹಿತ್ಯ, ಪುರಾಣ ಮುಂತಾದ ಶಾಸ್ತ್ರಗ್ರಂಥಗಳೆಲ್ಲಾ ಮನುಷ್ಯನಿಗೆ ಕೇವಲ ಭಯವನ್ನೇ ತೋರಿಸುತ್ತವೆ.

ಸಂಗ್ರಹ:
ಜ.ಹೊ. ನಾರಾಯಣಸ್ವಾಮಿ

ಎಲ್ಲಾ ಪವಿತ್ರ ಗ್ರಂಥ ರಾಶಿಗಳೂ ಕೊಂಚ ಕಾಲ ವಿಶ್ರಾಂತಿ ಪಡೆಯಲಿ

ಬುದ್ಧಿ ಆವಶ್ಯಕ. ಏಕೆಂದರೆ ಅದು ಇಲ್ಲದೇ ಇದ್ದರೆ ನಾವು ಅನೇಕ ಮೂಢನಂಬಿಕೆಗಳಿಗೆ ಬೀಳುತ್ತೇವೆ. ಎಷ್ಟೋ ತಪ್ಪುಗಳನ್ನು ಮಾಡುತ್ತೇವೆ. ಬುದ್ಧಿ ಇದನ್ನು ತಡೆಯುತ್ತದೆ.

ವೇದ, ಬೈಬಲ್, ಖುರಾನ್‌ಗಳು, ಪುರಾಣಗಳು, ಎಲ್ಲಾ ಪವಿತ್ರ ಗ್ರಂಥ ರಾಶಿಗಳೂ ಕೊಂಚ ಕಾಲದವರೆಗೆ ವಿಶ್ರಾಂತಿ ಪಡೆಯಲಿ. ದೇಶ ವೆಲ್ಲ ದಯೆ ಮತ್ತು ಪ್ರೇಮದ ಪ್ರತ್ಯಕ್ಷ ದೇವರನ್ನು ಆರಾಧಿಸಲಿ. ವಿಭಕ್ತವಾಗಿ ರುವ ಪ್ರತಿಯೊಂದು ಭಾವನೆಯೂ ಬಂಧನಕಾರಿ, ಭೇದರಹಿತವಾದ ಪ್ರತಿಯೊಂದು ಭಾವನೆಯೂ ಮುಕ್ತಿ, ಪ್ರಾಪಂಚಿಕತೆಯಿಂದ ಪೂರ್ಣಮತ್ತ ರಾಗಿರುವ ಜನಗಳ ಮಾತು ಭಯಗೊಳಿಸದಿರಲಿ.

ಚರಿತ್ರೆ, ಸಾಹಿತ್ಯ, ಪುರಾಣ ಮುಂತಾದ ಶಾಸ್ತ್ರಗ್ರಂಥಗಳೆಲ್ಲಾ ಮನುಷ್ಯನಿಗೆ ಕೇವಲ ಭಯವನ್ನೇ ತೋರಿಸುತ್ತವೆ. ಅವನನ್ನು ಕುರಿತು 'ನೀನು ನರಕಕ್ಕೆ ಹೋಗುವೆ, ನಿನಗೆ ಇನ್ನು ಮಾರ್ಗವಿಲ್ಲ' ಎಂದು ಮಾತ್ರ ಹೇಳುತ್ತವೆ. ಆದ್ದರಿಂದಲೇ ಈ ಉತ್ಸಾಹ ರಾಹಿತ್ಯವೂ, ದೌರ್ಬಲ್ಯವೂ ಭರತಖಂಡಕ್ಕೆ ಅಸ್ಥಿಗತವಾಗಿಬಿಟ್ಟಿದೆ. ಆದ ಕಾರಣ ವೇದ ವೇದಾಂತಗಳ ಉಚ್ಚ ಭಾವಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿ ಕೊಡಬೇಕಾಗಿದೆ.

ಜನಾಂಗವನ್ನು ಎಚ್ಚರಿಸಬೇಕು. ನಾವು ಜಗತ್ತನ್ನು ಎಚ್ಚರಿಸಬೇಕು. ಕಾಡುಹರಟೆ ಕೆಲಸಕ್ಕೆ ಬಾರದ ಪೂಜೆ ಮುಂತಾದುವುಗಳು ಸಾಕು.

ಕೇವಲ ಮಕ್ಕಳನ್ನು ಹುಟ್ಟಿಸಿದರೆ ತಂದೆಯಾಗುವುದಿಲ್ಲ. ನಮ್ಮ ಹೆಗಲ ಮೇಲೆ ಅತ್ಯಂತ ದೊಡ್ಡ ಜವಾಬ್ದಾರಿಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆಹಾರ ವಸ್ತುಗಳ ಅಭಾವದಿಂದ ಇಡೀ ದೇಶವೇ ಹಾಹಾಕಾರದಿಂದ ತುಂಬಿದೆ. ದೇಶ ಅಧೋಗತಿಗಿಳಿದಿದೆ. ಇದನ್ನು ಪರಿಹರಿಸಲು ನೀವೇನು ಮಾಡುತ್ತಿರುವಿರಿ? ಗಂಗೆಯಲ್ಲಿ ನಿಮ್ಮ ಶಾಸ್ತ್ರವನ್ನು ಬಿಸುಟು ಜನರಿಗೆ ಮೊದಲು ಅವರ ಅನ್ನ ವಸ್ತ್ರ ಸಂಪಾದಿಸುವ ಹಾದಿಯನ್ನು ಬೋಧಿಸಿ.

ಜಾತಿಯು ಇರಬೇಕೆ ಹೋಗಬೇಕೆ ಎಂಬ ಪ್ರಶ್ನೆಗೂ ನನಗೂ ಸಂಬಂಧವಿಲ್ಲ. ಅತಿ ದೀನನೂ ದರಿದ್ರನೂ ಆದವನ ಮನೆಯ ಬಾಗಿಲಿಗೆ ಭರತಖಂಡದಲ್ಲಿ ಮತ್ತು ಹೊರಗೆ ಮಹಾ ವ್ಯಕ್ತಿಗಳು ಆಲೋಚಿಸಿದ ಮಹಾಭಾಗವನ್ನು ಒದಗಿಸಬೇಕೆಂಬುದೇ ನನ್ನ ಬಯಕೆ. ಅನಂತರ ಅವರೇ ಆಲೋಚಿಸಲಿ, ಜಾತಿ ಇರಬೇಕೆ ಬೇಡವೇ ಎಂದು. ಜೀವನ, ಅದರ ಬೆಳವಣಿಗೆ ಮತ್ತು ಅದು ಆರೋಗ್ಯದಿಂದ ಇರುವುದಕ್ಕೆ ಸ್ವತಂತ್ರ ಆಲೋಚನೆ ಮತ್ತು ಕಾರ್ಯ ಅತ್ಯಾವಶ್ಯಕ. ಇದು ಎಲ್ಲಿ ಇಲ್ಲವೋ ಅಲ್ಲಿಯ ಮನುಷ್ಯ, ಅಲ್ಲಿಯ ಜನಾಂಗ, ಅಲ್ಲಿಯ ದೇಶ ಅವನತಿಗೆ ಇಳಿಯುವುದು?

ನಮಗೆ ನಾವೇ ಮಿತಿಯನ್ನು ಕಲ್ಪಿಸಿಕೊಳ್ಳುತ್ತಿರುವೆವು. ಅದೇ ನಮ್ಮ ಕೊರಳಿಗೆ ಕಟ್ಟಿದ ಸರಪಳಿಯಂತೆ ನಮ್ಮನ್ನು ಈ ಸ್ಥಿತಿಗೆ ತಂದಿರುವುದು. ಆ ಸರಪಳಿಯನ್ನು ಕಿತ್ತುಹಾಕಿ ಸ್ವತಂತ್ರರಾಗಿ, ನಿಯಮವೆಂಬುದನ್ನು ನಿಮ್ಮ ಕಾಲಿಂದ ತುಳಿಯಿರಿ. ಮಾನವ ಪ್ರಕೃತಿಯಲ್ಲಿ ನಿಯಮವೆಂಬುದಿಲ್ಲ, ಹಣೆಯ ಬರಹವೆಂಬುದಿಲ್ಲ, ಅದೃಷ್ಟವೆಂಬುದಿಲ್ಲ. ಅನಂತದಲ್ಲಿ ನಿಯಮ ಹೇಗೆ ಬರುವುದು? ಸ್ವಾತಂತ್ರ್ಯವೇ ಅದರ ಪಲ್ಲವಿ. ಅದರ ಸ್ವಭಾವವೇ ಸ್ವಾತಂತ್ರ್ಯ. ಸ್ವಾತಂತ್ರ್ಯವೇ ಅದರ ಆಜನ್ಮಸಿದ್ಧ ಹಕ್ಕು. ಮೊದಲು ಸ್ವತಂತ್ರರಾಗಿ... ಯಾರಿಂದಲೂ ಏನನ್ನೂ ನಿರೀಕ್ಷಿಸಬೇಡಿ. ಇದುವರೆಗೆ ನಿಮಗೆ ಆಗಿರುವುದನ್ನು ಪರೀಕ್ಷೆ ಮಾಡಿ ನೋಡಿದರೆ, ಎಂದೆಂದಿಗೂ ಬರದ ಇನ್ನೊಬ್ಬರ ಸಹಾಯಕ್ಕೆ ನೀವು ನೆಚ್ಚಿ ಕುಳಿತುದು ನಿರರ್ಥಕ ವೆಂಬುದು ನಿಮಗೆ ಗೊತ್ತಾಗುವುದರಲ್ಲಿ ನನಗೆ ಸಂದೇಹವೇ ಇಲ್ಲ. ಬಂದ ಸಹಾಯವೂ ನಿಮ್ಮ ಒಳಗಿನಿಂದಲೇ ಬಂದಿದೆ. ನೀವು ಯಾವುದಕ್ಕೆ ಪ್ರಯತ್ನಪಟ್ಟಿರೋ ಅದರ ಪ್ರತಿಫಲ ಮಾತ್ರ ನಿಮಗೆ ಸಿಕ್ಕಿತು... ನಮ್ಮನ್ನು ಬಂಧಿಸಿದ ಬೇಡಿಗಳನ್ನು ಇದುವರೆವಿಗೂ ನಾವೇ ಕಟ್ಟಿಸಿಕೊಳ್ಳುತ್ತಿರುವೆವು.

ಸ್ವರ್ಗವಿದೆಯೋ ನರಕವಿದೆಯೋ ಎಂಬುದು ಯಾರಿಗೆ ಬೇಕು? ಆತ್ಮನಿರುವನೋ, ಇಲ್ಲವೋ ಅದರಿಂದ ಏನಾಗಬೇಕು? ಶಾಶ್ವತವಾದ ಒಂದು ವಸ್ತುವಿದೆಯೋ ಇಲ್ಲವೋ ಯಾರಿಗೆ ಬೇಕದು? ನಮ್ಮ ಕಣ್ಣೆದುರಿಗೆ ಪ್ರಪಂಚವಿದೆ. ಅದು ದುಃಖದಿಂದ ತುಂಬಿ ತುಳುಕಾಡುತ್ತಿದೆ. ಬುದ್ಧನಂತೆ ಅದರಲ್ಲಿ ಪ್ರವೇಶಿಸಿ ದುಃಖವನ್ನು ಕಡಿಮೆ ಮಾಡಲು ಪ್ರಯತ್ನಿಸಿ, ಇಲ್ಲವಾದರೆ ಆ ಮಹಾಪ್ರಯತ್ನದಲ್ಲಿ ನಿಮ್ಮ ಪ್ರಾಣವನ್ನು ಕೊಡಿ. ಮೊದಲು ನಿಮ್ಮನ್ನು ನೀವು ಮರೆಯಿರಿ; ನೀವು ಆಸ್ತಿಕರೋ, ನಾಸ್ತಿಕರೋ ಯಾರಾದರಾಗಲಿ, ಕಲಿಯಬೇಕಾದ ಮೊದಲ ಪಾಠವಿದು. ಮೊದಲು ಕ್ಷುದ್ರಾತ್ಮನ ನಾಶ, ಅನಂತರ ಅಲ್ಲಿ ನಿಜವಾದ ಆತ್ಮನ ಸ್ಥಾಪನೆ. ಎಲ್ಲರೂ ನಿಸ್ಸಂದೇಹವಾಗಿ ಕಲಿಯಬೇಕಾದ ಬುದ್ಧಿ ವಾದವಿದು.

ಒಂದು ಚರ್ಚಿನಲ್ಲಿ ಹುಟ್ಟುವುದು ಒಳ್ಳೆಯದು. ಆದರೆ ಅಲ್ಲೇ ಸಾಯುವುದು ಕೆಟ್ಟದ್ದು. ಯುವಕನು ಚರ್ಚಿಗೆ ಹೋಗದೆ ಇದ್ದರೆ ಅವನನ್ನು ಬಲಾತ್ಕರಿಸಬೇಕು. ಆದರೆ ವೃದ್ಧನು ಇನ್ನೂ ಚರ್ಚಿಗೆ ಹೋಗುತ್ತಿದ್ದರೆ ಅವನಿಗೆ ಬುದ್ಧಿಯನ್ನು ಹೇಳಬೇಕು.

ಆ ಹಿಂದಿನ ಜನರೆಲ್ಲ ಭಗವಂತನ ಸಂದೇಶಕರು. ನಾನು ಅವರಿಗೆ ಅಡ್ಡಬಿದ್ದು ಪೂಜಿಸುವೆನು. ಅವರ ಪಾದಧೂಳಿಯನ್ನು ತೆಗೆದುಕೊಳ್ಳು ವೆನು. ಆದರೆ ಅವರು ಕಾಲವಾಗಿ ಹೋಗಿರುವರು. ನಾವು ಬದುಕಿರು ವೆವು. ನಾವು ಮುಂದೆ ಹೋಗಬೇಕು. ಧರ್ಮ ಜೀಸಸ್ ಅಥವಾ ಮಹಮ್ಮದನನ್ನು ಅನುಸರಿಸುವುದಿಲ್ಲ. ಒಂದು ವೇಳೆ ಅನುಕರಣ ಚೆನ್ನಾಗಿ ದ್ದರೂ ಅದು ಸಾಚಾ ಅಲ್ಲ. ಜೀಸಸ್ಸಿನ ಒಂದು ಅನುಕರಣ ಆಗಬೇಡಿ. ನಿಜವಾಗಿಯೂ ಜೀಸಸ್ ಆಗಿ. ನೀವು ಜೀಸಸ್, ಬುದ್ಧ ಅಥವಾ ಇತರ ರಂತೆಯೇ ದೊಡ್ಡವರು. ನಾವು ಹಾಗೆ ಇಲ್ಲದೆ ಇದ್ದರೆ ಹಾಗಾಗುವವರೆಗೆ ಪ್ರಯತ್ನಿಸಬೇಕು. ನಾನು ಜೀಸಸ್ಸಿನ ಹಾಗೆಯೇ ಇರುವುದಕ್ಕೆ ಇಚ್ಛಿಸು ವುದಿಲ್ಲ. ನಾನು ಜ್ಯೂ ಆಗಿರುವುದರಿಂದ ಹಾಗೆ ಆಗಬೇಕಾದ ಅವಶ್ಯ ಕತೆಯೂ ಇಲ್ಲ. ಶ್ರೇಷ್ಠವಾದ ಧರ್ಮವೇ ನಿಮ್ಮ ಸ್ವಭಾವಕ್ಕೆ ಸಹಜ ವಾಗಿರುವುದು. ಆತ್ಮಶ್ರದ್ಧೆ ಇರಲಿ. ನೀನೇ ಇರದೆ ಇದ್ದರೆ ದೇವರು ಅಥವಾ ಮತ್ತೆ ಯಾರಾದರೂ ಹೇಗೆ ಇರಬಲ್ಲರು?... ಈ ಮಹಾಪುರುಷರು ದಾರಿಯಲ್ಲಿರುವ ಕೈಮರಗಳಂತೆ, ಅಷ್ಟೇ ! ಸಹೋದರರೇ ಅವರು ಮುಂದೆ ಹೋಗಿ ಎಂದು ಹೇಳುವರು. ನಾವು ನಮ್ಮ ದಾರಿಯನ್ನು ಹಿಡಿದು ಹೋಗಬೇಕಾಗಿದೆ.

ಭರತಖಂಡದಲ್ಲಿ ಇರುವವರೆಲ್ಲ ಬರಿಯ ಶಿಖಂಡಿಗಳು ಮತ್ತು ಸ್ತ್ರೀಯರು ಎಂಬುದು ನನಗೆ ಗೊತ್ತಿದೆ. ಬಾಲ್ಯದಿಂದ ಈ ಕೋಮಲ ಸ್ವಭಾವದ ಸಂಗೀತವನ್ನು ಕೇಳಿ ಕೇಳಿ, ಕೀರ್ತನೆಗಳನ್ನು ಕೇಳಿ ದೇಶವೆಲ್ಲಾ ನಾರಿಯರ ದೇಶವಾಗಿ ಪರಿಣಮಿಸಿದೆ. ಇದಕ್ಕಿಂತ ಬೇರೆ ಅಧೋಗತಿ ಯಾವುದಿದೆ?... ತಮಟೆ, ಕಹಳೆಯನ್ನು ಕೂಗಿಸಬೇಕು. ತಮಟೆಗಳನ್ನು ರಣರಂಗದಲ್ಲಿ ಬಾರಿಸಿದಂತೆ ಬಾರಿಸಬೇಕು. ಮಾನವನ ಮೃದು ಹೃದಯವನ್ನು ಮಿಡಿಯುವಂತಹ ಸಂಗೀತ ಇಂದು ನಮಗೆ ಬೇಕಾಗಿಲ್ಲ. ಗೆಜ್ಜೆ ಧ್ವನಿಗಳ ನಾಟ್ಯ ಸಂಗೀತವನ್ನು ನಿಲ್ಲಿಸಿ, ದ್ರುಪದ ಸಂಗೀತಕ್ಕೆ ಕಿವಿ ಕೊಡುವಂತೆ ಮಾಡಬೇಕು. ...ಪ್ರತಿಯೊಂದರಲ್ಲಿಯೂ ಪುರುಷ ಸಿಂಹನ ಕೆಚ್ಚೆದೆ ವ್ಯಕ್ತವಾಗುವಂತೆ ಮಾಡಲೇಬೇಕು.

ಇಂಡಿಯಾ ದೇಶ ಸಂಗೀತದಲ್ಲಿ, ನಾಟಕದಲ್ಲಿ, ಶಿಲ್ಪಕಲೆಗಳ ಲ್ಲಿಯೂ ಮುಂದುವರಿದಿತ್ತು. ಈಗ ಏನಾದರೂ ಅದು ಬರೀ ಅನುಕರಣೆ. ಈಗ ಭರತಖಂಡದಲ್ಲಿ ಪ್ರತಿಯೊಂದು ನಮಗೆ ಎಷ್ಟು ಕಡಿಮೆ ಸಾಕು ಎಂಬ ಭಾವನೆಯ ಮೇಲೆ ನಿಂತಿದೆ.

ದೇಶ, ಸಮಾಜ

ನಾಯಿ ಬಣಬೆಗಳಂತೆ ಧರ್ಮಪಂಗಡಗಳು ಬೆಳೆಯುವ ದೇಶ ನಮ್ಮ ತಾಯ್ನಾಡು.

ಗೋರಕ್ಷಣೀ ಸಭೆಯ ಪ್ರಚಾರಕನೊಂದಿಗೆ :

ಸ್ವಾಮೀಜಿ : ತಮ್ಮ ಸಭೆಯ ಉದ್ದೇಶವೇನು?

ಪ್ರಚಾರಕ : ನಮ್ಮ ದೇಶದ ಗೋಮಾತೆಯನ್ನು ಕಟುಕರ ಕೈಯಿಂದ ತಪ್ಪಿಸಿ ಕಾಪಾಡುತ್ತಿದ್ದೇವೆ. ಅಲ್ಲಲ್ಲಿ ದೊಡ್ಡಿಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಖಾಯಿಲೆಯ, ಕೈಲಾಗದ ಮತ್ತು ಕಟುಕರಿಂದ ಕೊಂಡು ತಂದ ಗೋ ಮಾತೆಯರನ್ನು ರಕ್ಷಿಸುತ್ತೇವೆ.

ಸ್ವಾಮೀಜಿ : ಇದು ಬಹಳ ಒಳ್ಳೆಯ ಕೆಲಸ; ತಮ್ಮ ಸಂಪಾದನೆಗೆ ಮಾರ್ಗ?

ಪ್ರಚಾರಕ : ದಯಾಪರರಾದ ತಮ್ಮಂಥವರು ಏನಾದರೂ ಕೊಡುತ್ತಾರೆಯಲ್ಲ, ಅದರಿಂದಲೇ ಸಭೆಯ ಈ ಕಾರ್ಯ ನಡೆಯುವುದು.

ಸ್ವಾಮೀಜಿ : ನಿಮ್ಮ ಹತ್ತಿರ ಮೂಲಧನ ಎಷ್ಟು ಇದೆ?

ಪ್ರಚಾರಕ : ಮಾರವಾಡಿ ವರ್ತಕರು ಈ ಕಾರ್ಯಕ್ಕೆ ಒಳ್ಳೆಯ ಪೋಷಕರಾಗಿದ್ದಾರೆ. ಅವರು ಈ ಸತ್ಕಾರ್ಯಕ್ಕಾಗಿ ಬಹುದ್ರವ್ಯವನ್ನು ಕೊಟ್ಟಿದ್ದಾರೆ.

ಸ್ವಾಮೀಜಿ : ಮಧ್ಯ ಹಿಂದೂಸ್ಥಾನದಲ್ಲಿ ಭಯಂಕರವಾದ ಕ್ಷಾಮ ಬಂದಿದೆ. ಹೊಟ್ಟೆಗಿಲ್ಲದೆ ಒಂದು ಲಕ್ಷ ಜನರು ಸತ್ತು ಹೋದರೆಂದು ಇಂಡಿಯಾ ಸರ್ಕಾರ ದವರು ಪಟ್ಟಿಕೊಟ್ಟಿದ್ದಾರೆ. ನಿಮ್ಮ ಸಭೆ ಈ ದುರ್ಭಿಕ್ಷ ಕಾಲದಲ್ಲಿ ಏನಾದರೂ ಸಹಾಯ ಮಾಡುವುದಕ್ಕೆ ಏರ್ಪಾಡು ಮಾಡಿದೆಯೇನು?

ಪ್ರಚಾರಕ : ನಾವು ದುರ್ಭಿಕ್ಷ ಮೊದಲಾದುವುಗಳಲ್ಲಿ ಸಹಾಯ ಮಾಡುವುದಿಲ್ಲ, ಕೇವಲ ಗೋಮಾತೆಯ ರಕ್ಷಣೆಗೆ ಈ ಸಭೆ ಸ್ಥಾಪಿಸಲ್ಪಟ್ಟಿರುವುದು.

ಸ್ವಾಮೀಜಿ : ಅಣ್ಣತಮ್ಮಂದಿರಾದ ನಿಮ್ಮ ದೇಶದ ಜನರು ಲಕ್ಷಗಟ್ಟಲೆ ಮೃತ್ಯುವಿನ ಬಾಯಲ್ಲಿ ಬೀಳುತ್ತಿರಲು, ಕೈಯಲ್ಲಾಗುತ್ತಿದ್ದರೂ ಇಂಥ ಭಯಂಕರವಾದ ದುಷ್ಕಾಲದಲ್ಲಿ ಅವರಿಗೆ ಅನ್ನ ಕೊಟ್ಟು ಸಹಾಯ ಮಾಡುವುದು ಯುಕ್ತವೆಂದು ನಿಮಗೆ ತೋರಲಿಲ್ಲವೇ?

ಪ್ರಚಾರಕ : ಇಲ್ಲ, ಜನರ ಕರ್ಮಫಲದಿಂದ, ಪಾಪದಿಂದ ಈ ಕ್ಷಾಮ ಬಂದಿದೆ. ಕರ್ಮಕ್ಕೆ ತಕ್ಕ ಫಲವಾಗಿದೆ.

ಸ್ವಾಮೀಜಿ : ಯಾವ ಸಭಾ ಸಮಿತಿಗಳು ಮನುಷ್ಯರಲ್ಲಿ ಸಹಾನುಭೂತಿಯನ್ನು ತೋರದೆ, ತಮ್ಮ ಅಣ್ಣ ತಮ್ಮಂದಿರು ಹೊಟ್ಟೆಗಿಲ್ಲದೆ ಸಾಯುತ್ತಿದ್ದಾರೆಂದು ನೋಡಿಯೂ ಅವರ ಜೀವವನ್ನು ಉಳಿಸುವುದಕ್ಕಾಗಿ ಒಂದು ತುತ್ತು ಅನ್ನವನ್ನು ಕೊಡದೆ ಪಶು ಪಕ್ಷಿಗಳ ರಕ್ಷಣೆಗಾಗಿ ರಾಶಿ ರಾಶಿ ಅನ್ನವನ್ನು ದಾನ ಮಾಡುತ್ತವೆಯೋ ಅವುಗಳೊಡನೆ ನನಗೆ ಸ್ವಲ್ಪವೂ ಸಹಾನುಭೂತಿಯಿಲ್ಲ, ಅವುಗಳಿಂದ ಸಮಾಜಕ್ಕೆ ಹೆಚ್ಚು ಉಪಕಾರವಾಗುತ್ತದೆಂದು ನಾನು ನಂಬುವುದಿಲ್ಲ. ಕರ್ಮಫಲದಿಂದ ಜನರು ಸಾಯುತ್ತಾರೆ. ಹೀಗೆ ಕರ್ಮದ ನೆವವನ್ನು ಹೇಳುವುದಾದರೆ ಜಗತ್ತಿನ ಯಾವ ವಿಷಯದಲ್ಲಿಯೂ ಕೆಲಸ ಮಾಡುವುದೆ ನಿಷ್ಪ್ರಯೋಜಕವೆಂದು ಒಟ್ಟಿಗೆ ನಿಶ್ಚಯಿಸಬಹುದು. ನಿಮ್ಮ ಪಶುರಕ್ಷಣೆಯ ಕೆಲಸವೂ ಆಮೇಲೆ ನಡೆಯುವುದಿಲ್ಲ. ಈ ಕೆಲಸದ ವಿಚಾರದಲ್ಲಿಯೂ ಗೋಮಾತೆಗಳು ತಮ್ಮ ತಮ್ಮ ಕರ್ಮಫಲದಿಂದಲೇ ಕಟುಕರ ಕೈಗೆ ಹೋಗುತ್ತವೆ ಮತ್ತು ಸಾಯುತ್ತವೆ; ಆದ್ದರಿಂದ ಅದಕ್ಕೆ ನಾವು ಏನೂ ಮಾಡಬೇಕಾದ ಅವಶ್ಯಕತೆಯಿಲ್ಲ ಎಂದು ಹೇಳಬಹುದು.

ರೈತರ ಹುಡುಗ ವಿದ್ಯಾಭ್ಯಾಸಕ್ಕೆ ಬರದೆ ಇದ್ದರೆ, ಅವನು ಉಳುತ್ತಿರುವಲ್ಲೋ, ಕಾರ್ಖಾನೆಗಳಲ್ಲೋ ಅಥವಾ ಅವನು ಎಲ್ಲಿರುವನೋ ಅಲ್ಲಿ ಏತಕ್ಕೆ ಕೊಡಬಾರದು ? ನೆರಳಿನಂತೆ ಅವನನ್ನು ಹಿಂಬಾಲಿಸಿ ಆಧ್ಯಾತ್ಮಿಕ ವಿದ್ಯೆಯನ್ನು ಹರಡುತ್ತಿರುವ ನೂರಾರು, ಸಾವಿರಾರು ಮಂದಿ ಸನ್ಯಾಸಿಗಳಿರುವರು. ಇವರು ಏತಕ್ಕೆ ವ್ಯವಹಾರ ಜ್ಞಾನ ಕ್ಷೇತ್ರಗಳಲ್ಲಿಯೂ ಇದನ್ನು ಮಾಡಬಾರದು? ಜನರ ಮುಂದೆ ಇತಿಹಾಸ ಮುಂತಾದ ವಿಷಯಗಳ ಮೇಲೆ ಏತಕ್ಕೆ ಮಾತನಾಡಬಾರದು. ಶ್ರವಣವೆ ಅತ್ಯುತ್ತಮ ಶಿಕ್ಷಣ.

ಪ್ರಚಾರಕ : ತಾವು ಹೇಳುವುದು ಸರಿ. ಆದರೆ ಹಸು ನಮಗೆ 'ತಾಯಿ' ಎಂದು ಶಾಸ್ತ್ರ ಹೇಳುತ್ತದೆ.

ಸ್ವಾಮೀಜಿ : ಹಸು ನಮ್ಮ ತಾಯಿ ಎಂಬುದನ್ನು ನಾನು ವಿಲಕ್ಷಣವಾಗಿ ಅರ್ಥಮಾಡಿಕೊಂಡಿದ್ದೇನೆ- ಇಲ್ಲದಿದ್ದರೆ ಇಂಥ ಧನ್ಯರಾದ ಪುತ್ರರನ್ನೆಲ್ಲಾ ಇನ್ನು ಯಾರು ಹೆತ್ತಾರು?

ನಮ್ಮ ದೇಶದಲ್ಲಿ ಕ್ಷಾಮ ಒಂದು ನಿರಂತರ ವಿಪತ್ತಾಗಿತ್ತು, ಈಗ ಅದು ರೋಗವಾಗಿ ಪರಿಣಮಿಸಿದೆ. ಇನ್ನಾವ ದೇಶದಲ್ಲಾದರೂ ಕ್ಷಾಮದ ಹಾವಳಿ ಮೇಲಿಂದ ಮೇಲೆ ಸಂಭವಿಸುವುದನ್ನು ನೋಡಿರುವೆಯೊ? ಇಲ್ಲ, ಏಕೆಂದರೆ ಇತರ ದೇಶಗಳಲ್ಲಿ ಮನುಷ್ಯರಿದ್ದಾರೆ. ನಮ್ಮ ದೇಶದಲ್ಲಾದರೋ ಜನರು ಜಡರಾಗಿ ನಿರ್ಜೀವ ವಸ್ತುಗಳಾಗಿದ್ದಾರೆ. ಪಾಶ್ಚಾತ್ಯ ಮತ್ತು ಪೌರಾತ್ಯ ದೇಶಗಳಿಗೆ ಇರುವ ವ್ಯತ್ಯಾಸ ಮುಖ್ಯವಾಗಿ ಇವು- ಅವರು ಒಂದು ಜನಾಂಗ, ನಾವು ಒಂದು ಜನಾಂಗವಾಗಿಲ್ಲ.

ಹಳ್ಳಿ, ರೈತ, ಜನಸಾಮಾನ್ಯ

ಭರತಖಂಡದ ಜನಸಾಮಾನ್ಯರನ್ನು ಹೇಗೆ ಮುಟ್ಟುವುದು ಎಂಬುದು ಈಗ ನನ್ನ ಯೋಚನೆ. ಬಡವರಿಗಾಗಿ ನೀವು ಪಾಠಶಾಲೆಗಳನ್ನು ದೇಶದಲ್ಲೆಲ್ಲಾ ಸ್ಥಾಪಿಸಿದಿರೆಂದು ಇಟ್ಟುಕೊಳ್ಳೋಣ. ಆದರೂ ನೀವು ಅವರಿಗೆ ವ್ಯಾಸಂಗವನ್ನು ಕೊಡಲಾರಿರಿ. ಅದು ನಿಮಗೆ ಹೇಗೆ ಸಾಧ್ಯ ? ನಾಲ್ಕು ವರ್ಷಗಳ ಹುಡುಗ ಶಾಲೆಗೆ ಹೋಗುವುದಕ್ಕೆ ಬದಲಾಗಿ ಉಳುವುದಕ್ಕೋ ಅಥವಾ ಮತ್ತಾವುದಕ್ಕೋ ಹೋಗುವನು. ಅವನು ನಿಮ್ಮ ಶಾಲೆಗೆ ಹೋಗಲಾರ. ಅದು ಅಸಾಧ್ಯ. ದೇಹರಕ್ಷಣೆ ಮೊದಲ ಹುಟ್ಟುಗುಣ. ಬೆಟ್ಟ ಮಹಮ್ಮದನ ಹತ್ತಿರ ಹೋಗದಿದ್ದರೆ ಮಹಮ್ಮದನೇ ಬೆಟ್ಟದ ಹತ್ತಿರಕ್ಕೆ ಹೋಗಬೇಕು. ಮನೆಯಿಂದ ಮನೆಗೆ ವಿದ್ಯಾಭ್ಯಾಸ ಏತಕ್ಕೆ ಹೋಗಬಾರದು ಎನ್ನುತ್ತೇನೆ. ರೈತರ ಹುಡುಗ ವಿದ್ಯಾಭ್ಯಾಸಕ್ಕೆ ಬರದೆ ಇದ್ದರೆ, ಅವನು ಉಳುತ್ತಿರುವಲ್ಲೋ, ಕಾರ್ಖಾನೆಗಳಲ್ಲೋ ಅಥವಾ ಅವನು ಎಲ್ಲಿರುವನೋ ಅಲ್ಲಿ ಏತಕ್ಕೆ ಕೊಡಬಾರದು ?

ನೆರಳಿನಂತೆ ಅವನನ್ನು ಹಿಂಬಾಲಿಸಿ ಆಧ್ಯಾತ್ಮಿಕ ವಿದ್ಯೆಯನ್ನು ಹರಡುತ್ತಿರುವ ನೂರಾರು, ಸಾವಿರಾರು ಮಂದಿ ಸನ್ಯಾಸಿಗಳಿರುವರು. ಇವರು ಏತಕ್ಕೆ ವ್ಯವಹಾರ ಜ್ಞಾನ ಕ್ಷೇತ್ರಗಳಲ್ಲಿಯೂ ಇದನ್ನು ಮಾಡಬಾರದು? ಜನರ ಮುಂದೆ ಇತಿಹಾಸ ಮುಂತಾದ ವಿಷಯಗಳ ಮೇಲೆ ಏತಕ್ಕೆ ಮಾತನಾಡಬಾರದು. ಶ್ರವಣವೆ ಅತ್ಯುತ್ತಮ ಶಿಕ್ಷಣ. ಅವರು (ಕೆಳದರ್ಜೆಯಲ್ಲಿರುವವರು) ಪ್ರಪಂಚದಲ್ಲಿ ಇರುವವರಲ್ಲೆಲ್ಲಾ ಅತಿ ಶಾಂತ ಸ್ವಭಾವದವರು. ಅವರು ಹೇಡಿಗಳೆಂದಲ್ಲ, ಅವರು ಯುದ್ಧ ಮಾಡಬೇಕಾದರೆ ರಾಕ್ಷಸರಂತೆ ಯುದ್ಧ ಮಾಡುವರು. ಇಂಗ್ಲಿಷರ ಅಧೀನದಲ್ಲಿರುವ ಅತ್ಯುತ್ತಮ ಸಿಪಾಯಿಗಳು ಭರತಖಂಡದಲ್ಲಿ ರೈತಾಪಿ ಜನರಿಂದ ಬಂದವರು. ಸಾವು ಅವರ ಗಮನಕ್ಕೆ ಬರುವುದೇ ಇಲ್ಲ... ಅವರೆಂದಿಗೂ ಬೆನ್ನು ತೋರುವುದಿಲ್ಲ. ಆದರೆ ಅವರು ಒಳ್ಳೆಯ ಯೋಧರು. ಅವರ ಹುಟ್ಟು ಗುಣ ಉಳುವುದು. ನೀವು ಅವರನ್ನು ದರೋಡೆಮಾಡಿದರೂ ಕೊಂದರೂ ದಂಡ ಹೊರಿಸಿದರೂ ಮತ್ತು ಅವರಿಗೆ ಇನ್ನು ಏನು ಮಾಡಿದರೂ ನೀವು ಎಲ್ಲಿಯವರೆವಿಗೂ ಅವರ ಧರ್ಮಾನುಷ್ಠಾನಕ್ಕೆ ಸ್ವಾತಂತ್ರ್ಯ ಕೊಟ್ಟಿರುವಿರೋ ಅಲ್ಲಿಯವರೆವಿಗೂ ಅವರು ಸುಮ್ಮನೆ ಶಾಂತರಾಗಿರುವರು...

ಬಡವರು ಬೆಳಗಿನಿಂದ ಸಾಯಂಕಾಲದವರೆಗೆ ದುಡಿಯುತ್ತಾರೆ. ಮತ್ತೆ ಯಾರೋ ಅವರ ಕೈಯಿಂದ ಅನ್ನವನ್ನು ಅಪಹರಿಸುವರು. ಅವರ ಮಕ್ಕಳು ಉಪವಾಸದಿಂದ ನರಳುವರು. ಇಂಡಿಯಾ ದೇಶದಲ್ಲಿ ಕೋಟ್ಯಾಂತರ ಟನ್ನು ಗೋಧಿ ಬೆಳೆದರೂ ರೈತನ ಹೊಟ್ಟೆಗೆ ಹೋಗುವುದು ಅತ್ಯಲ್ಪ. ನೀವು ಹಕ್ಕಿಗಳಿಗೆ ಹಾಕುವುದಕ್ಕೆ ಕೂಡ ಆಗದ ಅತಿ ದರಿದ್ರ ಧಾನ್ಯದ ಮೇಲೆ ಅವರು ಜೀವಿಸುತ್ತಾರೆ. ಇಷ್ಟು ಶಾಂತರೂ ಸದ್ಗುಣಿಗಳೂ ಆದ ಜನರು ಇಷ್ಟೊಂದು ಕಷ್ಟ ಪಡುವುದು ನ್ಯಾಯವಲ್ಲ.

ರಕ್ಷಿಸುವವನು ರಾಜನಾದ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಮಾನನ್ನು ಸಾಗಿಸುವವನು ವರ್ತಕನಾದ. ಇವರಿಬ್ಬರೂ ಏನನ್ನೂ ಬೆಳಸಲಿಲ್ಲ, ಆದರೂ ಅದರ ಮುಖ್ಯ ಭಾಗವನ್ನೆಲ್ಲಾ ಸೆಳೆಯುತ್ತಿದ್ದರು. ರೈತನ ಶ್ರಮದ ದುಡಿತದಿಂದ ಇವರು ಸಂಪತ್ತನ್ನು ಗಳಿಸುತ್ತಿದ್ದರು. ಇದನ್ನೆಲ್ಲಾ ಬೆಳೆಸುತ್ತಿದ್ದ ರೈತ ಕೊನೆಗೆ ಕೆಲವು ವೇಳೆ ತಿನ್ನುವುದಕ್ಕೆ ಏನೂ ಇಲ್ಲದೆ ಉಪವಾಸದಿಂದ ದೇವರನ್ನು ಪ್ರಾರ್ಥಿಸಬೇಕಾಗಿತ್ತು.

ಕ್ರಮೇಣ ಸಮಸ್ಯೆಯು ಜಟಿಲವಾಗುತ್ತ ಬಂದಿತು. ನಿಮ್ಮ ವರ್ತಮಾನ ಸಮಾಜ ಅದರಿಂದ ಉತ್ಪನ್ನವಾಗಿದೆ. ಪೂರ್ವ ಚಿಹ್ನೆ ಒಂದೇ ಸಲ ಎಂದಿಗೂ ನಾಶವಾಗುವುದಿಲ್ಲ. ಯಾರು ಹಿಂದೆ ಕುರುಬರು ಬೆಸ್ತರು ಆಗಿದ್ದರೋ ಅವರು ದರೋಡೆಕಾರರೂ, ಸಮುದ್ರಚೋರರೂ ಆದರು. ಬೇಟೆಯಾಡುವುದಕ್ಕೆ ಕಾಡಿಲ್ಲ, ಕುರಿಮೇಯಿಸುವುದಕ್ಕೆ ತಪ್ಪಲಿಲ್ಲ. ಅಕಸ್ಮಾತ್ ಸಭ್ಯ ಸಮಾಜದಲ್ಲಿ ಜನ್ಮಧಾರಣೆ ಮಾಡಿದುದರಿಂದ ಪೂರ್ವದಂತೆ ಜೀವನ ನಡೆಸಲು ಅವಕಾಶವಿರಲಿಲ್ಲ. ಹಿಂದಿನ ಸಂಸ್ಕಾರಗಳಿಂದ ಪ್ರೇರಿತರಾಗಿ ಲೂಟಿಯ ಮತ್ತು ದರೋಡೆಯ ವೃತ್ತಿಯನ್ನು ಅನುಸರಿಸಿದರು. ಪೂಜ್ಯ ಪ್ರಾತಃ ಸ್ಮರಣೀಯ ಸ್ತ್ರೀಯರಾದ ಅಹಲ್ಯಾ, ತಾರಾ, ಮಂಡೋದರಿ, ಕುಂತಿ, ದ್ರೌಪದಿ- ಇವರ ವಂಶಜರು ಒಂದೇ ಸಾರಿ ಒಬ್ಬ ಗಂಡನಿಗಿಂತ ಹೆಚ್ಚು ಮದುವೆಯಾಗಲು ಅವಕಾಶವಿಲ್ಲದ ಕಾರಣ ಪಾತಿವ್ರತ್ಯದಿಂದ ಜಾರಿದರು. ಭಿನ್ನ ಭಿನ್ನ ಭಾವ ಸಂಸ್ಕಾರ, ಸಭ್ಯ ಅಸಭ್ಯ, ದೇವ ಅಸುರರು, ಎಲ್ಲಾ ಮಿಶ್ರವಾಗಿ ಆಧುನಿಕ ಮಾನವ ಸಮಾಜ ಉತ್ಪನ್ನವಾಯಿತು. ಆದ ಕಾರಣವೆ ಪ್ರತಿಯೊಂದು ಸಮಾಜದಲ್ಲಿಯೂ ಸಾಧುನಾರಾಯಣನನ್ನು, ಚೋರ ನಾರಾಯಣನನ್ನು ನೋಡುತ್ತೇವೆ. ಯಾವ ಸಮಾಜ ಅಸುರೀ ಎಂಬುದನ್ನು ಅಲ್ಲಿಯ ಬಹುಜನರು ಯಾವ ಸ್ವಭಾವದವರು ಎನ್ನುವುದರ ಮೇಲೆ ನಿರ್ಣಯಿಸುತ್ತಿದ್ದರು. □

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001

ಕನ್ನಡ ಪ್ರಕಟಣೆಗಳು

ಕಾದಂಬರಿಗಳು

1) ಕಾಡಿನ ದಾವೇದಾರ ರೂ. 150/-
(ಬಂಗಾಳಿ ಮೂಲ: ಮಹಾಶ್ವೇತಾ ದೇವಿ, ಅನುವಾದ: ಜಿ. ಕುಮಾರಪ್ಪ)

2) ಉಮರಾವ್ ಜಾನ್ ಅದಾ ರೂ. 100/-
(ಉರ್ದು ಮೂಲ: ಮಿರ್ಜಾ ರುಸ್ವಾ, ಅನುವಾದ: ಶಾಂತರಸ)

3) ಹಾವಿನ ಡೊಂಕು ರೂ. 50/-
(ಸ್ವೀಡಿಸ್ ಮೂಲ: ಟೋರ್‌ಗ್ನಿ ಲಿಂಡ್‌ಗ್ರೆಯನ್)

4) ಕಾರ್ಮೆಲೀನ ರೂ. 100/-
(ಕೊಂಕಣಿ ಮೂಲ: ದಾಮೋದರ ಮಾವಜೊ, ಅನುವಾದ: ಶಾ.ಮಂ. ಕೃಷ್ಣರಾಯ)

ಕಥೆಗಳು

1) ಕೊಂಕಣಿ ಕಥಾ ಸಂಗ್ರಹ ರೂ. 125/-
(ಸಂಪಾದಕ: ಚಂದ್ರಕಾಂತ ಶ್ರೇಣಿ, ಅನುವಾದ: ಶಾ.ಮಂ. ಕೃಷ್ಣರಾಯ)

2) ಒಂದು ಪೀಳಿಗೆಯ ತೆಲುಗು ಕಥೆಗಳು ರೂ. 150/-
(ಸಂಪಾದಕ: ಡಿ. ರಾಮಲಿಂಗಂ, ಅನುವಾದ: ಕುಂ. ವೀರಭದ್ರಪ್ಪ)

3) ಕೃಷ್ಣನ್ ಚಂದರ್ ಆಯ್ದ ಸಣ್ಣ ಕಥೆಗಳು ರೂ. 150/-
(ಸಂಪಾದಕ: ಗೋಪಿ ಚಂದ್ ನಾರಂಗ್, ಅನುವಾದ: ಡಿ.ಎ. ಶಂಕರ್)

4) ಮಧುರಾಂತಕಂ ರಾಜಾರಾಂ ಕಥೆಗಳು ರೂ. 150/-
(ತೆಲುಗು ಮೂಲ: ಮಧುರಾಂತಕಂ ರಾಜಾರಾಂ
ಅನುವಾದ: ಲಕ್ಷ್ಮೀಪತಿ, ಕೋಲಾರ)

5) ದಕ್ಷಿಣ ಕಾಮರೂಪದ ಒಂದು ಕಥಾನಕ ರೂ. 180/-
(ಅಸ್ಸಾಮಿ ಮೂಲ: ಇಂದಿರಾ ಗೋಸ್ವಾಮಿ,
ಅನುವಾದ: ಆರ್.ಎಲ್. ಅನಂತರಾಮಯ್ಯ)

ನಾಟಕಗಳು

1) ಯಕೃತ್ತು ರೂ. 50/-
(ಮರಾಠಿ ಮೂಲ: ಶ್ಯಾಮ ಮನೋಹರ, ಅನುವಾದ: ವೀಣಾ ಶಾಂತೇಶ್ವರ)

2) ರವೀಂದ್ರನಾಥ್ ಟಾಗೋರ್: ಎರಡು ನಾಟಕಗಳು ರೂ. 50/-
(ಬಂಗಾಳಿ ಮೂಲ: ರವೀಂದ್ರನಾಥ್ ಟಾಗೋರ್,
ಅನುವಾದ: ಶ್ರೀನಿವಾಸ್ ವಿ. ಸುತ್ತಾವೆ)

ಕಾವ್ಯ

1) ಆಡು ಹಾವೇ ರೂ. 80/-
(ತಮಿಳು ಮೂಲ: ಡಾ. ಕಾರ್ಲೋಸ್, ಅನುವಾದ: ಡಾ. ಬಸವರಾಜ ಕಲ್ಗುಡಿ)

2) ಶ್ರೀರಾಧಾ ರೂ. 60/-
(ಒಡಿಯಾ ಮೂಲ: ಶ್ರೀ ರಮಾಕಾಂತ ರಥ, ಅನುವಾದ: ಸಂಧ್ಯಾ ಎಸ್.)

3) ಶ್ರೀ ಬಸವಣ್ಣನವರ ವಚನ ಸಂಗ್ರಹ ರೂ. 65/-
(ಸಂಪಾದಕ: ಸ.ಸ. ಮಾಳವಾಡ)

4) ಎರಡು ದಶಕದ ಕವಿತೆ ರೂ. 65/-
(ಸಂಪಾದಕ: ಜಿ.ಎಸ್. ಶಿವರುದ್ರಪ್ಪ, ಚನ್ನವೀರ ಕಣವಿ)

5) ತೆಲುಗು ಕಾವ್ಯಮಾಲೆ ರೂ. 125/-
(ಸಂಪಾದಕ: ದೇವುಲಪಲ್ಲಿ ರಾಮಾನುಜರಾವ್,
ಅನುವಾದ: ಗುರುಮೂರ್ತಿ ಪೆಂಡಕೂರು)

ಭಾರತೀಯ ಸಾಹಿತ್ಯ ನಿರ್ಮಾಪಕರು

1) ಗೊರೂರು ರಾಮಸ್ವಾಮಿ ಅಯ್ಯಂಗಾರ್ ರೂ. 25/-
(ಲೇಖಕರು: ಸಿ.ಜಿ. ವೆಂಕಟಯ್ಯ)

2) ಶಂಬಾ ಜೋಶಿ ರೂ. 25/-
(ಲೇಖಕರು: ಮಲ್ಲೇಪುರಂ ಜಿ. ವೆಂಕಟೇಶ್)

3) ಭೀಮಾಬೋಯಿ ರೂ. 25/-
(ಲೇಖಕರು: ಸೀತಾಕಾಂತ ಮಹಾಪಾತ್ರ, ಅನುವಾದ: ಶ್ರೀಧರ್ ಒಸ್ಸೆ)

4) ಮೋಹನ್ ರಾಕೇಶ್ ರೂ. 25/-
(ಲೇಖಕರು: ಪ್ರತಿಭಾ ಅಗರ್‌ವಾಲ್, ಅನುವಾದ: ಎಸ್.ಜಿ. ಶ್ರೀಮತಿ)

5) ಚಿಲಕಮುರ್ತಿ ಲಕ್ಷ್ಮಿನರಸಿಂಹಮ್ ರೂ. 25/-
(ಲೇಖಕರು: ವಿ.ವಿ.ಎಲ್. ನರಸಿಂಹರಾವ್, ಅನುವಾದ: ಕೆ.ಮರುಳಸಿದ್ದಪ್ಪ)

6) ಅನ್ನಮಾಚಾರ್ಯ ರೂ. 25/-
(ಲೇಖಕರು: ಅಡಪ ರಾಮಕೃಷ್ಣರಾವ್, ಅನುವಾದ: ಭಾಗ್ಯಲಕ್ಷ್ಮಿ ಪದಕಿ)

7) ಶಾಂತಿನಾಥ ದೇಸಾಯಿ ರೂ. 25/-
(ಲೇಖಕರು: ಜಿ.ಎಸ್. ಆಮೂರ್)

8) ಎಂ.ಎಸ್. ಪುಟ್ಟಣ್ಣ ರೂ. 25/-
(ಲೇಖಕರು: ಎಸ್.ಎಸ್. ಸುಜಾತ)

9) ದೇವುಡು ರೂ. 25/-
(ಲೇಖಕರು: ಡಾ. ಸಿ.ಎಸ್. ಶಿವಕುಮಾರಸ್ವಾಮಿ (ಕುಮಾರಚಲ್ಯ))

10) ಕುಮಾರವ್ಯಾಸ ರೂ. 25/-
(ಲೇಖಕರು: ಕೀರ್ತಿನಾಥ ಕುರ್ತುಕೋಟಿ)

11) ಸಂ.ಶಿ. ಭೂಸನೂರಮಠ ರೂ. 25/-
(ಲೇಖಕರು: ಶಾಂತಾ ಇಮ್ರಾಪುರ)

12) ಸೇಡಿಯಾಪು ಕೃಷ್ಣಭಟ್ಟ ರೂ. 25/-
(ಲೇಖಕರು: ಎಂ. ರಾಮಚಂದ್ರ)

13) ಅಭಿನವಗುಪ್ತ ರೂ. 75/-
(ಲೇಖಕರು: ಜಿ.ಟಿ. ದೇಶಪಾಂಡೆ, ಅನುವಾದ: ಎನ್. ಬಾಲಸುಬ್ರಹ್ಮಣ್ಯ)

ಇತರೆ

1) ಮಂದಾರ ರಾಮಾಯಣ ರೂ. 150/-
(ತುಳು ಮೂಲ: ಮಂದಾರ ಕೇಶವಭಟ್ಟ)

2) ಕಲಾಪೂರ್ಣೋದಯ ರೂ. 100/-
(ಅನುವಾದ: ಆರ್. ಶೇಷಶಾಸ್ತ್ರಿ, ಜೆ. ಸದಾನಂದ)

3) ನನ್ನ ಜೀವಾವಧಿಯ ಶಿಕ್ಷೆ ರೂ. 200/-
(ಮರಾಠಿ ಮೂಲ: ವಿನಾಯಕ ದಾಮೋದರ ಸಾವರಕರ,
ಅನುವಾದ: ವಿರೂಪಾಕ್ಷ ಕುಲಕರ್ಣಿ)

4) ವನದೇವತೆ ರೂ. 25/-
(ಲೇಖಕರು: 'ಕಲ್ಕಿ' ಗೋಪಾಲಕೃಷ್ಣನ್, ಅನುವಾದ: ಎ. ಚಂದ್ರಮ್ಮ)

ಪ್ರತಿಗಳು ಹಾಗೂ ವಿವರಕ್ಕಾಗಿ ಸಂಪರ್ಕಿಸಿ:

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಚೇರಿ, ಸೆಂಟ್ರಲ್ ಕಾಲೇಜು ಆವರಣ,
ಡಾ|| ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು - 560 001
ದೂರವಾಣಿ: 2245152